ನ್ನಡಿಗರ ಮನೆ ಮನೆಯ ವಾರಪತ್ರಿಕೆ 10–5–92, ರೂ. 4–5

ರಾಗಸಂಗಮ



ಈ ವಾರದ
ಸಂಪೂರ್ಣ ಕಾದಂಬರಿ

ಆಸೆಯ ಅಲೆಗಳು

ಶೈಲಜಾ ಪ್ರಕಾಶ್

ರಾಗಸಂಗಮ

ಕನ್ನಡಿಗರ ಮನೆ ಮನೆಯ ವಾರಪತ್ರಿಕೆ

ಸಂಗಮ : 15 | 10–5–92 | ರಾಗ : 11

ಕಾದಂಬರಿ ವಿಭಾಗ

ಮ್ಯಾಗಜಿನ್ ವಿಭಾಗ

ಪ್ರಧಾನ ಸಂಪಾದಕ	ಕಲೆ
ಎನ್. ಸುಂದರ್ ರಾಜನ್	ಜೆ...
ಸಂಪಾದಕಿ	ಮುಖಪುಟ
ಕಮಲಾ ಸುಂದರ್ ರಾಜನ್	ರೂಪಿಣಿ
ಸಹಾಯಕ ಸಂಪಾದಕಿ	ವರ್ಣ ಪಾರದರ್ಶಿಕೆ
ಎಸ್. ರೇಖಾ	ನಯನ

ಸಂಗಮ ಪ್ರಕಾಶನ

ಅಂಚೆ ಪೆಟ್ಟಿಗೆ 6646,
41, ಕೋಟೆ 'ಬಿ' ಬೀದಿ
ಬೆಂಗಳೂರು–560 002
ದೂರವಾಣಿ : 625004

ಅಂಚೆ ವೆಚ್ಚ ಸೇರಿದ ಚಂದಾ ವಿವರ

52 ಸಂಚಿಕೆಗಳು (1 ವರ್ಷ)	ರೂ. 225
26 ಸಂಚಿಕೆಗಳು (6 ತಿಂಗಳು)	ರೂ. 117
13 ಸಂಚಿಕೆಗಳು (3 ತಿಂಗಳು)	ರೂ. 60
ಬಿಡಿ ಪ್ರತಿಯ ಬೆಲೆ	ರೂ. 4.50

ಕಾದಂಬರಿ

ವಿಭಾಗ


ಶೈಲಜಾ ಪ್ರಕಾಶ್

ಸಂಪೂರ್ಣ ಕಾದಂಬರಿ

ಆಸೆಯ ಅಲೆಗಳು

ಶೈಲಜಾ ಪ್ರಕಾಶ್



ಅನಂತಯ್ಯ

"ನನಗೆ ಮಕ್ಕಳಿಲ್ಲ. ಇರೋಳೊಬ್ಬಳು ಅಕ್ಕ. ಅವಳಿಗೊಬ್ಬಳು ಮಗಳು. ಮಾಲಿನಿಯನ್ನು ಸಣ್ಣಂದಿನಿಂದಲೂ ನಾನು ಬೆಳೆಸಿದ್ದೇನೆ. ನನ್ನ ಮಗಳ ಮೇಲೆ ಪ್ರೀತಿ ತೋರಿಸಲೂ ನನಗೆ ಅಧಿಕಾರವಿಲ್ಲವೆ?''



ಮಾಲಿನಿ

"ನನ್ನಿಂದ ಯಾರಿಗೂ ಒಳಿತಾಗಲಿಲ್ಲ. ಅಪ್ಪನನ್ನು ಹುಟ್ಟುತ್ತಲೇ ಕಳೆದುಕೊಂಡೆ. ಮಾವ, ಅತ್ತೆಯರ ಬದುಕಿಗೆ ಸಮಸ್ಯೆಯಾದೆ. ಈ ಕಾಯಿಲೆಯಿಂದ ಕಯ್ ಹಿಡಿದವನಿಗೆ ಭಾರ ವಾದೆ. ನಾನು ಬದುಕಿ ಏನಾಗಬೇಕು.''



ವಾಸು

"ಈ ಅನಂತಯ್ಯ ಏನೋ ನಾಟಕವಾಡುತ್ತಿದ್ದಾನೆ. ತಂದೆಯಂತೆ, ಮಗಳಂತೆ. ಎಲ್ಲ ಸೋಗು. ಈ ಮಾಲಿನಿಗೂ ಏನೂ ಅರ್ಥವಾಗುತ್ತಿಲ್ಲ. ನನ್ನ ಹೆಂಡತಿಯ ಪ್ರೀತಿಯಲ್ಲಿ ನಾನು ಯಾರಿಗೂ ಪಾಲು ನೀಡಲು ತಯಾರಿಲ್ಲ.''

ಈ ಪ್ರಮುಖ ಪಾತ್ರಗಳ ಕಥೆಯೇ ಈ ಕಾದಂಬರಿ.

ಒಂದು

ಕಲೆ ಎಲ್ಲರನ್ನೂ ಕೈ ಬೀಸಿ ಕರೆಯುತ್ತದೆ. ಆದರೆ ಯಾರು ಅದನ್ನು ಆರಾಧಿಸಿ ಅದರಲ್ಲಿ ಕೃಷಿ ಮಾಡುತ್ತಾರೋ ಅಂತವರಿಗೆ ಆ ಕಲೆ ಒಲಿಯುತ್ತದೆ.

ಬದುಕುವುದು ಒಂದು ಕಲೆ. ಹಣವನ್ನು ವ್ಯಯ ಮಾಡುವುದು ಒಂದು ಕಲೆ. ಹಣವಿಲ್ಲದೆ ಬದುಕುವುದು ಒಂದು ಕಲೆ.

ಮಾತನಾಡುವುದು ಒಂದು ಕಲೆ, ಮಾತಿಲ್ಲದೆ ಮೌನವಾಗಿರುವುದು ಒಂದು ರೀತಿಯ ಕಲೆ.

ಚಾಟಿ ಹಿಡಿದು ಬುಗುರಿ ಆಡಿಸುವವರೇ ಹೆಚ್ಚು.

ಚಾಟಿ ಇಲ್ಲದೆ ಬುದ್ಧಿವಂತಿಕೆಯಿಂದ ಬುಗುರಿ ಆಡಿಸುವವರು ವಿರಳ. ಇಂತಹ ಒಂದು ಕಲೆಯನ್ನು ಕರಗತ ಮಾಡಿಕೊಂಡವರು ಅಡ್ವಕೇಟ್ ಅನಂತಯ್ಯ.

ಅಡ್ವಕೇಟ್‌ಗಳಿಗೆ ಇಂಡಿಯನ್ ಪಿನಲ್ ಕೋಡ್ ತಿಳಿದಿದ್ದರೂ ಕಕ್ಷಿಗಾರರನ್ನು ಸೆಳೆಯುವ, ಹಾಗೂ ತನಗೆ ಎಲ್ಲ ಗೊತ್ತಿದೆ ಎಂದು ತೋರ್ಪಡಿಸುವ ಮಾತಿನಲ್ಲಿ ಅವರನ್ನು ಮರುಳು ಮಾಡುವ ಚಮತ್ಕಾರ ಒಂದು ಇದ್ದರೆ ಬದುಕಿ ಬಿಡ್ತಾರೆ.

ಅಡ್ವಕೇಟ್ ಅನಂತಯ್ಯನವರ ಬಾಯಿ ಬೊಂಬಾಯಿ. ಮಾತಿಗೆ ಮೊದಲು ಮಾಡಿದರೆ ಸೂಪರ್ ಫಾಸ್ಟ್ ಎಕ್ಸ್‌ಪ್ರೆಸ್. ಬರೀ ಎಕ್ಸ್‌ಪ್ರೆಸ್ ಅಷ್ಟೇ ಅಲ್ಲ, ಯಾವ ಆಯಕಟ್ಟಿನಲ್ಲಿ ಬ್ರೇಕ್ ಹಾಕಬೇಕು, ಆ್ಯಕ್ಸಿಡೆಂಟ್ ಆಗದ ಹಾಗೆ ಹೇಗೆ ರೈಲ್ ಬಿಡಬೇಕು ಎನ್ನುವುದು ಅವರಿಗೆ ತಿಳಿದಿತ್ತು. ಅಡ್ವಕೇಟ್ ಆಗಿ ಇಪತ್ತೆರಡು ವರ್ಷ ಕಳೆದಿದ್ದರೂ ಇಪ್ಪತ್ತೆಂಟನೇ ವಯಸ್ಸಿನಲ್ಲಿ ವಕೀಲ್ ವೃತ್ತಿ ಪ್ರಾರಂಭಿಸಿದ್ದರು. ಮೂವತ್ತನೆಯ ವಯಸ್ಸಿನಲ್ಲಿ ಕಾವೇರಿಯನ್ನು ಮದುವೆ ಆಗಿದ್ದರು. ಮಾತಿನಲ್ಲೆ ಮನೆ ಕಟ್ಟಿದ್ದರು. ಮೋಹದ ಮಡದಿಗೆ ಬಂಗಾರ ಹೇರಿದ್ದರು. ಬ್ಯಾಂಕ್‌ನಲ್ಲಿ ಬ್ಯಾಲೆನ್ಸ್ ಇಟ್ಟಿದ್ದರು. ಮನೆಗೆ ಮಂದಿಯೆಲ್ಲ ಬರುತ್ತಿದ್ದರು. ಆದರೆ ಮಡದಿಯ ಮಡಿಲಿಗೆ ಮಗುವನ್ನು ಮಲಗಿಸುವುದಕ್ಕೆ ಅವರ ಮಾತಿನಿಂದ ಸಾಧ್ಯವಾಗುತ್ತಿರಲಿಲ್ಲ.

ಮಕ್ಕಳ ಕೊರತೆ ಒಂದು ಬಿಟ್ಟರೆ ಅವರು ತೃಪ್ತಿಯಿಂದ ಇರಬಹುದಾಗಿದ್ದರೂ ಅವರು ಇನ್ನೊಬ್ಬರ ಚೀಲ, ಜೇಬಿನಿಂದಲೇ ಜೀವನ ತಳ್ಳುತ್ತಿದ್ದರು.

ಹುಡುಗನಿಗೆ ಕೆಲಸ ಕೊಡಿಸಿ, ನಿಮಗೆ ಎಂ. ಎಲ್. ಎ. ಗೊತ್ತಿದ್ದಾರೆ ರೆಕ್‌ಮೆಂಡ್ ಮಾಡಿಸಿ, ಕಾಲೇಜಿನಲ್ಲಿ ಸೀಟ್ ಕೊಡಿಸಿ. ಕಾನ್ವೆಂಟ್ ಸಿಸ್ಟರ್‌ಗೆ ಹೇಳಿ, ನಮ್ಮ ಹುಡುಗನ ಎಲ್. ಕೆ. ಜಿ. ಗೆ ಸೇರಿಸಿಕೊಳ್ಳುವುದಕ್ಕೆ ಹೇಳಿ. ಹುಡುಗಿಗೆ ಗಂಡು ಹುಡುಕಿ ಕೊಡ್ತೇನೆ ಎಂದಿದ್ದಿರಲ್ಲ ಏನಾಯಿತು. ನನ್ನ ಭೂಮಿ ಕೇಸ್ ಹಾಗೇ ಇದೆಯಲ್ಲ ಎಂದು ಕೇಳಿಕೊಂಡು ಸುಮಾರು ಜನರು ಬರುತ್ತಿದ್ದರು. ಅವರ ಮನ ನೋಯಿಸದೆ ಬೆಣ್ಣೆಯಲ್ಲಿ ಕೂದಲು ತೆಗೆಯುವ ಹಾಗೆ ಮಾತನಾಡಿ ಸಮಾಧಾನ ಮಾಡಿ, ಜೇಬಿನಲ್ಲಿ ಕೈ ಚೀಲದಲ್ಲಿ ಏನಿದೆಯೊ ಅದನ್ನು ಕಿತ್ತು ಕಳುಹಿಸುತ್ತಿದ್ದರು.

ಅನಂತಯ್ಯ ಬೆಳಿಗ್ಗೆ ಐದು ಗಂಟೆಗೆ ಏಳುತ್ತಿದ್ದರು. ಒಂದು ರೌಂಡು ವಾಕಿಂಗ್ ಹೋಗಿ ಬರುತ್ತಿದ್ದರು. ಅನಂತರ ಬಿಸಿ ಬಿಸಿ ಕಾಫಿ ಕುಡಿದು ಸ್ನಾನ ಮಾಡಿ ಪೂಜೆ ಮುಗಿಸಿ ಬರುವಷ್ಟರಲ್ಲಿ ಕಾವೇರಮ್ಮ ಟಿಫನ್ ರೆಡಿ ಮಾಡುತ್ತಿದ್ದರು. ತಿಂಡಿ ತಿಂದು, ಕಾಫಿ ಮುಗಿಸಿ ಮುಂದಿನ ರೂಮಿನ ತಮ್ಮ ಆಫೀಸಿನಲ್ಲಿ ಕೂರುತ್ತಿದ್ದರು. ಒಂದೊಂದು ದಿನ ಕಕ್ಷಿಗಾರರು ಬಹು ಬೇಗ ಬಂದುಬಿಟ್ಟರೆ ಅನಂತಯ್ಯನವರ ಕಾರ್ಯಕ್ರಮ ಹಳಿ ತಪ್ಪುತ್ತಿತ್ತು.

"ರೀ ಎಷ್ಟು ಹೊತ್ತು, ಆಗಲೇ ಇಬ್ಬರು ದೇವರು ಬಂದು ನಿಮಗೆ ಕಾಯುತ್ತಿದ್ದಾರೆ.'' ಕಾವೇರಮ್ಮ ಬಂದು ಹೇಳಿದರು.

"ಹೌದಾ ನನ್ನ ಪೂಜೆಗೆ, ಭಕ್ತಿಗೆ ಮೆಚ್ಚಿ ದೇವರು ಆಗಲೇ ಪ್ರತ್ಯಕ್ಷರಾಗಿ ಬಿಟ್ಟಿದ್ದಾರಲ್ಲ, ಕೂತ್ಕೊ ಎಂದು ಹೇಳು ಮಂಗಳಾರತಿ ಮಾಡಿ ಬರುತ್ತೇನೆ.'' ಅನಂತಯ್ಯ ಹೇಳಿದರು.

"ಇಲ್ಲ್ಯಾಕೆ ಮಂಗಳಾರತಿ ಮಾಡ್ತೀರಾ, ದೇವರೇ ಪ್ರತ್ಯಕ್ಷರಾಗಿ ಬಿಟ್ಟಿದ್ದಾರಲ್ಲ ಅಲ್ಲೆ ಹೋಗಿ ಮಂಗಳಾರತಿ ಮಾಡಿ, ಕಾಸು ಹಾಕ್ತಾರೆ.''

"ಅದೇ ತಪ್ಪು, ಈ ದೇವರಿಗೆ ಮಂಗಳಾರತಿ ಮಾಡಿದರೆ ಆ ಬಂದಿರುವ ದೇವರಿಂದ ದಕ್ಷಿಣೆ ಕಕ್ಕಿಸಬಹುದು. ಅದು ಬಿಟ್ಟು ಅವರಿಗೆ ಮಂಗಳಾರತಿ ಎತ್ತಿದರೆ ಚಳಿಗೆ ಕೈ ಕಾಯಿಸಿಕೊಳ್ತಾರೆ. ನೈವೇದ್ಯ ಏನಿದ್ದರೂ ಗುಡಿಯಲ್ಲಿರುವ ದೇವರಿಗೆ. ಏಕೆಂದರೆ ಅದು...''

"ಅದು ಗೊತ್ತು ನೀವು ನಡೆಯಿರಿ ಬೇಗ. ನಿಮ್ಮ ಮಾತು ನನಗೆ ಬೇಡ, ಅದೆಲ್ಲ ನಿಮ್ಮ ಕಕ್ಷಿಗಾರರ ಹತ್ತಿರ ಇಟ್ಕೊಳ್ಳಿ'' ಎಂದು ಹೇಳಿ ಅಡುಗೆ ಮನೆ ಕಡೆ ಹೊರಟರು ಕಾವೇರಮ್ಮ.

'ಈ ದೇವರನ್ನು ಕಾಯಿಸಿದರೂ ಪರವಾಗಿಲ್ಲ. ಬಂದಿರುವ ದೇವರನ್ನು ಕಾಯಿಸಬಾರದು' ಎಂದುಕೊಂಡ ಅನಂತಯ್ಯ ಎರಡು ನಿಮಿಷದಲ್ಲಿ ಪೂಜೆ ಮುಗಿಸಿ, ಮಡಿ ತೆಗೆದು ಬೇರೆ ಪಂಚೆ ಉಟ್ಟು, ಆಫೀಸ್ ರೂಮಿಗೆ ಬಂದು ಕೈಯಲ್ಲಿ ತಂದಿದ್ದ ದೇವರ ಪ್ರಸಾದದ ಹೂವನ್ನು ಬಂದವರಿಗೆ ಕೊಟ್ಟು "ಏನು ದೇವರು, ಇಷ್ಟು ಬೇಗ ಬಂದು ಬಿಟ್ಟಿದ್ದೀರಾ'' ಎಂದು ಹೇಳುತ್ತಾ ಕುಳಿತುಕೊಳ್ಳುವ ಮುಂಚೆ ದೇವರ ಪಟಗಳಿಗೆ ನಮಸ್ಕರಿಸಿದರು.

"ನಿಮಗೆ ಗೊತ್ತಿಲ್ಲದೆ ಇರುವುದು ಏನಿದೆ. ಈ ದಿನ ನಮ್ಮ ಕೇಸು ಇದೆಯಲ್ಲ.'' ಬಂದವರಲ್ಲಿ ಭೀಮರಾವ್ ಹೇಳಿದರು.

"ಹೌದು ಗೊತ್ತಿದೆ, ಅದಕ್ಕ ನಾನು ಇವತ್ತು ಬೇರೆ ಕಡೆ ಪ್ರೋಗ್ರಾಂ ಇದ್ದರೂ ಹೋಗದೆ ಊರಲ್ಲೇ ಉಳಿದುಕೊಂಡಿರುವುದು.''

"ನಾನು ಹೇಳಿಲ್ಲವಾ ರಾಮು, ನಮ್ಮ ಲಾಯರ್‌ಗೆ ಎಲ್ಲಾ ಗೊತ್ತಿದೆ ಎಂದು. ಆದರೆ ಸಾರ್ ನಾನು ಅರ್ಜೆಂಟ್ ಆಗಿ ಒಂದು ಕೆಲಸಕ್ಕೆ ಹೋಗಬೇಕಾದುದರಿಂದ ಕೋರ್ಟಿಗೆ ಬರಕ್ಕಾಗುತ್ತಿಲ್ಲ.''

"ಬೇಡ ಬಿಡಿ, ನಾನು ಇರೋದು ಏಕೆ. ಆ ಕೇಸ್ ಬಗ್ಗೆ ಏನೂ ಯೋಚಿಸಬೇಡಿ, ಆದರ ಯೋಚನೆ ಬಿಟ್ಟು ಬಿಡಿ. ಅಡ್ಜರ್ನ್ ಮಾಡಿಸ್ತೇನೆ.''

"ಈಗಾಗಲೇ ಮೂರು ಸಲ ಅಡ್ಜರ್ನ್ ಆಗಿದೆಯಲ್ಲ ಸಾರ್.''

"ಆಗಲಿ ಏನೀಗ, ಇನ್ನೂ ಮೂವತ್ತು ಸಲ ಮಾಡಿಸ್ತೇನೆ. ನಿಮಗೆ ಯಾವಾಗ ಅನುಕೂಲ ಎಂದು ತಿಳಿಸಿ ಆಗ ಅಡ್ಜರ್ನ್ ಮಾಡಿಸುವುದು ನಿಲ್ಲಿಸಿದರೆ ಸರಿ. ಏನೇಳ್ತೀರಾ.''

"ಎಲ್ಲ ತಮಗೆ ತಿಳಿದಿದೆ. ಸರಿ ನಾನು ನನ್ನ ಕೆಲ್ಸದ ಕಡೆ ಹೋಗಬಹುದು ತಾನೆ."

"ನಿಶ್ಚಿಂತೆಯಾಗಿ ಹೋಗಿ, ಮುಂದಿನ ಡೇಟು ಯಾವತ್ತು ಬೀಳುತ್ತೆ ಎಂದು ನಾನು ತಮಗೆ ತಿಳಿಸ್ತೇನೆ." ಅನಂತಯ್ಯನವರು ಹೇಳುತ್ತಿರುವಾಗಲೇ ಇನ್ನೊಬ್ಬರು ಬಂದರು.

"ನಮಸ್ಕಾರ ಸೋಮಣ್ಣ, ಬನ್ನಿ ಕುಳಿತ್ಕೊಳ್ಳಿ." ಹೇಳಿದರು.

"ಹಾಗೆ ಮಾಡಿ, ನಾವು ಬರುತ್ತೇವೆ." ಭೀಮರಾವ್, ರಾಮರಾವ್ ಎದ್ದರು.

"ಅಂದ ಹಾಗೆ ಒಂದು ನೂರು ರೂಪಾಯಿ ಕೊಟ್ಟು ಹೋಗಿ."

"ಈ ಕಡೆ ಊರಿಗೆ ಹೋಗ್ತಿದ್ದೇನೆ ದುಡ್ಡಿನ ವಿಚಾರಕ್ಕಾಗಿ."

"ಹೌದಾ, ನೀವು ಬಂದಾಗಲೇ ನಾನು ದೇವರ ಪ್ರಸಾದ ಕೊಟ್ಟೆನಲ್ಲ ಒಳ್ಳೆಯದಾಗುತ್ತೆ, ದುಡ್ಡು ಸಿಗುತ್ತೆ. ಈಗ ಐವತ್ತು ಕೊಡಿ ಬರುವಾಗ ದುಡ್ಡು ಸಿಕ್ಕಿರುತ್ತೆ ನೀವೇ ನೂರು ಕೊಡ್ತೀರಾ" ಎಂದರು ಅನಂತಯ್ಯ.

ಭೀಮರಾವ್ ಮತ್ತೆ ಮಾತನಾಡದೆ ಐವತ್ತರ ನೋಟು ತೆಗೆದು ಕೊಟ್ಟರು. ಅನಂತಯ್ಯ ಅದನ್ನು ತೆಗೆದುಕೊಂಡು,

"ಹೋಗಿ ಬನ್ನಿ, ಮುಂದಿನ ಡೇಟ್ ತಿಳಿಸುತ್ತೇನೆ ಬರ್ತಾ ಬನ್ನಿ" ಎಂದರು.

ಇಬ್ಬರೂ ಹೊರಟು ಹೋದ ಮೇಲೆ.

"ಲಾಯರ್‌ಗಳು ಎಂದುಬಿಟ್ಟರೆ ಲಕ್ಷ್ಮಿ ಪುತ್ರರು ಎಂದುಕೊಂಡು ಬಿಟ್ಟಿದ್ದಾರೆ." ಅನಂತಯ್ಯ ಗೊಣಗಿದರು.


"ನಿಮಗೇನು ಕಮ್ಮಿ ಅನಂತಯ್ಯನವರೆ." ಸೋಮಣ್ಣ ಕೇಳಿದರು.

"ನೀವು ತಿಳಿದುಕೊಂಡಿರೋದು ಸೋಮಣ್ಣನವರೆ, ನಾನು ಕಂಡ ಕಕ್ಷಿಗಾರರಲ್ಲಿ ನೀವು ಒಬ್ಬರು ಪರವಾಗಿಲ್ಲ. ದೇವರು ನಿಮಗೆ ಧಾರಾಳವಾಗಿ ಕೊಟ್ಟಿದ್ದಾನೆ. ಹಾಗೆ ನಿಮ್ಮ ಮನಸ್ಸೂ ಧಾರಾಳ. ಈಗ ನೀವು ನೋಡಿದಿರಲ್ಲ ಇವರಿಗೆ ಎಷ್ಟು ಉಪಕಾರ ಮಾಡಿದ್ದೇನೆ ಮಾಡ್ತಾ ಇದ್ದೇನೆ. ಇವರ ಕೇಸ್ ತಗೊಂಡು ವರ್ಷ ಆಯಿತು. ಕೇಸ್ ಡೇಟ್‌ಗೆ ಹೀಗೆ ಬಂದು ಬರಕ್ಕಾಗಲ್ಲ ಅಡ್ಜರ್ನ್ ಮಾಡಿಸಿ ಎಂದೋ, ಇಲ್ಲ ಮೈ ಸರಿ ಇಲ್ಲ ಎಂದು ಕಾಗದ ಬರೆದು ಬಿಡ್ತಾನೆ. ನಾನೇ ಜಾಣ ಎಂದರೆ ನನಗಿಂತ ಜಾಣ. ದುಡ್ಡೇ ಬಿಚ್ಚಲ್ಲ, ನೀವು ನಂಬ್ತೀರೋ ಇಲ್ಲವೋ ಈ ಕೇಸ್ ಪ್ರಾರಂಭವಾದಾಗಿನಿಂದ ಮೊದಲ ಬಾರಿಗೆ ಬಂದಾಗ ಐವತ್ತು ಕೊಟ್ಟಿದ್ದು. ಅದು ಬಿಟ್ಟರೆ ನೀವೇ ನೋಡಿದಿರಲ್ಲ ಇವತ್ತು ಐವತ್ತು ಕೊಟ್ಟಿದ್ದು. ಅವನ ಕೇಸ್‌ಗೆ ಅದು ಸ್ಟೇಶನರಿ ಪೋಸ್ಟ್‌ಗೆ ಸರಿ ಹೋಗಲ್ಲ. ಇಂತವರು ಇದ್ದರೆ ನಾವು ಹೊಟ್ಟೆ ಮೇಲೆ ತಣ್ಣೀರ ಬಟ್ಟೆ ಹಾಕಿಕೊಳ್ಳಬೇಕು."

"ಅಂತಹ ಪರಿಸ್ಥಿತಿ ಬಂದಿಲ್ಲವಲ್ಲ."

"ಹೇಗೆ ಬರುತ್ತೆ, ನಿಮ್ಮಂತಹ ದೇವರು ಇರುವಾಗ. ಅದ್ಸರಿ ಬಿಡಿ, ಅಂದ ಹಾಗೆ ನಿಮ್ಮ ಮಗನ ಕೆಲ್ಸದ ವಿಚಾರ ಎಲ್ಲಿಗೆ ಬಂತು. ನಾನು ಹೇಳಿದ ಹಾಗೆ ಮಾಡಿದ್ರಾ."

ಒಬ್ಬ ಕಕ್ಷಿಗಾರನ ಮುಂದೆ ಇನ್ನೊಬ್ಬ ಕಕ್ಷಿಗಾರನ್ನು ತೆಗಳಿ. ಅವರನ್ನು ಹೊಗಳಿ ಅಟ್ಟಕ್ಕೇರಿಸಿ, ತಮ್ಮ ಕಡೆ ಸೆಳೆದುಕೊಂಡು ಬಿಡುತ್ತಿದ್ದರು ಅನಂತಯ್ಯ. ಈಗ ಭೀಮರಾವ್‌ನನ್ನು ತೆಗಳಿ, ಸೋಮಣ್ಣನವರನ್ನು ಹಿಪ್ನಾಟಿಸಮ್ ಮಾಡಿದ್ದರು.



"ನೀವು ಹೇಳಿದ ಹಾಗೆ ಎಂಪ್ಲಾಯ್‌ಮೆಂಟ್ ಎಕ್ಸ್‌ಚೇಂಜ್‌ನಲ್ಲಿ ನಂಬರ್ ಮಾಡಿಸ್ದೆ. ಅಲ್ಲದೆ ಬ್ಯಾಂಕ್ ರಿಕ್ರೂಟ್‌ಮೆಂಟ್ ಎಗ್ಸಾಮ್‌ಗೆ ಹೋಗಿದ್ದ."

"ಹೌದಾ ನಾನು ಹೇಳಲಿಲ್ಲವಾ, ಅಪ್ಲಿಕೇಶನ್ ಹಾಕು. ಎಗ್ಸಾಮ್‌ಗೆ ಕುಳಿತುಕೋ ಎಂದು ನಿಮ್ಮ ಮಗನಿಗೆ. ಒಳ್ಳೆ ಹುಡುಗ, ಹೇಳಿದ ಹಾಗೆ ಮಾಡಿದ್ದಾನೆ ಆ ನಂಬರ್ ಕೊಡಿ."

"ತಗೊಳ್ಳಿ." ಸೋಮಣ್ಣ ಕೊಟ್ಟ ನಂಬರನ್ನು ನೋಟ್ ಮಾಡಿಕೊಂಡರು ಅನಂತಯ್ಯ.

"ಕಾವೇರಿ, ಕಾವೇರಿ" ಎಂದು ಕೂಗಿದರು.

"ಏನೂಂದ್ರೆ." ಕೇಳುತ್ತ ಆ ಬಾಗಿಲ ಬಳಿ ಬಂದರು ಕಾವೇರಮ್ಮ.

"ಎರಡು ಸ್ಟ್ರಾಂಗ್ ಕಾಫಿ ಮಾಡಿಕೊಡು."

"ಕಾಫಿ ಆಯಿತು ಅನಂತಯ್ಯನವರೆ, ಈಗ ಏನೂ ಬೇಡಿ."

"ಸೋಮಣ್ಣನವರೆ ನೀವು ಸುಮ್ಮನಿರಿ. ನಿಮ್ಮ ಮನೆಗೆ ಬಂದಾಗ ಎಂತಹ ಉಪಚಾರ ಮಾಡ್ತಿರಿ. ಒಂದು ಡೋಸ್ ಕಾಫಿ ಕುಡಿದರೆ ಏನಾಗಲ್ಲ." ಅನಂತಯ್ಯ ಹೇಳಿದಾಗ ಸೋಮಣ್ಣ ಸುಮ್ಮನಾದರು.

'ಬಂದಿರುವ ವ್ಯಕ್ತಿಯಿಂದ ಹೆಚ್ಚು ಹಣ ಬರಬಹುದು ಅದಕ್ಕೆ ಕಾಫಿ' ಎಂದುಕೊಂಡ ಕಾವೇರಮ್ಮ. ಕಾಫಿ ಮಾಡಲು ಹೊರಟರು.

"ಬ್ಯಾಂಕ್‌ನಲ್ಲೆ ಕೆಲ್ಸ ಬೇಕಾ, ಬೇರೆ ಡಿಪಾರ್ಟ್‌ಮೆಂಟ್ ಆಗಲ್ವಾ."

"ಆಗುತ್ತೆ. ಆದರೆ ನನ್ನ ಸೊಸೆ ಆಗುವವಳು ಆಗಲೇ ಸ್ಟೇಟ್‌ಬ್ಯಾಂಕ್‌ನಲ್ಲಿ ಇರುವುದರಿಂದ, ಇವನಿಗೂ ಬ್ಯಾಂಕ್‌ನಲ್ಲಿ ಕೆಲ್ಸ ಸಿಕ್ಕಿದರೆ ಇಬ್ಬರೂ ಒಟ್ಟಿಗೆ ಇರಬಹುದೆಂದು ನನ್ನ ಅಭಿಪ್ರಾಯ."

"ಓಕೆ. ದೂರದೃಷ್ಟಿ ಆಗಲೇ ಸೊಸೇನ ನೋಡಿ ಬಿಟ್ಟಿದ್ದೀರಿ ಎನ್ನಿ."

"ನಮ್ಮ ಸಂಬಂಧದ ಹುಡುಗಿ. ಮೊದಲಿನಿಂದ ಮಾತಾಗಿತ್ತು."

"ಕಾಫಿ ರೆಡಿ" ಎಂದು ಕಾವೇರಮ್ಮ ಕರೆದಾಗ.

"ಬಂದೆ" ಎಂದು ಅನಂತಯ್ಯ ಎದ್ದು ಒಳಗೆ ಹೋಗಿ ಕಾಫಿ ತಂದು ಸೋಮಣ್ಣನವರಿಗೆ ಒಂದು ಕಪ್ ಕೊಟ್ಟರು.

"ಉದ್ಯೋಗಂ ಪುರುಷ ಲಕ್ಷಣಂ ಎಂದು ನಾಣ್ನುಡಿ ಇದೆ. ಮೊದಲು ಒಂದು ಕೆಲ್ಸ ಬೇಕು. ಗವರ್ನ್‌ಮೆಂಟ್ ಉದ್ಯೋಗ ಆದರೆ ನೆಮ್ಮದಿ, ಸುಖ ಎಂದು ಹಲವರ ಅನಿಸಿಕೆ. ಬ್ಯಾಂಕ್‌ನಲ್ಲಾದ್ರೆ ಇನ್ನೂ ಚೆನ್ನ ಎಂದು ನಿಮ್ಮಂತಹವರ ಅಭಿಪ್ರಾಯ. ನನಗನ್ನಿಸುತ್ತೆ ಬ್ಯಾಂಕ್‌ನಲ್ಲಿ ಕ್ಯಾಷಿಯರ್ ಆಗಿ ನೂರರ ಕಟ್ಟುಗಳನ್ನು ಎಣಿಸಿದಾಕ್ಷಣ ಅವೆಲ್ಲ ಅವನದಾಗಿ ಬಿಡುತ್ತಾ." ಅನಂತಯ್ಯ ಕೇಳಿದರು.

ಸೋಮಣ್ಣನವರಿಗೆ ಏನು ಹೇಳಬೇಕೆಂದೇ ತೋಚಲಿಲ್ಲ.

"ನೋಡಿ ಸೋಮಣ್ಣ, ಮೊದಲು ಮನುಷ್ಯನಿಗೆ ಮನೋಬಲ ಇರಬೇಕು. ಕಲ್ಲನ್ನು ಕುಟ್ಟಿ ಎಣ್ಣೆ ತೆಗೆಯುತ್ತೇನೆಂಬ ಆತ್ಮ ಸ್ಥೈರ್ಯ ಇದ್ದರೆ ಭೂಮಿಯಲ್ಲಿ ಎಲ್ಲೇ ಇದ್ದರೂ ಆತ ಬದುಕಿ ಬಿಡ್ತಾನೆ. ನಾನು ಲಾಯರ್ ಆದಾಗ ಏನಿತ್ತು ನಿಮ್ಗೆ ಗೊತ್ತಲ್ಲ, ಈಗ ಹೇಗಿದ್ದೇನೆ. ನಿಮ್ಮನ್ನು ನೀವು ನೋಡ್ಕೊಳ್ಳಿ, ನೋಡಲು ಸಾಮಾನ್ಯ ರೈತರ ಹಾಗೆ ಕಾಣೀಸ್ತೀರಾ. ಆದರೆ ಮೊದಲ

ಮಗನನ್ನು ಡಾಕ್ಟರ್ ಓದಿಸಿದ್ದೀರ. ಹೆಣ್ಣು ಮಕ್ಕಳಿಬ್ಬರಿಗೂ ಲಕ್ಷಾಂತರ ಕೊಟ್ಟು ಮದುವೆ ಮಾಡಿಸಿದ್ದೀರಾ. ಈಗ ಹತ್ತಾಗಲಿ, ಹದಿನೈದಾಗಲಿ ಸಾವಿರ ಕೊಟ್ಟು ಕೊನೆ ಮಗನಿಗೆ ಕೆಲ್ಸ ಕೊಡಿಸಲು ರೆಡಿ ಆಗಿದ್ದೀರಾ. ಇದೆಲ್ಲ ಗವರ್ನ್‌ಮೆಂಟ್ ಕೆಲ್ಸವೇ ಬೇಕು ಎನ್ನುವ ಹುಡುಗರಿಗೆ ಹೇಗೆ ಗೊತ್ತಾಗುತ್ತೆ ಹೇಳಿ.''

ಕಾಫಿ ಕುಡಿದು ಕಪ್ ಇಟ್ಟು ಸಿಗರೆಟ್ ತೆಗೆದು ಸೋಮಣ್ಣನವರಿಗೊಂದು ಕೊಟ್ಟು ತಾವೊಂದು ಹಚ್ಚಿದರು ಅನಂತಯ್ಯ.

"ನೀವು ಹೇಳೋದೇನೋ ಸರಿ ಲಾಯರ್ ಸಾಹೇಬ್ರೆ. ವ್ಯವಸಾಯ ಎಲ್ಲ ನಮ್ಮ ಕಾಲಕ್ಕೆ ಸರಿ ಆಯಿತು. ಈಗ ಗೊಬ್ಬರದ ರೇಟ್ ಏನು, ಔಷಧಿ ರೇಟ್ ಏನು. ಇಷ್ಟೆಲ್ಲ ಹಾಕಿದ್ರೂ ಈಗಿನ ಮಳೇನ ನೆಚ್ಚಿ ಏನೂ ಮಾಡಕ್ಕಾಗಲ್ಲ, ಬಂದರೆ ಅತಿವೃಷ್ಟಿ ಇಲ್ಲದಿದ್ರೆ ಅನಾವೃಷ್ಟಿ. ಇನ್ನು ಕೂಲಿಕಾರರನ್ನು ಮಾತನಾಡಿಸುವ ಹಾಗೇ ಇಲ್ಲ. ಈ ಜಂಜಾಟ ನೋಡಿದ್ರೆ ತಿಂಗಳಿಗೆ ಅಷ್ಟು ಇಷ್ಟು ಬರುವ ಸರ್ಕಾರಿ ನೌಕರಿನೇ ಸರಿ ಎನ್ನಿಸುತ್ತೆ.''



ಮುತ್ತು

ಮಾತನಾಡಿದರೆ ಕೇಳುವೆ ಮುತ್ತು
ನಿನಗಿಲ್ಲವೆ ಹೊತ್ತು ಗೊತ್ತು
ಕೊಡದಿದ್ದರೆ ನಿನಗೆ ಹುಸಿಕೋಪ
ನನಗನಿಸುತ್ತದೆ ಆಗ ಅಯ್ಯೋ ಪಾಪ.

– ಭಾಗ್ಯ ಎಂ.

"ನೀವು ಹೇಳೋದು ದಿಟ, ಏನೋ ಇಲ್ಲಿ ಇರೋದ್ರಿಂದ ಎರಡು ಹೊತ್ತು ಊಟನಾದ್ರೂ ಸಿಕ್ಕುತ್ತೆ. ಇನ್ನೂ ಪಟ್ಟಣ ಅದೂ ಇದು ಎಂದು ಹೋದರೆ ಇರೋದು ಕಳ್ಕೊಳ್ಳಬೇಕಾಗುತ್ತದೆ. ಅಂದ ಹಾಗೆ...'' ಅನಂತಯ್ಯ ಹೇಳುವಷ್ಟರಲ್ಲಿ.

"ಸ್ವಲ್ಪ ಬರ್ತೀರಾ ಇಲ್ಲಿ.'' ಕಾವೇರಮ್ಮ ಕರೆದರು.

"ಬಂದೇ ಒಂದು ನಿಮಿಷ.'' ಅನಂತಯ್ಯ ಎದ್ದು ಒಳಗೆ ಹೋದರು.

"ಏನೇ ಅದು?''

"ಬರೀ ಅದು ಇದು ಮಾತನಾಡ್ತಿರ್ತೀರೋ, ಇಲ್ಲ ಅಕ್ಕಿ, ಅವರೆಕಾಯಿ ವಿಚಾರ ನೋಡ್ತೀರೋ.''

"ಹೇಳ್ತೇನೆ ಕಣೆ, ಬತ್ತ ಬಂದಿದೆಯಂತ, ಇಲ್ಲ ಅವರೆಕಾಯಿ ಬಿಟ್ಟಿದೆಯಂತ ಕೇಳ್ತೀನಿ, ನೀನೇನೂ ಯೋಚ್ನೆ ಮಾಡಬೇಡ.'' ಹೇಳಿ ಮತ್ತೆ ಬಂದವರು.

"ಸೋಮಣ್ಣನವರೇ, ನಾಳೆನೇ ನಾನು ಬೆಂಗಳೂರಿಗೆ ಹೋಗ್ತಿದ್ದೇನೆ, ಎಂ. ಎಲ್. ಎ. ಮಾದಪ್ಪನ್ನ ನೋಡ್ತೇನೆ. ಹಾಗೇ ಫೈನಾನ್ಸ್ ಮಿನಿಸ್ಟರ್ ಪಾಲಾಕ್ಷಪ್ಪನವರ ಜೊತೆ ಮಾತನಾಡ್ತೇನೆ. ಇಂಟರ್‌ವ್ಯೂ ಬಂದು ಬಿಟ್ಟರೆ ಕೆಲ್ಸ ಸಿಕ್ಕಿದ ಹಾಗೇ ಎಂದುಕೊಳ್ಳಿ.''

"ಏನೋ, ನಿಮ್ಮ ಮೇಲೆ ಭಾರ ಹಾಕಿದ್ದೇನೆ. ಎಷ್ಟಾದ್ರೂ ಸರಿ ನಿಮ್ಗೆ ಹಣ ಕೊಡ್ತೇನೆ. ಈ ಕೆಲ್ಸ ಒಂದು ಮಾಡಿ ಕೊಡಿ.''

"ಛೇ ನಿಮ್ಮ ಹತ್ತಿರ ನಾನು ಹಣ ತಗೊಳ್ಳಲ್ಲ, ಖರ್ಚಿಗೆ ಕೊಟ್ಟರೆ ಸಾಕು.''

"ತಗೊಳ್ಳಿ ಮುನ್ನೂರು ಇದೆ ಇಟ್ಕಳ್ಳಿ.'' ಸೋಮಣ್ಣನವರು ಹಣ ತೆಗೆದು ಕೊಟ್ಟರು.

ಹಣ ತೆಗೆದುಕೊಂಡು "ಬತ್ತ ಎಲ್ಲ ಕಟಾವ್ ಆಯ್ತಾ?'' ಕೇಳಿದರು.

"ಆಯಿತು ಅಕ್ಕಿ ಬೇಕಾಗಿತ್ತೇನು?''

"ಅದೇ ಈಗ ಮನೆಯವರು ಹೇಳ್ತಾ ಇದ್ದರು ಅಕ್ಕಿ ಆಗೋಗಿದೆ ಎಂದು.''

"ಆಯಿತು, ಕಳುಹಿಸಿ ಕೊಡ್ತೇನೆ.''

"ಹಾಗೇ ಸ್ವಲ್ಪ ಅವರೇಕಾಯಿ.''

"ನನಗೊತ್ತಿಲ್ವೆ ನಿಮ್ಗೆ ಅವರೆಕಾಯಿ ಇಷ್ಟ ಎಂದು, ಬರ್ತೇನೆ.'' ಸೋಮಣ್ಣ ಹೊರಟು ಹೋದರು.

"ರಾಘವೇಂದ್ರ'' ಎನ್ನುತ್ತ ಮುನ್ನೂರೈವತ್ತು ರೂಪಾಯಿಯನ್ನು ಪರ್ಸಿಗೆ ಹಾಕಿ, ತಿಂಡಿ ತಿನ್ನಲು ಎದ್ದು ಒಳಗೆ ನಡೆದರು ಅನಂತಯ್ಯ.

ಬಿಸಿ ಬಿಸಿ ಇಡ್ಲಿ, ಕಾಯಿ ಚಟ್ನಿ, ಅದರ ಮೇಲೆ ತುಪ್ಪ ಹಾಕಿ ಕೊಟ್ಟರು ಕಾವೇರಮ್ಮ.

ಅನಂತಯ್ಯ ತಿಂಡಿಯನ್ನು ತಿನ್ನುತ್ತ,

"ಕಾವೇರಿ ಸಾಯಂಕಾಲ ನಾನು ಬೆಂಗಳೂರಿಗೆ ಹೋಗ್ತಾ ಇದ್ದೀನಿ.''

"ಸೋಮಣ್ಣನವರ ಕೆಲ್ಸಕ್ಕಾ.''

"ಅದೂ ಒಂದು, ಈಗ ಚಲುವಯ್ಯ ಟೊಬ್ಯಾಕೋ ಮಾರಿದ್ದಾನೆ. ಚೆನ್ನಾಗಿ ಹಣ ಬಂದಿದೆ. ಕಾರು ತಗೋಬೇಕಂತೆ ನೀವೂ ಬನ್ನಿ ಎಂದು ಹೇಳಿದ ಅದಕ್ಕೆ ಹೋಗ್ತಾ ಇದ್ದೇನೆ'' ಎಂದು ಅನಂತಯ್ಯ ಹೇಳಿದರು.

"ಚಲುವಯ್ಯ ಅಂದರೆ ಸಾಕು ಬಿಡಿ, ಇನ್ನೂ ಎರಡು ದಿನ ನಿಮ್ಮ ಬಯಕೆ ಎಲ್ಲ ಪೂರ್ತಿ ಆಗುತ್ತೆ. ಹೋಗಿ ಮಜಾ ಮಾಡಿಕೊಂಡು ಬನ್ನಿ, ನಾನು ಒಬ್ಬಳೇ ದೆವ್ವ ಬಡ್ಕೊಂಡು ಕುಳಿತಿರುತ್ತೇನೆ'' ಎಂದು ಕೊಂಕು ನುಡಿದರು ಕಾವೇರಮ್ಮ. ಹೆಂಡತಿಯ ಕೊರಗು ಏನೆಂದು ಅವರಿಗೆ ತಿಳಿದಿತ್ತು. ಎಲ್ಲರನ್ನೂ ಎಲ್ಲ ವಿಧದಲ್ಲೂ ಅವರು ನಂಬಿಸುತ್ತಿದ್ದರು. ಸಮಾಧಾನ ಮಾಡುತ್ತಿದ್ದರು. ಹೆಂಡತಿಯನ್ನು ಸಹ ಕೆಲ ಕಾಲ ನಂಬಿಸಿದ್ದರು. ಆದರೆ ಕಾಲ ಕಳೆದಂತೆ ಕಾವೇರಮ್ಮ ನಂಬಿಕೆ ಕಳೆದುಕೊಂಡಿದ್ದರು. ಅನಂತಯ್ಯ ಅಸಹಾಯಕರಾಗಿದ್ದರು.

"ಕಾವೇರಿ ಇದೇ ನೋಡು ದೇವರ ಆಟ. ನಮ್ಮ ಪ್ರಯತ್ನ ಎಷ್ಟೇ ಇದ್ದರು, ದೈವ ಕಣ್ಣು ತೆರೆಯದೇ ಇದ್ದರೆ ಫಲ ಕೊಡುವುದೇ ಇಲ್ಲ. ಅಲ್ಲದೆ ಈಗ ನಿನಗೆ ಬೊಜ್ಜು ಬೇರೆ ಬಂದು ಬಿಟ್ಟಿದೆ, ವಯಸ್ಸಾಯಿತು. ಹೋಗಲಿ ಯಾರನ್ನಾದ್ರೂ ದತ್ತು ತೆಗೆದುಕೊಳ್ಳೋಣ.''

"ಯಾರ ಮಕ್ಕಳೋ ನಮ್ಮ ಮಕ್ಕಳಾಗುವುದಿಲ್ಲ. ನನಗೆ ಅಂತ ವಯಸ್ಸೇನೂ ಆಗಿಲ್ಲ. ನೀವು ತಿಳ್ಕೊಂಡಿರೋವಷ್ಟು ದಪ್ಪ ಏನೂ ಆಗಿಲ್ಲ. ಆನೆಯಂತೆ ಇರುವ ಅಂಬುಜಮ್ಮನವರಿಗೆ ಮೊನ್ನೆ ಮಗು ಆಗಿರುವಾಗ ನನಗೇತಕ್ಕೆ ಆಗಲ್ಲ.''

"ಹೌದಾ ಹಾಗಾದ್ರೆ, ಬೆಂಗಳೂರಿಗೆ ಹೋಗ್ತಿದ್ದೀನಲ್ಲ, ಅಲ್ಲಿ ಸ್ಪೆಶಲಿಸ್ಟ್ ಡಾಕ್ಟರ್ ಯಾರಿದ್ದಾರೆ ಎಂದು ಕೇಳಿಕೊಂಡು ಬರ್ತಿನಿ. ಆಮೇಲೆ ನಿನ್ನ ಕರ್ಕೊಂಡು ಹೋಗಿ ಇನ್ನೊಂದು ಸಲ

ಚೆಕ್ ಅಪ್ ಮಾಡಿಸ್ತೇನೆ. ಮಗು ಆಗುತ್ತೆ'' ಎಂದು ಹೇಳಿದಾಗ ಕಾವೇರಮ್ಮನ ಮುಖ ಮೊರದಗಲವಾಯಿತು.

"ಹೌದಾ, ಹಾಗಾದ್ರೆ ಮರೆಯದೆ ಡಾಕ್ಟರನ್ನು ಕಂಡು ಮಾತನಾಡಿಸಿಕೊಂಡು ಬನ್ನಿ. ಆಮೇಲೆ ನಾವು ಹೋಗಿ ಬರೋಣ. ಮಡಿಲಿಗೆ ಒಂದು ಮಗು ಬಂದರೆ ನನಗೆ ಇನ್ನೇನೂ ಬೇಡ.''

"ಆಗುತ್ತೆ ಕಾವೇರಿ, ನಿನ್ನ ಪೂಜೆ ಪುನಸ್ಕಾರಕ್ಕೆ ದೇವರು ಖಂಡಿತ ನಿನಗೆ ಪುತ್ರ ಭಿಕ್ಷೆ ಕೊಡುತ್ತಾನೆ'' ದೇವರು ಎಂಬ ಪದ ಉಪಯೋಗಿಸಿದರೆ ಹೆಂಡತಿ ಸುಮ್ಮನಾಗುತ್ತಾಳೆ ಎಂದು ಅನಂತಯ್ಯನವರಿಗೆ ತಿಳಿದಿತ್ತು.

"ಸಾರ್'' ಎಂಬ ಕೂಗು ಕೇಳಿ ಅನಂತಯ್ಯನವರು ಬೇಗ ತಿಂಡಿ ತಿಂದು ಎದ್ದು ಕೈ ತೊಳೆದುಕೊಂಡು,

"ಕಾಫಿ ಆದ ಕೂಡಲೇ ಕೂಗು ಬರ್ತೀನಿ. ಇನ್ಯಾರೋ ಬಂದಿದ್ದಾರೆ ಆಫೀಸ್‌ನಲ್ಲಿರ್ತೇನೆ'' ಎಂದು ಹೇಳಿ ಆಫೀಸ್ ರೂಂ ಕಡೆ ಹೊರಟರು.



ಹೆಂಗಸಿನ ನಾಲಿಗೆ ಎಂದೂ ತುಕ್ಕು ಹಿಡಿಯದ ಖಡ್ಗ.

— ಜಪಾನ್ ಗಾದೆ

ಬ್ರಹ್ಮಚಾರಿಯಾಗಿರುವುದಕ್ಕಿಂತ ಅಚ್ಚುಕಟ್ಟಿಲ್ಲದ ಹೆಣ್ಣಾದರೂ ಮದುವೆಯಾಗುವುದು ಮೇಲು.

— ಸೂಡಾನ್

ಸಂಗ್ರಹ : ಮುರುಳೀಧರ ಕೆ. ಎಸ್.

ಎರಡು

ಅಮ್ಮ ಎರಡಕ್ಷರದ ಪದದಲ್ಲಿ ಎಷ್ಟೊಂದು ಅರ್ಥವಿದೆ. ಅಮ್ಮನ ಅಂತಕರಣಕ್ಕೆ ಆದಿ ಇದೆಯಾದರೂ ಅಂತ್ಯವಿರುವುದಿಲ್ಲ. ಅಮ್ಮನ ಪ್ರೀತಿ ಸಾಗರದಷ್ಟೇ ವಿಶಾಲ.

ಶಾರದಮ್ಮನವರಿಗೆ ಒಬ್ಬಳೇ ಮಗಳು ಮಾಲಿನಿ. ಪಾಪದ ಕೂಸು. ಚಿಕ್ಕ ವಯಸ್ಸಿನಲ್ಲೆ ತಂದೆಯನ್ನು ಕಳ್ಕೊಂಡಳು. ಹಳ್ಳಿಯಲ್ಲಿ ಸ್ವಲ್ಪ ಜಮೀನು ಇದ್ದುದರಿಂದ ರೈತ ಕೊಟ್ಟಷ್ಟರಿಂದಲೇ ಜೀವನ. ಶಾರದಮ್ಮ ಮಗಳಿಗೆ ಯಾವ ತೊಂದರೆ ಇಲ್ಲದಂತೆ ನೋಡಿಕೊಳ್ಳುತ್ತಿದ್ದರು. ಶಾರದಮ್ಮನವರ ತಮ್ಮ ಅನಂತಯ್ಯನವರು ತಿಂಗಳಿಗೊಂದು ಸಲ ತಂಗಿ ಮನೆಗೆ ಬಂದು ತಮ್ಮ ಕೈಲಾದ ಸಹಾಯವನ್ನು ಮಾಡಿ ಕೊಡುತ್ತಿದ್ದರು.

ಮಾಲಿನಿ ಈಗ ಎಸ್. ಎಸ್. ಎಲ್. ಸಿ. ಗೆ ಕಟ್ಟಿದ್ದಳು. ಅವಳ ಜೊತೆ ಇನ್ನೂ ನಾಲ್ಕೈದು ಹುಡುಗಿಯರು, ಇಬ್ಬರು ಹುಡುಗರು ಸಹ ಟೆಸ್ಟಿಗೆ ಹೋಗುತ್ತಿದ್ದರು.

ಶಾರದಮ್ಮನವರ ದೇಹಸ್ಥಿತಿ ಈಚೀಚೆಗೆ ಸರಿ ಇರಲಿಲ್ಲ. ಮಾಲಿನಿ ಸಿನಿಮಾ ನೋಡುತ್ತಿದ್ದಳು, ಸಿನಿಮಾ ಪತ್ರಿಕೆಗಳನ್ನು ಓದುತ್ತಿದ್ದಳು. ಹೀರೋಯಿನ್ ತರಹ ಅಲಂಕರಿಸಿಕೊಳ್ಳುತ್ತಿದ್ದಳು. ಮಾವನನ್ನು ಕಾಡಿಸಿ ಒಂದು ಟ್ರಾನಿಸ್ಟರನ್ನು ತೆಗೆಸಿಕೊಂಡಿದ್ದಳು. ಓದು ಮುಗಿಸಿದ ಮೇಲೆ ಫಿಲಂ ಸಾಂಗ್ಸ್ ಕೇಳುತ್ತಿದ್ದಳು.

'ಹೋದೆಯ ದೂರ, ಓ ಜೊತೆಗಾರ ಸೇರಲು ಬಂದಾಗ' ಎಂಬ ಫಿಲಂ ಸಾಂಗ್ಸ್ ಕೇಳಿಬರುತ್ತಿತ್ತು ಟ್ರಾನ್ಸಿಸ್ಟರ್‌ನಲ್ಲಿ. ಹೆರಳನ್ನು ಹಾಕಿಕೊಳ್ಳುತ್ತ ಸಾಂಗ್ಸ್ ಜೊತೆಗೆ ತಾನೂ ಗುನುಗುತ್ತಿದ್ದಳು ಮಾಲಿನಿ.

"ಮಾಲೂ ಮಾಲಿನಿ, ಬಾರೇ ಇಲ್ಲಿ." ಕೆಮ್ಮುತ್ತ ಶಾರದಮ್ಮ ಕೂಗಿದರು.

"ಏನು ಬೇಕಮ್ಮ"

"ಬಚ್ಚಲು ಮನೆಗೆ ಹೋಗಬೇಕಮ್ಮ. ಸ್ವಲ್ಪ ಕರ್‍ಕೊಂಡು ಹೋಗು ಬಾಮ್ಮ."

"ಬಂದೆ ಅಮ್ಮ" ಎಂದು ಹೇಳಿ ಮಾಲಿನಿ ಓಡಿ ಬಂದು, ತಾಯಿಯನ್ನು ಕರ್‍ಕೊಂಡು ಹೋಗಿ ಬಚ್ಚಲು ಮನೆಯಲ್ಲಿ ಬಿಟ್ಟು ಮತ್ತೆ ರೂಂಗೆ ಬಂದು ಬಿಟ್ಟಳು ಹಾಡು ಕೇಳಲು.

ಮಾಲಿನಿ ಮುದ್ದಾಗಿದ್ದಳು, ಆಕೆಯ ಸೌಂದರ್ಯ ಸೂರ್ಯನನ್ನು ಕಂಡ ತಾವರೆ ಅರಳುವ ಹಾಗೆ ಅರಳುತ್ತಿತ್ತು. ಬಡತನವಿದ್ದರೂ ಆಸೆಗೆ ಅಂಕೆ ಇರಲಿಲ್ಲ, ಆದರೆ ಅವಳಿಗೂ ಮನೆಯ ಪರಿಸ್ಥಿತಿ ತಿಳಿದಿತ್ತು. ತನ್ನ ಆಸೆಗಳನ್ನು ಪೂರೈಸಿಕೊಳ್ಳಲು ಮಾಲಿನಿ ಹಗಲುಗನಸುಗಳನ್ನು ಕಾಣುತ್ತಿದ್ದಳು, ರಾಜಕುಮಾರಿಯಂತೆ ನಲಿಯುತ್ತಿದ್ದಳು. ಮಾಲಾಶ್ರೀ ಸ್ಥಾನದಲ್ಲಿ ತಾನು ಇದ್ದು ಶಶಿಕುಮಾರ್ ಜೊತೆ ಡ್ಯುಯೇಟ್ ಹಾಡುತ್ತಿದ್ದೇನೆ, ಅಂಬರೀಶ್ ಜೊತೆ ಕುಣಿಯುತ್ತಿದ್ದೇನೆ, ರಾಘವೇಂದ್ರ ರಾಜಕುಮಾರ್‌ನ ಜೊತೆ ಲವ್ ಮಾಡ್ತಿದ್ದೇನೆ ಎಂದೆಲ್ಲ ಕನಸು ಕಾಣುತ್ತಿದ್ದಳು.

ತಂದೆ ಪ್ರೈಮರಿ ಸ್ಕೂಲ್ ಟೀಚರ್ ಆಗಿದ್ದರು. ಅವರು ತೀರಿ ಹೋದಾಗ ಬಂದ ಹಣವನ್ನು ಜೋಪಾನವಾಗಿಟ್ಟು ಬಡ್ಡಿಯಲ್ಲಿ ಸಂಸಾರ ತೂಗಿಸುತ್ತಿದ್ದುದು ಮಾಲಿನಿಗೆ ತಿಳಿದಿತ್ತು. ದಿನ ಕಳೆದಂತೆ ಎಲ್ಲವೂ ತುಟ್ಟಿಯಾಗುತ್ತಿದ್ದು, ಸಂಸಾರ ನಡೆಸುವುದಕ್ಕೆ ತೊಂದರೆ ಆದಾಗ ಊರಿನಿಂದ ಮಾವಯ್ಯ ಬಂದು ನೆರವಾಗಿದ್ದು, ಬಿಸಿ ನೀರಿಗೆ ತಣ್ಣೀರು ಸೇರಿಸಿದಂತೆ ಆಗಿತ್ತು. ಸ್ವಲ್ಪ ನೆಮ್ಮದಿ ಸಿಕ್ಕಿತ್ತು. ಅಲ್ಲದೆ ಗಂಡು ದಿಕ್ಕಿಲ್ಲದ ಆ ಮನೆಗೆ ಗಂಡು ದಿಕ್ಕಾಗಿದ್ದು ಶಾರದಮ್ಮನವರ ಮನಸ್ಸಿಗೆ ನೆಮ್ಮದಿ ಉಂಟಾಗಿತ್ತು. ಅಲ್ಲದೆ ಮಾಲಿನಿಗೆ ಲಂಗ ದಾವಣಿ, ಚೂಡಿದರ್, ಪುಸ್ತಕ, ಫೀಸ್ ಎಲ್ಲ ಮಾವ ತೆಗೆದು ಕೊಡುತ್ತಿದ್ದರು. ಅಲ್ಲದೆ ಪಿಕ್ಚರ್‌ಗೆ ಹೋಟೆಲ್‌ಗೆ ಕರ್‍ಕೊಂಡು ಹೋಗುತ್ತಿದ್ದುದು ಮಾಲಿನಿಗೆ ಮರಳುಗಾಡಿನಲ್ಲಿ ಓಯಸಿಸ್ ಸಿಕ್ಕಂತೆ ಆಯಿತು.

ಅನಂತಯ್ಯ ಆಗಾಗ್ಗೆ ಬರುತ್ತ ತಂಗಿ ಹಾಗೂ ಮಾಲಿನಿ ಹಿಂದಿನ ಸಲ ಹೇಳಿದ್ದೆಲ್ಲ ತರುತ್ತಿದ್ದರು. ಬಂದಾಗ ಮಾಲಿನಿಯ ಓದಿನ ಬಗ್ಗೆ ವಿಚಾರಿಸುತ್ತಿದ್ದರು.

ಆ ದಿನ ಶನಿವಾರ. ಸಾಮಾನ್ಯವಾಗಿ ಶನಿವಾರ ಅನಂತಯ್ಯ ಬರುತ್ತಿದ್ದದ್ದು.

ಶಾರದಮ್ಮ ಮೆಲ್ಲಗೆ ಗೋಡೆ ಹಿಡಿದು ಬಚ್ಚಲ ಮನೆಯಿಂದ ಬಂದು ಹಾಸಿಗೆಯಲ್ಲಿ ಕುಳಿತರು.

"ಮಾಲಿನಿ ಇನ್ನೂ ನಿನ್ನ ಸಿಂಗಾರ ಮುಗಿದಿಲ್ವೆ."

'ಈ ಅಮ್ಮ ಯಾವಾಗಲೂ ಹೀಗೇನೇ ಸಿಂಗಾರ ಮಾಡಿಕೊಳ್ಳೋಕ್ಕೆ ಏನಿದೆ ಇಲ್ಲಿ. ಒಂದು ಸ್ನೋ, ಒಂದು ಪೌಡರ್ ಅಷ್ಟೇ ಇರೋದು. ಜಡೆಯನ್ನು ಸರಿಯಾಗಿ ಹಾಕ್ಕೊಳ್ಳೋಕೆ ಬಿಡಲ್ಲ ಗೊಣಗ್ತಾನೇ ಇರ್ತಾಳೆ' ಎಂದುಕೊಂಡಳು.

"ಅಲ್ವೆ, ಅರ್ಧ ಗಂಟೆ ಆಯಿತು ಕನ್ನಡಿ ಮುಂದೆ ಕುಳಿತು. ಟೈಂ ಎಷ್ಟಾಯಿತು.'' ಮಗಳು ಮಾತನಾಡದೆ ಇರುವಾಗ ಶಾರದಮ್ಮ ಮತ್ತೆ ಕೇಳಿದರು.

"ಎಷ್ಟಾದ್ರೆ ಏನಮ್ಮ, ಎಲ್ಲಾದ್ರೂ ಹೋಗಬೇಕಾಗಿತ್ತೇನು?'' ಸ್ವಲ್ಪ ಜೋರಿನಿಂದಲೇ ಕೇಳಿದಳು ಮಾಲಿನಿ.

ಮಗಳ ಜೋರು ತಾಯಿಗೆ ಅಭ್ಯಾಸವಾಗಿ ಹೋಗಿತ್ತು. ತಾಯಿ ಭಾರವನ್ನೆಲ್ಲ ತನ್ನ ಹೆಗಲ ಮೇಲೆ ಬಿದ್ದಿರುವ ಹಾಗೆ ವರ್ತಿಸಿದ್ದಳು.

ಮಗಳು ಎಲ್ಲರೊಡನೆ ನಗುನಗುತ್ತ ಜೇನಿನಂತೆ ಮಾತನಾಡುವುದು ತಾಯಿಗೆ ತಿಳಿದಿತ್ತು. ಆದರೆ ಅವಳು ಮಾತ್ರ ಏನು ಮಾಡುತ್ತಾಳೆ ಚೆನ್ನಾಗಿರುವ ಮನೆಯಲ್ಲಿ ಹುಟ್ಟಿದ್ದರೆ ಎಷ್ಟು ಸುಖಪಡುತ್ತಿದ್ದಳು. ಇಲ್ಲಿ ತಾನೆ ಅವಳಿಗೆ ಏನಿದೆ? ಏನೋ ಅವಳಿಗೊಂದು ಮದುವೆ ಆಗಿ ಬಿಟ್ಟರೆ ಗಂಡನ ಮನೆಯಲ್ಲಾದ್ರೂ ಸುಖವಾಗಿರಲಿ ಎಂದು ತಾಯಿ ಹೃದಯ ಬಯಸುತ್ತಿತ್ತು.



"ನನಗೋಸ್ಕರ ಸಾವನ್ನು ಬೇಕಾದರೂ ಎದುರಿಸುತ್ತೀನಿ ಎಂದು ಹೇಳಿದ್ದೆ. ಆ ದಿನ ಒಂದು ಕರಡಿ ಎದುರಾದರ ನೀನು ನನ್ನನ್ನು ಅಲ್ಲಿಯೇ ಬಿಟ್ಟು ಓಡಿ ಹೋದೆ.''

"ನಿಜ, ಆದರೆ ಆ ಕರಡಿ ಸತ್ತಿರಲಿಲ್ಲ ವಲ್ಲ.''

— ಶಂಕರಗೌಡ ವ್ಹಿ. ಪಾಟೀಲ

"ನನಗೆ ಹೊತ್ತು ಹೋದರೆ ಎಷ್ಟು ಬಿಟ್ಟರೆಷ್ಟು ಮಾಲಿನಿ. ನನ್ನಿ ಪ್ರಪಂಚ ಎಲ್ಲ ಈ ನಾಲ್ಕು ಗೋಡೆ ಮಧ್ಯೆ. ಆದರೆ ನನ್ನ ಚಿಂತೆ ಎಲ್ಲ ನಿನ್ನದೇ ಕಣಮ್ಮ. ಲೈಬ್ರರಿಗೆ ಹೋಗ್ತೇನೆಂದು ಹೇಳಿದ್ದೆಯಲ್ಲ ಅದಕ್ಕೆ ಟೈಂ ಕೇಳಿದ್ದು. ಹೊತ್ತು ಮುಳುಗುವ ಮುಂಚೆ ಹೋಗಿ ಬಂದು ಬಿಡಮ್ಮ. ಎಲ್ಲ ಸಮಯ ಒಂದೇ ತರಹ ಇರುವುದಿಲ್ಲ.''

"ನಾನೇನು ಚಿಕ್ಕ ಮಗುವಲ್ಲ, ಲೈಬ್ರರಿ ತೆಗೆದಿರಬೇಕೋ ಬೇಡವೋ ಹೇಳು.''

"ಆಯಿತು ಬರುವಾಗ ಮಾತ್ರ ಮುಗಿದು ಹೋಗಿದೆ ತಗೊಂಡು ಬಾಮ್ಮ.''

"ಕಾಸು ಕೊಡದೆ ಮಾತ್ರ ಯಾರಮ್ಮ ಕೊಡ್ತಾರೆ?''

"ಏಕೆ, ಬೆಳಿಗ್ಗೆ ತಾನೆ ಆರು ರೂಪಾಯಿ ಕೊಟ್ಟಿದ್ದೆನಲ್ಲೇ''

"ಆರು ರೂಪಾಯಿಯಲ್ಲಿ ಎಲ್ಲಿ ಆಗುತ್ತಮ್ಮ, ನನಗೆ ಪುಸ್ತಕ ನಿನಗೆ ಮಾತ್ರೆ ಎಲ್ಲವೂ ಬರುತ್ತ'' ಎಂದುಕೊಳ್ಳುತ್ತ ಅಡುಗೆ ಮನೆಗೆ ಹೋಗಿ ಕಾಫಿ ಕಾಯಿಸಿ, ತಾಯಿಗೊಂದು ಲೋಟ ಕೊಟ್ಟು ತಾನೂ ಕುಡಿಯತೊಡಗಿದಳು ಮಾಲಿನಿ.

"ಹೌದಾ ಸರಿ ಬಿಡಮ್ಮ, ಮಾವ ಬಂದ ಮೇಲೆ ಔಷಧಿ ತರಿಸಿಕೊಳ್ತೇನೆ ನೀನು ಪುಸ್ತಕ ತಗೋ."

"ಏನೂ ಬೇಕಾಗಿಲ್ಲ, ಇನ್ನೂ ಒಂದು ದಿನ ತಡವಾದರೂ ಪರವಾಗಿಲ್ಲ. ಮಾವ ಬಂದ ಮೇಲೆ ನಾನು ಪುಸ್ತಕ ತಗೋತೀನಿ. ಈಗ ನಿನಗೆ ಫಿಲ್ಸ್ ತರ್ತೇನೆ" ಎಂದು ಮಾಲಿನಿ ತನ್ನ ಪುಟ್ಟ ಪರ್ಸ್ ತಗೆದುಕೊಂಡು ಪುಸ್ತಕ ಹಿಡಿದು ಹೊರಟಳು.

'ಒಳ್ಳೇ ಹುಡುಗಿ ಬಾಯಿ ಸ್ವಲ್ಪ ಜೋರಾದರೂ ಮನಸ್ಸು ಮಾತ್ರ ಮೃದು. ಇವಳಿಗೊಂದು ಗಂಡು ಸಿಕ್ಕಿ ಮದುವೆ ಆಗಿ ಗಂಡನ ಮನೆಯಲ್ಲಿ ಸುಖವಾಗಿದ್ದರೆ ಅಷ್ಟೇ ಸಾಕು ನನಗೆ. ದೇವರೆ ನನ್ನ ಇದೊಂದು ಆಸೆಯನ್ನು ನೆರವೇರಿಸಿಕೊಡಪ್ಪ' ಎಂದು ಶಾರದಮ್ಮ ದೇವರನ್ನು ಪ್ರಾರ್ಥಿಸಿದರು.

* * * * *

ಜಗಲಿ ಮೇಲೆ ಕುಳಿತಿದ್ದ ಶಾರದಮ್ಮನವರಿಗೆ ಕತ್ತಲಾಗುತ್ತ ಬಂದದ್ದು ಕಂಡು ಮೆಲ್ಲನೆ ಎದ್ದು ಒಳಗೆ ಬಂದು ಲೈಟ್ ಹಾಕಿದರು. ಹೆಚ್ಚು ಓಡಾಡುವುದಕ್ಕೆ ಆಗ್ತಾನೆ ಇರಲಿಲ್ಲ. ಹಾಸಿಗೆ ಮೇಲೆ ಮಲಗಿ ದೇಹ ಜಡವಾಗಿದ್ದಕ್ಕೆ ಅರ್ಧ ಗಂಟೆ ಹಾಗೇ ಬಾಗಿಲ ಬಳಿ ಬಂದು ಕುಳಿತುಕೊಳ್ಳುತ್ತಿದ್ದರು. ಟೈಂ ಆಗುತ್ತಿದ್ದಂತೆ ತಾಯಿ ಹೃದಯ ನೀರಿನಿಂದ ತೆಗೆದ ಮೀನಿನಂತೆ ಚಡಪಡಿಸುತ್ತಿತ್ತು.

ಚಳಿ ಹೆಚ್ಚಾಗುತ್ತಿದ್ದಂತೆ ಬಾಗಿಲು ಹಾಕಿ ಟ್ರಾನ್ಸಿಸ್ಟರ್ ಹಾಕಿದರು. ಆಗಲೇ ವಾರ್ತೆಗಳು ಬರುತ್ತಿದ್ದದ್ದು ಕೇಳಿ,

'ಯಾವಾಗಲೂ ಹೀಗೆ, ಎಷ್ಟು ಹೇಳಿದರೂ ಕಿವಿಗೆ ಹಾಕ್ಕೊಳ್ಳಲ್ಲ ಬೇಜಾವಾಬ್ದಾರಿ ಹುಡುಗಿ. ಬರಲಿ ಇವತ್ತು ಚೆನ್ನಾಗಿ ಬೈದುಬಿಡ್ತೇನೆ.' ಎಂದುಕೊಂಡರು.

"ಅಕ್ಕಾ ಅಕ್ಕಾ" ಎಂದು ಕೂಗುತ್ತ ಬಾಗಿಲು ಬಡೆಯುತ್ತಿರುವ ಸದ್ದು ಕೇಳಿ ವಾಸ್ತವಕ್ಕೆ ಬಂದ ಶಾರದಮ್ಮ, ರೇಡಿಯೋ ವಾಲ್ಯೂಮ್‌ನ್ನ ಕಡಿಮೆ ಮಾಡಿ ಮೆಲ್ಲಗೆ ಎದ್ದು ಹೋಗಿ ಬಾಗಿಲಿನ ಬೋಲ್ಟ್ ತಗೆದರು.

ಚೀಲ ಹಿಡಿದು ತಮ್ಮ ಬಂದದ್ದು ಅವರಿಗೆ ಸಂತೋಷವಾಯಿತು.

"ಎಷ್ಟು ಹೊತ್ತು ಅಕ್ಕ ಏನ್ಮಾಡ್ತಿದ್ದೆ."

"ಕೇಳಿಸಲಿಲ್ಲವೋ ಅನಂತು."

"ಅವಳೆಲ್ಲಿ ಹೋದಳು?"

"ಫ್ರೆಂಡ್ ಮನೆಗೆ ಹೋಗಿ, ಲೈಬ್ರರಿಗೆ ಹೋಗಿ ಬರುತ್ತೇನೆಂದು ಹೇಳಿ ಹೋದಳು ಇನ್ನೂ ಬಂದಿಲ್ಲ. ಅವಳ ಯೋಚನೆ ಮಾಡ್ತಿದ್ದೆ."

"ಬರಲಿ ಅವಳು ಮಾಡ್ತೇನೆ" ಎಂದು ಕೈ ಚೀಲ ಇಟ್ಟು, ಕೈ ಕಾಲು ತೊಳೆದುಕೊಂಡು ಬಂದಾಗ ಮಾಲಿನಿ ಬಂದವಳು,

"ಮಾವ ಯಾವಾಗ ಬಂದೆ?" ಎಂದು ಕೇಳಿದಳು.

"ನಾನು ಬಂದು ಅರ್ಧ ಗಂಟೆಯಾಯಿತು. ಅಸಲು ನಿನಗೆ ಬುದ್ಧಿ ಇದೆಯೋ ಇಲ್ಲವೋ."

"ಏಕೆ ಮಾವ, ನಾನೇನು ತಪ್ಪು ಮಾಡಿದೆ?''

"ಇನ್ನೇನು ಮಾಡಬೇಕು. ಅಕ್ಕನಿಗೆ ಹುಷಾರಿಲ್ಲ, ಟೈಂ ಎಂಟಾಯಿತು. ಒಬ್ಬಳನ್ನೇ ಬಿಟ್ಟು ಹೀಗೆ ಹೋಗಬಹುದಾ?''

"ಬೇಗಲೇ ಬರ್‍ತಿದ್ದೆ ಮಾವ. ಆ ವಸಂತಿ ಸಿಕ್ಕಿ ಬಿಟ್ಟಳು.''

"ಸರಿ ಬಿಡು, ಯಾರಾದರೂ ಸಿಕ್ಕರೆ ಮನೆ, ಮಠ ಏನು, ನಿನ್ನನ್ನೇ ನೀನು ಮರೆತು ಬಿಡ್ತೀಯಾ.''

"ಹೋಗ್ಲಿ ಬಿಡು, ಮಾತ್ರೆ ತಂದಿದ್ದೀಯಾ ಮಾಲಿನಿ.''

"ತಂದಿದ್ದೇನೆ ತಗೋ ಅಮ್ಮ.'' ಮಾತ್ರೆ ಕೊಟ್ಟಳು ಮಾಲಿನಿ.

"ಸರಿ ಹೋಗಿ ಅನ್ನಕ್ಕೆ ಇಡು. ನಿಮ್ಮ ಮಾವ ಊಟ ಮಾಡಿ ಎಷ್ಟು ಹೊತ್ತಾಯಿತೋ ಏನೋ.'' ತಾಯಿ ಹೇಳಿದಾಗ ಮಾಲಿನಿ ಅಲ್ಲಿಂದ ಓಡಿದಳು.

'ರಾಗಸಂಗಮ'

ಲಾಟರಿ ಡ್ರಾ – ೧೧೮ರ ವಿಜೇತರು



ಪಿ. ಜ್ಞಾನೇಶ್ವರಿ

ಬೋರೇಗೌಡನ ಕೊಪ್ಪಲು

ಮೈಸೂರು ಜಿಲ್ಲೆ.

"ನೀನೇ ಈ ರೀತಿ ಅವಳಿಗೆ ಸದರ ಕೊಡೋದು, ಹೇಗಿದೆ ನಿನ್ನ ಆರೋಗ್ಯ.'' ಅನಂತಯ್ಯ ಕುರ್ಚಿಯಲ್ಲಿ ಕುಳಿತುಕೊಳ್ಳುತ್ತ ಕೇಳಿದರು.

"ಏನ್ಮಾಡಲೋ ಹಾಗೇ ಇದೆ. ಆರಕ್ಕೇರಲ್ಲ, ಮೂರಕ್ಕೆ ಇಳಿಯಲ್ಲ. ಏನೋ ನಮ್ಮ ಬಾಳು ಹೀಗೆ ಆಗೋಯಿತು.'' ಕಣ್ಣಲ್ಲಿ ನೀರು ಹಾಕಿದರು ಶಾರದ.

"ಯಾಕಕ್ಕ ಅಳ್ತಿ, ಅಂತಹುದು ಏನಾಯಿತು ನಾನಿಲ್ವೆ.''

"ಅದೇ ಕಣೋ ನಾನು ಹೇಳ್ತಾ ಇರೋದು. ಗಂಡು ದಿಕ್ಕಿಲ್ಲದ ಈ ಮನೆಗೆ ನೀನು ಬರದೇ ಇದಿದ್ದರೆ ಆ ಹುಡುಗಿಯನ್ನು ಕಟ್ಟಿಕೊಂಡು, ಮೈಯಲ್ಲಿ ರೋಗ ಇಟ್ಕೊಂಡು ನಾನು ಹೇಗೆ ಬಾಳಬೇಕಾಗಿತ್ತು ಹೇಳು. ದೇವರ ಹಾಗೆ ಬಂದು...''

"ಸಾಕಕ್ಕ ಎಂತಹ ಮಾತು ಆಡ್ತಿ, ಏನೇನೋ ಮನಸ್ಸಿನಲ್ಲಿ ಇಟ್ಟುಕೊಂಡು ಕೊರಗಿ ರೋಗ ಹೆಚ್ಚು ಮಾಡಿಕೊಳ್ಳಬೇಡ. ಸಂಬಂಧ ಇಲ್ಲದವರಿಗೆ ಹೇಳುವ ಹಾಗೆ ಹೇಳ್ತಿದ್ದೀಯಲ್ಲ ನಾನೇನು ನಿನ್ನ ಬೆನ್ನಿಗೆ ಬಿದ್ದವನಲ್ಲವೇ.''

"ಅದು ನಿಜ, ಆದರೆ ನಿನ್ನ ಭಾವನೆ ಬೇರೆ ಯಾರಿಗೆ ಇರುತ್ತೆ ಹೇಳು. ನಿನ್ನ ಭಾವನ ಬೆನ್ನಿಗೆ ಬಿದ್ದ ನನ್ನ ಮೈದುನ ಅವರ ಅಣ್ಣ ಹೋದಾಗ ಬಂದು ಮುಖ ತೋರಿಸಿ ಹೋದವನು ಅನಂತರ ಈ ಕಡೆ ತಲೆ ಇಟ್ಟು ಮಲಗಿಲ್ಲ ಎಂದು ಕಾಣುತ್ತೆ. ಕೊಟ್ಟ ಹೆಣ್ಣು ಕುಲಕ್ಕೆ ಹೊರಗೆ ಎಂದು ಹೇಳ್ತಾರೆ ಆದರೆ ಈಗ ನನಗೆ ತವರುಮನೆಯವರಿಂದಲೆ ಆಧಾರ.''

"ಅಕ್ಕ ಗಾದೆ ಕೇಳಕ್ಕೆ ಚೆನ್ನಾಗಿರುತ್ತೆ. ಕೆಲವು ಟೈಂನಲ್ಲಿ ಆಚರಣೆಗೆ ಸರಿ ಹೊಂದುತ್ತೆ. ಕೊಟ್ಟ ಹೆಣ್ಣು ಕುಲದಿಂದ ಹೊರಗೆ ಆದರೂ ಮನಸ್ಸಿನಿಂದ ದೂರ ಹೇಗೆ ಆಗುತ್ತೆ. ಹತ್ತಾರು ವರ್ಷ ಕೂಡಿ, ಆಡಿ ಜಗಳ ಆಡಿ, ತಿಂಡಿಗಾಗಿ ಹೊಡೆದಾಡಿ ಅತ್ತೂ ಕರೆದು, ಆನಂದ ಪಟ್ಟು ನಲಿದಾಡಿದ ಬಾಲ್ಯವನ್ನು, ಆ ಒಡನಾಟವನ್ನು ಮರೆಯಕಾಗುತ್ತಾ ಅಕ್ಕ. ನನ್ನ ಓದಿಗೆ ಭಾವ ಎಷ್ಟು ಸಹಾಯ ಮಾಡಿದ್ದಾರೆ. ಇಂದು ನಾನು ಲಾಯರ್ ಆಗಿ ಒಬ್ಬ ಮನುಷ್ಯ ಅನ್ನಿಸಿಕೊಂಡಿರೋದು ನಿನ್ನ ಹಾಗೂ ಭಾವನ ತ್ಯಾಗದಿಂದ ಅಕ್ಕ. ಅದನ್ನು ಮರೆತು ಮನುಷ್ಯತ್ವ ಇಲ್ಲದವನ ಹಾಗೆ ಆಗಲಾರೆ."

ಅಕ್ಕ, ತಮ್ಮ ಮಾತನಾಡುವಷ್ಟರಲ್ಲಿ ಮಾಲಿನಿ ಅನ್ನ ಮಾಡಿದಳು. ಬೆಳಿಗ್ಗೆಯ ಹುಳಿ ಇತ್ತು, ಚಟ್ನಿ ಪುಡಿ ಸಹ ಇದ್ದುದರಿಂದ ಬೇರೇನೂ ಮಾಡಲಿಕ್ಕೆ ಹೋಗಲಿಲ್ಲ.

"ಮಾವ, ತಟ್ಟೆ ಹಾಕಿದೆ ಊಟಕ್ಕೆ ಬನ್ನಿ."

"ಏಳು ಶಾರಿ, ಊಟದ ಶಾಸ್ತ್ರ ಮಾಡಿ ಬಿಡೋಣ ಅವಳು ಆಮೇಲೆ ಓದಿಕೊಳ್ಳಲಿ" ಎಂದು ಹೇಳುತ್ತ ಎದ್ದ ಅನಂತಯ್ಯ, ಅಕ್ಕನ ಕೈ ಹಿಡಿದು ಅಡುಗೆ ಮನೆಗೆ ಕರ್ರೊಂಡು ಬಂದರು.

"ನೀನೂ ಕುಳಿತು ಬಿಡು ಮಾಲಿನಿ ಹಾಗೇ ಬಡಿಸಿಕೊಂಡರೆ ಆಯಿತು."

ಮಾಲಿನಿ ಸಹ ಕುಳಿತಳು. ಮೂವರೂ ಊಟ ಮಾಡಿದರು. ಮಾಲಿನಿ ಪಾತ್ರೆ ಎತ್ತಿಟ್ಟು ಗೋಮಯ ಸಾರಿಸಿ ಬಂದಳು.

ಶಾರದಮ್ಮ ಆಗಲೇ ತೂಕಡಿಸುತ್ತಿದ್ದರು.

ಅನಂತಯ್ಯ ಒಂದು ಸಿಗರೆಟ್ ಸೇದಿ ಬಂದಿದ್ರು.

"ಯಾವಾಗ ಪರೀಕ್ಷೆ ಮಾಲಿನಿ?"

"ಇನ್ನೊಂದು ತಿಂಗಳಿದೆ ಮಾವ."

"ಚೆನ್ನಾಗಿ ಓದಿದ್ದೀಯಾ ತಾನೆ."

"ಓದ್ತಾ ಇದ್ದೀನಿ ಮಾವ."

"ಸರಿ ಹಾಗಾದ್ರೆ ಪುಸ್ತಕ ತಗೊಂಡು ಬಾ. ಕಳೆದ ಸಲಕ್ಕಿಂತ ಈ ಸಲ ನಾನು ಕೇಳುವ ಪ್ರಶ್ನೆಗೆ ಹೇಗೆ ಉತ್ತರ ಕೊಡ್ತೀಯೋ ನೋಡ್ತೀನಿ, ಆಗ ಗೊತ್ತಾಗುತ್ತೆ ನಿನ್ನ ಪ್ರೋಗ್ರೆಸ್ ಹೇಗೆ ಅಂತ." ಅನಂತಯ್ಯ ಹೇಳಿದಾಗ ಮಾಲಿನಿ ಪುಸ್ತಕ ತಂದು ಅವರ ಎದುರಿಗೆ ಕುಳಿತಳು.

ಕನ್ನಡ, ಸೈನ್ಸ್, ಸೋಶಿಯಲ್, ಇಂಗ್ಲಿಷ್ ಒಂದೊಂದೇ ಪುಸ್ತಕದ ಕೊಶ್ಚನ್‌ಗಳನ್ನು ಕೇಳತೊಡಗಿದರು ಅನಂತಯ್ಯ. ಮಾಲಿನಿ ಉತ್ತರಿಸತೊಡಗಿದಳು. ಅವಳು ಆಗಾಗ್ಗೆ ಆಕಳಿಸುತ್ತಿದ್ದಾಗ,

"ಏನು ಆಗ್ಲೆ ನಿದ್ದೇನಾ, ಪರೀಕ್ಷೆ ಹತ್ತಿರ ಬರುತ್ತಲಿದೆ ಓದಿನ ಕಡೆ ಹೆಚ್ಚಿನ ಗಮನ ಕೊಡಬೇಕು. ನಾವೆಲ್ಲ ರಾತ್ರಿ ಒಂದು ಗಂಟೆಯತನಕ ಓದಿ ಮತ್ತೆ ನಾಲ್ಕು ಗಂಟೆತನಕ ಓದಿ ಮತ್ತೆ ನಾಲ್ಕೂವರೆಗೆ ಎದ್ದು ಓದಕ್ಕೆ ಕುಳಿತು ಬಿಡುತ್ತಿದ್ದೆವು. ಎಲ್ಲಿ ಕಣ್ಣನ್ನು ತಣ್ಣೀರಿನ ಬಟ್ಟೆಯಿಂದ ಒರಸಿಕೊ" ಎಂದು ಹೇಳುತ್ತ ತಾವೇ ಟವಲ್‌ನ ತುದಿಗೆ ನೀರನ್ನು ಸಿಂಪಡಿಸಿ ಮಾಲಿನಿ ಕಣ್ಣನ್ನು ಒರೆಸುತ್ತಿದ್ದರು.

"ರಾತ್ರಿ ಆಗಿದೆ ಬೆಳಿಗ್ಗೆ ಓದ್ಕೋತಾಳೆ ಮಲಗಲಿ ಬಿಡೋ" ಎಂದು ಮಲಗಿದ್ದಲ್ಲಿಂದಲೇ



ಕೂಗಿ ಹೇಳಿದರು ಶಾರದಮ್ಮ.

"ಹೀಗೆ ಮುದ್ದು ಮಾಡಿ ಮೊದ್ದು ಮಾಡಿದರೆ, ಓದು ಅವಳ ತಲೆಗೆ ಹತ್ತಿದ ಹಾಗೇನೇ. ಇನ್ನೂ ಹನ್ನೊಂದೂ ಆಗಿಲ್ಲ, ನೀನು ಮಲಗು ಅಕ್ಕ." ಅನಂತಯ್ಯ ಹೇಳಿದಾಗ.

"ಸರಿ ನೀನುಂಟು, ಅವಳುಂಟು" ಎಂದು ಶಾರದಮ್ಮ ಮಲಗಿದರು.

"ಏನೇ ಆಗಲೇ ಕಾಲಿಗೆ ಜೋಮು ಹಿಡಿಯುತ್ತ."

"ಹ್ಞೂಂ ಮಾವ." ಕಾಲನ್ನು ಆಡಿಸಲು ಆಗದೆ ಮುಖ ಕಿವುಚಿದಳು, ನೀವಿದರು.

"ಬಿಡು ಮಾವ, ಅದೇ ಸರಿ ಹೋಗುತ್ತೆ."

"ಕಾಲ ಮೇಲೆ ಒತ್ತಡ ಬಿದ್ದರೆ, ರಕ್ತ ಚಲನೆ ಇಲ್ಲದೆ ಇದ್ದರೆ ಹೀಗೆ ಜೋಮು ಹಿಡಿಯುತ್ತೆ. ಈಗ ಸರಿ ಹೋಯಿತು. ತಾನೇ."

ಸೋದರ ಮಾವನ ಅಪ್ಯಾಯತೆಯನ್ನು ಕಂಡು ಕರಗಿ ಹೋದಳು ಮಾಲಿನಿ.

ಒಂದೊಂದೇ ಕೊಶ್ಚನ್ ಕೇಳಿ ಉತ್ತರ ಪಡೆದು, ಅವಳಿಗೆ ಅರ್ಥವಾಗದೆ ಇರುವ ಪಾಠವನ್ನು ಹೇಳಿಕೊಟ್ಟರು ಅನಂತಯ್ಯ.

"ಹೇಗೆ ಕುಳಿತುಕೊಳ್ಳೋದು, ಓದವುದಕ್ಕೂ ಬರೆಯುವುದಕ್ಕೂ ನಡೆಯುವುದಕ್ಕೂ, ಮಲಗುವುದಕ್ಕೂ, ಊಟ ಮಾಡುವುದಕ್ಕೂ ಒಂದು ಕ್ರಮ ಇದೆ. ಎಲ್ಲಿ ಈ ಕಡೆ ತಿರುಗು, ಹೀಗೆ ಕುಳಿತಿಕೊ. ಪುಸ್ತಕ ಹೀಗೆ ಇರಲಿ, ಬೆಳಕು ಅದರ ಮೇಲೆ ಬೀಳಬೇಕು. ಬೆನ್ನು ಬಾಗಬಾರದು, ನೆಟ್ಟಗೆ ಇರಬೇಕು. ಋಷಿಗಳು ತಪಸ್ಸು ಮಾಡುವ ಹಾಗೆ ಇರಬೇಕು. ಧ್ಯಾನ ಮಾಡುವ ಏಕಾಗ್ರತೆ ಇರಬೇಕು." ಹೇಳುತ್ತ, ಅವಳ ಭುಜ, ಮಂಡಿ ಹಿಡಿದು ಪಕ್ಕಕ್ಕೆ ತಿರುಗಿಸಿ ಬಾಗಿದ ಬೆನ್ನಿನ ಮೇಲೆ ಒಂದು ಸಲ ಕುಟ್ಟಿ ನೆಟ್ಟಗೆ ಮಾಡಿದರು ಅನಂತಯ್ಯ.

ಮಾಲಿನಿಗೆ ಮೈ ರೋಮಾಂಚನವಾಯಿತು. ಆದರೆ ಅವಳಲ್ಲಿ ಯಾವ ವಿಕೃತ ಭಾವನೆಯೂ ಉಂಟಾಗಲಿಲ್ಲ. ಸರಿಯಾಗಿ ಕುಳಿತುಕೊಂಡು ಓದತೊಡಗಿದಳು.

* * * * *

ತನ್ನ ತಮ್ಮ ಇಷ್ಟೆಲ್ಲ ಮುತುವರ್ಜಿ ವಹಿಸಿ ತನ್ನ ಮನೆ ಉಳಿಸಿ ಮಗಳ ವಿದ್ಯೆಯಲ್ಲಿ ಎಷ್ಟೊಂದು ಆಸಕ್ತಿ ವಹಿಸುತ್ತಿದ್ದಾನೆ. ಚಿಕ್ಕ ವಯಸಿನಲ್ಲಿ ನಾಲ್ಕಕ್ಷರ ಕಲಿಯಲಿಕ್ಕೆ ಮಾಡಿದ ಉಪಕಾರವೇ ಇಂದು ನಮ್ಮ ತಲೆ ಕಾಯುತ್ತಿರುವುದು.

"ಅವಳು ಓದಿ ಏನ್ಮಾಡಬೇಕು, ಮದುವೆ ಮಾಡಿ ಗಂಡನ ಮನೆಗೆ ಕಳಿಸೋದು ತಾನೆ."

"ಅಕ್ಕ ಎಲ್ಲ ಹೆಣ್ಣು ಮಕ್ಕಳನ್ನು ಮದುವೆ ಮಾಡಿ ಗಂಡನ ಮನೆಗೆ ಕಳಿಸೋದೆ. ಆದರೆ ಹಾಗೆ ಕಳಿಸುವಾಗ ಹೆಣ್ಣು ಮಕ್ಕಳಿಗೆ ಸಂಸ್ಕಾರ ಕೊಡೋದು ತಂದೆ ತಾಯಿಗಳ ಜವಾಬ್ದಾರಿ. ವಿದ್ಯೆ ಸಂಸ್ಕಾರ ಇಲ್ಲದಿದ್ದರೆ ಕಷ್ಟ. ಮಾಲಿನಿ ಮದುವೆ ಬಗ್ಗೆ ನೀನು ಯೋಚನೆ ಬಿಟ್ಟು ಬಿಡು. ಅವಳಿಗೆ ಒಳ್ಳೆ ಗಂಡು ನೋಡಿ ಮದುವೆ ಮಾಡುವುದು ನನ್ನ ಜವಾಬ್ದಾರಿ. ಈಗಿನ ಕಾಲದಲ್ಲಿ ಓದಿ ಕೆಲಸದಲ್ಲಿರುವ ಹುಡುಗಿಯರಿಗೆ ಗಂಡು ಸಿಗುವುದು ಕಷ್ಟವಿರುವಾಗ ಇನ್ನು ಓದದೇ ಮೊದ್ದಾಗಿ ಬಿಟ್ಟರೆ ಯಾರು ತಾನೆ ಕಟ್ಕೋತಾರೆ. ಎಸ್. ಎಸ್. ಎಲ್. ಸಿ. ಪಾಸಾಗಲಿ, ಆಮೇಲೆ ನಾನು ಕರ್ಕೊಂಡು ಹೋಗಿ ಕಾಲೇಜಿಗೆ ಸೇರಿಸ್ತೇನೆ ಗ್ರಾಜ್ಯುಯೇಶನ್ ಒಂದು ಆಗಲಿ. ಆಮೇಲೆ ಮದುವೆ ಮಾಡಿದರಾಯಿತು."

ತಮ್ಮ ಹೇಳಿದ್ದು ಕೇಳಿ ಅವಾಕ್ಕಾದರು ಶಾರದಮ್ಮ. ಅವರು ಐದನೇ ಕ್ಲಾಸ್‌ತನಕ ಓದಿದ್ದರು ಅಷ್ಟೇ. ಅಲ್ಲದೆ, ಮದ್ವೆ ಚಿಕ್ಕ ವಯಸ್ಸಿನಲ್ಲೆ ಆಗಿತ್ತು. ಗಂಡ ಪ್ರೈಮರಿ ಸ್ಕೂಲ್ ಮೇಷ್ಟ್ರಾಗಿದ್ದರಿಂದ. ಹೆಚ್ಚಾಗಿ ಹಳ್ಳಿ ಸ್ಕೂಲ್‌ನಲ್ಲೇ ಅವರ ಸರ್ವಿಸ್ ಕಳೆದಿತ್ತು. ಹಳ್ಳಿಯಲ್ಲಿದ್ದ ಶಾರದಮ್ಮನವರಿಗೆ ಮೂಢ ನಂಬಿಕೆಗಳು. ಹಳ್ಳಿ ಆಚಾರಕ್ಕೆ ಮೈ ಒಗ್ಗೂಡಿ ಬಿಟ್ಟಿತು.

"ಅಲ್ಲ ಅನಂತು, ಮಾಲಿನಿನ ನಿನ್ನ ಜೊತೆ ಕಳುಹಿಸೊದ, ನೋಡಿದವರು ಏನಂದುಕೊಳ್ತಾರೆ."

"ಅಂದು ಕೊಳ್ಳುವವರು ಏನು ಮಾಡಿದ್ದಾರೆ ಹೇಳು, ಹೇಗಿದ್ದರೂ ಅಂದು ಆಡಿಕೊಳ್ತಾರೆ, ಬಗ್ಗಿದರೆ ಬಡಿಯುತ್ತಾರೆ, ಎದ್ದು ಒದ್ದರೆ ಓಡಿ ಹೋಗ್ತಾರೆ. ಅಲ್ಲದೆ ನಿನ್ನ ಮಗಳನ್ನೇನು ಎತ್ತಿಕೊಂಡು ಓಡಿ ಹೋಗ್ತೇನೆಂದು ಭಯಾನಾ?" ಅನಂತಯ್ಯ ಕೇಳಿದರು.

"ಅಲ್ಲ ಈಗಲೇ ನಿನಗೆ ಇಷ್ಟೊಂದು ಕಷ್ಟ, ಇನ್ನು ಹೀಗೆ ಹೋಗ್ತಾ ಇದ್ದರೆ ನಿನ್ನ ಹೆಂಡತಿ ಏನಂದುಕೊಳ್ಳಲ್ಲ."

"ಏನೂ ಅಂದುಕೊಳ್ಳಲ್ಲ. ಅವಳಿಗೂ ಜೊತೆ ಆಗುತ್ತೆ, ಮಾಲಿನಿ ಚೆನ್ನಾಗಿರೋದು ನಿನಗೆ ಬೇಡವೇನು."



ತಿರುಗಾ ಮುರುಗಾ

ಮಗಳ ಮದುವೆ ಸಂಭ್ರಮದಲ್ಲಿ
ಅತಿಥಿಗಳಿಗೆ ರಸಗವಳ
ಕಂಠಪೂರ್ತಿ
ಮಗಳ ತಂದೆಗ
ಇದ್ದಬದ್ದ ನೆಮ್ಮದಿ
ಆಗಿತ್ತು ಭರ್ಜರಿ ತಿಥಿ.

– ದೊಡ್ಡರಂಗೇಗೌಡ

"ಮಕ್ಕಳಿಗೆ ಒಳ್ಳೆಯದಾಗುವುದಿದ್ದರೆ ಯಾವ ತಾಯಿ ತಾನೆ ಬೇಡ ಎನ್ನುತ್ತಾಳೆ. ಏನೋ ಎಲ್ಲ ನಿನ್ನ ಇಷ್ಟ, ಅವಳು ಏನು ಹೇಳ್ತಾಳೋ."

"ಅವಳು ಏನು ಹೇಳ್ತಾಳೆ, ಒಂಟಿ ಕಾಲಿನ ಮೇಲೆ ನಿಂತಿದ್ದಾಳೆ. ಬರ್‍ತಿಯೇನೆ ಮಾಲಿನಿ."

"ಅಮ್ಮ ಹೇಳಿದ ಹಾಗೆ ಆಗಲಿ."

"ಅಮ್ಮ ಮುಸರೆ ತಿಕ್ಕಿಕೊಂಡು ಕುಳಿತುಕೊ ಎನ್ನುತ್ತಾಳೆ ಹಾಗೇ ಮಾಡ್ತಿಯೇ. ನಿನಗೆ ಓದಿನಲ್ಲಿ ಇಷ್ಟವಾಗಿ ಓದಿಸ್ತೀನಿ. ನನ್ನ ಬಾಳು ಚೆನ್ನಾಗಿ ಆಗಬೇಕೆಂಬ ಮನಸ್ಸಿದ್ರೆ ಬಾ."

"ಬರ್ತಿನಿ ಮಾವ, ಆದರೆ ಅಮ್ಮ."

"ನಂದೇನು ಬಿಡಮ್ಮ. ಈ ರೋಗ ಎರಡು ದಿನ ಇರುತ್ತೆ ಹೋಗುತ್ತೆ, ಒಂದು ಅನ್ನ ಸಾರು ಮಾಡ್ಕೋತೇನೆ, ಅಕ್ಕಪಕ್ಕದವರು ಇರ್ತಾರೆ."

"ಅಕ್ಕ ನೀನೂ ಬಂದು ಬಿಡು."

"ಬೇಡ ತಮ್ಮ, ಪಟ್ಟಣ ಏನೂ ದೂರ ಇಲ್ಲ. ಎರಡು ಗಂಟೆ ಪ್ರಯಾಣ. ರಜಾಕ್ಕೆ ಬಂದು

ಹೋಗ್ತಾ ಇರಲಿ. ಅವರು ಹೋದ ಮೇಲೆ ಎಲ್ಲೂ ಬರಲ್ಲ ಎಂದು ನಿನಗೆ ಗೊತ್ತಿಲ್ವೆ. ಮಾಲಿನಿಗೆ ಒಂದು ನೆಲೆ ಆದರೆ ಅಷ್ಟೇ ಸಾಕು ನನಗೆ.'' ತಾಯಿಯ ಹೃದಯ ಹೇಳಿತು.

ಎಸ್. ಎಸ್. ಎಲ್. ಸಿ. ಪರೀಕ್ಷೆ ಮುಗಿಯುವುದನ್ನು ಕಾಯುತ್ತಿದ್ದಳು ಮಾಲಿನಿ. ಅನಂತರ ಕಾಲೇಜಿಗೆ ಅಪ್ಲಿಕೇಶನ್. ಅದು ರೆಡಿ ಮಾಡಿಕೊಳ್ಳಲು ಮಾವನ ಜೊತೆ ಹೊರಟಳು. ನಿರೀಕ್ಷಿಸಿದ್ದಂತೆ ಮಾಲಿನಿ ಫಸ್ಟ್‌ಕ್ಲಾಸ್‌ನಲ್ಲಿ ಪಾಸಾದಳು. ಮಾರ್ಕ್ಸ್ ಕಾರ್ಡ್ ಸರ್ಟಿಫಿಕೆಟ್ ತಗೊಂಡು. ಅನಂತಯ್ಯನವರ ಜೊತೆಯಲ್ಲಿ ಸಿಟಿಗೆ ಬಂದು ಕಾಲೇಜಿಗೆ ಸೇರಿದಳು.

ಕಾವೇರಮ್ಮನಿಗೆ ಜೊತೆ ಆಯಿತು. ಅವರಿಬ್ಬರನ್ನು ಆಗಾಗ್ಗೆ ಪಾರ್ಕ್, ಸಿನಿಮಾ, ಹೋಟೆಲ್‌ಗೆ ಕರ್‍ಕೊಂಡು ಹೋಗ್ತಾ ಇದ್ದರು ಅನಂತಯ್ಯ. ಮಾಲಿನಿ ಕಾಲೇಜ್‌ಗೆ ಹೋಗ್ತಾ ಇದ್ದಳು, ರಜಾ ಬಂದಾಗ ಮಾವನ ಜೊತೆ ಹಳ್ಳಿಗೆ ಹೋಗಿ ತಾಯಿಯನ್ನು ಕಂಡು ಬರುತ್ತಿದ್ದಳು.

ಮೂರು

ಯೌವನ ಎನ್ನುವುದು ಮಾನವ ಜೀವಿತದಲ್ಲಿ ಬಹು ಪ್ರಾಮುಖ್ಯತೆಯನ್ನು ವಹಿಸುತ್ತದೆ. ಆ ಸಮಯದಲ್ಲಿ ಕೆಲವರಿಗೆ ಸಿಹಿಯೂ ಮತ್ತೆ ಕೆಲವರಿಗೆ ಕಹಿಯೂ ಆಗಬಹುದು. ಅರಿತು ನಡೆದರೆ ವರ, ಮರೆತು ಬಿದ್ದರೆ ಬರೆ.

ಯೌವನದಲ್ಲಿ ಕಾಲಿಡುವ ಯುವಕ, ಯುವತಿಯರಿಗೆ, ಅದೊಂದು ತರಹ ಥ್ರಿಲ್. ಕೈಯಲ್ಲಿ ಕಲ್ಲನ್ನು ಹಿಡಿದು ಹಿಂಡಿ ಪುಡಿ ಮಾಡುವೆ ಎನ್ನುವ ಛಲ.

ಹೆಣ್ಣಾದರೆ ಕನ್ನಡಿ ಮುಂದೆ ಗಂಟೆಗಟ್ಟಲೆ ನಿಲ್ಲುತ್ತಾಳೆ. ಬಾತ್ ರೂಂನಲ್ಲಿ ಗುನುಗುತ್ತ ತನ್ನ ಸೌಂದರ್ಯ ಅವಲೋಕಿಸುತ್ತ ನಿಲ್ಲುತ್ತಾಳೆ. ಲಂಗದ ಮೇಲೆ ದಾವಣಿ ಸಹ ಬರುತ್ತೆ.

ಗಂಡಾದರೆ ಚಿಗುರು ಮೀಸೆ ಮೂಡುತ್ತೆ. ಮೈ ಖಂಡಗಳು ಅರಳುತ್ತವೆ. ಹುಡುಗಿಯರನ್ನು ನೋಡುವ ಆಸೆ ಮಾತನಾಡಿಸುವ ಬಯಕೆ, ಅವರನ್ನು ಆಕರ್ಷಿಸುವ ಉತ್ಸುಕತೆ ಉಂಟಾಗುತ್ತದೆ. ಅದಕ್ಕಾಗಿ ಚಡ್ಡಿ ಬಿಟ್ಟು ಪ್ಯಾಂಟ್ ತೊಡುತ್ತಾರೆ.

ಕಾಲೇಜಿನಲ್ಲಿ ಅವನು ಹಾಗೆ ನೋಡುತ್ತಿದ್ದನು. ಬೆಲ್ ಹೊಡೆದು ಹುಡುಗ ಹುಡುಗಿಯರು ಕ್ಲಾಸ್‌ಗೆ ಹೋದ ಮೇಲೆ ಅವನು ನಿಟ್ಟುಸಿರು ಬಿಟ್ಟು ಹಿಂತಿರುಗುತ್ತಿದ್ದನು. ಅವನ ಕಣ್ಣುಗಳಲ್ಲಿ ಆಸೆ, ಮನದಲ್ಲಿ ಬಯಕೆ ತನ್ನ ಸ್ಥಿತಿಯನ್ನು ಕಂಡು ಅವನಿಗೆ ತನ್ನ ಹುಟ್ಟಿನ ಬಗ್ಗೆ, ಬದುಕಿನ ಬಗ್ಗೆ ಬೇಸರವಾಗುತ್ತಿತ್ತು. ಎಲ್ಲರಂತೆ ತಾನು ರಂಗುರಂಗಿನ ಬಟ್ಟೆಗಳನ್ನು ತೊಡಬೇಕು, ಹುಡುಗಿಯರ ಜೊತೆ ಚುಲಕುತ್ತ ಮಾತನಾಡಿಕೊಂಡು ಕಾಲೇಜಿಗೆ ಹೋಗಬೇಕೆನ್ನುವ ಆಕಾಂಕ್ಷೆ ಅವನಲ್ಲಿ ಆವರಿಸುತ್ತಿತ್ತು.

ಆದರೆ ಅವನು ಅನಾಥ, ವಾಸು ಹೆಸರು. ಮಿಡ್ಲ್‌ಸ್ಕೂಲ್ ಮುಗಿಸುತ್ತಿದ್ದಂತೆ ತಂದೆಯನ್ನು ಕಳೆದುಕೊಂಡ, ಹೈಸ್ಕೂಲ್‌ಗೆ ಹತ್ತುತ್ತಿದ್ದಂತೆ ತಾಯಿಯಿಂದ ದೂರವಾದನು. ಆಗ ಅನಾಥ ಹುಡುಗ ವಾಸುವಿಗೆ ರಕ್ಷಣೆ ಕೊಟ್ಟವರು ಅವನ ಸೋದರ ಮಾವ

ಸಾಂಬಶಿವರಾವ್.

ಮಾವನ ಮನೆಯಲ್ಲಿ ಬಹು ಕಷ್ಟದಿಂದ ಎಸ್. ಎಸ್. ಎಲ್. ಸಿ. ಫಸ್ಟ್ ಕ್ಲಾಸ್‌ನಲ್ಲಿ ಪಾಸ್ ಮಾಡಿದ್ದ. ಮುಂದೆ ಓದಬೇಕೆನ್ನುವ ಬಯಕೆ ಇದ್ದರೂ ಅವನ ಆಸೆಗೆ ಬ್ರೇಕ್ ಬಿದ್ದಿತು.

"ನೋಡು ವಾಸು, ಮನುಷ್ಯನಾಗಿ ಹುಟ್ಟುವಾಗಲೇ ಅವನ ಬೆನ್ನ ಹಿಂದೆ ಸಾವು ಹೇಗೆ ಅಂಟಿಕೊಂಡು ಬಂದಿರುತ್ತೋ ಹಾಗೆ ಅವನ ಕಣ್ಣ ಮುಂದೆ ಆಸೆ ಎನ್ನುವುದು ಇರುತ್ತೆ. ಒಂದು ಕಣ್ಣಿಗೆ ಕಾಣಿಸದೇ ಇದ್ದರೂ ಅದರ ಬಗ್ಗೆ ಯೋಚಿಸದೆ ಇದ್ದರೂ ಇನ್ನೊಂದರ ಬಗ್ಗೆ ಉತ್ಸಕತೆ ತೋರಿಸುತ್ತಾರೆ. ಕೈಗೆ ಎಟುಕದೆ ಇದ್ದರೂ ದಕ್ಕಿಸಿಕೊಳ್ಳುವ ಆಸೆಯಿಂದ ಎಗರೆಗರುತ್ತ ಆಯಾಸ ಮಾಡಿಕೊಳ್ತಾರೆ. ಇಲ್ಲ ಕೈ ಕಾಲು ಮುರಿದುಕೊಳ್ತಾರೆ. ಇನ್ನೊಬ್ಬರನ್ನು ಆಶ್ರಯಿಸುತ್ತಾರೆ. ಅವರ ಬಗ್ಗೆ ಆಲೋಚಿಸದೆ, ತಮ್ಮ ಆಸೆ ನೆರವೇರಿಸಿ ಎಂದು ದುಂಬಾಲು ಬೀಳ್ತಾರೆ. ಇಲ್ಲಾಂದ್ರೆ ಮುನಿಸಿಕೊಳ್ತಾರೆ. ಮುನಿಸಿನಿಂದ ಕೋಪ, ಕ್ರೋಧ ಎಲ್ಲ ಉಂಟಾಗಿ ಏನೇನು ಆಗಿ ಬಿಡುತ್ತೆ. ನಾನು ದೊಡ್ಡವನು ನೀನು ಚಿಕ್ಕವನು. ನನ್ನ ಪರಿಸ್ಥಿತಿ ನಿನಗೆ ಗೊತ್ತು. ಹಾಗೂ ನಿನ್ನ ಪರಿಸ್ಥಿತಿ ನೀನು ಅರಿತುಕೊ, ನೀನು ಹೈಸ್ಕೂಲ್ ಮುಗಿಸುವಷ್ಟರಲ್ಲಿ ನನಗೆ ಎಷ್ಟು ಕಷ್ಟ ಆಗಿತ್ತು. ಇನ್ನು ನೀನು ಕಾಲೇಜಿಗೆ ಸೇರ್ಕೊತೀನಿ ಎಂದರೆ ಅದು ನನ್ನ ಕೈಯಲ್ಲಿ ಸಾಧ್ಯವಾಗಲ್ಲ." ಕಾಲೇಜಿಗೆ ಸೇರ್ತೀನಿ ಎಂದು ವಾಸು ಹೇಳಿದಾಗ ಒಂದು ಉಪನ್ಯಾಸವನ್ನು ಕೊಟ್ಟರು ಸಾಂಬಶಿವರಾವ್.



ನಾನು ಹೀನ, ನಾನು ಹೀನನೆನ್ನುತ್ತ ಹೋದ ಮನುಷ್ಯನು ನಿಜಕ್ಕೂ ಹೀನನಾಗಿ ಹೋಗುತ್ತಾನೆ.

– ಸ್ವಾಮಿ ವಿವೇಕಾನಂದ

ಅಂತರಾತ್ಮವು ನಮ್ಮ ತಪ್ಪಿಗೆ ನ್ಯಾಯಾಧೀಶನಂತೆ. ಶಿಕ್ಷಿಸುವ ಮೊದಲು ಸ್ನೇಹಿತನಂತೆ ಎಚ್ಚರಿಕೆಯನ್ನೀಯುತ್ತದೆ.

– ರಾಮಕೃಷ್ಣ ಪರಮಹಂಸ

ಕುಸಿಯುತ್ತಿರುವ ಆಧಾರವನ್ನು ಗಟ್ಟಿಯಾಗಿ ಹಿಡಿದುಕೊಂಡಷ್ಟು ಅದು ಬೇಗ ಕುಸಿಯುವುದೆಂದು ತಿಳಿದುಕೊಳ್ಳಿ.

– ರವೀಂದ್ರನಾಥ ಠಾಗೋರ್

ಸಂಗ್ರಹ : **ಎಸ್. ಭಾಗ್ವತ್**

ವಾಸು ಏನೂ ಮಾತನಾಡಲಿಲ್ಲ.

"ಮಾವ ನಾನು ದೊಡ್ಡವನಾಗಿದ್ದೇನೆ. ಇನ್ನು ಚಡ್ಡಿ ಹಾಕ್ಕೊಳ್ಬೇಕೆಂದರೆ ಏನೋ ಮುಜುಗರ ಆಗುತ್ತೆ. ಒಂದೆರೆರಡು ಪ್ಯಾಂಟ್ ಆದರೂ ಹೋಲಿಸು." ವಾಸು ಆಸೆಯಿಂದ ಕೇಳಿದನು.

"ನಿನಗೆ ತಂದೆ ಇಲ್ಲ, ನನಗೆ ತಂದೆ ಇದ್ದರು. ನಾನು ಪ್ಯಾಂಟ್ ಕೇಳಿದ್ದಕ್ಕೆ ನೀನು ಕೆಲಸಕ್ಕೆ ಸೇರಿ ಹೊಲಿಸಿಕೋ ಎಂದು ಹೇಳಿದರು. ಅಷ್ಟೇ ನನಗೂ ಛಲ ಬಂತು, ನಾನು ಮತ್ತೆ ಅವರನ್ನು

ಇಂತಹುದು ಬೇಕೆಂದು ಕೇಳಲೇ ಇಲ್ಲ. ನೋಡು ಇದೆಲ್ಲ ನಾನು ಸಂಪಾದಿಸಿದ್ದು ಇನ್ನೊಬ್ಬರ ಕೊಡಿಸಿದರೆ ಅದಕ್ಕೆ ಬೆಲೆ ಇರಲ್ಲ. ನಾವು ಸಂಪಾದಿಸಿ ಸುಖ ಪಟ್ಟರೆ ಆಗ ಸಿಗುವ ಆನಂದವ ಬೇರೆ.''

ಮಾವನ ಮೇಲೆ ವಾಸುವಿಗೆ ಅಸಾಧ್ಯ ಕೋಪ ಬಂತು. ಬೆಣ್ಣೆಯಲ್ಲಿ ಕೂದಲ ತೆಗೆಯುವಂತೆ ಹೇಗೆ ಹೇಳುತ್ತಿದ್ದಾನೆ. ಇವನ ಹಂಗಿನ ಅರಮನೆಯಲ್ಲಿರುವುದಕ್ಕಿಂತ ಕೂ ಮಾಡಿ ಅಂಬಲಿ ಕುಡಿಯುವುದು ಎಷ್ಟೋ ವಾಸಿ ಎಂದುಕೊಂಡ.

"ನಿಜ ಮಾವ, ನನಗೆ ಎಲ್ಲಾದ್ರೂ ಕೆಲ್ಸ ಕೊಡ್ಸಿ, ದುಡಿದು ನನ್ನ ಹೊಟ್ಟೆ ತುಂಬಿಸ್ಕೊಳ್ತೇನ ಮೈ ಮುಚ್ಚುವಂತೆ ಬಟ್ಟೆ ಹೊಲಿಸ್ಕೊಳ್ತೇನೆ'' ಎಂದು ಹೇಳಿದನು.

"ಇದೀಗ ಗಂಡಸಿನ ಮಾತು. ನಾನು ಅದೇ ಪ್ರಯತ್ನದಲ್ಲಿ ಇದ್ದೇನೆ, ನಿನಗೋಸ್ಕರ ನಿ ಒಳ್ಳೆಯದಕ್ಕೋಸ್ಕರ ನಾನು ಎಷ್ಟು ಕಷ್ಟ ಪಡ್ತಿದ್ದೀನಿ ಗೊತ್ತಾ. ನಮ್ಮ ಹುಡುಗ ಇದ್ದಾ ಒಳ್ಳೆಯವನು, ಅವನಿಗೊಂದು ಕೆಲ್ಸ ಕೊಡಿ ಎಂದು ಕಂಡ ಕಂಡ ಕತ್ತೆಗಳ ಕಾಲು ಹಿಡಿದು ಕೇಳ ಇದ್ದೇನೆ. ನಿನ್ನ ಟೈಂ ಸರಿ ಇಲ್ಲ ಸಿಗೋತನಕ ಸ್ವಲ್ಪ ತಡ್ಕೊ'' ಎಂದು ಸಾಂಬಶಿವರಾವ ಹೇಳುತ್ತಿದ್ದರು.

"ವಾಸು ಏಳೋ ಮೇಲೆ ಆಗಲೇ ನಲ್ಲಿಯಲ್ಲಿ ನೀರು ಬಂದು ಬಿಡ್ತು. ನೀರು ತುಂಬಿ ನೀರು ಒಲೆ ಹತ್ತಿಸು'' ಎಂದು ಬೆಳಿಗ್ಗೆ ನಾಲ್ಕು ಗಂಟೆಗೇನೆ ಮಲಗಿದ್ದಲ್ಲಿಂದಲೇ ಉದಯರಾ ಹಾಡುತ್ತಿದ್ದರು ಸೋದರತ್ತೆ ಸರಸ್ವತಮ್ಮ.

ವಾಸು ತಡಮಾಡದೆ ಏಳುತ್ತಿದ್ದ. ಒಂದು ಕಾಫಿ, ಮುಷ್ಠಿ ತಿಂಡಿ, ಎರಡು ಹೊತ್ತ ಊಟಕ್ಕೆ, ಅವನು ಮುಂಜಾವಿನಿಂದ ಸಂಜೆಯೇನು, ರಾತ್ರಿ ಮಲಗುವವರಿಗೂ ಒಂದಲ್ಲ ಒಂದು ಕೆಲ್ಸ ಮಾಡುತ್ತಲೇ ಇದ್ದನು.

ನೀರು ತುಂಬಿ, ಸೌದೆ ಸೀಳಿ, ಒಲೆ ಹತ್ತಿಸಿ, ನೀರು ಕಾಯಿಸಿ, ಬಾಬು, ಸುಮರನ ಏಳಿಸಿ, ಅವರಿಗೆ ಹಲ್ಲುಜ್ಜಿಸಿ, ಸ್ನಾನ ಮಾಡಿಸಿ, ತಾನೂ ಸ್ನಾನ ಮಾಡಿ, ಹೂ ಕೊಯ್ದುಕೊಂಡ ಬಂದು, ಬಟ್ಟೆ ಒಗೆದು, ಕೊಟ್ಟ ತಿಂಡಿಯನ್ನು ತಿಂದು, ಹುಡುಗರನ್ನು ಕರ್ಕೊಂಡು ಕಾನ್ವೆಂಟ ಕರ್ಕೊಂಡು ಹೋಗಿ ಬಿಟ್ಟು ಮಾರ್ಕೆಟ್ಟಿಗೆ ಹೋಗಿ ತರಕಾರಿ ತರುವುದೋ, ಇಲ್ಲ ರೇಶನ ಡಿಪೋನಲ್ಲಿ ಸೀಮೆಎಣ್ಣೆಗೋ, ಇಲ್ಲ ಸಕ್ಕರೆಗೋ ಕ್ಯೂ ನಿಲ್ಲಿವುದೋ, ತಾನು ಊಟ ಮಾಡಿ ಅಕ್ಕಿ ಆರಿಸುವುದೋ, ಬಟ್ಟೆ ಐರನ್ ಮಾಡುವುದೋ, ಸಾಯಂಕಾಲ ಮಕ್ಕಳನ್ನು ಕರಕೊಂಡ ಬಂದು, ಡ್ರೆಸ್ ಚೆಂಜ್ ಮಾಡಿ ಪಾರ್ಕ್‌ಗೆ ಕರಕ್ಕೊಂಡು ಹೋಗಿ ಆಟ ಆಡಿಸಿಕೊಂಡು ಬಂದು ರಾತ್ರಿ ಪಾಠ ಹೇಳಿಕೊಟ್ಟು ಅವರಿಗೆ ಆಗದೆ ಇದ್ದರೆ ಅವರ ಹೋಂ ವರ್ಕ್ ಮಾಡಿಕೊಟ್ಟು ಊಟ ಮಾಡಿ, ಸ್ವಲ್ಪ ಹೊತ್ತು ಮಾವನ ಕಾಲನ್ನು ಒತ್ತಿ ಮಲಗಿದರೆ ನಿದ್ರೆ ಆವರಿಸಿ ಬಿಡುತ್ತಿತ್ತು ವಾಸುವಿಗೆ ನಿದ್ರೆಯ ಸುಖವನ್ನು ಮುಂಜಾವಿನಲ್ಲಿ ಅನುಭವಿಸುತ್ತರುವಾಗಲೇ ಅತ್ತೆಯ ಉದಯರಾಗ ಅವನ ಆನಂದಕ್ಕೆ ಹಂಟರ್‌ನ ಏಟುಕೊಟ್ಟು ಏಳಿಸುತ್ತಿತ್ತು. ಮತ್ತೆ ಮಾಮೂಲ ರೂಟಿನ ಕೆಲ್ಸ ಪ್ರಾರಂಭ ಆಗುತ್ತಿತ್ತು.

ವಾಸುಗೂ ಬಯಕ್ಕೆ ಇತ್ತು. ಕಣ್ಣಿಗೆ ರಾಚುವ ಪಿಕ್ಚರ್‌ನ ವಾಲ್‌ಪೋಸ್ಟರ್ ಮ ಸೆಳೆಯುತ್ತಿತ್ತು. ಅವನು ತರಕಾರಿ, ರೇಶನ್ ಡಿಪೋಗೆ ಹೋದಾಗ ಚಿಲ್ಲರೆ ಕಾಸನ್ನ

ಉಳಿಸಿಕೊಂಡು ಕೂಡಿ ಹಾಕಿಕೊಳ್ಳುತ್ತಿದ್ದನು.

ಸರಸ್ವತಮ್ಮನಿಗೆ ವಾಸುವನ್ನು ಕಂಡರೆ ಅಷ್ಟಕ್ಕಷ್ಟೆ.

"ಅಲ್ಲಾರಿ ಇವನನ್ಯಾಕೆ ನೀವು ಕಟ್ಟಿಕೊಂಡು ಬಂದಿರಿ." ವಾಸುವನ್ನು ಕರ್‍ಕೊಂಡು ಬಂದಾಗ ಗಂಡನನ್ನು ಕೇಳಿದ್ದರು.

"ಇನ್ನೇನು ಮಾಡಕ್ಕಾಗುತ್ತೆ ತಂಗಿ ಮಗ, ಬೇರೆ ಯಾರೂ ಇಲ್ಲ. ಏನೋ ಒಂದು ಎಸ್. ಎಸ್. ಎಲ್. ಸಿ. ಮಾಡಿಸಿದರೆ ಯಾವುದೋ ಒಂದು ಕೆಲ್ಸ ಸಿಗುತ್ತೆ. ಆಮೇಲೆ ಅವನ ಪಾಡು."

"ಅಲ್ಲಿತನಕ ಖರ್ಚು?"

"ನಾವು ತಿನ್ನೋ ಅನ್ನದಲ್ಲಿ ಒಂದು ತುತ್ತು ಹಾಕು, ಏನೂ ಆಗಲ್ಲ" ಎಂದು ಸಾಂಬಶಿವರಾವ್ ಹೇಳಿ ಟಾಪಿಕ್ ಮುಗಿಸಿದ್ದರು.



"ಏನ್ ಮಗು ರಾಜೀವ್ ಗಾಂಧಿ ಎಂದು ಮರಣ ಹೊಂದಿದರು?"

"ಹಾಳಾದ್ದು, ಆ ನನ್ನ ಫೇಲಾದ ಪರೀಕ್ಷೆ ಫಲಿತಾಂಶ ಪ್ರಕಟವಾದ ದಿನ ಸಾರ್."

— ಬಿ. ಜಿ. ಗಾಣಿಗೇರ

ಸರಸ್ವತಮ್ಮ ಚಾಣಕ್ಷೆ ದಂಡ ಪಿಂಡ ಹಾಕಿದ್ದಕ್ಕೆ ಅವಳು ಅಷ್ಟೇ ಕೆಲ್ಸವನ್ನು ವಾಸುವಿನಿಂದ ತೆಗೆಯುತ್ತಿದ್ದಳು. ಮೊದಲೆರಡು ದಿನ ಕೆಲ್ಸದವಳು ಬಾರದೇ ಇದ್ದಾಗ ವಾಸು ಕೈಯಲ್ಲಿ ಕೆಲ್ಸ ಮಾಡಿಸಿದಳು. ಅವನ ಅಚ್ಚುಕಟ್ಟುತನ, ಕೆಲ್ಸ ಮಾಡುವ ರೀತಿ ಕಂಡು, ಕುದುರೆ ಕಂಡಾಗ, ಕಾಲು ನೋವು ಬಂತು ಎಂದು ಹೇಳುವ ಹಾಗೆ ಕೆಲ್ಸದವಳನ್ನು ಬಿಡಿಸಿ ಆ ಕೆಲ್ಸವನ್ನು ಅವನಿಗೇ ಕಟ್ಟಿದಳು. ಎಸ್. ಎಸ್. ಎಲ್. ಸಿ. ಮುಗಿಯುವವರಿಗೆ ವಾಸುವಿಗೆ ಸ್ವಲ್ಪ ಕಷ್ಟವಾಗಿತ್ತು. ಅನಂತರ ಅವನಿಗೆ ಅದು ಒಗ್ಗಿ ಹೋಯಿತು. ಸರಸ್ವತಮ್ಮ ಹುಡುಗರನ್ನು ಕಾನ್ವೆಂಟ್‌ಗೆ ಕಳುಹಿಸಲು ಆಯಾಳನ್ನು ಗೊತ್ತು ಮಾಡಿದ್ದಳು. ಈಗ ಆ ಕೆಲ್ಸವೂ ವಾಸುವಿನ ಮೇಲೆ ಬಿತ್ತು.

ಹೆಂಡತಿಯ ಕೆಲ್ಸ ಕಂಡು ಸಾಂಬಶಿವರಾವ್‌ಗೆ ಕೋಪ ಬಂದರೂ ಕೆಲಸದವಳ, ಆಯಾಳ ಹಣ ಉಳಿತಾಯವಾಗಿದ್ದು ಕಂಡು ಮಾತನಾಡದೆ ಸುಮ್ಮನಿದ್ದು ಬಿಡುತ್ತಿದ್ದರು. ಒಂದೊಂದು ಸಲ ಅಯ್ಯೋ ಎನ್ನಿಸಿ ತಿಂಗಳಲ್ಲಿ ಐದು ರೂಪಾಯಿ ಹೆಂಡತಿಗೆ ಕಾಣದಂತೆ ವಾಸುವಿಗೆ ಕೊಟ್ಟು ಅವನಿಗಾಗುತ್ತಿರುವ ಅನ್ಯಾಯವನ್ನು ಸರಿಪಡಿಸಿದೆ ಎಂದುಕೊಂಡು ಸಮಾಧಾನಗೊಳ್ಳುತ್ತಿದ್ದರು.

ಯೌವನದಲ್ಲಿ ಏನೇನೋ ಆಗುತ್ತೆ. ಆಗ ಕೆಲವರಿಗೆ ಹೊಟ್ಟೆ ಹಸಿವು ಹೆಚ್ಚಾಗುತ್ತೆ. ಅತ್ತೆ ಹಾಕುತ್ತಿದ್ದ ಅನ್ನ ವಾಸುವಿಗೆ ಸಾಕಾಗುತ್ತಿರಲಿಲ್ಲ. ಅವನು ತರಕಾರಿ ತರುವಾಗ ಕ್ಯಾರೆಟ್, ಸೌತೆಕಾಯಿಗಳನ್ನು ಎಗರಿಸಿ ಬಚ್ಚಿಟ್ಟು ಕೊಳ್ಳುತ್ತಿದ್ದನು. ಜೊತೆಗೆ ದಿನಸಿಯಲ್ಲಿ ಕಡಲೆ, ಕಡ್ಲೆಕಾಯಿಯನ್ನು ಕತ್ತರಿಸುತ್ತಿದ್ದನು. ಹುಡುಗರಿಗೆ ಮಾಡಿಟ್ಟ ಮಿಠಾಯಿ, ತಿನಿಸುಗಳನ್ನು ಮೆಲ್ಲನೆ ಮಾಯಾ ಮಾಡುತ್ತಿದ್ದನು. ಅವನ್ನೆಲ್ಲ ಮಧ್ಯಾಹ್ನದ ಹೊತ್ತು ಲೈಬ್ರರಿಯಲ್ಲಿ ತಂದು

ಪುಸ್ತಕ ಓದುತ್ತ ತಿನ್ನುತ್ತಲೋ ಇಲ್ಲ ಯಾರಿಗೂ ಗೊತ್ತಾಗದ ಹಾಗೆ ಹಿತ್ತಲಿನ ಮರವೇರಿ ಕುಳಿತು ಬಿಡುತ್ತಿದ್ದನು.

ಸ್ಕೂಲ್ ಇಲ್ಲದ ದಿನದಲ್ಲಿ ಶಿವರಾಜ್‌ಕುಮಾರ್, ಕುಮಾರ್ ಬಂಗಾರಪ್ಪ, ವಿಷ್ಣುವರ್ಧನ್ ನಟಿಸಿದ ಚಿತ್ರಗಳನ್ನು ನೋಡುತ್ತಿದ್ದನು. ಮಾವ ಹೇಳಿದ ಕಡೆ ಹೋಗಿ ಕೆಲಸದ ಬಗ್ಗೆ ವಿಚಾರಿಸಿಕೊಂಡು ಬರುತ್ತಿದ್ದನು.

ಎಗ್ಸಿಬಿಶನ್ ಪ್ರಾರಂಭವಾದಾಗ ಸಾಂಬಶಿವರಾವ್ ಸೆಕ್ರೆಟರಿಗೆ ಹೇಳಿ ಗೇಟ್ ಬಳಿ ಟಿಕೆಟ್ ಹರಿಯುವ ಕೆಲಸಕ್ಕೆ ಸೇರಿಸಿದರು. ವಾಸು ಕೆಲಸಕ್ಕೆ ಹೊದನು. ಅಲ್ಲಿ ಅವನಿಗೆ ಕೆಲವರು ಫ್ರೆಂಡ್ ಆದರು, ಅನೇಕ ಅನುಭವ ಆಯಿತು. ಎಗ್ಸಿಬಿಶನ್ ಮುಗಿಯುತ್ತಿದ್ದಂತೆ ವಾಸು ಒಂದು ಸಿನಿಮಾ ಥಿಯೇಟರ್‌ನಲ್ಲಿ ಗೇಟ್‌ಕೀಪರ್ ಆಗಿ ಸೇರಿಕೊಂಡನು. ಬಿಟ್ಟಿಸಿನಿಮಾ ನೋಡಬಹುದು ಎಂದುಕೊಂಡನು.

ವಾಸು ತನಗೆ ಸಿಕ್ಕಿದ್ದ ಗೇಟ್‌ಕೀಪರ್ ಕೆಲಸವನ್ನು ಹಾಗೂ ಇನ್ನಿತರ ಕೆಲಸವನ್ನು ಅಚ್ಚುಕಟ್ಟಿನಿಂದ, ಶ್ರದ್ಧೆಯಿಂದ ಮಾಡಿದನು. ರಾತ್ರಿ ಹೊತ್ತಾಗುತ್ತೆ, ಮಾವನ ಮನೆಗೆ ಹೋದರೆ ಅವರಿಗೆ ತೊಂದರೆ ಉಂಟಾಗುವುದು ಎಂದು ಅವರ ಮಾತಿನ ಸೂಕ್ಷ್ಮತೆಯಿಂದ ಗ್ರಹಿಸಿ, ರಾತ್ರಿ ಮನೆಗೆ ಹೋಗುವುದನ್ನೇ ಕಡಿಮೆ ಮಾಡಿ ಬೆಳಿಗ್ಗೆ ಹೊತ್ತು ಹೋಗುತ್ತಿದ್ದನು. ಸಂಬಳದಲ್ಲಿ ಮನೆಗೆ ಸಿಹಿ, ಹಣ್ಣು ತೆಗೆದುಕೊಂಡು ಹೋಗಿದ್ದನು. ಸರಸ್ವತಮ್ಮ ಪ್ರೀತಿ ತೋರುವಂತ ಮಾಡಿ, ಚಿಲ್ಲರೆ ಇದ್ದರೆ ಕೊಡು ಎಂದು ಕೇಳಿ ಐದು, ಹತ್ತು, ಇಪ್ಪತ್ತು ಹೀಗೆ ವಾಸುವಿನಿಂದ ಕಿತ್ತುಕೊಂಡು ಬಿಡುತ್ತಿದ್ದಳು.

"ಲೇ ಸರೂ, ಬೆಳೆದ ಹುಡುಗ, ದುಡಿಯುವ ಅವನಿಗೆ ಎಷ್ಟು ಮಹಾ ಬರುತ್ತೆ. ಅವನ ಬಟ್ಟೆ ಖರ್ಚು ಅವಕ್ಕೆ ಸಾಕಾಗಲ್ಲ ಮತ್ತೆ ನೀನ್ಯಾಕೆ ಅವನ ಹತ್ತಿರ ಹಣ ತೆಗೆದುಕೊಳ್ಳುವುದು'' ಎಂದು ಸಾಂಬಶಿವರಾವ್ ಗದುರುತ್ತಿದ್ದರು.

"ಸಾಕು ಸುಮ್ಮನಿರಿ, ಏನು ಮಹಾ ಖರ್ಚಿರುತ್ತೆ ಅವನಿಗೆ. ಇಷ್ಟು ದಿನ ಅವನಿಗೆ ಖರ್ಚು ಮಾಡಿಲ್ಲವಾ ನಾವು. ಅಲ್ಲದೆ ಹುಡುಗರ ಹತ್ತಿರ ಹಣ ಇದ್ದರೆ ಕೆಟ್ಟು ಹೋಗ್ತಾರೆ. ನಿಮಗೆ ಗೊತ್ತಾಗಲ್ಲ'' ಎಂದು ದಬಾಯಿಸಿ ಬಾಯಿ ಮುಚ್ಚಿಸಿ ಬಿಡುತ್ತಿದ್ದರು.

ಅತ್ತೆಯ ಸ್ವಭಾವ ಅರಿತಿದ್ದ ವಾಸು ಸಾಕಷ್ಟು ಎಚ್ಚರವಾಗಿಯೇ ಇರುತ್ತಿದ್ದನು. ಮೂರ್‍ನಾಲ್ಕು ಸಲ ಕೇಳಿದಾಗ ಒಂದು ಸಲ ಅದು ಅವರು ಕೇಳುವ ಹತ್ತೋ ಇಪ್ಪತ್ತಕ್ಕೆ ಐದು ರೂಪಾಯಿ ಕೊಟ್ಟು "ಇಷ್ಟೇ ಅತ್ತೆ ಇರೋದು'' ಎಂದು ಹೇಳಿ ಬಿಡುತ್ತಿದ್ದನು.

"ನಾವು ತಿಳ್ಕೊಂಡಷ್ಟು ಪೆದ್ದ ಅಲ್ಲ ಇವನು'' ಎಂದು ಗೊಣಗಿಕೊಂಡು ಬಿಡುತ್ತಿದ್ದರು ಸರಸ್ವತ್ತಮ್ಮ. ಸಿನಿಮಾ ಮಾಲೀಕ ಮಂಜಯ್ಯನವರು ವಾಸುವಿನ ಕೆಲಸವನ್ನು ಗಮನಿಸಿ ಮೆಚ್ಚಿದರು. ಗೇಟ್‌ಕೀಪರ್‌ನಿಂದ ಬುಕಿಂಗ್ ಕ್ಲರ್ಕ್‌ಗೆ ವರ್ಗಾಯಿಸಿ ಸಂಬಳ ಹೆಚ್ಚಿಸಿದರು.

"ವಾಸು ಬಾ ಇಲ್ಲಿ.'' ಮಂಜಯ್ಯನವರು ಕರೆದಾಗ,

"ಏನು ಸಾರ್ ವಿಷ್ಯ?'' ವಿನಯದಿಂದ ಕೇಳಿದನು ವಾಸು.

"ವಾಸು ನಿನ್ನ ನೋಡಿದ್ರೆ ನನಗೇನೋ ಒಂದು ಅಭಿಮಾನ. ನಾನೊಂದು ಮಾತು ಹೇಳಲಾ?''

“ನಿಮ್ಮ ಅಭಿಮಾನವೇ ನನಗೆ ಶ್ರೀರಕ್ಷೆ. ನನ್ನ ತಂದೆಯ ಹಾಗೆ ಇರುವ ದಣಿ ನೀವು. ಹೇಳಲಾ ಎಂದು ಕೇಳಬೇಡಿ ಸರ್, ಹೇಳಿದ್ದನ್ನು ಮಾಡು ಎಂದು ಆರ್ಡರ್ ಮಾಡಿ.''

“ದಣಿ ಕಾರ್ಮಿಕರ ಸಂಬಂಧದಲ್ಲಿ ಅಂತರ ಇರಬಾರದು ಪ್ರೀತಿ ವಿಶ್ವಾಸ ಇರಬೇಕು. ಇರಲಿ, ನಿನಗೆ ಈಗ ಕೆಲ್ಸ ಮಾಡುವ ವಯಸ್ಸು ಅಲ್ಲಪ್ಪಾ.''

“ಅಂದ್ರೆ ನನ್ನ ಕೆಲ್ಸದಿಂದ ತೆಗೆದು ಬಿಡ್ತೀರಾ ಸಾರ್?''

“ಗಾಬರಿ ಆಗಬೇಡ. ಹಾಗೇನೂ ಮಾಡಲ್ಲ. ಆದರೆ ಇದೇ ಕೆಲ್ಸದಲ್ಲಿ ನೀನು ನಿನ್ನ ಜೀವನ ಪರ್ಯಂತ ಇರಬೇಕೆಂದು ಮಾಡ್ತೀಯಾ?''

“ನಿಮ್ಮ ಮಾತು ಅರ್ಥವಾಗಲಿಲ್ಲ ಸಾರ್?''

‘ರಾಗಸಂಗಮ’

ಲಾಟರಿ ಡ್ರಾ – ೧೧ರ ವಿಜೇತರು



ನಂದಾ ಜಿ. ನಾಯಕ್

ಧಾರವಾಡ.

“ಇದೇ ನೋಡು, ಹುಡುಗರ ಕೈಗೆ ಹಣ ಬಂದರೆ ಸಾಕು. ಮುಂದಿನ ಭವಿಷ್ಯತ್ತಿನ ಬಗ್ಗೆ ಮರೆತು ಬಿಡುವರು. ಅನಂತರ ಯೋಚಿಸುವಷ್ಟರಲ್ಲಿ ಆಯುಸ್ಸು ಮುಗಿದಿರುತ್ತೆ.''

“ನಾನೇನು ಮಾಡಬೇಕು ಹೇಳಿ ಸಾರ್.''

“ವಯಸ್ಸು ಚಿಕ್ಕದು. ನೀನು ಓದು, ಇನ್ನೂ ದೊಡ್ಡ ಕೆಲ್ಸಕ್ಕೆ ಹೋಗು. ನೈಟ್ ಕಾಲೇಜಿಗೆ ಸೇರು. 7 ಗಂಟೆತನಕ ಟಿಕೆಟ್ ಕೊಟ್ಟು ಸೈಕಲ್ ತೆಗೆದುಕೊಂಡು ಕಾಲೇಜಿಗೆ ಹೋಗು, ಎರಡು ಗಂಟೆ ಕಾಲೇಜು ಅನಂತರ ಸೆಕೆಂಡ್ ಶೋ ಟೈಂಗೆ ಬರಬಹುದು. ಹಾಗೇ ಅಲ್ಲಿ ಇಲ್ಲಿ ಅಡ್ವರ್‌ಟೈಸ್‌ಮೆಂಟ್ ನೋಡ್ತಾ ಇರು. ಗವರ್ನ್‌ಮೆಂಟ್ ಕೆಲ್ಸಕ್ಕೆ ಅಪ್ಲಿಕೇಶನ್ ಹಾಕು. ನನಗೆ ಕೆಲವು ರಾಜಕೀಯ ವ್ಯಕ್ತಿಗಳು ಪರಿಚಯ ಇದ್ದಾರೆ. ರೆಕಮೆಂಡ್ ಮಾಡಿಸ್ತೀನಿ. ನನ್ನಲ್ಲಿ ಬಂದವರು ಜೀವನದಲ್ಲಿ ಮುಂದುವರೆದು ಚೆನ್ನಾಗಿದ್ದರೆ ಅಷ್ಟು ಸಾಕು ನನಗೆ. ಇಲ್ಲಿಗೆ ಬಂದವರು ಈಗ ಒಳ್ಳೇ ಉದ್ಯೋಗದಲ್ಲಿ ಇದ್ದಾರೆ'' ಎಂದು ಮಂಜಯ್ಯನವರು ಹೇಳಿದಾಗ, ವಾಸುವಿನ ಹೃದಯ ತುಂಬಿತು. ಅವನು ಮಂಜಯ್ಯನವರ ಕಾಲಿಗೆ ಬಿದ್ದು “ನನ್ನ ಕಣ್ಣು ತೆರೆಸಿದಿರಿ. ನೀವು ಹೇಳಿದ ಹಾಗೆ ನಡೆದುಕೊಳ್ತೇನೆ'' ಎಂದು ಹೇಳಿದನು.

ಮಂಜಯ್ಯನವರ ಸಹಕಾರದಿಂದ ವಾಸು ಕಾಲೇಜಿಗೆ ಸೇರಿದನು. ಸಿನಿಮಾ ಕೆಲ್ಸ, ತನ್ನ ಓದು ಹಾಗೂ ಪೇಪರ್‌ನಲ್ಲಿ ಬರುತ್ತಿದ್ದ ವಾಂಟೆಡ್ ಕಾಲಂ ನೋಡಿ ಎಸ್. ಎಸ್. ಎಲ್. ಸಿ. ಗೆ ಸರಿ ಹೊಂದುವ ಅಪಾಯಿಂಟ್‌ಮೆಂಟ್ ನೋಡುತ್ತ ಇದ್ದನು. ಮಾವನ ಮನೆಗೆ ಹೋಗುವುದನ್ನೇ ಬಿಟ್ಟನು.

"ಏಕೋ ವಾಸು ಮನೆಗೆ ಬರಲ್ಲ?'' ಸಾಂಬಶಿವರಾವ್ ಸಿನಿಮಾಕ್ಕೆ ಬಂದಾಗ ಕೇಳಿದರು.

"ಮಾವ ಈಗ ನನಗೆ ಟೈಂ ಇಲ್ಲ, ಕಾಲೇಜಿಗೆ ಸೇರಿದ್ದೇನೆ. ರಾತ್ರಿ ಎಲ್ಲ ಕೆಲ್ಸ, ಕಾಲೇಜ್, ಬೆಳಿಗ್ಗೆ ಮಾರ್ನಿಂಗ್ ಶೋತನಕ ಸಿನಿಮಾ ಆಫೀಸನ್‌ನ ಕೆಲ್ಸ. ಅನಂತರ ಓದು. ಹೀಗೆ ಟೈಂ ಮುಗಿದು ಹೋಗುತ್ತೆ. ಇಲ್ಲೇ ಯಜಮಾನರು ಒಂದು ರೂಂ ಕೊಟ್ಟಿದ್ದಾರೆ ಇರ್ತೀನಿ'' ಎಂದು ಹೇಳಿದನು.

"ಒಟ್ಟಿನಲ್ಲಿ ಚೆನ್ನಾಗಿರು, ಮುಂದೆ ಬಂದರೆ ಎಲ್ಲರಿಗೂ ಒಳ್ಳೆಯದು'' ಎಂದು ಹೇಳಿ ಹೋಗಿದ್ದರು.

ವಾಸುವಿನ ಅದೃಷ್ಟ ಅವನು ಡಿಗ್ರಿ ಮುಗಿಸಿದನು. ಆಗಲೇ ಅವನ ಕಷ್ಟಕ್ಕೆ ಫಲ ಕೊಟ್ಟಿತು. ಕಾರ್ಪೊರೇಶನ್ ಆಫೀಸ್‌ನಲ್ಲಿ ಕ್ಲರ್ಕ್ ಕೆಲ್ಸಕ್ಕೆ ಅಪ್ಲಿಕೇಶನ್ ಯಾವಾಗಲೋ ಹಾಕಿದ್ದನು. ಅದಕ್ಕೆ ಇಂಟರ್‌ವ್ಯೂ ಬಂದಿತ್ತು. ಮೇಯರ್ ಮುತ್ತಯ್ಯ, ಮಂಜಯ್ಯನವರ ಸಂಬಂಧ, ಸ್ನೇಹಿತರು. ಅವರ ಮುಖಾಂತರ ವಾಸುವಿಗೆ ಗವರ್ನ್‌ಮೆಂಟ್ ಕೆಲ್ಸ ಸಿಕ್ಕಿತು.

ಮಂಜಯ್ಯನವರಿಗೆ ನಮಸ್ಕರಿಸಿ ಅವರ ಉಪಕಾರವನ್ನು ಸ್ಮರಿಸಿ, "ನಿಮ್ಮಿಂದ ನಾನೂ ಒಂದು ಸ್ಟೇಟಸ್‌ಗೆ ಬಂದೆ.'' ಹೇಳಿ ಅವರ ಆಶೀರ್ವಾದ ಅಪ್ಪಣೆ ಪಡೆದು, ಹೊಸ ಕೆಲ್ಸಕ್ಕೆ ಸೇರಿದನು.

ಮಾವನ ಮನೆಗೆ ಹೋಗಿ ತನಗೆ ಕಾರ್ಪೊರೇಶನ್‌ನಲ್ಲಿ ಕೆಲ್ಸ ಸಿಕ್ಕ ವಿಷಯ ಹೇಳಿ ಸ್ವೀಟ್ ಕೊಟ್ಟು ಬಂದಿದ್ದನು. ಕಾರ್ಪೊರೇಶನ್ ಹತ್ತಿರವೇ ಒಂದು ರೂಂ ತೆಗೆದುಕೊಂಡು ಅಲ್ಲೇ ಇದ್ದನು. ವಾರಕ್ಕೊಮ್ಮೆ ಮಾವನ ಮನೆಗೆ ಹೋಗಿ ಬರುತ್ತಿದವನು. ಹದಿನೈದು ದಿನಕ್ಕೊಮ್ಮೆ, ಅನಂತರ ತಿಂಗಳಿಗೊಮ್ಮೆ ಹೋಗುತ್ತಿದ್ದನು. ಹೋದಾಗ ಅತ್ತೆಯ ಬೇಡಿಕೆ ಪಟ್ಟಿ ನೋಡಿ ಹೆದರಿ ಕ್ರಮೇಣ ಹೋಗುವುದನ್ನೇ ಬಿಟ್ಟುಬಿಟ್ಟನು.

ಮಂಜಯ್ಯನವರು ತೀರಿಕೊಂಡಾಗ ವಾಸು ತುಂಬ ಅತ್ತ.

ನಾಲ್ಕು


ಮನುಷ್ಯ ಪರಿಸ್ಥಿತಿಯ, ಪರಿಸರದ ಕೈಗೊಂಬೆ. ಅದು ಅವನನ್ನು ಆಗಿನ ಪರಿಸರಕ್ಕೆ ತಕ್ಕ ಹಾಗೆ ಬದಲಾಯಿಸಿಬಿಟ್ಟು ತನ್ನ ಅಂಕೆಯಲ್ಲಿ ಸಂಕೋಲೆ ಹಾಕಿಟ್ಟುಕೊಳ್ಳುತ್ತೆ. ಸಂಕೋಲೆ ಕೆಲವರಿಗೆ ಹೂ ಮಾಲೆ ಆದರೆ ಮತ್ತೆ ಕೆಲವರಿಗೆ ಕಬ್ಬಿಣದ ಸರಳಾಗಬಹುದು.

ವಾಸುವಿಗೆ ಅದೃಷ್ಟ ಒಲಿದು ಬಂದಿತ್ತು. ಅವನು ಮುಟ್ಟಿದ ವಸ್ತುವೆಲ್ಲ ಚಿನ್ನ ವಾಗತೊಡಗಿತು. ಆಫೀಸಿನಲ್ಲಿ ಅವನು ಎಲ್ಲರಿಗೂ ಬೇಕಾದ ವ್ಯಕ್ತಿಯಾದ. ಚಿಕ್ಕಂದಿನಿಂದ ಅವನ ದೇಹ ದುಡಿದು ಅದಕ್ಕೆ ಒಗ್ಗಿಬಿಟ್ಟಿದ್ದರಿಂದ ಅವನು ಪುಟಕ್ಕಿಟ್ಟ ಚಿನ್ನದಂತೆ ಆಗಿದ್ದ. ಮಂಜಯ್ಯನವರ ಮಾರ್ಗದರ್ಶನದಿಂದ ಅವನು ಸಮಾಜದಲ್ಲಿ ಹೇಗೆ ಬಾಳಬೇಕೆಂಬ ಅನುಭವ ಅವನಿಗುಂಟಾದ್ದರಿಂದ ಆಫೀಸ್‌ಲ್ಲಿ ಅವನಿಗೆ ಯಾವ ಕಷ್ಟವೂ ಆಗಲಿಲ್ಲ.

ಯೌವನ, ಕೈ ತುಂಬ ಹಣ. ಹೇಳುವವರಿಲ್ಲ, ಪರಿಸರ ಮಲಿನ ಮಾಡಲು ಅನೇಕ ಬಗೆಯ ಹಾದಿಗಳಿದ್ದರೂ ವಾಸು ಎಚ್ಚರದಿಂದ ಹೆಜ್ಜೆ ಇಡುತ್ತಿದ್ದನು.

ಮಾವನ ಮಗಳ ಮದುವೆ ಸಂದರ್ಭದಲ್ಲಿ ಹಣ ಸಹಾಯ ಮಾಡಿದನು. ಮದುವೆಯಲ್ಲಿ ಓಡಾಡಿದವನು ಮತ್ತೆ ಆಕಡೆ ಹೋಗಿರಲಿಲ್ಲ.

ಈಚೀಚೆಗೆ ಹುಡುಗಿಯರನ್ನು ನೋಡುವುದೆಂದರೆ ಅವನಿಗೆ ಆಸೆಯಾಗುತ್ತಿತ್ತು. ಅವರ ಜೊತೆ ಮಾತನಾಡಬೇಕೆಂಬ ಬಯಕೆ ಉಂಟಾಗುತ್ತಿತ್ತು. ಆಕಸ್ಮಿಕವಾಗಿ ರಸ್ತೆಯಲ್ಲಿ ಓಡಾಡುವಾಗ ಹುಡುಗಿಯರ ಮೈ ಸೋಂಕಿದರೆ ಮೈ ಜುಂ ಎನ್ನುತ್ತಿತ್ತು. ಸೆಕ್ಸಿ ಸಿನಿಮಾ ಒಂದನ್ನು ನೋಡಿದಾಗಲಂತೂ ಅವನಿಗೆ ನಿದ್ರೆಯೇ ಬರುತ್ತಿರಲಿಲ್ಲ. ಕಣ್ಣು ಮುಚ್ಚಿದರೆ ಸಾಕು ಹುಡುಗಿಯರು ಕುಲುಕುತ್ತ, ನಗುತ್ತ ಕಚಗುಳಿ ಇಡುವ ಹಾಗೆ ಆಗುತ್ತಿತ್ತು.



ಇಬ್ಬಂದಿ

ಮನೆಯಲ್ಲಿರುವಾಗ
ಹೊರ ಜಗತ್ತೇ ಚಂದ ಎನ್ನಿಸಿತ್ತು
ಹೊರಗಡೆ ಬಂದಾಗ
ನಮ್ಮ ಮನೆಯೇ ಹಾಯೆನಿಸಿತ್ತು.

– ದೊಡ್ಡರಂಗೇಗೌಡ

ಹದಿನೆಂಟರಿಂದ ಇಪ್ಪತ್ತೆರಡು ಕನಸು ಕಾಣುತ್ತ ನಿದ್ರೆ ಹಾಳು ಮಾಡುವ ವಯಸ್ಸು. ಇಪ್ಪತ್ಮೂರರಿಂದ ಇಪ್ಪಾತ್ತಾರು ಕಾಣದ ಹಾಗೆ ಕಣ್ಣುಮುಚ್ಚಾಲೆ ಆಟ ಆಡುವ ವಯಸ್ಸು. ಅನಂತರ ಮದುವೆಯ ಪರ್ಮಿಟ್ ಲೈಸೆನ್ಸ್.

ಅಡಿಪಾಯ ಗಟ್ಟಿಯಾಗಿದ್ದರೆ ಮುಂದೆ ಏನಾದರೂ ಮನೆಗೆ ಅಪಾಯವಿರುವುದಿಲ್ಲ. ಅಡಿಪಾಯ ಅಲ್ಲಾಡಿ ಬಿಟ್ಟರೆ ಮನೆ ನಿಂತ ಹಾಗೆ ನಿಂತು ಬಿದ್ದು ಹೋಗುವ ಸಮಯ ದೂರ ಇರಲ್ಲ.

"ಬಾ ಮಾವ ಏನು ಸಮಾಚಾರ. ಆಫೀಸ್ ಇಲ್ಲವೆ?'' ಆಫೀಸ್‌ಗೆ ಬಂದ ಮಾವನನ್ನು ಕುಳ್ಳಿರಿಸಿ, ಕೂಲ್ ಡ್ರಿಂಕ್ ತರಲು ಅಟೆಂಡರ್‌ಗೆ ಹೇಳಿದ ವಾಸು.

"ಇನ್ನಲ್ಲಿ ಆಫೀಸು, ವಯಸ್ಸಾಯಿತಲ್ಲ ರಿಟೈರ್ಡ್ ಆಯಿತು. ಮನೇಲಿ ಹೊತ್ತು ಹೋಗಲ್ಲ. ನೀನು ಮನೆ ಕಡೆ ಬಂದು ಸುಮಾರು ದಿನ ಆಗಿ ಹೋಯಿತು. ಏಕೆ ನಾವು ಬೇಡವಾಗಿಬಿಟ್ಟೆವಾ ವಾಸು.''

"ಛೇ ಎಂತಾ ಮಾತು ಮಾವ. ಅನ್ನ ಹಾಕಿದವರನ್ನು, ನೀರು ನೆರಳು ನೀಡಿದವರನ್ನ ಮರೆತರೆ ಅವನು ಮನುಷ್ಯ ಅಲ್ಲ ಮಾವ ರಾಕ್ಷಸ. ನನಗೆ ನೀವಲ್ಲದೆ ಬೇರೆ ಯಾರಿದ್ದಾರೆ. ಕೆಲಸದ ಒತ್ತಡ ಬರಕ್ಕಾಗಲಿಲ್ಲ.''

"ಅಷ್ಟಾದ್ರೂ ಅಭಿಮಾನ ಇಟ್ಟಿದ್ದೀಯಲ್ಲ. ಇಂತಹ ಅಭಿಮಾನ ಇದೆಯೆಂದೆ ನಿನ್ನ ನಾನು

ಹುಡುಕಿಕೊಂಡು ಬಂದಿರೋದು.''

"ಏನು ವಿಷ್ಯ ಮಾವ?''

"ಇನ್ನು ನೀನು ಹೀಗೇ ಎಷ್ಟು ದಿನಾಂತ ಇರುತ್ತೀಯಾ?''

"ನೀನು ಹೇಳ್ತಾ ಇರೋದು ನನಗೆ ಅರ್ಥವಾಗ್ತಾ ಇಲ್ಲ ಮಾವ.''

"ವಾಸು ನಿನಗೆ ಹಿರಿಯಾಂತ ನಾನು ತಾನೆ ಇರೋದು. ನನ್ನ ತಂಗಿ ಮಗ ನೀನು. ನಿನಗೆ ಅಪ್ಪ ಅಮ್ಮ ಇದ್ದಿದ್ದರೆ ಯಾವ ವಯಸ್ಸಿನಲ್ಲಿ ಏನು ಮಾಡಬೇಕೂಂತ ಅವರಿಗೆ ಗೊತ್ತಿರ್ತಿತ್ತು. ಈಗ ಅವರ ಸ್ಥಾನದಲ್ಲಿ ನಾನಿರುವುದರಿಂದ ನಿನ್ನ ಜವಾಬ್ದಾರಿ ನನಗಿರುವುದರಿಂದ ನನ್ನ ಮಾತು ನೀನು ಕೇಳುತ್ತೀಯಾ ಎಂಬ ಭರವಸೆಯಿಂದ ಬಂದೆ ವಾಸು.''

"ಏನು ಹೇಳಿ ಮಾವ, ನಿನ್ನ ಮಾತು ನಾನು ಯಾವಾಗ ಕೇಳಿಲ್ಲ.''

"ಏನಿಲ್ಲ ಕೆಲ್ಸ ಸಿಕ್ಕಿತು, ನೀನು ಒಂದು ನೆಲೆ ಆಗಬೇಕು. ಒಂಟಿಯಾಗಿ ಕೈಯಲ್ಲಿ ಹಣ ಓಡಾಡಿದರೆ ಅಪಾಯ. ಜೇಬು ಕಾಲಿ ಆದರೆ ಪರವಾಗಿಲ್ಲ, ಆದರೆ ದೇಹ ಕಾಲಿ ಆದರೆ ಕಷ್ಟ ಅದಕ್ಕೆ ಮದ್ವೆಯಾಗಬೇಕು.''

"ಈಗಲೇ ಏನವಸರ ಮಾವ.''

"ಹಾಗಂತ ಇದ್ದರೆ ಆಯುಸ್ಸು ಹೆಚ್ಚುತ್ತೆ, ಯೌವನ ಇಳಿಯುತ್ತೆ. ನಿನ್ನ ವಿಚಾರ ತಿಳಿದು ಎರಡು ಮೂರು ಹೆಣ್ಣು ಹೆತ್ತವರು ನನ್ನ ಬಳಿ ಬಂದಿದ್ದರು. ನಮ್ಮ ದೂರದ ಸಂಬಂಧದ ಹೆಣ್ಣು ಈ ಊರಲ್ಲೆ ಓದ್ತಾ ಇದೆ. ನೀನು ಹೂಂ ಎಂದರೆ ಮುಂದಿನ ಮಾತುಕತೆ ನಡಿಸಬಹುದು.''

"ಆಗಲಿ ಮಾವ, ಭಾನುವಾರ ಮನೆಗೆ ಬರುತ್ತೇನೆ.''

"ಸರಿ ಹಾಗಾದ್ರೆ, ಆದರೆ ಆ ಹುಡುಗಿಯನ್ನೇ ಕರೆಯುತ್ತೇನೆ. ಇಲ್ಲ ಫೋಟೋನಾದ್ರೂ ತರಿಸ್ತೇನೆ'' ಎಂದು ಹೇಳಿ ಕೂಲ್‌ಡ್ರಿಂಕ್ಸ್ ಕುಡಿದು ಹೊರಟು ಹೋದರು ಸಾಂಬಶಿವರಾವ್.

"ಏನು ಗುರು, ಯಾರು ಆ ಓಲ್ಡ್ ಮ್ಯಾನ್?'' ಸೀನ ಕೇಳಿದ.

"ಯಾಕೆ ಹಾಗಂತೀಯಾ ಸೀನ, ಇಂದಿನ ಮಕ್ಕಳೆ ಮುಂದಿನ ಪ್ರಜೆಗಳು ಎಂಬ ಹಾಗೆ ಇಂದಿನ ಪಡ್ಡೆ ಹುಡುಗರೆ ಮುಂದಿನ ಮುದುಕರು.'' ಮೋಹನ ಹೇಳಿದನು.

"ಸರಿಯಾಗಿ ಹೇಳಿದೆ ಮೋಹನ, ಅವರು ನನ್ನ ಮಾವ.''

"ಸಾರಿ ವಾಸು, ನಿನ್ನ ಮಾವಾಂತ ಗೊತ್ತಿರಲಿಲ್ಲ.''

"ಸೀನ ಮಾವ ಆಗಲಿ, ಬೇರೆ ಯಾರಾದರಾಗಲಿ ಹಿರಿಯರಿಗೆ ಗೌರವ ಕೊಡಬೇಕು.''

"ಸರಿಯಪ್ಪ, ಅದೇನು ಬಂದದ್ದು?''

"ಮೂಗುದಾರ ಹಾಕಿಸಕ್ಕೆ.''

"ಅಂದರೆ ಮದುವೆ, ಹುಶಾರ್ ಗುರು. ಮದುವೆ ಆಗೋದ್ರೆ ಸ್ವಾತಂತ್ರ್ಯವೇ ಹೋದ ಹಾಗೆ.''

"ಯಾರು ಹೇಳಿದ್ದು ಹಾಗೆ?''

"ನಾನೇ, ಯಾಕಂದ್ರೆ ನಾನೇ ಸಾಕ್ಷಿ.'' ಸೀನ ಹೇಳಿದ್ದಕ್ಕೆ ಉಳಿದವರು ನಕ್ಕರು.

"ಸೀನ ನೀನು ಹೊರಗೆ ಹುಲಿ, ಒಳಗೆ ಇಲಿ.''

"ಅನ್ನು, ನೀನು ಏನಾಗ್ತೀಯೋ ನಾನೂ ನೋಡ್ತೇನೆ.''

"ಆ ವಿಷ್ಯ ಹಾಗಿರಲಿ, ನಾನು ಹೇಳಿದ್ದು ಏನ್ಮಾಡಿದೆ ವಾಸು?''

"ಯಾವ ವಿಷ್ಯ?''

"ಆಗಲೇ ಮರೆತು ಬಿಟ್ಟೆಯಾ, ಸ್ಟಾಫ್ ಕಮಿಟಿಯ ಎಲೆಕ್ಷನ್‌ಗೆ ಪಾರ್ಟಿಸಿಪೇಟ್ ಮಾಡಕ್ಕೆ.''

"ನಾನು ಜೂನಿಯರ್, ನನಗಿಂತ ಸೀನಿಯರ್ಸ್ ತುಂಬ ಜನರಿದ್ದಾರೆ. ನಾನ್ಯಾಕೆ ಸೆಕ್ರೆಟರಿ ಪೋಸ್ಟ್‌ಗೆ ಕ್ಯಾಂಡಿಡೇಟ್ ಆಗಲಿ.''

"ವಾಸು, ಇಲ್ಲೇ ಇರೋದು ರಾಜಕೀಯ. ನಾನು ಸೀನಿಯರ್ ನಿಜ. ಆದರೆ ನಮ್ಮ ಅಸೋಸಿಶನ್. ಆದಿತ್ಯನ ಕಡೆಯವರು ದುರಹಂಕಾರಿ. ಆದಿತ್ಯ ಹಣ ಉಳ್ಳವನು. ಅವನನ್ನು ಕಂಡರೆ ಆಗದೆ ಇರುವವರು ಇದ್ದಾರೆ. ಆದರೆ ಅವನ ಹೆದರಿಕೆಗೆ ಸುಮ್ಮನೆ ಇದ್ದಾರೆ. ನೀನು ನ್ಯೂಟ್ರಲ್, ಗೆಲ್ಲಕ್ಕೂ ಅವನ ಕಡೆಯಿಂದ ಕೆಲವು ಓಟು ಬಂದರೆ ನಮ್ಮ ಓಟೆಲ್ಲ ನಿನಗೆ. ನೀನು ಗೆದ್ದೇ ಗೆಲ್ಲುತ್ತಿಯಾ. ಅವರ ಆಟಕ್ಕೆ ಬ್ರೇಕ್ ಹಾಕಬಹುದು.'' ಸೂರಯ್ಯ ಹೇಳಿದರು.

"ಸರಿ ನಿಮ್ಮಿಷ್ಟವೇ ನನ್ನ ಇಷ್ಟ ನೀವು ಹೇಳಿದ ಹಾಗೆ ಆಗಲಿ.'' ವಾಸು ಗ್ರೀನ್ ಸಿಗ್ನಲ್ ಕೊಟ್ಟನು.



ಮನಸ್ಸಿಗೆ ಆನಂದವನ್ನು ಉಂಟು ಮಾಡುವುದೇ ಸ್ವರ್ಗ, ದುಃಖವೇ ನರಕ. ನರಕ ಸ್ವರ್ಗಗಳಿಗೆ ಪಾಪ, ಪುಣ್ಯಗಳೆಂದು ಹೆಸರು.

– ವಿಷ್ಣು ಪುರಾಣ

ದೇವರ ಅಪ್ಪಣೆ ಇಲ್ಲದೆ ಒಂದು ಹುಲ್ಲು ಕಡ್ಡಿಯೂ ಕೂಡ ಅಲುಗಲಾರದು.

– ಕುರಾನ್

ಸಂಗ್ರಹ : ರುದ್ರಗೌಡ ಪಾಟೀಲ

"ಒಂದು ವಿಷ್ಯ, ನೀನು ನಮ್ಮ ಪಾರ್ಟಿ ಎಂದು ಆದಿತ್ಯನಿಗೆ ಗೊತ್ತಾಗಬಾರದು.'' ಮೋಹನರಾವ್ ಹೇಳಿದರು.

"ಒಕೆ.'' ವಾಸು ಹೇಳಿದ.

ಅಷ್ಟೇ ಆಗಲೇ ಚುನಾವಣಾ ಪ್ರಚಾರ ಕಾರ್ಯದ ತಂತ್ರದ ಬಗ್ಗೆ ಚರ್ಚಿಸಿದರು.

"ಏನು ಮಿ. ವಾಸು, ನೀನು ಸೆಕ್ರೆಟರಿ ಪೋಸ್ಟ್‌ಗೆ ನಿಂತಿದ್ದೀಯಾ?'' ಆದಿತ್ಯ ಕೇಳಿದರು.

"ಹೌದು ಸಾರ್, ನಿಲ್ಲಬೇಕೂಂತ ಅನ್ನಿಸ್ತು ನಿಂತುಬಿಟ್ಟೆ. ಆದರೆ ಈಗ ಅನ್ನಿಸ್ತಿದೆ ನಿಮ್ಮಂತಹ ರಂಗನ ಮುಂದೆ ನಾನು ಮಂಗ ಎಂದು. ಎಲೆಕ್ಷನ್ ಬಹಳ ಕಷ್ಟ ಎನ್ನಿಸುತ್ತೆ. ಕ್ಯಾಂಡಿಡೇಟ್ಸ್ ಯಾರನ್ನು ಕೇಳಿದರೂ ನಿಮ್ಗೆ ಓಟು ಹಾಕ್ತೇವೆ ಎಂದು ಹೇಳ್ತಾರೆ. ನಾನೇ ಗೆಲ್ಲುತ್ತೇನೆ ಎಂದು ಕ್ಯಾಂಡಿಡೇಟ್ ಹೇಳ್ತಾನೆ, ಹಣ ಖರ್ಚಾಗುತ್ತಿದೆ. ಯಾಕಾದ್ರೂ ನಿಂತೆನೋ ಎಂದೆನಿಸಿಬಿಟ್ಟಿದೆ.'' ವಾಸು ಜೋಲು ಮುಖ ಮಾಡಿಕೊಂಡು ಹೇಳಿದಾಗ ಆದಿತ್ಯನ ಕಡೆಯವರೆಲ್ಲ ನಕ್ಕು ಬಿಟ್ಟರು.

"ಬಚ್ಚಾ ನೀನು, ಕಚ್ಚೆ ಕಟ್ಟಕ್ಕೆ ಬಾರದೇ ಇದ್ದರೂ ಕಟ್ಟಿನಾ ಕಟ್ತೇನಿ ಎಂದು ಹೊರಟೆಯಲ್ಲ. ಇದಕ್ಕೆಲ್ಲ ನ್ಯಾಕ್, ನಾಲೆಡ್ಜ್ ಬೇಕು. ಹೇಳುವವರೆಲ್ಲ ಓಟು ಹಾಕಲ್ಲ. ನಿಂತವರೆಲ್ಲ ಗೆಲ್ಲಲ್ಲ. ಗೆಲ್ಲೋದು ಏನಿದ್ದರೂ ನನ್ನಂತವರು." ಆದಿತ್ಯ ಎದೆ ಉಬ್ಬಿಸಿ ಹೇಳಿ ಹೋದನು.

ವಾಸು ಮಾತನಾಡಲಿಲ್ಲ. ಮೋಹನರಾವ್ ಹಾಗೂ ಅವನ ಸ್ನೇಹಿತರೆಲ್ಲ ಗುಟ್ಟಾಗಿ ಆದಿತ್ಯನಿಗೆ ಸುಳಿವು ಕೊಡದ ಹಾಗೆ ಎಲೆಕ್ಷನ್ ಪ್ರಚಾರ ಮಾಡಿದರು.

ಎಲೆಕ್ಷನ್ ನಡೆಯಿತು. ಆದಿತ್ಯ ಹಾಗೂ ಅವನ ಕಡೆಯವರು ಕುಡಿದು, ತಿಂದು ಹಾರಾಡಿದರು, ಕೂಗಾಡಿದರು. ಕೌಂಟಿಂಗ್‌ನಲ್ಲಿ ಪೋಲೀಸ್ ಪಡೆ ಬಂದಿತು. ಮೋಹನರಾವ್, ವಾಸು, ಆದಿತ್ಯ ಅವನ ಕಡೆಯವರು ಜಮಾಯಿಸಿದ್ದರು. ಆದಿತ್ಯ ಗೆದ್ದೇ ಗೆಲ್ಲುತ್ತೇನೆ ಎಂಬ ಅಹಂಕಾರದಲ್ಲಿದ್ದನು. ಕೌಂಟಿಂಗ್ ಆಗುತ್ತಿದ್ದಂತೆ ಆದಿತ್ಯನಿಂಗಿತ ವಾಸು ಲೀಡ್ ಆಗ್ತಾ ಹೋಗಿ ಅವನೇ ಎಲೆಕ್ಟ್ ಆದನು. ಆದಿತ್ಯ ಅವಾಕ್ಕಾದನು, ಅವನಿಗೆ ಅರ್ಥವೇ ಆಗಲಿಲ್ಲ. ವಾಸುವಿಗೆ ಅಭಿನಂದಿಸಿ ಹೊರಟು ಹೋದನು.

"ಏನು ವಾಸು ಭಾನುವಾರ ನಮ್ಮ ಕೈಗೆ ಸಿಗಲೇ ಇಲ್ಲ." ಸೋಮವಾರ ಆಫೀಸಿಗೆ ಬಂದಾಗ ಸೂರಯ್ಯ ಕೇಳಿದರು.

"ನಮ್ಮ ಮಾವನ ಮನೆಗೆ ಹೋಗಿದ್ದೆ." ವಾಸು ಹೇಳಿದನು.

"ಮಾವ, ಅದ್ಯಾವಾಗ ಮದುವೆ ಆಯಿತು." ಮೋಹನರಾವ್ ಕೇಳಿದರು.

"ಇಲ್ಲಪ್ಪಾ ನಮ್ಮ ಸೋದರ ಮಾವ ಹುಡುಗಿಯರ ಫೋಟೋ ತರಿಸಿದ್ರು. ನೋಡ್ಕೊಂಡು ಬಂದೆ."

"ಬರೀ ಫೋಟೋನೊ, ಇಲ್ಲ ಹುಡುಗಿಯನ್ನೇ ನೋಡಿದ್ಯೋ?" ಸಿದ್ದಯ್ಯ ಕೇಳಿದರು.

"ಇಲ್ಲರಿ, ಬರೀ ಫೋಟೋ. ಕರಿಸ್ತಿನಿ ಎಂದರು. ನಾನೇ ಆಮೇಲೆ ಹೇಳ್ತೀನೀಂತ ಹೇಳಿ ಬಂದುಬಿಟ್ಟೆ"

"ನೋಡು ವಾಸು, ಮದುವೆ ಆಗಬೇಕು ನಿಜ. ಆದರೆ ಈಗಿನ ಪರಿಸ್ಥಿತಿ ನಿಮ್ಗೆಲ್ಲ ಗೊತ್ತಿದೆ. ಬೆಲೆಗಳು ಗಗನಕ್ಕೇರುತ್ತಿವೆ. ರೂಪಾಯಿ ಬೆಲೆ ಕುಸಿಯುತ್ತಿದೆ. ಒಬ್ಬರ ಸಂಬಳ ಸಾಕಾಗಲ್ಲ. ಇಬ್ಬರೂ ಕೆಲಸದಲ್ಲಿ ಇದ್ದರೆ ಸಂಸಾರನ ಸಾಲಸೋಲ ಇಲ್ಲದೆ ತೂಗಿಸಿಕೊಂಡು ಹೋಗಬಹುದು." ಮ್ಯಾನೇಜರ್ ಮಹದೇವ್ ಹೇಳಿದರು.

"ಹೌದು ಮ್ಯಾನೇಜರ್ ಹೇಳುವುದು ಸರಿ. ನಮ್ಮ ಆಫೀಸ್‌ನಲ್ಲಿ ಸರಳ ಇದ್ದಾರಲ್ಲ. ಟ್ರೈ ಮಾಡು." ಪೈ ತಿಳಿಸಿದರು.

ಕೊಲೀಗ್ಸ್‌ಗೆಲ್ಲ ಕೂಲ್ ಡ್ರಿಂಕ್ಸ್ ಕೊಡಿಸಿದ ವಾಸು. ಅವನಿಗೂ ಅವರು ಹೇಳಿದ್ದೆಲ್ಲ ಸರಿ ಎನಿಸಿತು. ಏಕೆ ಟ್ರೈ ಮಾಡಬಾರದೆನ್ನಿಸಿತು.

"ಪ್ರೊಸೀಡ್ ಬ್ರದರ್, ವಿಷ್ ಯೂ ಗುಡ್ ಲಕ್." ಹಾರೈಸಿದರು.

ವಾಸು ಟ್ರೈ ಮಾಡಲು ಪ್ರಾರಂಭಿಸಿದನು.

"ಏನ್ರಿ ಮಿಸ್ ಸರಳಾ, ಒಬ್ಬರೇ ಕ್ಯಾಂಟೀನ್‌ಗೆ ಬಂದಿದ್ದೀರಿ. ನಳಿನಿ, ಮಾಲಿನಿ ಬರಲಿಲ್ಲವಾ?" ಲಂಚ್ ಅವರ್‌ನಲ್ಲಿ ಕೇಳಿದ ವಾಸು.

"ಅವರ ಯಜಮಾನರು ಬಂದಿದ್ದರು, ಕೆಲ್ಸ ಇದೆ ಎಂದು ಹೊರಟು ಹೋದರು."

"ನಾನು ಕಂಪೆನಿ ಕೊಡಬಹುದ?''

"ಬೈ ಆಲ್ ಮೀನ್ಸ್.'' ಸರಳಾ ನಗುತ್ತ ಹೇಳಿದಳು.


ವಾಸು ತಿಂಡಿಗೆ ಆರ್ಡರ್ ಮಾಡಿದನು. ಅನಂತರ ವಾಸು ಸರಳಾ ತುಂಬ ಕ್ಲೋಸ್ ಆಗತೊಡಗಿದರು.

"ನಿಮ್ಮ ಫ್ರೆಂಡ್ಸ್ ಎಲ್ಲ ಮದುವೆ ಆಗಿದ್ದಾರೆ ನೀವು ಇನ್ನೂ ಹಾಗೇ ಇದ್ದೀರಲ್ಲ. ಮದುವೆ ಆಗಲ್ವಾ?'' ಸಂಜೆ ಪಾರ್ಕಿನಲ್ಲಿ ಕುಳಿತ ವಾಸು ಕಳ್ಳೇಕಾಯಿ ತಿನ್ನುತ್ತ ಕೇಳಿದನು.

"ಮದುವೆ ಆಗಬೇಕು, ಮನೆಯಲ್ಲಿ ನಮ್ಮ ತಂದೆ ಅದೇ ಕೆಲ್ಸದಲ್ಲಿ ಇದ್ದಾರೆ.''

"ಐಸೀ, ಪ್ರೀತಿಸಿ ಮದುವೆ ಆಗಕ್ಕೆ ಇಷ್ಟಾನಾ, ಮದ್ವೆ ಆಗಿ ಪ್ರೀತಿಸೋದು ಇಷ್ಟಾನೋ?''

"ಪ್ರೀತಿ ಎನ್ನುವುದು ಹೇಗೆ ಇರುತ್ತೆ ಎಂಬುದನ್ನು ಟ್ರೈನಿಂಗ್ ತಗೊಂಡು ಅನಂತರ ಯಾರನ್ನಾದ್ರೂ ಮದುವೆ ಆಗೋದು.''



"ಹೇ ರಾಜು, ನಮ್ಮ ಸ್ಕೂಲಿಗೆ ಶೇಕಡಾ ನೂರು ಫಲಿತಾಂಶ ಬರುವುದು ತಪ್ಪಿ ಹೋಯ್ತು?''

"ಹೇಗೆ?''

"ನೀನೊಬ್ಬನೆ ಪಾಸು!''

– ಶೇಕರ ಸಾಲ್ಯಾನ್

"ಏನು ಹೇಳ್ತಿದ್ದೀರಾ ನೀವು, ಪ್ರೀತಿಸುವುದು ಒಬ್ಬರನ್ನ, ಮದುವೆ ಆಗೋದು ಇನ್ನೊಬ್ಬರನ್ನಾ.''

"ಏನು ತಪ್ಪು, ಇದೊಂದು ಟ್ರೈನಿಂಗ್ ತಾನೆ?''

"ನಿಮ್ಮ ದೃಷ್ಟಿಯಲ್ಲಿ ನಿಮ್ಮ ಭಾವಿ ಪತಿ ಹೇಗಿರಬೇಕು?''

"ಒಳ್ಳೆ ವ್ಯಕ್ತಿಯಾಗಿರಬೇಕು. ನಿಮ್ಮ ಹಾಗೆ ಎಲ್ಲರಿಗೂ ಸಹಾಯ ಮಾಡೋ ಹೆಲ್ಪಿಂಗ್ ನೇಚರ್ ಇರಬೇಕು. ನಿಮ್ಮ ಹಾಗೆ ಹೆಂಡ್ತಿಯನ್ನು ತುಂಬ ಪ್ರೀತಿಸುತ್ತಿರಬೇಕು, ನಿಮ್ಮ ಹಾಗೆ...''

"ರೀ ಸರಳಾ, ನನಗೆ ಇನ್ನೂ ಮದುವೇನೇ ಆಗಿಲ್ಲ''

"ಗೊತ್ತು. ಆದರೆ ಅನ್ನ ಆಗಿದೆಯೋ ಇಲ್ಲವೋ ಎಂದು ತಿಳಿಯಲು ಒಂದಗುಳು ಸಾಕು. ನಿಮ್ಮ ಒಡನಾಟದೊಡನೆ ನಿಮ್ಮ ಕ್ಯಾರೆಕ್ಟರ್ ಹೀಗೆ ಇರುತ್ತೆಂದು ನನಗೆ ಗೊತ್ತು. ಹಾಗೆ ಆತ ಜನಪ್ರಿಯ ವ್ಯಕ್ತಿ ಆಗಿರಬೇಕು, ಮಿನಿಸ್ಟರ್ ಆಗಿರಬೇಕು, ಡಾಕ್ಟರ್ ಆಗಿರಬೇಕು, ಇಂಜಿನಿಯರ್ ಆಗಿರಬೇಕು ಎಂದು ನಮ್ಮ ತಂದೆಯವರ ಆಸೆ.''

ಎಲ್ಲ ನಿಮ್ಮ ಹಾಗೆ ಎಂದು ಹೇಳುತ್ತಿದ್ದಾಗ ವಾಸು ಹೆಮ್ಮೆಯಿಂದ ಉಬ್ಬಿ ಹೋದನು. ಆದರೆ ಸರಳಾ ಕೊನೆಯಲ್ಲಿ ಹೇಳಿದ ಮಾತನ್ನು ಕೇಳಿ ಪೆಚ್ಚು ಆಗಿ ಕೆಸರಿನಲ್ಲಿ ಬಿದ್ದನು.

"ನಿಮ್ಮ ಆಸೆ ಏನು?''

"ಹೆಂಗಸರಿಗೇನು, ಆಸೆ ಇದ್ದೇ ಇರುತ್ತೆ. ಆಕಾಶ ಕೊಟ್ಟರೂ ಸಾಲದು. ಆದರೆ ನನಗೆ

ಅಂತಹದ್ದೇನೂ ಆಸೆ ಇಲ್ಲ. ಅವಕಾಶ ಸಿಕ್ಕರೆ ಸರಿ, ಇಲ್ಲದಿದ್ದರೆ ಪಾಲಿಗೆ ಬಂದದ್ದೆ ಪಂಚಾಮೃತ ಎಂದುಕೊಳ್ತೇನೆ ಅಂದ ಹಾಗೆ ನಿಮ್ಮ ವುಡ್‌ಬಿ ಹೇಗಿರಬೇಕು?''

"ಹೇಗೆ ಅಂದರೆ, ನಿಮ್ಮ ಹಾಗೆ ಇರಬೇಕೂಂತ ಆಸೆ.''

"ಹೌದಾ ಟ್ರೈ ಮಾಡಿ ಸಿಗಬಹುದು. ಬನ್ನಿ ಲೇಟ್ ಆಯಿತು ಹೋಗೋಣ'' ಎಂದು ಎದ್ದಳು ಸರಳಾ.

ವಾಸು ತನ್ನ ಸ್ಕೂಟರ್‌ನಲ್ಲಿ ಕುಳ್ಳಿರಿಸಿಕೊಂಡು ಮನೆ ಹತ್ತಿರ ಡ್ರಾಪ್ ಮಾಡಿ ರೂಮಿಗೆ ಬಂದನು.

"ನನ್ನಂತ ಹುಡ್ಗಿ ಬೇಕಾ, ಟ್ರೈ ಮಾಡಿ ಸಿಗಬಹುದು.''

ಸರಳಾ ಹೇಳಿದ್ದು ಕಿವಿಯಲ್ಲಿ ಮೊಳಗುತ್ತಿತ್ತು. 'ಟ್ರೈ ಮಾಡಿದೆ ಆ ಹುಡ್ಗಿ ಸಿಕ್ಕಿದಳು ನೀನೇ ಎಂದರೆ ಅವಳ ರಿಯಾಕ್ಷನ್ ಹೇಗಿರಬಹುದು, ಒಪ್ಪಬಹುದು. ಎಲ್ಲ ತಂದೆ ತಾಯಿಗಳು ತಮ್ಮ ಹುಡುಗಿಗೆ ಇಂಜಿನೀಯರ್, ಡಾಕ್ಟರನ್ನೇ ಬಯಸೋದು ಆದರೆ ಸಿಗೋದು ಮಾತ್ರ ಕ್ಲರ್ಕ್ ಮೊದಲಾದವರು. ಅದಕ್ಕೆ ಸರಳಾ ಟ್ರೈ ಮಾಡಿ ಎಂದು ಕ್ಲೂ ಕೊಟ್ಟಿರಬಹುದೇ' ಎಂದು ಯೋಚಿಸಿದನು.

"ಏನಮ್ಮ ತುಂಬಾ, ಮುಂದುವರೆದಿರುವ ಹಾಗೆ ಇದೆ.'' ಮೋಹನ ಕೇಳಿದ.

"ನಿಮ್ಮ ಸುತ್ತಾಟ, ನಿಮ್ಮ ಒಡನಾಟ, ಮಾತುಕತೆ ಕೇಳಿ ನೋಡ್ತಾ ಇದ್ರೆ, ನೀನು ಹಾಕಿದ ಗಾಳಕ್ಕೆ ಮೀನು ಬಿದ್ದಿರಲೇಬೇಕು.'' ಕರಿಯಣ್ಣ ಹೇಳಿದನು.

"ಸರಳಾ ಒಪ್ಕೊಂಡಿರಬಹುದು ಅಲ್ವಾ.'' ಸಿದ್ದಯ್ಯ ಕೇಳಿದರು.

"ಇವತ್ತು ಸರಳಾ ಬಂದೇ ಇಲ್ಲ''

"ಒಂದು ತಿಂಗಳು ಇ. ಎಲ್. ಹಾಕಿದ್ದಾರೆ.'' ಮ್ಯಾನೇಜರ್ ಹೇಳಿದರು.

"ಚಿಕ್ಕಪ್ಪನ ಮನೆಗೆ ಮಂಗಳೂರಿಗೆ ಹೋಗಿದ್ದಾಳೆ.''

ವಾಸು ಒಂದು ತಿಂಗಳು ಹೇಗಪ್ಪ ಕಳೆಯಬೇಕು ಎನ್ನುವಷ್ಟರಲ್ಲಿ, ಹದಿನೈದು ದಿನಕ್ಕೆ ಆಫೀಸಿಗೆಲ್ಲ ಇನ್ವಟೇಶನ್ ಕಾರ್ಡ್ ಬಂದಿತು. ಸರಳಾಳ ಗಂಡ ಅಮೆರಿಕದಲ್ಲಿ ಇಂಜಿನಿಯರ್. ಹಿಡಿಯಲು ಹೋದ ಹೂಮಾಲೆ ಕಬ್ಬಿಣದ ಸಂಕೋಲೆ ಆಯಿತು ವಾಸುವಿಗೆ.


ವಾಸುವಿಗೆ ನಿರಾಶೆ ಆಯಿತು. ಅವನು ಸರಳಾಳನ್ನು ಮನಪೂರ್ವಕವಾಗಿ ಪ್ರೀತಿಸಿದ್ದ. ಅವಳು ಉತ್ತೇಜನ ನೀಡಿ ಅನಂತರ ಹೀಗೆ ಮಾಡುತ್ತಾಳೆಂದು ತಿಳಿದಿರಲಿಲ್ಲ.

"ಲೋ ವಾಸು, ಏನೋ ಇದು ನಿನ್ನ ಅವಸ್ಥೆ.''

"ಭಗ್ನ ಪ್ರೇಮಿ. ಪ್ರಥಮ ಚುಂಬನಂ ದಂತ ಭಗ್ನಂ.''

"ಹೋಗೊ ಹೋಗೊ, ಆ ಸರಳಾ ಜುಂ ಎಂದು ಮದುವೆ ಮಾಡಿಕೊಂಡು ಹನಿಮೂನ್‌ಗೆ ಹವಾಯಾನ ಮಾಡುತ್ತ ಮಜಾ ಮಾಡುತ್ತಿದ್ದರೆ, ಗಂಡು ನೀನು ಏಕೆ ತಲೆ ಮೇಲೆ ಕೈ ಹೊತ್ತು ಕುಳಿತ್ಕೋಬೇಕೊ. ಅವಳೇನೊ ಅಮಲಳೋ ಅಪ್ಸರೆಯೋ ಅವಳಿಲ್ಲ ದಿದ್ದರೆ ಇನ್ನೊಬ್ಬಳು. ಹೋಗಿ ಮೊದಲು ಶೇವ್ ಅದು ಮಾಡ್ಕೋ ಇಲ್ಲದ ಮಜ್ನು ತರಹ ಆಡಬೇಡ.''

"ಹೇಳಿಯಪ್ಪಾ, ಕೇಳಿದ್ಯೇನೋ ವಾಸು, ನಿನ್ನ ಸ್ನೇಹಿತರು ಹೇಳಿದ್ದು. ಈಗಲಾದ್ರೂ



ನಾನು ಹೇಳಿದ ಹಾಗೆ ಕೇಳು. ನನ್ನ ಸ್ನೇಹಿತನ ಕಡೆ ಹುಡುಗಿ ಫೋಟೋ ನೋಡಿದ್ಯಲ್ಲ, ಒಳ್ಳೇ ರತಿ ಇದ್ದ ಹಾಗೆ ಇದ್ದಾಳೆ. ನಿನಗೂ ಒಳ್ಳೆ ಜೋಡಿ. ಮದ್ವೆ ಮಾಡಿಕೊಂಡು ಸಂಸಾರ ನಡೆಸು, ಇಲ್ಲ ನಿನ್ನ ಇಷ್ಟ ನಾನು ತೆಪ್ಪಗಿರ್ತೇನೆ.'' ಸೋದರಮಾವ ಸಾಂಬಶಿವರಾವ್ ಹೇಳಿದರು.

"ಹೌದು ಕಣೋ ವಾಸು, ನಿಮ್ಮ ಮಾವ ಹೇಳ್ತಾ ಇರೋದು ಸತ್ಯ. ಅವರ ಮಾತಿಗೆ ಬೆಲೆ ಕೊಡು. ನಾವ್ಯಾಕೆ ನಮ್ಮ ಕೈಯಿಂದ ನಮ್ಮ ಜೀವನ ಹಾಳು ಮಾಡ್ಕೋಬೇಕು. ಬೀ ಬ್ರೇವ್.'' ಕೊಲೀಗ್ಸ್ ಹೇಳಿದರು.

ವಾಸುವಿಗೂ ನಿಜ ಎನ್ನಿಸಿತು.

"ಸರಿ ಮಾವ, ನೀವು ಹೇಳಿದ ಹಾಗೆ ಆಗಲಿ. ಮುಂದಿನ ಏರ್ಪಾಟು ಮಾಡಿ. ಮದುವೆ ಸಿಂಪಲ್ ಆಗಿ ಆಗಲಿ'' ಎಂದು ವಾಸು ಗ್ರೀನ್ ಸಿಗ್ನಲ್ ಕೊಟ್ಟನು.

ಸಾಂಬಶಿವರಾವ್ ಸಂತೋಷದಿಂದ ಅಲ್ಲಿಂದ ಹೊರಟುಹೋದರು.

"ಲೋ ಕಾಫಿ ಕೊಡ್ಸು ಬಾರೋ'' ಎಂದು ಕೊಲೀಗ್ಸ್ ಒತ್ತಾಯಿಸಿದ್ದರಿಂದ ವಾಸು ಅವರನ್ನು ಕರ್ಕೊಂಡು ಕ್ಯಾಂಟಿನ್‌ಗೆ ಹೊರಟನು.

* * * * *

ಮಾಲಿನಿಯ ಬದುಕಿಗೆ ಒಂದು ಹೊಸ ತಿರುವು ಅನಿರೀಕ್ಷಿತವಾಗಿ ಒದಗಿ ಬಂತು. ಶಾರದಮ್ಮನವರ ಕಾಯಿಲೆ ಉಲ್ಬಣವಾಯಿತು. ಅನಂತಯ್ಯನವರು, ಮಾಲಿನಿ, ಕಾವೇರಮ್ಮ ಊರಿಗೆ ಹೋದರು. ಡಾಕ್ಟರ್‌ಗೆ ತೋರಿಸಿದರು, ಸ್ವಲ್ಪ ಗುಣಮುಖವಾಯಿತು.

"ಅನಂತ ನನ್ನ ಬದುಕು ಹೀಗಾಯಿತು. ಇನ್ನು ಎಷ್ಟು ದಿನವೋ ಹೇಗೋ, ನನ್ನ ಕಣ್ಣು ಮುಂದೆ ಮಾಲಿನಿ ಮದುವೆ ಆಗಿಬಿಟ್ಟು ಅವಳೊಂದು ನೆಲೆ ಆಗಿಬಿಟ್ಟರೆ ನಾನು ನೆಮ್ಮದಿಯಿಂದ ಕಣ್ಣು ಮುಚ್ಚಬಹುದು.'' ಶಾರದಮ್ಮ ಹೇಳಿದರು.

ತಾಯಿಯ ಸ್ಥಿತಿ ಕಂಡು ಮಾಲಿನಿಗೆ "ಈಗಲೇ ಮದುವೆ ಬೇಡ'' ಎಂದು ಹೇಳುವುದಕ್ಕೆ ಬಾಯಿ ಬರಲೇ ಇಲ್ಲ.

"ಆಯಿತು ಶಾರದ, ನಿನ್ನ ಇಚ್ಛೆಯಂತೆ ಆಗಲಿ'' ಎಂದು ಅನಂತಯ್ಯ ಆಗಲೇ ವರಾನ್ವೇಷಣೆಗೆ ತೊಡಗಿ ತಮ್ಮ ಸ್ನೇಹಿತ ಸಾಂಬಶಿವರಾವ್‌ಗೆ ತಿಳಿಸಿದಾಗ, ತಾವೂ ತಮ್ಮ ಹುಡುಗನಿಗೆ ಹೆಣ್ಣು ಹುಡುಕುತ್ತಿರುವುದಾಗಿ ತಿಳಿಸಿದರು. ಕೂಡಲೆ ಹುಡುಗ ಹುಡುಗಿಯರ ಫೋಟೋ ವಿನಿಮಯವಾಯಿತು. ಜಾತಕ ಪುರೋಹಿತರ ಹತ್ತಿರ ಹೋಯಿತು. ಅವರು ಗ್ರೀನ್ ಸಿಗ್ನಲ್ ಕೊಟ್ಟರು. ಆಗಲೇ ಸರಳಾಳಿಂದ ಭಗ್ನಗೊಂಡಿದ್ದ ವಾಸು, ಮಾಲಿನಿಯನ್ನು ನೋಡಿ ಚೆನ್ನಾಗಿದ್ದಾಳೆಂದು ತೀರ್ಮಾನಿಸಿ ಒಪ್ಪಿದನು. ಮಾಲಿನಿ ಸಹ ಹೂಂ ಎಂದಾಗ ಮದುವೆ ದಿನ ಗೊತ್ತು ಮಾಡಿದರು. ಚತ್ರ ಬುಕ್ ಆಯಿತು, ಲಗ್ನಪತ್ರಿಕೆ ಪ್ರಿಂಟ್ ಆಯಿತು, ಎಲ್ಲರಿಗೂ ಹಂಚಿ ಆಯಿತು. ಮದುವೆ ಹತ್ತಿರ ಆಯಿತು. ಆ ದಿನ ಬಂದೇ ಬಿಟ್ಟಿತು.

ಹೆಂಗೆಳೆಯರ ಓಡಾಟ, ಓಲಗದವರ ತಾಳಮೇಳ, ಹುಡುಗರ ಚೆಲ್ಲಾಟ, ದೊಡ್ಡವರ ಆದೇಶ, ಪುರೋಹಿರ ಮಂತ್ರ. ಅಡುಗೆಯವರ ಕಾಫಿ ತಿಂಡಿ ಊಟದ ಹಂಚಾಟ ಎಲ್ಲವೂ ಗಡಿಬಿಡಿಯಲ್ಲಿ. ಹೋಗೆಯ ಮುಂದೆ ಕುಳಿತು, "ಸುಲಗ್ನ ಸಾವಧಾನ, ಸುಮೂಹೂರ್ತ ಸಾವಧಾನ'' ಎಂದು ಪುರೋಹಿತರು ಹೇಳುತ್ತಿದ್ದರು. ತಾಳಮೇಳ ಜೋರಾಗಿ ಅವಸರದಲ್ಲಿ

ಗಂಡಿನಿಂದ ಹೆಣ್ಣಿನ ಕೊರಳಿಗೆ ತಾಳಿಕಟ್ಟಿಸಿದರು.

ಹೆಣ್ಣನ್ನು ಒಪ್ಪಿಸುವಾಗ ಹೆಣ್ಣಿನ ಕಡೆಯವರ ಅಳು ಕಂಡು ವಾಸುವಿಗೆ ಮುಜುಗರ ಆಯಿತು. "ಇಷ್ಟೊಂದು ಅಳುವವರು ಏಕೆ ಮದುವೆ ಮಾಡಬೇಕು" ಎಂದು ಕೇಳಿದರು.

"ಹಾಗಲ್ಲ ಅಳಿಯಂದರೆ, ಅದು ಕರುಳಿನ ಬಳ್ಳಿ."

"ಆಯಿತು, ಇನ್ನೂ ಸ್ವಲ್ಪ ದಿನ ಬೇಕಾದ್ರೂ ಇಲ್ಲೇ ಇರಲಿ." ವಾಸು ಅಮಾಯಕತ್ವದಿಂದ ಹೇಳಿದರೂ, ಅನಂತಯ್ಯನವರಿಗೆ ಹೆದರಿಕೆ ಆಗಿ ಅವರು ಹೆಂಗಸರ ಹತ್ತಿರ ಬಂದು,

"ಅಕ್ಕ ಏನಿದು ಸಾಕು, ಆಗಲೇ ಅಳಿಯಂದಿರಿಗೆ ಕೋಪ ಬಂದಿದೆ. ಅತ್ತದ್ದು ಸಾಕು, ಏಳಿ ಮುಂದಿನ ಕಾರ್ಯ ನೋಡಿ. ಕಾವೇರಿ ನೀನು ಅವರ ಜೊತೆ ಸೇರಿಕೊಂಡು ಅಳ್ತಾ ಕುಳಿತರೆ, ಮುಂದಿನ ಕೆಲ್ಸ ಯಾರು ಮಾಡ್ತಾರೆ" ಎಂದು ಗದರಿಸಿದಾಗ, ಆಟೋಮೇಟಿಕ್ ಆಗಿ ಎಲ್ಲರ ಅಳು ಬತ್ತಿ ಹೋಯಿತು. ಮಾಲಿನಿಯ ಮಡಿಲನ್ನು ತುಂಬಿ ಗಂಡನ ಮನೆಗೆ ಕಳುಹಿಸಿಕೊಟ್ಟರು.

'ರಾಗಸಂಗಮ'

ಲಾಟರಿ ಡ್ರಾ – ೧೧ರ ವಿಜೇತರು



ನಳಿನಿ ಜಿ. ಭಟ್

ಮುಂಬಯಿ–400 027.

ವಾಸು ಊರಿಗೆ ಬಂದು ರಿಸಪ್ಷನ್ ಇಟ್ಟುಕೊಂಡು ಎಲ್ಲರಿಗೂ ಪಾರ್ಟಿ ಕೊಟ್ಟನು.

"ಏನು ಗುರು, ನಿನ್ನ ಹೆಂಡ್ತಿ ಆ ಸರಳಾಳಿಗಿಂತ ಚೆನ್ನಾಗಿದ್ದಾರೆ, ನೀನು ಲಕ್ಕಿ."

"ಲೋ ಸಿದ್ದಯ್ಯ, ಈಗ್ಯಾಕೋ ಆ ಸರಳಾಳ ಮಾತು. ವಾಸು ಲಕ್ಕಿ. ಎಲ್ಲಿಗಪ್ಪ ಹನಿಮೂನ್." ಮಂಜು ಕೇಳಿದ.

"ಕೊಡೈಕೆನಾಲ್‌ಗೆ ಹೋಗಬೇಕೂಂತ ಇದ್ದೇನೆ."

"ಲೋ ಸುಮ್ಮನೆ ಜರ್ನಿಯಿಂದ ಸುತ್ತಿ ಸುಸ್ತಾಗ್ತಿಯಾ, ನಾನೊಂದು ಸಲಹೆ ಕೊಡ್ತೀನಿ ಕೇಳ್ತಿಯಾ?" ಕೀಟಲೆ ಕಿಟ್ಟಿ ಹೇಳಿದ.

"ಹೇಳು ಏನದು?" ಎಲ್ಲರೂ ಕೇಳಿದರು.

"ಸಿಂಪಲ್, ಇಲ್ಲೇ ಒಂದು ಹೋಟೆಲ್‌ನಲ್ಲಿ ಒಂದು ವಾರ ರೂಂ ಮಾಡು. ಒಂದು ದಿನ ಕಳೆದ ಮೇಲೆ ಊಟ ಆಯಿತು ಮದರಾಸು ಬಂತು ಎಂದು ಮಲಗು. ಮಾರನೆ ದಿನ ಕೊಡೈಕೆನಾಲ್ ಮುಗಿಯಿತು. ಮಧುರೈ ಬಂತು ಎಂದು ಎದ್ದು ಇಲ್ಲೇ ದೇವಿ ದರ್ಶನ ಆಗ್ತಿದೆ ಎಂದು ಮತ್ತೆ ಇಬ್ಬರೂ ಮಲಗಿ. ಆಗ ನೋಡಪ್ಪ ರೂಮಿನಲ್ಲೆ ಮಂಚದ ಮೇಲೇನೇ ಎಲ್ಲ." ಕೀಟಲೆ ಕಿಟ್ಟಿ ಹೇಳಿದಾಗ ಎಲ್ಲರೂ ಗೊಳ್ಳೆಂದು ನಕ್ಕರು.

"ಅಷ್ಟಿಲ್ಲದೆ ನಿನ್ನ ಕೀಟಲೆ ಕಿಟ್ಟಿ ಅನ್ತಾರಾ." ವಾಸು ಕೇಳಿದ.

"ಕಿಟ್ಟಿ ಹೇಳಿದ್ದು ದಿಟ. ಯಾವ ಊರಿಗೆ ಹೋದರೂ ನಿಮ್ಮ ಕೆಲ್ಸ ಒಂದೇ ತಾನೆ ಹಾಗಿರಬೇಕಾದ್ರೆ ಸುಮ್ನೆ ಸುತ್ತಿ ಸುಸ್ತು ಯಾಕೆ ಮಾಡ್ಕೋಬೇಕು." ರಾಮು ಕೇಳಿದ.

ಸ್ನೇಹಿತರ ಕೀಟಲೆಯಿಂದ ವಾಸುವಿಗೆ ಆನಂದ, ಮೈ ರೋಮಾಂಚನವಾಯಿತು. ಮಾಲಿನಿಯ ಜೊತೆಗೂಡಿ ಅವನು ಊಟಿಗೆ ಹೋಗಿಬಂದನು. ಅನಂತರ ನೆಂಟರ ಮನೆ ಹೋಗಿ ಬರುವುದಾಯಿತು. ಮಾಲಿನಿ ಜೊತೆ ಒಮ್ಮೆ ಹಳ್ಳಿಗೆ ಸಹ ಹೋಗಿ ಬಂದನು. ಅನಂತಯ್ಯನ ಮನೆಗೂ ತನ್ನ ಮಾವನ ಮನೆಗೂ ಹೋಗಿ ಬಂದನು. ರಜ ಕಳೆಯಿತು ವಾಸು ಡ್ಯೂಟಿಗೆ ಜಾಯಿನ್ ಆದನು.

* * * * *

"ಮಿ. ವಾಸು ಎಲ್ಲಿ ಹೋಗ್ತಿದ್ದೀರಾ?" ಮೋಹನರಾವ್, ಸಿದ್ದಯ್ಯ, ಸುಬ್ಬೇಗೌಡ ಮೊದಲಾದವರು ಕೇಳಿದರು.

"ಇನ್ನೆಲ್ಲಿಗೆ ಹೋಗಲಿ, ಮನೆಗೆ ಹೋಗ್ತಾ ಇದ್ದೀನಿ."

"ಇನ್ನೂ ಹನಿಮೂನ್‌ನ ಮೂಡ್ ಹೋಗಿಲ್ವಾ?" ಮೋಹನರಾವ್ ನಗುತ್ತ ಕೇಳಿದರು.

"ಹಾಗೇನಿಲ್ಲ, ಮಾರ್ಕೆಟಿಂಗ್ ಇದೆ ಎಂದಿದ್ದಳು ಅದಕ್ಕೆ..."

"ಇಂದು ಮಾರ್ಕೆಟಿಂಗ್, ನಾಳೆ ವಾಕಿಂಗ್, ನಾಡಿದ್ದು ಪಿಕ್ಚರ್ ಹೆಂಡತಿಯರ ಪಟ್ಟಿ ಇದ್ದೇ ಇರುತ್ತೆ, ಮೊದಲೆರಡು ದಿನ ಚೆನ್ನಾಗಿರುತ್ತೆ, ಜೇಬು ಕಾಲಿ ಆದಾಗ ಕೆಲ್ಸ ಇದೆ ಎಂದು ಹೇಳುತ್ತಿಯಾ." ಸಿದ್ದಯ್ಯ ಹೇಳಿದರು.

"ಅದ್ಸರಿ ಏನು ವಿಷಯ?" ವಾಸು ಕೇಳಿದನು.

"ಅಲ್ಲಾ ನೀನು ಯೂನಿಯನ್ ಸೆಕ್ರೆಟರಿ ಎನ್ನುವುದು ಮರೆತುಬಿಟ್ಟಿಯಾ, ಏನೋ ಮದುವೆ ಇದ್ದುದರಿಂದ ಹನಿಮೂನ್ ಟೂರ್‌ನಲ್ಲಿದ್ದುದರಿಂದ ಎರಡು ತಿಂಗಳಿಂದ ನಿನ್ನ ಮಾತನಾಡಿಸಿರಲಿಲ್ಲ. ಯೂನಿಯನ್‌ಗೆ ಬಂದು ಮೀಟಿಂಗ್‌ನಲ್ಲಿ ಪಾಲ್ಗೊಂಡು ಏನೇನು ಆಗಿದೆ, ಏನು ಮಾಡಬೇಕು ಎಂದು ಚರ್ಚಿಸಬೇಡವಾ?"

"ಮೋಹನರಾವ್ ನೀವಿದ್ದೀರಲ್ಲ, ನೀವೆಲ್ಲ ಹೇಳಿದ್ದಕ್ಕೆ ತಾನೆ ನಾನು ಸೆಕ್ರೆಟರಿಯಾಗಿದ್ದು."

"ನಾವಿದ್ದೇವೆ ವಾಸು, ಆದರೆ ಸಹಿಗಾದರೂ ಸೆಕ್ರೆಟರಿ ಬೇಕೇ ಬೇಕಲ್ಲವೆ."

"ಸಾರಿ ಫ್ರೆಂಡ್ ಕಮಾನ್ ಏನು ಮಾಡಬೇಕು ಹೇಳಿ." ವಾಸು ಅವರೊಡನೆ ಹೊರಟನು.

"ಹಾಗಿರ್ಬೇಕು ಸ್ಪಿರಿಟ್" ಎಂದು ಎಲ್ಲರೂ ಯೂನಿಯನ್ ಹೌಸ್‌ಗೆ ನಡೆದರು. ಅಲ್ಲಿಗೆ ಕಾಫಿ ತರಿಸಿದರು. ಏನು ಮಾಡಬೇಕೆಂದು ಮೀಟಿಂಗ್ ಮಾಡಿದರು, ಅನಂತರ ಇಸ್ಪೀಟ್ ಆಟ ಆಡತೊಡಗಿದರು. ವಾಸು ಹೊರಟಾಗ ರಾತ್ರಿಯಾಗಿತ್ತು. ಅದೇ ಅಭ್ಯಾಸ ಆಯಿತು.

ಐದು

ಮಾನವನ ನಿರ್ಮಲ ಹೃದಯದ ಮನಸ್ಸು ಕೆನೆ ಹಾಲಿನಷ್ಟೆ ರುಚಿಕರ. ಮಾನವನ

ದಾನವ ಮನಸ್ಸು ಚಂಡಮಾರುತದಷ್ಟೆ ಕ್ರೂರ ಹಾಗೂ ಭೀಕರ.

"ಮಗು ಮಾಲಿನಿ, ಏನ್ಮಾಡ್ತಿದ್ದೀಯಮ್ಮ?'' ಅನಂತಯ್ಯನವರು ಬಂದು ಕೇಳಿದರು.

"ಬಾ ಮಾವ, ಓದ್ತಾ ಇದ್ದೆ'' ಮಾಲಿನಿ ಹೇಳಿದಳು.

"ಕಥೆ ಪುಸ್ತಕ ಓದ್ತಾ ಇದ್ದೀಯಾ, ವಾಸು ಇನ್ನೂ ಬಂದಿಲ್ವಾ?''

"ಕಥೆ ಪುಸ್ತಕ ಅಲ್ಲ ಮಾವ, ಕಾಲೇಜು ಪುಸ್ತಕ.''

"ಹಾಯಾಗಿ ಗಂಡ ಹೆಂಡತಿ ಹಕ್ಕಿಯಾಗಿ ಓಡಾಡುವ ಈ ವಯಸ್ಸಿನಲ್ಲಿ ಮತ್ತೆ ಕಾಲೇಜು ಪುಸ್ತಕ ಏನಮ್ಮ?''

"ಎರಡು ದಿನ ಸುತ್ತಾಟದಲ್ಲಿ ಸುಸ್ತಾಗಿ ಹೋಯಿತು ಅವರಿಗೆ. ಮನೇಲಿ ಒಬ್ಬಳೆ ಕುಳಿತುಕೊಂಡು ಏನ್ಮಾಡಲಿ ಮಾವ. ಪ್ರೈವೇಟ್ ನಲ್ಲಿ ಬಿ. ಎ. ಗೆ ಕಟ್ಟಿದ್ದೇನೆ.''



ಸಂಭಾವನೆ

ತಲೆಯಲ್ಲಿ ರೂಪುಗೊಂಡ
ಮನಸ್ಸಿನಲ್ಲಿ ಮೂಡಿದ
ಸಮ್ ಭಾವನೆಗಳ
ಪ್ರಕಟಣೆಯ ಪ್ರತಿಫಲ.

— ಅರುಣ್ ಆರ್.

ಮಾಲಿನಿಯ ಮಾತಿಗೆ ಮಾವನ ಕೆನೆ ಹಾಲಿನ ನಿರ್ಮಲ ಮನಸ್ಸಿಗೆ ಹುಳಿ ಬಿದ್ದಂತೆ ಆಯಿತು.

ಅತ್ತೆ ಮಾವರ ಆಕ್ಷೇಪಣೆ ಇಲ್ಲದೆ, ಕೊಂಕು ನುಡಿಗಳಿಲ್ಲದೆ ಅವಳದೇ ಆದ ಮನೆಯಲ್ಲಿ ಮಹಾರಾಣಿಯಾಗಿ ಮೆರೆಯಬಹುದು, ವಾಸುವೂ ಸಹ ಕೈ ತುಂಬ ಸಂಪಾದಿಸುತ್ತಾನೆ. ಹೆಂಡ್ತೀನಾ ಚೆನ್ನಾಗಿ ನೋಡ್ಕೋತಾನೆ ಎಂದುಕೊಂಡರೆ ಈಗ ಏನಾಗ್ತಿದೆ. ನಾಲ್ಕೈದು ಸಾರಿ ಬಂದರೂ ವಾಸು ಮನೆಯಲ್ಲಿ ಇರುತ್ತಿರಲಿಲ್ಲ, ಮಾಲಿನಿ ಒಬ್ಬಳೇ ಇರುವುದು ಕಂಡು ಅವರು ಹೆಚ್ಚಿಗೆ ಏನೂ ಕೇಳದೆ ಹೊರಟು ಹೋಗುತ್ತಿದ್ದರು. ಇವತ್ತಲ್ಲ ನಾಳೆ ಸರಿಯಾಗಿ ಬಿಡುತ್ತೆಂದು ಸುಮ್ಮನಿದ್ದರು. ಆದರೆ ಈಗ ಮಾಲಿನಿಯ ದುಃಖದ ಬೇಗೆಯನ್ನು ಮಾತಿನಲ್ಲೆ ಕಂಡುಕೊಂಡು, ಅವಳ ಶಿರವನ್ನು ಪ್ರೀತಿಯಿಂದ ನೇವರಿಸಿ,

"ಏನಾಯಿತು ಮಾಲಿನಿ, ವಾಸು ಕ್ಯಾರಕ್ಟರ್ ಹೇಗೆ? ನಿನ್ನ ಚೆನ್ನಾಗಿ ನೋಡಿಕೊಳ್ತಿಲ್ಲವೆ.'' ಕೇಳಿದರು.

ಮಾವನ ಮಾತಿಗೆ ಅವಳ ದುಃಖದ ಕಟ್ಟೆ ಕೋಡಿ ಬಿತ್ತು.

"ಏನು ಹೇಳಲಿ, ಅವರು ಮನೆಗೆ ಹೊತ್ತಾಗಿ ಬರುತ್ತಾರೆ. ಒಟ್ಟಿಗೆ ಊಟ ಮಾಡಿ ಎಷ್ಟೋ ದಿನ ಆಯಿತು. ಪಿಕ್ಚರ್ ಇಲ್ಲ, ವಾಕಿಂಗ್ ಇಲ್ಲ, ಮಾರ್ಕೆಟಿಂಗ್ ಇಲ್ಲ. ಆದರೆ ಕೈಗೆ ಹಣ ಕೊಟ್ಟು ಮನೆಗೆ ಬೇಕಾದ ಸಾಮಾನೆಲ್ಲ ತಂದು ಬಿಡು ಎಂದು ಹೇಳಿಬಿಡ್ತಾರೆ. ಯಾವಾಗಲೂ

ಕೆಲ್ಸ, ಕೆಲ್ಸ. ಅಲ್ಲದೆ ಯೂನಿಯನ್ ಸೆಕ್ರೆಟರಿ ಬೇರೆ. ಈಗ ಅವರಿಗೆ ಅದೇ ಹೆಂಡ್ತಿ ಸಂಸಾರ ಆಗಿಬಿಟ್ಟಿದೆ. ರಜಾ ದಿನ ಆದರೂ ಮನೇಲಿ ಇರಲ್ಲ. ಇದ್ದರೂ ಯಾರಾದ್ರೂ ಬಂದರೆ ಸಾಕು ಹೊರಟು ಬಿಡ್ತಾರೆ. ಯಾರ ಹತ್ತಿರ ಹೇಳಿಕೊಳಲಿ. ಅದಕ್ಕೆ ಬಿ. ಎ. ಗೆ ಕಟ್ಟಿದೆ'' ಎಂದು ಮಾಲಿನಿ ಹೇಳಿದಳು.

"ಸಮಾಧಾನ ತಂದ್ಕೊ ಮಗು, ಬೇರೆ ಯಾವ ದುಶ್ಚಟ ಇಲ್ಲ ಅಲ್ಲವೆ.''

"ನನಗೆ ಗೊತ್ತಿರೊ ಹಾಗೆ ಏನೂ ಕಾಣಿಸಲಿಲ್ಲ.''

"ಸದ್ಯ ಅಷ್ಟಕ್ಕೆ ಸಮಾಧಾನ ಮಾಡ್ಕೊ. ಕೆಲವರ ಮನಸತ್ವನೇ ಹಾಗೆ. ಏನ್ಮಾಡಕ್ಕಾಗುತ್ತೆ. ನಾನು ಬುದ್ಧಿ ಹೇಳ್ತೇನೆ. ನೀನೇನೂ ಯೋಚನೆ ಮಾಡ್ಬೇಡ'' ಎಂದು ಸಮಾಧಾನ ಮಾಡುತ್ತಿದ್ದರು.

ಮಾವನ ಜೊತೆ ವಾಸು ಹೆಚ್ಚು ಮಾತನಾಡ್ತಾನೇ ಇರುತ್ತಿರಲಿಲ್ಲ.

ಅನಂತಯ್ಯನವರಿಗೆ ಮಾಲಿನಿ ಎಂದರೆ ಪ್ರೀತಿ. ಅವರು ಊರಿಂದ ಬರುವಾಗಲೆಲ್ಲ ಕಾಯಿಪಲ್ಲೆ, ಉಪ್ಪಿನಕಾಯಿ, ಸೀರೆ, ರವಿಕೆ ಎಲ್ಲ ತರುತ್ತಿದ್ದರು. ಒಂದೆರಡು ದಿನ ಇದ್ದು ಊರಿಗೆ ಹೋಗುತ್ತಿದ್ದರು. ಮಾಲಿನಿಯನ್ನೂ ಆಗಾಗ್ಗೆ ಕರೆದೊಯ್ಯುತ್ತಿದ್ದರು.

"ಇದೆಲ್ಲ ಏಕೆ ತರುತ್ತೀರಿ ಮಾವ'' ಎಂದು ಮಾಲಿನಿ ಕೇಳಿದಾಗ ಅನಂತಯ್ಯನವರು ನಕ್ಕು,

"ನನಗೆ ತಾನೆ ಯಾರಿದ್ದಾರೆ'' ಎಂದು ಹೇಳುತ್ತಿದ್ದರು.

"ಅಡುಗೆ ಹೇಗಿದೆ?'' ಆ ದಿನ ಊಟ ಬಡಿಸುತ್ತ ಆಸೆಯಿಂದ ಕೇಳಿದಳು ಮಾಲಿನಿ.

"ಅಡುಗೆ ಹೇಗಿದೆ ಎಂದರೆ ನಿತ್ಯ ಮಾಡ್ತಿದ್ದೆಯಲ್ಲ ಹಾಗೇ ಇದೆ.'' ಊಟ ಮಾಡುತ್ತ ಹೇಳಿದ ವಾಸು.

"ಅಡುಗೆ ಚೆನ್ನಾಗಿದೆ. ಸಾರು ಅಮೃತ. ಆಹಾ ಈ ಪಲ್ಯ ತಿನ್ತಾ ಇದ್ದರೆ ಎಲ್ಲ ಖಾಲಿ ಮಾಡಬೇಕೆನ್ನಿಸುತ್ತೆ.'' ಮಾವ ಚಪ್ಪರಿಸಿಕೊಂಡು ಹೇಳುತ್ತಿದ್ದಾಗ ಮಾಲಿನಿ ಸಂತೋಷ ಪಟ್ಟರೂ, ಅದೇ ತನ್ನ ಗಂಡ ತನ್ನ ಅಡುಗೆಯನ್ನು ಹೊಗಳಿದ್ದರೆ ತನ್ನ ಶ್ರಮ ಎಲ್ಲ ಸಾರ್ಥಕವಾಗಿ ಹೊಸ ಹುರುಪು ಬರುತ್ತಿತ್ತು. ಆದರೆ ಗಂಡ ಯಾವ ಪ್ರಕ್ರಿಯೆ ತೋರದ್ದು ಅವಳಿಗೆ ನಿರಾಸೆಯಾಗಿತ್ತು.

"ಮಾವನೇ ವಾಸಿ ನನ್ನ ಅಡುಗೇನ ಹೇಗೆ ಹೊಗಳ್ತಾರೆ ಗೊತ್ತಾ.'' ಹೆಂಡ್ತಿ ಹೇಳಿದ್ದು ಕೇಳಿದ ವಾಸು, ಕೂಡಲೇ ಪ್ಲೇಟ್ ಚೇಂಜ್ ಮಾಡಿ, "ಹ್ಞಾ ಹೌದಾ, ನಿನ್ನ ಅಡುಗೆ ನಳಪಾಕ ಅಮೃತ.'' ಹೇಳಿದ.

"ಸಾಕು ಈ ಸಿನಿಮಾ ಡೈಲಾಗ್. ಅತ್ತೂ ಕರೆದು ಔತಣಕ್ಕೆ ಕರೆಯಿಸಿಕೊಂಡಂತೆ.''

"ಅಬ್ಬ, ಆಗಲೇ ಕೋಪ ಬಂದುಬಿಡ್ತಾ ನನ್ನ ಚಿನ್ನ.'' ವಾಸು ನಗತೊಡಗಿದನು.

"ನಗ್ತಾ ಇದ್ದೀರಲ್ಲ, ಎಲ್ಲ ನಿಮ್ಗೆ ಹುಡುಗಾಟ.''

"ಜೀವಿತವೇ ಒಂದು ಆಟ.''

"ಅಂದರೆ ನೀವು ಹೀಗೆ ಇರ್ತೀರಾ, ಬೇಗ ಮನೆಗೆ ಬರಲ್ವಾ.''

ವಾಸು ಊಟ ಮಾಡಿ ಎದ್ದು ಕೈ ತೊಳೆದುಕೊಂಡು,

"ಚೆನ್ನ, ಇನ್ನು ಸ್ವಲ್ಪ ದಿನ ತಡ್ಕೊ. ಈಗ ಪ್ರೆಸಿಡೆಂಟಿಗೆ ಎಲೆಕ್ಷನ್ ನಡೆಯುತ್ತಿದೆ. ಅದು ಕಳೆಯಲಿ.''

"ಎಲೆಕ್ಟ್ ಆಗಿಯೇ ಎಲ್ಲರ ಸೇವೆ ಮಾಡ್ಬೇಕಾ.''

"ಒಂದು ಪದವಿ ಇದ್ದರೆ ಅದಕ್ಕೊಂದು ಬೆಲೆ ನೆಲೆ. ಅಂತಹ ಒಂದು ಪದವಿ ನಿನ್ನ ಗಂಡನಿಗೆ ಬಂದರೆ ನಿನಗೆ ಇಷ್ಟವಿಲ್ಲವಾ?''

"ಇಷ್ಟ ಇದೆ. ಆದರೆ ಇಷ್ಟು ದಿನ ನೀವು ಸೇವೆ ಮಾಡಿದ್ದು ಸಾಕು. ಈ ಸಾರಿ ಅದನ್ನು ಬೇರೆಯವರಿಗೆ ಬಿಡಿ.''

"ಆಹಾ ಏನು ಬುದ್ಧಿ ನಿನ್ನದು. ನಿನ್ನ ಬುದ್ಧಿಗಿಷ್ಟು'' ವಾಸು ಕೋಪದಿಂದ ಹೇಳಿದಾಗ ಮಾಲಿನಿ ಮುಖ ಮುದುಡಿತು.

ವಾಸು ಕೂಡಲೇ ಅವಳನ್ನು ಹತ್ತಿರ ಕ್ಕೆಳೆದುಕೊಂಡು ರಮಿಸುತ್ತ "ಕೋಪ ಬಂತಾ ಚೆನ್ನ.'' ಕೇಳಿದನು.

"ಬರದೇ ಇನ್ನೇನು, ಎಲ್ಲರ ಸೇವೆ ಮಾಡ್ತೀರಾ, ನನ್ನ ಆಸೆಯನ್ನು ತೀರಿಸಲ್ಲ. ನನ್ನ ಮಾತು ಎಂದಾದರೂ ಕೇಳಿದ್ದೀರಾ.'''

"ನಿನ್ನ ಮಾತು ಕೇಳ್ತಿನಿ. ನಿನ್ನ ಆಸೆ ತೀರಿಸ್ತೇನೆ.'' ವಾಸು ಹೇಳಿದಾಗ ಮಾಲಿನಿ ಮುಖ ಮೊರದಗಲವಾಯಿತು.

"ಹಾಗಾದ್ರೆ ನಾವಿಬ್ಬರೇ ಸೇರಿ ಒಂದು ಯೂನಿಯನ್ ಕಟ್ಕೋಣ. ನೀವೇ ಪ್ರೆಸಿಡೆಂಟ್, ನಾನೇ ಸೆಕ್ರೆಟರಿ.''



ಒಳ್ಳೇ ಹೆಂಡತಿ ಗಂಡನ ಕಿರೀಟವಿದ್ದಂತೆ.

— ಮಹಾಭಾರತ

ಆಟವಿಲ್ಲದ ದೇಹ ಹತ್ತಿ ಹಣ್ಣಿನಂತೆ.

— ರಾಘವೇಂದ್ರ ಸ್ವಾಮೀಜಿ

ದೊಡ್ಡವರನ್ನು ದೊಡ್ಡವರೆಂದು ಒಪ್ಪಿಕೊಳ್ಳುವುದರಲ್ಲಿ, ಹೆಚ್ಚಿನವರ ಕರ್ತವ್ಯ ಮುಗಿಯುತ್ತದೆ.

— ಶಿವರಾಮ ಕಾರಂತ

ಒಂದು ಗ್ರಂಥವನ್ನು ನಾಶಪಡಿಸುವುದೆಂದರೆ, ಒಬ್ಬ ಸಜ್ಜನ ಮನುಷ್ಯನನ್ನು ಕೊಂದಂತೆ.

— ಜಾನ್ ಮಿಲ್ಟನ್

ಅಂಕೆಯಲ್ಲಿದ್ದ ಹೆಣ್ಣು, ಮಜ್ಜಿಗೆಯಲ್ಲಿದ್ದ ಬೆಣ್ಣೆ, ಪಂಡಿತರಲ್ಲಿದ್ದ ಸಹವಾಸ, ಇವು ಎಂದೆಂದಿಗೂ ಕೆಡುವುದಿಲ್ಲ.

—ಮಹಾಭಾರತ

ಸಂಗ್ರಹ : **ಬಿ. ಜೆ. ಗಾಣಿಗೇರ**

"ಗುಡ್, ಟ್ರೆಷರರ್ ಪೋಸ್ಟ್ ಬೇಡ್ವಾ.''

"ನೀವು ಕೊಟ್ಟರೆ ಅದನ್ನೂ ಮಾಡ್ತೀನಿ.''

"ಅದ್ಸರಿ. ನಾವು ಯೂನಿಯನ್ ಕಟ್ಟಿಕೊಂಡು ಯಾರ ವಿರುದ್ಧ ಹೋರಾಡಬೇಕು?''

"ಯಾಕೆ ಹೋರಾಡಬೇಕು. ನನ್ನ ಸೇವೆ ನೀವು ಮಾಡಿ, ನಿಮ್ಮ ಸೇವೆ ನಾನು ಮಾಡ್ತೀನಿ. ನಾವಿಬ್ಬರೂ ಒಂದಾಗಿ ಹೊಸ ಕೆಲ್ಸ ಮಾಡೋಣ. ಅಲ್ದೆ ಜಗಳ ಆಡಕ್ಕೆ ಕಾರಣ ಸಿಗದೇ ಇರಲ್ಲ. ಇದೊಂದು ತರಹ ಹೊಸ ಯೂನಿಯನ್.'' ಉತ್ಸಾಹದಿಂದ ಹೇಳಿದಳು ಮಾಲಿನಿ.

"ಗುಡ್, ಆಮೇಲೆ?''

"ಆಮೇಲೆ ಏನು, ನೀವು ನಾನು ಜೊತೆಯಾಗಿ ಸುತ್ತಾಡೋಣ. ನೀವು ಆಫೀಸರ್ ಆಗಬೇಕು. ನಾನು ಬಿ. ಎ. ಮುಗಿಸಿ ಕೆಲಸಕ್ಕೆ ಸೇರಬೇಕು. ಮನೆ ಕಟ್ಟಬೇಕು."

"ಸ್ಟಾಪ್ ಸ್ಟಾಪ್. ಯೂನಿಯನ್ ಕಟ್ತೀನಿ ಎಂದು ಹೋಗಿ ಆಗಲೇ ಮನೆ ಕಟ್ಟಕ್ಕೆ ಹೋಗ್ತಿದ್ದೀಯಲ್ಲ" ಎಂದು ನಗತೊಡಗಿದ ವಾಸು. ಅಷ್ಟೇ ಮಾಲಿನಿಯ ಮುಖ ದಪ್ಪ ಆಯಿತು.

"ಹೌದೂರೀ, ನಾನು ಕನಸಿನ ಮನೆ ಕಟ್ಟಿದೆ. ಕಾರಣ ನಿಜ ಜೀವನದಲ್ಲಿ ನನಗೆ ಏನೂ ಆಗಿಲ್ಲ. ಗಂಡನೊಡನಾಟ ಇಲ್ಲ. ಮದುವೆಯ ಮೊದಲೆರಡು ದಿನ ಬಿಟ್ಟರೆ ಅನಂತರ ನನ್ನ ಮಾರ್ಕೆಟಿಗಾಗಲಿ, ಪಿಕ್ಚರ್‌ಗಾಗಲಿ, ಪಾರ್ಕ್‌ಗಾಗಲಿ, ಕರ್‍ಕೊಂಡು ಹೋಗಿದ್ದೀರಾ. ಸರಿಯಾಗಿ ನನ್ನ ಜೊತೆ ಮಾತನಾಡಿದ್ದೀರಾ. ನಾನೊಂದು ಯಂತ್ರ." ಅಳತೊಡಗಿದಳು.

"ಬೇಡ ಚಿನ್ನ, ನೀನು ಜಗಳ ಆಡು ನಾನು ಬೇಡ ಎನ್ನಲ್ಲ. ಆದರೆ ನಿನ್ನ ಕಣ್ಣಲ್ಲಿ ನೀರು ಬಂದರೆ ನನಗೆ ನೋಡಕ್ಕಾಗಲ್ಲ, ಸಹಿಸಲ್ಲ."

"ಹಾಗಾದ್ರೆ ನಾನು ಹೇಳಿದ ಹಾಗೆ ಕೇಳಿ."

"ಹೇಳು ಚಿನ್ನ."

"ನೀವು ಈ ಓಡಾಟ ನಿಲ್ಲಿಸಿ, ಡಿಪಾರ್ಟ್‌ಮೆಂಟ್ ಪರೀಕ್ಷೆಗೆ ಕುಳಿತು ಪಾಸು ಮಾಡಿ. ಆಫೀಸರ್ ಆಗಿ."

"ಆಫೀಸರ್ ಆಗೋದೆ ಜೀವನದ ಮುಖ್ಯ ಗುರಿ ಏನು?"

"ನಮ್ಮಂತಹ ಮಧ್ಯಮ ದರ್ಜೆಯವರು ಇನ್ನೇನು ತಾನೇ ಬಯಸ್ತಾರೆ. ಮಿನಿಸ್ಟರಾಗುವುದಿಲ್ಲ, ಪ್ರೆಸಿಡೆಂಟ್‌ಗೇರುವುದಿಲ್ಲ. ಕೊನೆಯ ಪಕ್ಷ ಒಬ್ಬ ಆಫೀಸರ್ ಆದರೂ ಆಗಬೇಡವೆ."

"ಓಕೆ ಮಾಲಿನಿ, ನೀನು ಹೇಳಿದ ಹಾಗೆ ಆಗಲಿ. ನಾನು ಡಿಪಾರ್ಟ್‌ಮೆಂಟ್ ಎಗ್ಸಾಮ್ ತಗೊಳ್ತೀನಿ. ನೀನು ಹೇಳಿದ ಹಾಗೆ ಟ್ರೈ ಮಾಡ್ತೀನಿ. ಆಫೀಸರ್ ಆಗೋದು ಬಿಡೋದು ನಮ್ಮ ಕೈಲಿ ಇದೆಯಾ."

"ಕಷ್ಟ ಪಟ್ಟರೆ ಫಲ ಇದ್ದೇ ಇರುತ್ತೆ. ಅದು ಬಿಟ್ಟು ಅಲಾಲ್ ಟೋಪಿ ಆದರೆ ಆಯುಸ್ಸು ಕಳೆಯುತ್ತೆ ಅಷ್ಟೇ. ನಾಳೆಯಿಂದ ಆಫೀಸ್ ಬಿಟ್ಟ ಕೂಡಲೆ ಮನೆಗೆ ಬರಬೇಕು."

"ಚಿನ್ನ ಸ್ವಲ್ಪ ಸ್ವಲ್ಪ ದಿನ, ನಿಧಾನವಾಗಿ ಬೇಗ ಬರ್ತೀನಿ. ಹಾಗೆ ಫ್ರೆಂಡ್ಸ್ ಸರ್ಕಲ್ ಕಡಿಮೆ ಮಾಡಿಕೊಳ್ತೇನೆ" ಎಂದು ವಾಸು ಹೇಳಿದನು.

"ಇದೀಗ ನೀವು ನನ್ನ ಮೆಚ್ಚಿನ ರಾಜ" ಎಂದು ಅವನನ್ನಪ್ಪಿ ಮುದ್ದಿಸಿದಳು..

* * * * *

ಅನಂತಯ್ಯನವರು ಕೋರ್ಟ್ ಮುಗಿಸಿಕೊಂಡು ಕಕ್ಷಿದಾರರಿಗೆ ಅಡ್ಜರ್ನ್ ಡೇಟ್ಸ್‌ಗಳನ್ನು ತಿಳಿಸಿ ತಮ್ಮ ಫೀಸ್‌ಗಳನ್ನು ತೆಗೆದುಕೊಂಡು ಮನೆಗೆ ಬಂದವರು,

"ಕಾವೇರಿ, ನಾನು ಮಾಲಿನಿ ಮನೆಗೆ ಹೋಗಿ ಬರ್ತೇನೆ." ಹೇಳಿದರು.

"ಏನು ವಿಷ್ಯ ಕಾಗದ ಬರೆದಿದ್ದಾಳಾ ಮಾಲಿನಿ." ಕಾವೇರಮ್ಮ ಕೇಳಿದರು.

"ಇವತ್ತು ಅವಳ ಬಿ. ಎ. ರಿಸಲ್ಟ್ ಬಂದಿದೆ. ಅವಳು ಸೆಕೆಂಡ್ ಕ್ಲಾಸ್‌ನಲ್ಲಿ ಪಾಸಾಗಿದ್ದಾಳೆ."

"ಹೌದೇನ್ರಿ, ಒಳ್ಳೆ ಗಟ್ಟಿಗಳು ಅವಳು. ಹಿಡಿದ ಹಟ ಸಾಧಿಸ್ತಾಳೆ. ಹೋಗಿ ಸ್ವೀಟ್ ಕೊಟ್ಟು ಬನ್ನಿ. ಬಂದರೆ ಕರ್‍ಕೊಂಡು ಬನ್ನಿ."

*　　　*

*　　　*　　　*

"ಬನ್ನಿ ಮಾವ, ನಾನು ಪಾಸಾದೆ."

"ಬರೀ ಪಾಸ್ ಅಲ್ಲ, ಸೆಕೆಂಡ್ ಕ್ಲಾಸ್ ಎನ್ನು."

"ಎಲ್ಲ ನಿಮ್ಮ ಆಶೀರ್ವಾದ, ಸಹಕಾರ ಮಾವ."

"ನನ್ನದೇನು ನಿನ್ನ ಪರಿಶ್ರಮ. ಎಲ್ಲಿ ವಾಸು?"

"ಮುಖ ತೊಳ್ಕೊಳ್ತಾ ಇದ್ದಾರೆ, ಬರ್‍ತಾರೆ."

"ಅಂದ ಹಾಗೆ ಮೊದಲಿನ ಹಾಗೆ ಇಲ್ಲ ತಾನೆ."

"ಇಲ್ಲ ಮಾವ ಸ್ವಲ್ಪ ಸುಧಾರಿಸಿ ದ್ದಾರೆ."



"ನಾನು ನನ್ನ ಮಗುವಿನ ಉಗುರು ಕಚ್ಚುವ ದುರಭ್ಯಾಸವನ್ನು ಕೊನೆಗೂ ಕೊನೆಗಾಣಿಸಿದೆ."

"ಅದು ಹೇಗೆ?"

"ನಾನು ಅವನ ಹಲ್ಲುಗಳನ್ನು ಕೀಳಿಸಿಬಿಟ್ಟೆ."

— ಮುರಳೀಧರ ಕೆ. ಎಸ್.

"ನಮಸ್ಕಾರ ಈಗ ಬಂದ್ರಾ." ವಾಸು ಕೇಳಿದ.

"ಹೂಂ ಕಣಯ್ಯಾ, ಮಾಲಿನಿ ಬಿ. ಎ. ಪಾಸ್ ಮಾಡಿಬಿಟ್ಟಳಲ್ಲ."

"ಎಲ್ಲ ನಿಮ್ಮ ಪ್ರೋತ್ಸಾಹ."

ಮಾಲಿನಿ ಕೊಬ್ಬರಿ ಮಿಠಾಯಿ, ಕೋಡುಬಳೆಯನ್ನು ಪ್ಲೇಟ್‌ನಲ್ಲಿ ತಂದಿಟ್ಟು "ತಗೊಳ್ಳಿ". ಹೇಳಿದಳು.

"ಅಂದ ಹಾಗೆ ನಿನ್ನ ಡಿಪಾರ್ಟ್‌ಮೆಂಟ್ ಎಗ್ಸಾಮ್ ಏನಾಯಿತು."

"ಎಗ್ಸಾಮ್ ಬರೆದಿದ್ದೇನೆ. ಇನ್ನೂ ರಿಸಲ್ಟ್ ಬಂದಿಲ್ಲ."

"ನೀನೂ ಪಾಸಾಗ್ತೀಯಾ. ನಿನಗೂ ಪ್ರಮೋಶನ್ ಬರುತ್ತೆ."

"ಎಲ್ಲ ನಿಮ್ಮ ಹಾರೈಕೆ."

ಅನಂತಯ್ಯ ಆ ದಿನ ಮಾತ್ರ ಅಲ್ಲಿದ್ದು ಬೆಳಗ್ಗೆ ಹೊರಟು ಬಿಟ್ಟರು.

ಆಫೀಸಿನಿಂದ ಬಂದ ವಾಸು.

"ಮಾಲಿ, ನಿನಗೊಂದು ಸರ್‌ಪ್ರೈಸ್." ಹೇಳಿದನು.

"ಏನು ಅದು ಸರ್‌ಪ್ರೈಸ್!"

"ನಾನು ಡಿಪಾರ್ಟ್‌ಮೆಂಟ್ ಎಗ್ಸಾಮ್‌ನಲ್ಲಿ ಪಾಸಾಗಿ ನನಗೆ ಪ್ರಮೋಶನ್ ಬಂದಿದೆ."

"ಹೌದೇನ್ರಿ, ನೋಡಿದ್ರಾ ನಾನು ಹೇಳಿದ್ದು ನಿಜ ಆಯಿತು. ಈಗಲಾದ್ರೂ ನಾನು ಹೇಳುವ ಮಾತು ಕೇಳ್ತಿರಾ ತಾನೆ."

"ನಾನು ಯಾವತ್ತು ತಾನೆ ನಿನ್ನ ಮಾತು ಕೇಳಿಲ್ಲ."

"ಇದರಿಂದ ನಿಮಗೆ ತೊಂದರೆಯಾಗಿರಬೇಕು. ನಿಮ್ಮ ಯೂನಿಯನ್ ಸೇವೆ, ಫ್ರೆಂಡ್ಸ ಜೊತೆ ಕಮ್ಮಿಯಾಗಿದ್ದಕ್ಕೆ."

"ಅದೊಂದು ಪ್ರಪಂಚ, ಇದೊಂದು ಪ್ರಪಂಚ."

"ನಿಮ್ಮ ಮುಂದೆ ಸುಖದ ಜೀವಿತ ಇಟ್ಕೊಂಡು ಅದನ್ನು ಗಮನಿಸದೆ ನೀವು ಹೇಗೆ ಕಾಲ ಕಳೆದಿರಿ."

"ನನ್ನ ಜೀವಿತ ನನ್ನ ಕಣ್ಣ ಮುಂದೆ ಇಲ್ಲ ಮಾಲಿನಿ, ನನ್ನ ಪಕ್ಕದಲ್ಲಿಯೇ ಇದೆ."

"ನಮ್ಮ ಮಾವನ ತರಹ ಲಾಯರ್ ಆಗಬೇಕಾಗಿತ್ತು ನೀವು. ಮಾತಿನಲ್ಲಿ ಜಾಣರು ಅಂದ ಹಾಗೆ ಶಿವನಗರದಲ್ಲಿ ಒಂದು ಸೈಟ್ ಇದೆಯಂತೆ ಹೋಗಿ ನೋಡೋಣ."

"ಯಾರು ಹೇಳಿದ್ದು?"

"ನಮ್ಮ ಮಾವ. ಅವರ ಕ್ಲೆಯಿಂಟ್ಸ್‌ದೇ ಅಂತೆ. ಮಾರಿಬಿಡ್ತಾ ಇದ್ದಾರಂತೆ ಅದ್ಕೆ ಮಾವ ನನಗೆ ಹೇಳಿದರು."

"ನಿಮ್ಮಾವ ಒಳ್ಳೇ ಗಟ್ಟಿಗರು. ಬಂದಾಗಲೆಲ್ಲ ಏನಾದ್ರೂ ಹೇಳ್ತಾರೆ."

"ಅವರು ಹೇಳಿದ ಹಾಗೆ ಕೇಳಿ ನಾನು ಬಿ. ಎ. ಪಾಸು ಮಾಡಿದ್ದು. ನಿಮ್ಗೆ ಪ್ರಮೋಶನ್ ಸಿಕ್ಕಿದ್ದು. ಅವರ ಮಾತು ಕೇಳಿದ್ದಕ್ಕೆ ನಮ್ಗೆ ಒಳ್ಳೆದಲ್ಲದೆ ಕೆಟ್ಟದೇನೂ ಆಗಿಲ್ಲವಲ್ಲ."

"ನಿಜ ನಾನು ಇಲ್ಲ ಅಂದನೆ. ಆದರೆ ಹಾಗೆ ಸಡನ್ ಆಗಿ ಸೈಟ್ ನೋಡಿ ತಗೊಳ್ಳೋಣ ಅಂದರೆ ಹಣ ಬೇಡ್ವೇನೆ."

"ನಮ್ಮಮ್ಮ ಕೊಟ್ಟಿದ್ದು ಸ್ವಲ್ಪ ಹಣ ನನ್ನಲ್ಲಿ ಇದೆ. ನೀವು ಸ್ವಲ್ಪ ಅಡ್ಜಸ್ಟ್ ಮಾಡಿ, ಸಾಲದೆ ಇದ್ದರೆ ಮಾವನ ಹತ್ತಿರ ಸಾಲ ತಗೊಂಡು ಅನಂತರ ತೀರಿಸೋಣ. ಎಣ್ಣೆ ಬಂದಾಗ ಕಣ್ಣು ಮುಚ್ಚಬಾರದು ಕಂಡ್ರಿ."

"ಸರಿ ಏನ್ಮಾಡ್ತೀಯೋ ಮಾಡು."

"ಮೊದಲು ಸ್ವೀಟ್ ತರ್‍ತೇನೆ."

"ನಾನು ಕೊಡಿಸಬೇಕು ಬಾ, ಹೊರಗೆ ಹೋಟೆಲ್‌ಗೆ ಹೋಗಿ ತಿನ್ನೋಣ." ವಾಸು ಹೇಳಿದಾಗ ಮಾಲಿನಿ ರೆಡಿ ಆಗಲಿಕ್ಕೆ ಹೊರಟಳು.

* * * * *

"ಏನಯ್ಯ ವಾಸು ಏಕೆ ಮಂಕಾಗಿ ಕುಳಿತ್ತಿದ್ದೀಯಾ, ಆಫೀಸ್‌ಗೆ ರಜನಾ ಇವತ್ತು?" ಅನಂತಯ್ಯ ಕೇಳ್ತಾ ಒಳಗೆ ಬಂದರು

"ಸಿ. ಎಲ್. ಬರೆದು ಕಳುಹಿಸಿದ್ದೇನೆ, ಬನ್ನಿ ಮಾವ ಒಳಗೆ. ಈಗ ಬರ್‍ತಾ ಇದ್ದೀರಾ?" ವಾಸು ಕೇಳಿದನು.

"ರಾತ್ರೀನೇ ಬಂದೆ. ಕ್ಲೈಂಟ್ ಮನೆಯಲ್ಲೇ ಉಳಿದೆ. ಊರಿಗೆ ಹೊರಡುವ ಮುಂಚೆ ನೋಡಿ ಹೋಗೋಣಾಂತ ಬಂದೆ."

"ಒಳ್ಳೆಯ ಸಮಯಕ್ಕೆ ಬಂದಿರಿ. ನನ್ಗೇನೂ ತೋಚ್ತಾನೇ ಇಲ್ಲ."

"ಯಾಕಪ್ಪಾ ಗಾಬರಿ, ಏನಾಯಿತು, ಎಲ್ಲಿ ಮಾಲಿನಿ ಕಾಣ್ತಾ ಇಲ್ಲ?" ಆಕಡೆ ಈಕಡೆ ನೋಡ್ತಾ ಕೇಳಿದರು ಅನಂತಯ್ಯ.

"ರಾತ್ರಿಯಿಂದ ವಾಕರಿಕೆ, ಹೊಟ್ಟೆತೊಳೆಸ್ತಾ ಇದೆ. ವಾಂತಿ ಬರೋ ಹಾಗೆ ಆಗುತ್ತೆ, ಸರಿಯಾಗಿ ವಾಂತಿ ಆಗಲ್ಲ."

"ಅಲ್ಲಪ್ಪಾ ಇಷ್ಟೆಲ್ಲ ಇಟ್ಕೊಂಡು, ಚೆನ್ನಾಗಿ ಮಾತಾಡ್ತಾ ಇದ್ದೀಯಲ್ಲ."

"ಅಯ್ಯೋ ನನಗಲ್ಲ ಮಾವ. ಮಾಲಿಗೆ, ಪಕ್ಕದ ಮನೆ ಪಂಕಜಮ್ಮನವರು ಬಂದಿದ್ದಾರೆ ಡಾಕ್ಟರನ್ನ ಕರ್ಕೊಂಡು ಬರ್ಬೇಕೋ ಬೇಡವೋ ಅಂತ ಕೇಳಕ್ಕೆ ನಿಂತ. ನೀವು ಬಂದ್ರಿ."

ಪಂಕಜಮ್ಮನವರು ರೂಮಿನಿಂದ ಬಂದಾಗ ವಾಸು ಅನಂತಯ್ಯ ಅವರ ಕಡೆ ನೋಡಿದರು.

'ರಾಗಸಂಗಮ'

ಲಾಟರಿ ಡ್ರಾ – ೧೧ಬರ ವಿಜೇತರು



ಬಿ. ಬಿ. ನಾಗರತ್ನಮ್ಮ

ಮೈಸೂರು.

"ಗಾಬರಿ ಆಗಬೇಡಿ, ಮಾಲಿನಿಗೆ ಯಾವ ಕಾಯಿಲೆಯೂ ಇಲ್ಲ, ಮಾವಿನಕಾಯಿ ತಂದ್ಕೊಡಿ. ನೀವು ತಂದೆ ಆಗ್ತಿದ್ದೀರಾ." ಹೇಳಿ ಹೊರಟು ಹೋದರು.

"ಒಳ್ಳೆ ಗಾಬರಿ ಮನುಷ್ಯ. ಮಾಲಿ, ಮಾಲಿನಿ" ಎನ್ನುತ್ತ ಅನಂತಯ್ಯನವರು ಕೂಗುತ್ತ ಒಳಗೆ ಹೊರಟರು. ವಾಸು ಹಿಂಬಾಲಿಸಿದನು.

* * * * *

"ಕಾವೇರಿ, ಕಾವೇರಿ." ಅನಂತಯ್ಯ ಕೂಗುತ್ತ ಬಂದರು.

"ಏನ್ರಿ, ಹಾಗೇಕೆ ಕೂಗ್ತಾ ಬರ್ತಾ ಇದ್ದೀರಿ, ಏನು ಸಮಾಚಾರ?" ಕಾವೇರಮ್ಮ ಹೊರಬಂದರು.

"ತಗೊಳ್ಳೆ ಸ್ವೀಟ್, ಎಲ್ಲಿ ಆ್ಹ ಅನ್ನು ನಾನೇ ತಿನಿಸ್ತೇನೆ." ಪೇಡಾ ತೆಗೆಯುತ್ತ ಹೇಳಿದರು ಅನಂತಯ್ಯ.

"ಸಾಕು ಹುಡುಗಾಟ, ಏನು ವಿಷ್ಯ ಹೇಳಿ?"

"ಏನಿರಬಹುದೆಂದು ನೀನೇ ಊಹಿಸು ನೋಡೋಣ."

"ಇನ್ನೇನಿರುತ್ತೆ ಕೇಸು ಗೆದ್ದಿರಬಹುದು."

"ಇಲ್ಲ ಇನ್ನೊಂದು ಚಾನ್ಸ್."

"ಯಾರ ಕೆಲ್ಸ ಏನೋ ಮಾಡಿಕೊಟ್ಟಿರಬಹುದು ಕೈ ತುಂಬ ಕಮಿಶನ್ ಬಂದಿರಬಹುದು."

"ನಿನಗೆ ಇದೇ ಯೋಚನೆ. ಇದು ಬಿಟ್ಟು ಬೇರೆ ಏನೂ ಯೋಚನೆ ಇಲ್ಲವಾ?"

"ಯಾಕಿಲ್ಲ, ಇದು ಬಿಟ್ಟರೆ ಮಕ್ಕಳಿಲ್ಲವಲ್ಲ ಎಂದು ಯೋಚನೆ."

"ಈಗ ಆ ಪ್ರಾಬ್ಲಮ್ ಸಾಲ್ವ್ ಆಗುತ್ತೆ."

"ಅಂದರೆ?"

"ನಮ್ಮ ಮನೆಯಲ್ಲಿ ಮಗು ಹುಟ್ಟುತ್ತೆ."

"ನಿಮ್ಮ ತಲೆಗಿಲೆ ಕೆಟ್ಟಿದೆಯೇ ಹೇಗೆ, ಏನೇನೋ ಮಾತನಾಡ್ತಾ ಇದ್ದೀರಲ್ಲ."

"ಹುಚ್ಚಿ, ನಮ್ಮ ಮಾಲಿನಿ ಬಸುರಿ ಕಣೆ, ಅವಳನ್ನು ಇಲ್ಲಿಗೆ ಸೀಮಂತಕ್ಕೆ, ಬಾಣಂತನಕ್ಕೆ ಕರ್ಕೊಂಡು ಬರ್ತೀನೆ. ನಮ್ಮ ಮನೆಯಲ್ಲಿ ಅವಳ ಮಗುವನ್ನು ಎತ್ತಿಕೊಂಡು ಆನಂದಪಟ್ಟು ತೊಟ್ಟಿಲಲ್ಲಿಟ್ಟು ತೂಗುವಿಯಂತೆ." ಅನಂತಯ್ಯ ಹೇಳಿದರು.

"ಚೆನ್ನಾಗಿದೇರಿ, ನಿನ್ನೆ ಮೊನ್ನೆ ಮದುವೆ ಆದವರು ಆಗಲೇ ಹೊಟ್ಟೆ ಬರಿಸಿಕೊಂಡಿದ್ದಾರೆ. ನನಗೋ ಮದುವೆ ಆಗಿ ಆಗಲೇ ಹದಿನಾರು ವರ್ಷಕ್ಕೂ ಹೆಚ್ಚಿಗೆ ಆಯಿತು. ಹೊಟ್ಟೆ ಬರೋ ಬದಲು ಬೊಜ್ಜು ಬರ್ತಾ ಇದೆ." ಕೊರಗಿದರು ಕಾವೇರಮ್ಮ.

"ಕೊರಗಬೇಡ್ವೆ ಕಾವೇರಿ, ಬೊಜ್ಜು ಬಂದರೆ ಮಕ್ಕಳಾಗಬಾರದೂಂತ ಏನೂ ಇಲ್ಲ. ಮಕ್ಕಳಾಗಲಿಲ್ಲ ಎಂದು ಇನ್ನೊಬ್ಬರ ಮಗುವನ್ನು ಎತ್ತಿ ಆನಂದ ಪಡಬಾರದೂಂತಾನೂ ಇಲ್ಲ."

"ಲಾ ಪಾಯಿಂಟ್ ಬೇಡರಿ, ನನಗೂ ಪಾಟೀ ಸವಾಲ್ ಮಾಡಲು ಬರುತ್ತೆ. ಕಂಡವರ ಮಗುವನ್ನು ಎತ್ತಿ ಆನಂದ ಪಡಬಹುದು. ಆದರೆ ನನ್ನ ಎದೆ ಹಾಲು ಕುಡಿಸುವಾಗ ಆಗುವ ಆನಂಧ, ಅನುಭವ ಆಗುತ್ತೇನು. ಅವರ ಅಮ್ಮ ಇದ್ದಾರೆ ಮಾಡ್ಕೋತಾರೆ."

"ಅಕ್ಕನಿಗೆ ಹುಶಾರಿಲ್ಲಾಂತ ನಿನಗೆ ಗೊತ್ತಲ್ಲ. ಅಲ್ಲದೆ ಮಾಲಿನಿ ಬೇರೆ ಮನೆ ಹುಡುಗಿ ಅಲ್ಲ. ಅವಳಿಗೆ ಸೀಮಂತ, ಬಾಣಂತನ ಮಾಡಿದರೆ ಆ ಪುಣ್ಯ ಬಲದಿಂದ ನಿನ್ನ ಹೊಟ್ಟೆಯಲ್ಲಿ ಒಂದು ಹೂ ಅರಳಬಹುದು, ನಿನ್ನ ಪುಣ್ಯ ನಿನಗೆ ಫಲ ಕೊಡುತ್ತೆ."

ಅನಂತಯ್ಯನ ಆ ಮಾತು ಆನೆಗೆ ಅಂಕುಶದಿಂದ ತಿವಿದ ಹಾಗಾಯಿತು. ಕಾವೇರಮ್ಮನವರ ಕೋಪ ಇಳಿಯಿತು. ನಿಜ ಎಂದುಕೊಂಡರು. "ಆಯಿತು, ಮಾಲಿನಿಯನ್ನು, ನಿಮ್ಮಕ್ಕನನ್ನು ಕರ್ಕೊಂಡು ಬನ್ನಿ" ಎಂದು ಗ್ರೀನ್ ಸಿಗ್ನಲ್ ಕೊಟ್ಟರು.

"ಇದೀಗ ನೀನು ನನ್ನ ಕಾವೇರಿ." ಹೊಗಳಿ ಹೊರಟರು ಅನಂತಯ್ಯ.

* * * * *

ಅನಂತಯ್ಯನವರು ಊರಿಗೆ ಹೋಗಿ,

"ಅಕ್ಕ ಬಾ ನನ್ನ ಮನೆಗೆ" ಎಂದು ಕರೆದರು.

"ಏನೋ ಅದು, ಹೀಗೆ ಕಾರಲ್ಲಿ ಬಂದು ಹೊರಡು ಎಂದು ಹೇಳ್ತಾ ಇದ್ದೀಯಲ್ಲ. ಏನು ವಿಷ್ಯ?" ಎಂದು ಶಾರದಮ್ಮ ಕೇಳಿದರು.

"ಎಲ್ಲ ಒಳ್ಳೇ ವಿಷ್ಯವೇ, ನೀನು ಕೆಲವೇ ದಿನದಲ್ಲಿ ಅಜ್ಜಿ ಆಗ್ತಾ ಇದ್ದೀಯಾ. ಮಾಲಿನಿ ಬಸುರಿ. ನನ್ನ ಮನೆಯಲ್ಲಿದ್ದಾಳೆ. ನಿನ್ನಳಿಯ ವಾಸು ಸಹ ಬಂದಿದ್ದಾನೆ. ಇವತ್ತು ಅವಳಿಗೆ ಸೀಮಂತ ಹೊರಡು" ಎಂದು ಆತುರ ಪಡಿಸಿದರು ಅನಂತಯ್ಯ.

ಶಾರದಮ್ಮನವರಿಗೆ ಮೈಯಲ್ಲಿ ಶಕ್ತಿ ಬಂದಂತೆ ಆಯಿತು. "ಮಾಲಿನಿ ಬಸುರಿ, ನಾನು


ಅಜ್ಜಿ.'' ಅವರಿಗೆ ಆನಂದವಾಯಿತು.

"ಅಲ್ಲ ಅನಂತು, ತವರು ಮನೆಯಲ್ಲಿ ಅಲ್ವೇನೋ ಸೀಮಂತ, ಬಾಣಂತನ. ಇಲ್ಲಿಗೆ ಕರ್‍ಕೊಂಡು ಬರಬಾರದಿತ್ತೆ. ಅವಳು ಕಾಗದ ಸಹ ಹಾಕಲಿಲ್ಲ ನೋಡು.''

"ಅಕ್ಕ ನೀನು ಹೇಳೋದು ನಿಜ. ಆದರೆ ಮಾಲಿನಿನಾ ಇಲ್ಲಿಗೆ ಕರ್‍ಕೊಂಡು ಬಂದರೆ ಮಾಡುವವರು ಯಾರು? ನಿನಗೆ ಇನ್ನೊಬ್ಬರು ಮಾಡಿ ಹಾಕಬೇಕಾಗಿದೆ. ನನ್ನ ಹತ್ತಿರ ಬಂದು ಇರು ಎಂದರೂ ನೀನು ಕೇಳಲಿಲ್ಲ. ನಿನ್ನ ಕೈಲಿ ಆಗದಿದ್ದರೂ ಆಸೆ ಮಾತ್ರ ಇದೆ. ತಾಯಿ ಹೃದಯ ಅಲ್ವೆ. ನಿನ್ನ ಮಗಳಿಗೆ ಅದೇನು ಮಾಡಬೇಕೂಂತ ಇದ್ದೀಯಾ ಅದನ್ನು ನನ್ನ ಮನೆಯಲ್ಲಿ ಮಾಡುವಂತೆ ಬಾ. ಅದು ಸಹ ನಿನ್ನ ಮನೆ. ಮಾಲಿನಿಗೆ ತವರುಮನೆ ಎಂದೇ ತಿಳ್ಕೊ. ಹೊರಡು'' ಎಂದು ಹೇಳಿ ಬ್ಯಾಗಿಗೆ ಎರಡು ಸೀರೆ ಉಳಿದ ಬಟ್ಟೆ ತುರುಕಿ ಮನೆಗೆ ಬೀಗ ಹಾಕಿ ಕರ್‍ಕೊಂಡು ಹೊರಟರು ಅನಂತಯ್ಯ.

* *

* * *



ಮನಸ್ಸು

ಸಂತೋಷ
ದುಃಖ
ಎರಡಕ್ಕೂ
ಬಗೆ
ಬಗೆಯಾಗಿ
ಸ್ಪಂದಿಸುವ
ರಬ್ಬರ್
ಬ್ಯಾಂಡ್.

– ಉಷಾ ಕೆ. ಭಟ್

ಸೀಮಂತ ಬಹಳ ಚೆನ್ನಾಗಿ ಮಾಡಿದರು ಅನಂತಯ್ಯ ಹಾಗೂ ಕಾವೇರಮ್ಮ.

ವಾಸು ಅತ್ತೆಯರಿಬ್ಬರಿಗೂ ಸೀರೆ ತಂದನು. ಮಾಲಿನಿಗೂ ಸೀರೆ ಕೊಡಿಸಿದನು. ಅನಂತಯ್ಯನವರಿಗೆ ಪಂಚೆ ಕೊಟ್ಟನು.

"ಇದೆಲ್ಲ ಏಕೆ ವಾಸು, ಕೊಡೋದು ಏನಿದ್ದರೂ, ನಿನ್ನ ಹೆಂಡ್ತಿಗೆ ತಂದು ಕೊಡು. ಇಂತಹ ಟೈಂನಲ್ಲಿ ಬಯಕೆ, ಆಸೆ ಹೆಚ್ಚಿರುತ್ತೆ.''

"ಆಸೆ, ಆಕಾಂಕ್ಷೆಗಳು ಇರುತ್ತೆ. ಆದರೆ ಹಿರಿಯರಿಗೆ ಕೊಟ್ಟು ಆಶೀರ್ವಾದ ಪಡೆಯೋದು ಸಂಪ್ರದಾಯ ಅಲ್ಲವೆ.''

"ಎಂತಹ ವಿನಯ ಆಯಿತು, ನಿನಗೆ ಸಂತೋಷ ಆಗೋ ಹಾಗಿದ್ದರೆ ಕೊಡಪ್ಪ'' ಎಂದು ಹೇಳಿ ತೆಗೆದುಕೊಂಡರು.

ಊಟಕ್ಕೆ, ಅರಸಿನ ಕುಂಕುಮಕ್ಕೆ ಮುತ್ತೈದೆಯರೆಲ್ಲ ಬಂದಿದ್ದರು. ಬಳೆ ತೊಡಿಸಿದರು, ಆರತಿ ಮಾಡಿ ಬಾಗಿನ ಹಂಚಿದರು.

ರೂಮಿಗೆ ಬಂದ ಹೆಂಡತಿಯನ್ನು ವಾಸು ಮೃದುವಾಗಿ ಅಪ್ಪಿ, "ಈಗ ನಿನ್ನ ನೋಡ್ತಿದ್ರೆ

ನೋಡ್ತಾನೇ ಇರಬೇಕೂಂತ ಅನ್ನಿಸುತ್ತೆ.''ವಾಸು ಹೇಳಿದಾಗ,

"ಶ್ಶಿ ಮೆಲ್ಲಗೆ, ಹಾಗೆ ನಿಮ್ಮ ಆಫಿಸರ್‌ಗೆ ಹೇಳಿ ಇಲ್ಲೇ ಆಫೀಸ್ ಓಪನ್ ಮಾಡಿಸಿಬಿಡಿ.''

"ಮಾಲಿನಿ ನನ್ನ ಜೊತೆ ಬಂದುಬಿಡು.''

"ಆಯಿತು. ಅಲ್ಲಿ ಬಂದರೆ ನೀವು ನನ್ನ ಸುಮ್ಮನೆ ಬಿಡ್ತೀರಾ, ಜಡೆ ಎಳೆಯೋದು, ತಬ್ಬಿಕೊಳ್ಳೊದು, ಏನೇನು ಮಾಡ್ತೀರಾ. ಡೆಲಿವರಿ ಆಗೋತನಕ ನಾನು ಎಲ್ಲಿಗೂ ಬರಲ್ಲ.''

"ಎಷ್ಟು ಕಲ್ಲು ಹೃದಯವೇ ನಿನ್ನದು ಮಾಲಿ, ನಿನ್ನ ಬಿಟ್ಟು ನಾನು ಒಂಟಿಯಾಗಿರುವುದಕ್ಕೆ ಕಷ್ಟ ಆಗುತ್ತೆ ಕಣೇ.'' ವಾಸು ಹೇಳಿದಾಗ ಮಾಲಿನಿ ಬೆಣ್ಣೆಯಂತೆ ಕರಗಿಬಿಟ್ಟಳು.

"ಹೌದುರೀ, ಇನ್ನೊಬ್ಬರಿಗೆ ನಮ್ಮಿಂದ ಏಕೆ ತೊಂದರೆ. ಊರಿಗೆ ಹೋಗೋಣ ತೀರ ಬಲವಂತ ಮಾಡಿದರೆ ಡೆಲಿವರಿ ಟೈಂಗೆ ಬರ್ತೇನೆ ಎಂದು ಹೇಳಿದರಾಯ್ತು.'' ಮಾಲಿನಿ ಹೇಳಿದಳು.

"ನನ್ನ ಅಭಿಪ್ರಾಯವೂ ಅದೇ ಆಗಿತ್ತು ಮಾಲಿ. ಆದರೆ ಈ ರೀತಿ ಹೇಳಿದೆ ಅಷ್ಟೇ.'' ವಾಸು ಹೇಳಿದನು.

ಮಾರನೆಯ ದಿನ ಮಾವ, ಅತ್ತೆ, ತಾಯಿಗೆ ಸಮಾಧಾನ ಹೇಳಿ ಒಪ್ಪಿಸಿ ಮಾಲಿನಿ ವಾಸು ಜೊತೆ ಊರಿಗೆ ಹೊರಟುಬಿಟ್ಟಳು.

"ನಾನು ಊರಿಗೆ ಹೋಗ್ತೇನೆ ಅನಂತು.''

ಮಗಳೇ ಊರಿಗೆ ಹೋದ ಮೇಲೆ ತನಗೇನು ಕೆಲ್ಸ ಎಂದು ಶಾರದಮ್ಮ ಹೇಳಿದಾಗ, ಅಕ್ಕನ ಹಟ ಕಂಡಿದ್ದ ಅನಂತಯ್ಯ ಶಾರದಮ್ಮನನ್ನು ಊರಿಗೆ ಕರ್ಕೊಂಡು ಬಂದು ಬಿಟ್ಟು ಬಂದರು.

ವಾರದಿಂದ ತುಂಬಿ ಗಲಗಲಾಂತ ಇದ್ದ ಮನೆ ಮತ್ತೆ ಮೌನ ಆವರಿಸಿದ್ದು ಕಂಡು ಅನಂತಯ್ಯ ನಿಟ್ಟುಸಿರು ಬಿಟ್ಟರು.

ಕಾವೇರಮ್ಮನವರ ಮನಸ್ಸು ಡೋಲಾಯಮಾನವಾಗಿತ್ತು. ಯಾವಾಗಲೋ ಒಂದು ಬೆಳಿಗ್ಗೆ ಹೋಗಿ ಮಧ್ಯಾಹ್ನಕ್ಕೆಲ್ಲ ಬಂದು ಬಿಡುತ್ತಿದ್ದ ಇವರು ಈಗ ಅಕ್ಕ ಅಕ್ಕ ಎಂದು ಆಗಾಗ್ಗೆ ಹಳ್ಳಿಗೆ ಹೋಗುತ್ತಿದ್ದದ್ದು, ಒಂದು ದಿನ ಇದ್ದು ಬರತ್ತಿದ್ದದ್ದು, ಅಕ್ಕನ ಮೇಲಿನ ಪ್ರೀತಿ ವಿಶ್ವಾಸ ಆಕೆಯ ಅಸಹಾಯಕತೆ ಕರುಣೆ ತೋರಿ ಸಹಾಯ ಮಾಡಲು ಇರಬಹುದೆಂದು ತಿಳಿದಿದ್ದರು. ಆದರೆ ಅಲ್ಲಿ ಅಕ್ಕನ ಮಗಳು ಮಾಲಿನಿ ಇದ್ದಾಳೆ ಎಂಬುದನ್ನು ಅವರು ಮರೆತಿದ್ದರು. ಅನಂತರ ಮಾಲಿನಿಯನ್ನು ಇಲ್ಲಿಗೆ ಕರ್ಕೊಂಡು ಬಂದು ಓದಿಸಿದ್ದು, ಆಗ ಅವಳ ಬಗ್ಗೆ ಅಕ್ಕರೆ ತೆಗೆದುಕೊಳ್ಳುತ್ತಿರುವುದು ನೋಡಿ ಅವರಲ್ಲಿ ಅಸಮಾಧಾನದ ಅಣು ಅಂಕುರವಾಗುತ್ತಿದಂತೆ ಮಾಲಿನಿಗೆ ಮದುವೆ ಆಗಿದ್ದು ಕಂಡು ಸದ್ಯ ಇನ್ನು ನೆಮ್ಮದಿಯಿಂದ ಇರಬಹುದೆಂದು ಕೊಳ್ಳುತ್ತಿದ್ದವರಿಗೆ ಗಂಡನ ಓಡಾಟ ಈಗ ಮಾಲಿನಿ ಕಡೆ ತಿರುಗಿದ್ದರಿಂದ ಈಗ ಅವಳು ಬಸುರಿ ಆಗಿ, ಇಲ್ಲಿಗೆ ಸೀಮಂತಕ್ಕೆ ಕರ್ಕೊಂಡು ಬಂದಾಗ ತಾನು ಬಸಿರಾಗದೆ ಸೀಮಂತ ಮಾಡಿಸಿಕೊಳ್ಳದೆ, ತನ್ನ ಮುಂದಿನ ಹುಡುಗಿಗೆ ಈ ಲಭ್ಯ ಆಗಿದ್ದು ಕಂಡು, ತನ್ನ ಯಜಮಾನರೇ ಬಹಳ ಸಂತೋಷದಿಂದ ಅವಳ ಶಿರವನ್ನು ನೇವರಿಸಿ, ಭುಜ ತಟ್ಟಿ ಬೆನ್ನು ಸವರಿ, ಓಡಾಡಿದ್ದು ಕಂಡು

ಎಲ್ಲೋ ಅಣುವಾಗಿದ್ದ ಸಂಶಯ ಮತ್ತೆ ಭುಗಿಲ್ ಎಂದು ಹೆಡೆ ಎತ್ತಿದ ಹಾವಾಯಿತು. ಆದರೆ ಅದಕ್ಕೆ ಆಧಾರ ಇಲ್ಲ. ಇವರ ವಯಸ್ಸು ಐವತ್ತರ ಹತ್ತಿರ ಅವಳದು ಇನ್ನೂ ಇಪ್ಪತ್ತೆರಡು. ಅಲ್ದೆ ನನ್ನನ್ನೇನೂ ಅವರು ದೂರ ಇಟ್ಟಿಲ್ಲ. ನನ್ನನ್ನು ಲೋಪ ಇದೆ ಎಂದು ಹಂಗಿಸಿಲ್ಲ. ವಿಶ್ವಾಸ ಇದೆ ಎಂದುಕೊಂಡರು. ಅವರ ಮನಸ್ಸು ತಿಳಿಯಾಗಲಿಲ್ಲ. ಅವರ ಮನಸ್ಸು ಕದಡಿದ ನೀರಾಗಿ ಹೋಯಿತು.

ಹೆಂಡತಿಯಲ್ಲಾದ ಮಾರ್ಪಾಟನ್ನು ಅನಂತಯ್ಯ ಗಮನಿಸಿದರು. ಅವರಿಗೆ ಆಶ್ಚರ್ಯ ಆಯಿತು. ಹೆಂಡತಿಯ ಮನಸ್ಸಿನಲ್ಲಿ ಮಗುವಿನ ಯೋಚನೆ ಇರಬಹುದು. ಮಾಲಿನಿಯ ಬಸಿರನ್ನು ಕಂಡು ಅವಳಲ್ಲಿ ಅಸೂಯೆ ಆಗಿರಬಹುದು. ಅದಕ್ಕೆ ಮುಖ ಊದಿಸಿಕೊಂಡಿದ್ದಾಳೆಂದುಕೊಂಡು ಹೆಂಡ್ತಿಯ ಮನಸ್ಸು ತಿಳಿಗೊಳಿಸುವ ಟೆಕ್ನಿಕ್ ಎಂದರೆ ಅವಳನ್ನು ಹೊಗಳುವುದು ಎಂದು ತಿಳಿದಿದ್ದ ಅನಂತಯ್ಯ ಹೆಂಡ್ತಿಯನ್ನು, ಆಕೆಯ ಕೆಲ್ಸವನ್ನು ಹೊಗಳಿದರು.

"ಸಾಕು, ಸಾಕು ಈ ನಾಟಕ, ಬೂಟಾಟಿಕೆ ನನ್ನ ಹತ್ತಿರ ಬೇಡ. ನಿಮ್ಮ ಕಕ್ಷಿಗಾರರ ಹತ್ತಿರ ಇಟ್ಕೊಳ್ಳಿ." ಕಾವೇರಿದ ಮನಸ್ಸಿನಿಂದ ಕಾವೇರಮ್ಮ ಹೇಳಿದರು.

"ಅರೆ ಇವತ್ತೇನಾಯಿತು ನನ್ನ ಚಿನ್ನ, ಪಕ್ಕದ ಮನೆ ಪಂಕಜಮ್ಮ ಏನಾದರೂ ಅಂದರಾ ಏನು?" ಅನಂತಯ್ಯ ಕೇಳಿದರು.

"ನಮ್ಮ ವಸ್ತುವೇ ಸರಿ ಇಲ್ಲದಿರುವಾಗ. ಬೇರೆಯವರು ಅನ್ನದೆ ಹಾದಿ ಹೋಗಲ್ತಾರೇನು?"

"ಕಾವೇರು ಅಸಲು ನಿನಗೇನಾಗಿದೆ?"

"ಏನಾಗಿಲ್ಲ ಎಂದು ಹೇಳಲಿ, ಇದ್ದಕಿದಂತೆ ಆ ಹುಡ್ಗಿ ಮೇಲೆ ಇಷ್ಟೊಂದು ಆಸಕ್ತಿ ಹೇಗೆ ಹುಟ್ಟಿತು?" ಬಾಂಬ್ ಸಿಡಿಸಿದರು ಕಾವೇರಮ್ಮ.

"ಯಾವ ಹುಡ್ಗಿ ಬಗ್ಗೆ ನೀನು ಹೇಳ್ತಾ ಇರೊದು?"

"ಇನ್ಯಾರಿದ್ದಾರೆ, ಮಾಲಿನಿ ಬಗ್ಗೆ ಕೇಳ್ತಾ ಇರೊದು."



ಸಹಜವಾಗಿ ಸಿಕ್ಕಿದ್ದು ಹಾಲಿಗೆ ಸಮ.
ಬೇಡಿದ ಬಳಿಕ ದೊರೆತದ್ದು ನೀರಿಗೆ ಸಮ.
ಎಳೆದಾಟದಿಂದ ದೊರೆತದ್ದು ರಕ್ತಕ್ಕೆ ಸಮ.

—ಕಬೀರ್ ವಚನಾವಳಿ

ನಾವು ಎತ್ತರಕ್ಕೆ ಏರಿದ್ದೇವೆ. ಆಳಕ್ಕೆ ಇಳಿದಿದ್ದೇವೆ. ಹತ್ತಿರಕ್ಕೆ ಮಾತ್ರ ಬರಲಿಲ್ಲ.

—ಎಸ್. ವಿ. ಪರಮೇಶ್ವರ ಭಟ್ಟ

ಸಂಗಮದವರೆಗೆ ನದಿಯು ಉಪನದಿ. ಸಮುದ್ರವನ್ನು ಸೇರಿದ ಮೇಲಂತೂ ಎಲ್ಲ ಸಾಗರವೇ!

—ಎ. ಆರ್. ಕೃಷ್ಣಶಾಸ್ತ್ರಿ

ಉಪ್ಪರಿಗೆ ಮನೆಯವನಾದರೂ ಉಪ್ಪಿಲ್ಲದೆ ಆಗದು.

—ಗಾದೆ

ಸಂಗ್ರಹ : ಯು. ಕೆ. ರಾಮಕೃಷ್ಣರಾವ್

“ಕಾವೇರಿ ಏನೇ ನೀನು ಹೇಳ್ತಾ ಇರೋದು. ಅಲ್ಲ ಕಣೆ ಆ ಹುಡ್ಗಿಗೆ ಯಾರಿದ್ದಾರೆ, ತಂದೆ ಇಲ್ಲ, ಇರೋ ತಾಯಿ ರೋಗಿಷ್ಟೆ ನಮಗೆ ಮಕ್ಕಳಿದ್ದಿದ್ದರೆ ಈ ಪರಿಸ್ಥಿತಿಯಲ್ಲಿ ನಾವು ಏನು ಮಾಡ್ತಾ ಇದ್ವಿ. ಅದನ್ನೇ ಮಾಡಿದ್ದೇನೆ.''

“ಅಷ್ಟೇನಾ ಅಥವಾ...''

“ಕಾವೇರಿ ಏನಾಗಿದೆ ನಿನಗೆ. ನಿನ್ನ ಮೈಯಲ್ಲಿ ದೆವ್ವ ಹೊಕ್ಕಿದೆಯೇನು? ಅದೇನು ಕೇಳಬೇಕೆಂದಿದ್ದೀಯೋ ಕೇಳಿಬಿಡು'' ಎಂದು ಗುಡುಗಿದರು ಅನಂತಯ್ಯ.

ಕಾವೇರಮ್ಮನವರ ಬಾಯಿಗೆ ಬೀಗ ಬಿತ್ತು. ಗಂಡನ ನರಸಿಂಹ ಅವತಾರ ಕಂಡು ಅಯೋಮಯರಾದರು. ಅಷ್ಟಲ್ಲದೆ ಅವರ ಆರೋಪಕ್ಕೆ ಯಾವ ಸಾಕ್ಷಿಗಳು ಸಹ ಇರಲಿಲ್ಲ. ಇನ್ನೇನಾದ್ರೂ ಬಾಯಿಬಿಟ್ಟರೆ ಆ ಕೋಪದಲ್ಲಿ ನನ್ನ ಸಾಯಿಸಿದರೂ ಸಾಯಿಸಿಬಿಟ್ಟರೆ ಹೆದರಿ ಸುಮ್ಮನಾದರು.

“ಏಕೆ ಏನಾಯಿತು, ಅಷ್ಟೇನಾ ಅಥವಾ ಎಂದು ಹೇಳಿ ಏಕೆ ಸುಮ್ಮನಾದೆ. ಅದೇನಿದೆಯೋ ನಿನ್ನ ಮನಸ್ಸಿನಲ್ಲಿ ಬೊಗಳಿಬಿಡು.''

“ಏನಿಲ್ಲ ಬಿಡಿ, ಎಲ್ಲ ನನ್ನ ಕರ್ಮ.''

“ಏನು ನಿನ್ನ ಕರ್ಮ. ನಿಜ ಹೇಳದಿದ್ದರೆ ನಿನ್ನ ಬಿಡಲ್ಲ.''

ಕಾವೇರಮ್ಮನವರಿಗೆ ಹೆದರಿಕೆ ಆಯಿತು. ಆದರೂ ಅವರು “ಏನಿಲ್ಲ, ನಿಮ್ಮ ಇತ್ತೀಚಿನ ವರ್ತನೆ, ದುಂದು ವೆಚ್ಚ ಅದು ನೋಡಿ ನನಗೆ ಭಯ ಆಯಿತು. ಅದಕ್ಕೆ...''

“ಅಯ್ಯೋ ಹುಚ್ಚಿ, ಇಷ್ಟೇನಾ ನಿನ್ನ ಭಯ. ಅದಕ್ಕೆ ಈ ರೀತಿ ಪೀಠಿಕೆ ಹಾಕಿ ಇಲ್ಲದ್ದೆಲ್ಲ ತಲೆಗೆ ತುಂಬಿಕೊಂಡು ಕೇಳಿದ್ಯಾ? ನೋಡು ಕಾವೇರಿ, ನಮ್ಮ ಮನೆಗೆ ಮಾಲಿನಿ ಮಾತ್ರ ಬರಲಿಲ್ಲ. ಜೊತೆಯಲ್ಲಿ ಅದೃಷ್ಟಲಕ್ಷ್ಮೀನೂ ತಂದಳು. ಅವಳಿದ್ದಾಗ ನನಗೆ ಪ್ರಾಕ್ಟೀಸ್ ಹೆಚ್ಚಿತು, ಹೆಚ್ಚಿನ ಸಂಪಾದನೆ ಆಗ್ತಾ ಇದೆ. ಅದರಲ್ಲಿ ಒಂದಂಶ ಖರ್ಚು ಮಾಡಿದರೆ ನನ್ನ ಮನಸ್ಸಿಗೆ ತೃಪ್ತಿ ಆಗುತ್ತೆ ಅಷ್ಟೇ.'' ಅನಂತಯ್ಯನವರು ಹೇಳಿದರು.

“ಏನಾದರೂ ಮಾಡಿಕೊಳ್ಳಿ, ನಿಮ್ಮ ಸುಖವೇ ನನ್ನ ಸುಖ. ಆದರೆ ನಿಮ್ಮ ಸುಖದಲ್ಲಿ ನನ್ನ ಮಾತ್ರ ಮರೆಯಬೇಡಿ.''

“ಹುಚ್ಚಿ, ನೀನು ನನ್ನ ಜೀವನ ಸಂಗಾತಿ. ನನ್ನ ಭಾಗ್ಯಲಕ್ಷ್ಮಿ, ಈ ಮನೆಯ ಬೆಳಕು. ನಿನ್ನ ಬಿಟ್ಟರೆ ನನಗ್ಯಾನೆ ಯಾರಿದ್ದಾರೆ? ನನಗೆ ನೀನು ನಿನಗೆ ನಾನು'' ಎಂದು ಹೇಳಿ ಹೆಂಡ್ತಿಯನ್ನು ಅಪ್ಪಿಕೊಂಡರು ಅನಂತಯ್ಯ.

ಕಾವೇರಿದ್ದ ಕಾವೇರಮ್ಮನವರ ಮನಸ್ಸು ಕೊಡಗಿನ ಕಾವೇರಿ ನೀರು ಮೈ ಮೇಲೆ ಬಿದ್ದಾಗ ಆಗುವ ತಂಪು ಉಂಟಾಗಿ ಮನಸ್ಸಿಗೆ ಮುದ ನೀಡಿತು.


* * * * *

“ನಮ್ಮಮ್ಮ ಕಾಗದ ಬರೆಸಿದ್ದಾರೆ.'' ಮಾಲಿನಿ ಹೇಳಿದಳು.

“ಹೌದಾ ಆರೋಗ್ಯವಾಗಿದ್ದಾರ?'' ವಾಸು ಕೇಳಿದನು.

“ಆರೋಗ್ಯವಾಗಿದ್ದಾರಂತೆ.''

ವಾಸು ಶೂ ಬಿಚ್ಚಿ ಮುಖ ತೊಳೆದುಕೊಂಡು ಬಂದನು.



ಪ್ಲೇಟಿನಲ್ಲಿ ಖಾರ ತಂದಿಟ್ಟು, ನೀರು ಹಾಗೂ ಕಾಫಿ ತಂದಿಟ್ಟ ಮಾಲಿನಿ ಪಕ್ಕದಲ್ಲಿ ಕುಳಿತುಕೊಂಡಳು.

ವಾಸು ಖಾರವನ್ನು ಬಾಯಿಗೆ ಹಾಕಿಕೊಂಡು ಒಂದೊಂದೇ ಸಿಪ್ ಕಾಫಿ ಸವಿಯತೊಡಗಿದನು.

"ಏನ್ರಿ, ಮತ್ತೇನು ಬರೆದಿದ್ದಾರೆ ನಿಮ್ಮ ತಾಯಿ ಎಂದು ನೀವು ಕೇಳಲೇ ಇಲ್ಲ."

"ಕೇಳಕ್ಕೆ ಏನಿರುತ್ತೆ ಮಾಲಿನಿ, ಆರೋಗವಾಗಿದ್ದರೆಂದು ಹೇಳಿದೆಯಲ್ಲ, ಅಷ್ಟು ಸಾಕು ಮಿಕ್ಕ ವಿಷ್ಯ ನಿನಗೆ ತಾನೆ."

"ಮೊದಲ ಹೆರಿಗೆ ತವರುಮನೆಯಲ್ಲಿ ಆಗಬೇಕಾದ್ದು ಆಚಾರ. ಇಲ್ಲಿಗೆ ಬಂದು ಬಿಡು ಎಂದು ಕಾಗದ ಬರೆದಿದ್ದಾರೆ. ನಾವು ಯಾವತ್ತು ಹೋಗೋದು?"

ಕಾಫಿಯನ್ನು ಒಂದೇ ಸಲ ಕುಡಿದುಬಿಟ್ಟ ವಾಸು. ಅದುವರೆವಿಗೂ ಫಸ್ಟ್ ಕ್ಲಾಸ್ ಆಗಿದ್ದ ಕಾಫಿ ಮಾಲಿನಿ ಹೇಳಿದ್ದು ಕೇಳಿ ಶುಗರ್‌ಲೆಸ್ ಆಯಿತು.

"ಏನು ಏನಂದೆ ನೀನು?"

"ಅದೇ ನಾನು ತವರು ಮನೆಗೆ ಹೆರಿಗೆಗೆ..."

"ಸಾಕು ಸಾಕು, ಆಚಾರ ವ್ಯವಹಾರ ನನ್ನ ಹತ್ತಿರ ಬೇಡ. ಆ ಹಳ್ಳಿಯಲ್ಲಿ ಏನಿದೆ. ಅಲ್ಲದೆ ನಿಮ್ಮ ತಾಯಿಗೆ ಒಂದು ದಿನ ಮೈ ಸರಿ ಇದ್ದರೆ ಮತ್ತೆ ಮೂರು ದಿನ ಮಲಗಿರ್ತಾರೆ. ಇನ್ನು ನಿಮ್ಮ ಮಾವನ ಮನೆಗೂ ಬೇಡ. ನಿಮ್ಮತ್ತೆ ಅವರ ಕೆಲ್ಸ ಅವರು ಮಾಡಿಕೊಳ್ಳಬೇಕಾದ್ರೆ ಏದುಸಿರು ಬಿಡ್ತಾರೆ. ಇನ್ನು ನಿನ್ನ ಬಾಣಂತನ ಏನು ಮಾಡ್ತಾರೆ. ಬೇಕಾದ್ರೆ ನಿಮ್ಮ ತಾಯಿಯನ್ನು ಇಲ್ಲಿಗೆ ಬರಹೇಳು. ಇಲ್ಲಾಂದ್ರೆ ಕೆಲ್ಸದವರನ್ನು ಇಟ್ಕೋ. ನೀನು ಮಾತ್ರ ಇಲ್ಲಿಂದ ಎಲ್ಲಿಗೂ ಹೋಗಕೂಡದು."

ಜಲಪಾತ ಸುರಿದಂತೆ ಹೇಳಿದಾಗ ನೆತ್ತಿ ಹತ್ತಿ ಕೆಮ್ಮತೊಡಗಿದ ವಾಸು.

ಮಾಲಿನಿ ಅವನ ಎದೆ ನೇವರಿಸಿ ನೆತ್ತಿ ತಟ್ಟುತ್ತ, ನೀರು ಕುಡಿಸಿದಳು. "ಇಷ್ಟು ಆವೇಗ ಏಕೆ, ನಿಧಾನವಾಗಿ ಹೇಳಲು ಆಗ್ತಾ ಇಲ್ವೇ? ಅಸಲು ನನ್ನ ಕಳುಹಿಸದೆ ಇರಲು ನಿಮ್ಮ ರಹಸ್ಯ ಏನೆಂದು ಸಹ ನನಗೆ ಗೊತ್ತು." ಮಾಲಿನಿ ಹೇಳಿದಳು.

"ಏನು ಹೇಳು?"

"ಒಂಟಿಯಾಗಿ ಇರಬೇಕಾಗುತ್ತೆಂದು ಅಲ್ವೇ."

"ಹೌದು ಮಾಲಿನಿ, ನಿನ್ನ ಬಿಟ್ಟು ಇರಕ್ಕಾಗಲ್ಲ. ಅಲ್ಲದೆ ಇಂತಹ ಸುಖ ಎಲ್ಲಿ ಸಿಗುತ್ತೆ ಹೇಳು. ಅಲ್ಲದೆ ನನಗೆ ಆಫೀಸ್‌ನಿಂದ ದೊಡ್ಡ ಕ್ವಾರ್ಟರ್ಸ್ ಅಲಾಟ್ ಮಾಡಿದ್ದಾರೆ ಅಲ್ಲಿಗೆ ಹೋಗಬೇಕು. ಸ್ಕೂಟರ್ ಲೋನ್‌ಗೆ ಅಪ್ಲೈ ಮಾಡಿದ್ದೆ ಅದೂ ಸ್ಯಾಂಕ್ಷನ್ ಆಗಿದೆ. ಹೊಸ ಸ್ಕೂಟರ್ ತರುವಾಗ ನನ್ನ ಮುದ್ದು ಮಡದಿ ಇಲ್ದೆ ಇದ್ರೆ ಹೇಗೆ. ನಿನಗೆ ಯಾವ ತರಹದ ಅನಾನುಕೂಲವಾಗದಂತೆ ನೋಡಿಕೊಳ್ತೇನೆ. ನೀನು ಎಲ್ಲೂ ಹೋಗದೆ ಇಲ್ಲೇ ಇರು ಮಾಲಿನಿ."

ಪತಿಯ ಮಾತಿಗೆ ಮುಗ್ಧಳಾಗಿ ಬಿಟ್ಟಳು ಮಾಲಿನಿ.

"ಆಯ್ತು ರಾಜ, ನಿನ್ನ ರಾಣಿ ನಿನ್ನ ಹತ್ತಿರವೇ ಇರ್ತಾಳೆ" ಎಂದು ಆತನನ್ನು

ಅಪ್ಪಿಕೊಂಡಳು ಮಾಲಿನಿ.

*   *   *
*   *   *

"ಬನ್ನಿ ಮಾವ, ಬನ್ನಿ ಅತ್ತೆ" ಎಂದು ಮಾಲಿನಿ ಕರೆದಳು.

"ಹೇಗಿದ್ದೀಯಮ್ಮ ಮಾಲಿನಿ?" ಅನಂತಯ್ಯ ಕೇಳಿದರು.

"ಹುಶಾರಾಗಿದ್ದೇನೆ ಮಾವ. ಈ ಹೆಂಗಸು ಯಾರು?"

"ಈಕೆ ನಾಗಮ್ಮ ಅಂತ ವಿಧವೆ. ನಿನಗೆ ಸಹಾಯ ಆಗಲೆಂದು ಕರ್‍ಕೊಂಡು ಬಂದಿದ್ದೇವೆ. ಡಾಕ್ಟರ್ ಹತ್ತಿರ ಹೋಗಿದ್ದೆಯಾ, ಏನಂದ್ರು?" ಕಾವೇರಮ್ಮ ಕೇಳಿದರು.

"ಇನ್ನೊಂದು ವಾರದಲ್ಲಿ ಡೆಲಿವರಿ ಆಗುತ್ತೆಂದು ಹೇಳಿದರು. ನಿರ್ಮಲ ನರ್ಸಿಂಗ್ ಹೋಂ ಹತ್ತಿರದಲ್ಲಿ ಇದೆ. ಡಾಕ್ಟರ್ ಒಳ್ಳೆಯವರು. ನೋವು ಬಂದ ಕ್ಷಣ ಬಂದುಬಿಡಿ ಎಂದು ಹೇಳಿದ್ದಾರೆ" ಎಂದು ಹೇಳಿ ಕಾಫಿ ಮಾಡಲು ಹೋದಳು ಮಾಲಿನಿ.



"ನೀನು ನಿನ್ನ ಹುಡುಗಿಯನ್ನು ಇಂದು ಸಂಜೆ ಸಿನಿಮಾಕ್ಕೆ ಕರೆದುಕೊಂಡು ಹೋಗುತ್ತೀಯ?"

"ನಾವು ಸಿನಿಮಾಕ್ಕೆ ಹೋಗುವ ಅಗತ್ಯವಿಲ್ಲ."

"ಯಾಕೆ?"

"ಹುಡುಗಿಯ ಅಪ್ಪ ಅಮ್ಮ ಸಿನಿಮಾಗೆ ಹೋಗಿದ್ದಾರೆ."

– ಶಂಕರಗೌಡ ವೈ. ಪಾಟೀಲ

"ಮಾಲಿನಿ ಇನ್ನು ಮೇಲೆ ನೀನು ಏನೂ ಮಾಡಬೇಡ, ಈ ನಾಗಮ್ಮ ಒಳ್ಳೇ ಹೆಂಗಸು, ಎಲ್ಲ ಕೆಲ್ಸ ಮಾಡ್ತಾರೆ. ಅಡುಗೆ ಮನೆ ಜವಾಬ್ದಾರಿ ಎಲ್ಲ ವಹಿಸಿಬಿಡು. ಎಲ್ಲೆಲ್ಲಿ ಯಾವ ಸಾಮಾನು ಇದೆ ಎಂದು ತೋರಿಸಿ ಬಿಡು ಸಾಕು. ಇಂತಾದ್ದು ಮಾಡು ಎಂದರೆ ಅಚ್ಚುಕಟ್ಟಾಗಿ ಮಾಡಿಕೊಡ್ತಾರೆ."

"ಹೌದಮ್ಮ ಕಾವೇರಮ್ಮನವರು ಎಲ್ಲ ಹೇಳಿದ್ದಾರೆ, ನೀವೇನೂ ಯೋಚನೆ ಮಾಡಬೇಡಿ. ಸುಖವಾಗಿ ಮಗುವನ್ನು ಹೆತ್ತು ಮಡಿಲಲ್ಲಿ ಮಲಗಿಸಿಕೊಳ್ಳಿರಾ." ನಾಗಮ್ಮ ಹೇಳಿದರು.

ವಾಸು ಬಂದನು, ಅತ್ತೆ ಮಾವರನ್ನು ವಿಚಾರಿಸಿಕೊಂಡನು.

ನಾಗಮ್ಮನವರ ವಿಚಾರ ಹೇಳಿದಳು ಮಾಲಿನಿ.

"ಹೌದಾ ನೋಡಿದ್ಯಾ, ನಮಗಿಂತ ಅಡ್ವಾನ್ಸ್ ಆಗಿದ್ದಾರೆ ನಿಮ್ಮ ಮಾವ. ನಾವು ಮಾತಾನಾಡಿಕೊಂಡ್ವಿ. ಅವರು ಆಗಲೇ ಕರ್‍ಕೊಂಡು ಬಂದಿದ್ದಾರೆ. ನಮ್ಮ ಸಮಸ್ಯೆ ಸಾಲ್ವ್ ಆಯಿತು. ಇವರು ಇರುವಾಗಲೇ ಕ್ವಾರ್ಟರ್ಸ್‌ಗೆ ಹೊರಟು ಹೋಗೋಣ" ಎಂದು ವಾಸು ಹೇಳಿದನು.

ಮಾಲಿನಿ ಸಹ ಸಮ್ಮತಿಸಿದಳು.

ಎರಡು ದಿನದಲ್ಲಿ ಕ್ವಾರ್ಟರ್ಸ್‌ಗೆ ಶಿಫ್ಟ್ ಆದರು.

ಆರು

ಪ್ರಪಂಚದಲ್ಲಿ ಪುರುಷರು ಸಂಪಾದಿಸುವ ಒಂದು ಉತ್ತಮ ಆಸ್ತಿಯಲ್ಲಿ ಒಳ್ಳೆಯ ಹೆಂಡತಿ. ಹಾಗೆ ಸ್ತ್ರೀಗೂ ಉತ್ತಮ ಗಂಡ. ಎಲ್ಲ ಸಂಪಾದಿಸಿ ಇದೊಂದು ಶಾಪ ಆದರೆ ತದ್ವಿರುದ್ಧವಾದ ಗಂಡ ಹೆಂಡತಿ. ಇದೇ ದೇವರ ಒಂದು ಆಟ.

"ಅಯ್ಯೊ ಇಷ್ಟುಮಟ್ಟಕ್ಕೆ ಬಂದರಾ, ಹೊಡೆಯಿರಿ. ನಾನು ಏಕೆ ಬದುಕಬೇಕು. ಹೊಡೆದು ಸಾಯಿಸಿಬಿಡಿ.''

"ಬಾಯಿ ಮುಚ್ಚು, ಅಸಲು ನೀನು ಹೆಂಗಸೇ ಅಲ್ಲ, ಇಲ್ಲಿ ಒಂದು ನಿಮಿಷವೂ ಇರಬೇಡ. ಈಗಲೇ ಬಸ್ಸು ಹತ್ತಿಸುತ್ತೇನೆ ಹೊರಟುಹೋಗು.''

ಅತ್ತೆ ಮಾವರ ಜಗಳ ಕೇಳಿ ಮಾಲಿನಿಗೆ ಆಶ್ಚರ್ಯವಾಯಿತು.

'ಅತ್ತೆಗೇನಾಯಿತು, ಮಾವ ಏಕೆ ಇಷ್ಟೊಂದು ಕೋಪ ಮಾಡಿಕೊಂಡಿದ್ದಾರೆ. ನನ್ನಿಂದ ಏನಾದ್ರೂ ತೊಂದರೆ ಆಯಿತಾ' ಅರ್ಥವಾಗದೆ ಹಾಗೇ ಕಿವಿಗೊಟ್ಟಳು.

"ಕಾವೇರಿ ಹೆಚ್ಚು ಮಾತನಾಡಬೇಡ. ಅಲ್ಲದೆ ಇದು ನಮ್ಮ ಮನೆ ಅಲ್ಲ.'' ಅನಂತಯ್ಯ ಹೇಳಿದರು.

"ಏಕೆ ಮಾತನಾಡಬಾರದು, ಇನ್ನು ಮನೆ ಅಂತ ಎಲ್ಲಿದೆ ಹೇಳಿ, ಇದು ನಿಮ್ಗೆ ಚೆನ್ನಾಗಿರಬಹುದು. ಆದರೆ ನಾಲ್ಕು ಜನ ಅನ್ನೋದು ಕೇಳಿ ನಾನು ತಲೆ ಎತ್ತಿಕೊಂಡು ಇರಕ್ಕಾಗ್ತಿಲ್ಲ, ಇನ್ನು ನಾನ್ಯಾಕೆ ಇರಬೇಕು ಹೇಳಿ.''

"ಹುಶ್ ಸುಮ್ಮನಿರು.''

"ಹುಶ್ ಎಂದಾಕ್ಷಣ ಹಾರಿ ಹೋಗಲು ನಾನೇನು ಕಾಗೆ ಅಲ್ಲ.''

"ಕಾಗೆ ಅಂದವರು ಯಾರು, ಮನೇಲಿ ಕುಳಿತು ಚೆನ್ನಾಗಿ ತಿಂದು ಮೈ ಬೆಳೆಸಿರುವ ಗುಜ್ಜಾನೆ ಮರಿ ನೀನು.''

"ಹೌದು, ಈಗ ನಾನು ನಿಮ್ಮ ಕಣ್ಣಿಗೆ ಆನೆ, ಕರಡಿ. ಈ ವಯಸ್ಸಿನಲ್ಲಿ ನಿಮಗೆ ಏನು ನಿಮ್ಮಂತವರಿಗೆ ಹೆಂಡ್ತೀರು ಆನೆ, ಆಡಿನಂತೆ ಕಾಣೋದು. ಬೇರೆಯವರು ಕುರೂಪಿಗಳಾದರೂ ನವಿಲು ತರಹ ಕಾಣಿಸ್ತಾರೆ.''

ಮತ್ತೆರಡು ಏಟು ಹಾಕಿದ ಅನಂತಯ್ಯನವರು "ಬಾಯಿ ಮುಚ್ಚು, ತೆಗೆದರೆ ಮತ್ತೆಂದೂ ತೆಗೆಯದ ಹಾಗೆ ಮುಚ್ಚಿಬಿಡ್ತೀನಿ.''

"ಸಾಯಲು ನಾನು ಸಿದ್ಧವಾಗಿದ್ದೇನೆ, ಸಾಯಿಸಿ. ಇನ್ನು ಏಕೆ ನಾನು ಬೇಕು ನಿಮ್ಗೆ.''

"ಬೇಡ ಕಾವೇರಿ, ಇನ್ನೊಬ್ಬರ ಮನೆಗೆ ಬಂದು ನಾವು ಹೀಗೆ ಆಡುವುದು ಸರಿ ಇರಲ್ಲ.''

"ಏಕ್ರಿ ಸುಮ್ಮನಿರಬೇಕು. ನನ್ನ ಸಂಸಾರ ಹಾಳು ಮಾಡ್ತಿಲ್ಲ ಸತ್ತರೆ ನಾನು ಇಲ್ಲೇ ಸಾಯ್ತಿನಿ. ನಿಮ್ಮ ಅಸಲು ಬಣ್ಣ ಬಯಲಾಗಲಿ.''

ಮಾಲಿನಿಗೆ ನಿಧಾನವಾಗಿ ಅರ್ಥವಾಯಿತು. ಅವಳು ಹೊಟ್ಟೆಯನ್ನೆತ್ತಿ ಕೊಂಡು ಮೆಲ್ಲನೆ ಎದ್ದಳು. ನಿಧಾನವಾಗಿ ನಡೆದು ಅವರಿದ್ದ ರೂಮಿಗೆ ನಡೆದಳು.

ಮಾಲಿನಿಯನ್ನು ನೋಡಿ ಅನಂತಯ್ಯ, ಕಾವೇರಮ್ಮ ಇಬ್ಬರೂ ಬೆರಗಾದರು. ಒಂದು ಕ್ಷಣ ಮೌನ ಆವರಿಸಿತು. ಅನಂತರ ಆವೇಶ ಬಂದವರ ಹಾಗೆ ಕಾವೇರಮ್ಮ,

"ಅಗೋ ಬಂದಿದ್ದಾಳಲ್ಲ ಮಿಟುಕಲಾಡಿ ಇವಳ ಮುಂದೇನೇ ಇತ್ಯಾರ್ಥವಾಗಲಿ. ಕೇಳಿ ಬಿಡ್ತೀನಿ."

"ಕಾವೇರಿ ಬಾಯಿ ಮುಚ್ಚು."

"ಅಷ್ಟೊಂದು ಅಕ್ಕರೆ ಏಕೇಂತ. ಏನೇ ಮಾಲಿನಿ..." ಎಂದು ಕಾವೇರಮ್ಮ ಏನೋ ಕೇಳಲುದ್ಯುಕ್ತವಾದಾಗ ಅನಂತಯ್ಯ ಮುಂದೆ ಬಂದು ಆಕೆಯ ಬಾಯಿ ಮುಚ್ಚಿ ರಪ್ ರಪ್ ಎಂದು ಹೊಡೆಯತೊಡಗಿದಾಗ, ಮಾಲಿನಿ ಅದನ್ನು ನೋಡಿ "ಮಾವ, ಮಾವ, ಇದೇನಿದು ಹುಡುಗಾಟ ಬಿಡಿ" ಎಂದು ಅವರ ಮಧ್ಯೆ ಹೋದಳು.



ಅರಿತವಳು

ಪ್ರಿಯೆ
ನಾ ಕನಸಲ್ಲೂ ಎಣಿಸಿರಲಿಲ್ಲ
ವಾಸ್ತವದ ಅರಿವಾದ ನೀನು
ಮತ್ತೊಮ್ಮೆ
ನಿನ್ನ ಹೃದಯದ ಗುಡಿಯಲಿ
ಎನ್ನ ದೀಪವಾಗಿಸುವೆಯೆಂದು.

— ಬಿ. ಕರ್ಕೇರ

* * * * *

ಮಾಲಿನಿ ಒದ್ದಾಡಿದಳು, ಕೈ ಮುಷ್ಟಿ ಬಿಗಿ ಹಿಡಿದಳು.

"ಡಾಕ್ಟರ್, ಏನೂಂದ್ರೆ, ಅಮ್ಮ" ಎಂದು ಚೀರಿದಳು.

"ಡೋಂಟ್ ವರಿ, ನಿಮ್ಮ ಮನೆಯವರು ಇಲ್ಲೇ ಇದ್ದಾರೆ."

"ನಾನೆಲ್ಲಿದ್ದೇನೆ?"

"ನರ್ಸಿಂಗ್ ಹೋಂನಲ್ಲಿ ಲೇಬರ್ ವಾರ್ಡ್‌ನಲ್ಲಿದ್ದೀರಿ. ಎಲ್ಲಿ ಒಂದು ಸಲ ಉಸಿರು ಬಿಡಿ, ಜೋರಾಗಿ, ಇನ್ನೂ ಜೋರಾಗಿ. ಮೇಜರ್ ಪೇನ್ ಪ್ರಾರಂಭವಾಗಿದೆ ಡೆಲಿವರಿ ಆಗುತ್ತೆ" ಎಂದು ಡಾಕ್ಟರ್ ಹೇಳಿದರು.

ಅರ್ಧ ಗಂಟೆ ನೋವಿನಿಂದ ನರಳಿ ಅಮ್ಮ ಎಂದು ಚೀರಿದಳು ಮಾಲಿನಿ. ಆಗಲೇ ಅವಳ ಜೊತೆ ಮಗುವಿನ ಅಳುವಿನ ಸದ್ದು ಕೇಳಿಸಿತು. ಹೊಟ್ಟೆ ಭಾರ ಇಳಿದಂತಾಗಿ ಹಗುರವಾಗಿ ನೆಮ್ಮದಿಯ ನಿಟ್ಟುಸಿರು ಬಿಟ್ಟು ಅದುವರೆಗೆ ಅನುಭವಿಸಿದ ನೋವೆಲ್ಲ ಹೊರಟುಹೋಯಿತು.

ಮಗುವನ್ನು ತೊಳೆದು ಮಗ್ಗುಲಿಗೆ ಹಾಕಿದಾಗ, ಅದರ ಬಾಯಿಗೆ ತನ್ನ ಸ್ತನದ ತೊಟ್ಟು ಇಟ್ಟಾಗ ಅದು ಲೊಚಗುಟ್ಟುತ್ತ ಹೀರುವಾಗ ಆನಂದವನ್ನು ಅನುಭವಿಸತೊಡಗಿದಳು

ಮಾಲಿನಿ.

ವಾರ್ಡ್‌ಗೆ ತಂದು ಮಲಗಿಸಿದರು. ವಾಸು ಬಂದು ನೋಡಿ,

"ತುಂಬ ಕಷ್ಟವಾಯಿತಾ ಮಾಲಿನಿ?'' ಕೇಳಿದನು.

"ಕಷ್ಟ ಇಲ್ಲದೆ ಯಾವ ಇಷ್ಟವೂ ಕೈಗೂಡಲ್ಲ. ನೋಡಿ ನಿಮ್ಮ ಮಗಳು, ಹೇಗೆ ಇದ್ದಾಳೆ?'' ಮಾಲಿನಿ ಕೇಳಿದಳು.

"ಎಲ್ಲ ನಿನ್ನ ಹಾಗೇ ಇದ್ದಾಳೆ.''

"ಇಲ್ಲ, ನಿಮ್ಮ ಹಾಗೆ.''

"ಅಂದ ಹಾಗೆ ಮಾವ?''

ವಾಸುವಿನ ಮುಖ ಚಿಕ್ಕದಾದರೂ ತೋರಗೊಡದೆ,

"ಸುಮ್ಮನಿರು ಮಾಲಿನಿ, ಅವರವರ ವಿಷ್ಯ ಅಲ್ಲಿದೆ. ನಿನ್ನ ಮನಸ್ಸು ಈಗ ಸರಿ ಇಲ್ಲ.''

ಗಂಡನ ಬಗ್ಗೆ ಗೊತ್ತಿದ್ದ ಮಾಲಿನಿ ಮತ್ತೆ ಮಾತನಾಡಲಿಲ್ಲ.

"ನಾಗಮ್ಮ ಊಟ ತರ್ತಾರೆ ನಾನು ಸಂಜೆ ಬೇಗ ಬಂದು ಬಿಡ್ತೇನೆ'' ಎಂದು ಹೇಳಿ ಹೊರಟ ವಾಸು ಮನೆಗೆ ಬಂದು,

"ನಾಗಮ್ಮ ಮಧ್ಯಾಹ್ನ ಊಟ ತಗೊಂಡು ಹೋಗಿ ಕೊಡಿ. ಇಲ್ಲಿಯ ರಗಳೆ ಏನೂ ಹೇಳಬೇಡಿ.''

"ಆಯಿತು ವಾಸಪ್ಪ, ಮಾಲಿನಿ ನನಗೆ ಮಗಳ ತರಹ. ಅವಳ ಆರೋಗ್ಯ ಮುಖ್ಯ ನಾನೇನೂ ಹೇಳಲ್ಲ.'' ನಾಗಮ್ಮ ಹೇಳಿದರು.

ಊಟ ತಗೊಂಡು ಹೋಗಿ ತಾವೇ ಊಟ ಮಾಡಿಸಿ ಮಗುವಿನ ಬಟ್ಟೆ ಬದಲಾಯಿಸಿ ವಾಸು ಬರುವತನಕ ಇದ್ದು ಮನೆಗೆ ಬಂದಾಗ ನಾಗಮ್ಮ ಕ್ಯಾರಿಯರ್ ಬಟ್ಟೆ ರೆಡಿಮಾಡಿಕೊಂಡು ಇರುತ್ತಿದ್ದರು. ಅವರನ್ನು ನರ್ಸಿಂಗ್ ಹೋಂಗೆ ಬಿಟ್ಟು ಬರುತ್ತಿದ್ದನು. ನಾಗಮ್ಮ ಅಲ್ಲೆ ಮಲಗುತ್ತಿದ್ದರು.

"ನಾಗತ್ತೆ ಆ ದಿನ ಏನಾಯಿತು, ಅತ್ತೆ ಮಾವ ಏಕೆ ಹಾಗೆ ಆಡಿದ್ದು, ನಿಮಗೇನು ತಿಳಿದಿದೆ ಹೇಳಿ'' ಎಂದು ಒತ್ತೆಯ ಮಾಡಿದಳು ಮಾಲಿನಿ. ನಾಗಮ್ಮ ಒತ್ತಾಯಕ್ಕೆ ಮಣಿದು ಕೆಲವು ವಿಷ್ಯ ಹೇಳಿದರು.

"ನೀವು ಪ್ರಜ್ಞೆ ತಪ್ಪಿದ್ದನ್ನು ಕಂಡು ಅನಂತಯ್ಯನವರಿಗೆ ಗಾಬರಿ ಆಗಿ ಕೂಡಲೇ ನಿಮ್ಮನ್ನು ಹಿಡಿದೆತ್ತಿ ಬೆಡ್ ಮೇಲೆ ಮಲಗಿಸಿದರು. ಹಡಾವಿಡಿಯಿಂದ ಓಡಿ ಬಂದು ನನಗೆ ಹೇಳಿ ಡಾಕ್ಟರನ್ನ ಕರ್‍ಕೊಂಡು ಬಂದರು. ಅವರು ನಿಮ್ಮನ್ನು ನರ್ಸಿಂಗ್ ಹೋಂಗೆ ಸೇರಿಸಲು ಹೇಳಿದರು. ಕೊಡಲೇ ಟ್ಯಾಕ್ಸಿ ತರಿಸಿ ಹಾಗೇ ನಿಮ್ಮ ಯಜಮಾನರಿಗೆ ಫೋನ್ ಮಾಡಿ ನರ್ಸಿಂಗ್ ಹೋಂಗೆ ಸೇರಿಸಿ ಬಂದರು. ಇಷ್ಟೆಲ್ಲ ಆಗಿದ್ದು ಕಾವೇರಮ್ಮ ನೋಡ್ತಾ ಇದ್ದರು. ಅನಂತರ ಅವರು 'ನಾನ್ಯಾಕೆ ಬದುಕಿರಬೇಕು' ಎಂದಕೊಂಡು ಬಾಗಿಲು ಹಾಕಿಕೊಂಡು ಬಿಟ್ಟರು. ನನಗೆ ಗಾಬರಿ ಆಯಿತು ಬಾಗಿಲು ಬಡಿದೆ ತೆಗೆಯಲಿಲ್ಲ. ಅಷ್ಟರಲ್ಲಿ ಅನಂತಯ್ಯನವರು ವಾಸಪ್ಪ ಅವರು ಬಂದರು. ಅವರಿಗೆ ವಿಷ್ಯ ಹೇಳಿದೆ. ಕೂಡಲೇ ಜೋರಾಗಿ ಒದ್ದಾಗ, ಬೋಲ್ಟ್ ಕಿತ್ತು ಹೋಗಿ ಬಾಗಿಲು ತೆರೆದುಕೊಂಡಿತು. ಆಗಲೇ ಕಾವೇರಮ್ಮ ಸೀರೆಯನ್ನು ಹಗ್ಗದ ಹಾಗೆ

ಸುತ್ತಿ ಕತ್ತಿಗೆ ಬಿಗಿದುಕೊಂಡಿದ್ದರು. ಕಣ್ಣು ಕಣ್ಣು ತೇಲಿಸುತ್ತಿದ್ದರು. ಆಗ ಅನಂತಯ್ಯ, ವಾಸಪ್ಪನವರು ಸೀರೆ ತೆಗೆದು ಟ್ಯಾಕ್ಸಿಯಲ್ಲಿ ಶಾಪ್‌ಗೆ ಕರ್ಕೊಂಡು ಹೋದರು. ಡಾಕ್ಟರಿಗೆ ಏನು ಹೇಳಿದರೋ ಗೊತ್ತಿಲ್ಲ. ಅರ್ಧ ಗಂಟೆಯನಂತರ ಅದೇ ಟ್ಯಾಕ್ಸಿಯಲ್ಲಿ ಬಂದು ಸೂಟ್‌ಕೇಸ್ ತೆಗೆದುಕೊಂಡು ಊರಿಗೆ ಹೋದರು.''

ಮಾಲಿನಿ ಬೆದರಿ ಬಿಟ್ಟಳು. ಅತ್ತೆ ಏಕೆ ಹೀಗೆ ಆದರು. ಅವರು ಸಾಯುವಂತ ಕಾರ್ಯ ಏನಾಯಿತು. ಯೋಚಿಸಿದವಳು,

"ಅತ್ತೇನ ಮಾವ ಏನ್ಮಾಡ್ತಾರೋ, ಇಲ್ಲ ಅತ್ತೇನೆ ಏನು ಮಾಡ್ಕೋತಾರೋ, ಅಲ್ಲಿ ಹೇಳೋರು ಕೇಳೋರು ಯಾರೂ ಇಲ್ಲ.''

"ನೀವೇಕೆ ಯೋಚಿಸ್ತೀರಾ ಬಿಡಮ್ಮ, ಹಸಿ ಬಾಣಂತಿ ಮೈ ನಂಜಾಗುತ್ತೆ. ಅವರವರ ಕರ್ಮ ನಾವೇನು ಮಾಡಕ್ಕಾಗುತ್ತೆ'' ಎಂದು ನಾಗಮ್ಮ ಹೇಳಿದರು.

ಮಾಲಿನಿ ಏನೋ ಯೋಚಿಸಿದಳು. ಅಷ್ಟರಲ್ಲಿ ಬೇಬಿ ಅತ್ತಿದ್ದರಿಂದ ಅದನ್ನು ಪಕ್ಕಕ್ಕೆ ಎಳೆದುಕೊಂಡು ತುಂಬಿದ ಮೊಲೆಯ ತೊಟ್ಟನ್ನು ಅದರ ಬಾಯಿಗೆ ಇಟ್ಟಳು. ಹಾಲು ಹೀರುತ್ತ ಬೇಬಿ ಮಲಗಿಕೊಂಡಿತು. ಅದರ ಬಟ್ಟೆ ಒದ್ದೆ ಆಗಿತ್ತು. ಅದನ್ನು ಬದಲಾಯಿಸಿ ಮಾಲಿನಿ ಎದ್ದಳು. ಗಂಟೆ ಆಗಲೇ ನಾಲ್ಕೂವರೆ ಆಗಿತ್ತು.



ದೀಪ ಬೆಳಗುವುದು ತನಗಾಗಿ ಬೆಳಕು ಮಾಡಿಕೊಳ್ಳುವುದಕ್ಕಲ್ಲ. ನಮ್ಮ ಒಳ್ಳೆಯತನ ಮತ್ತೊಬ್ಬರ ಸಹಾಯಕ್ಕೆ ಬಾರದಿದ್ದರೆ, ಆ ಒಳ್ಳೆಯತನ ಇದ್ದರೂ ಇಲ್ಲದಂತೆಯೇ ಸರಿ.

— ಶೇಕ್ಸ್‌ಪಿಯರ್

ನೀನು ಮಾಡಬೇಕೆಂದಿರುವ ಸತ್ಕಾರ್ಯಗಳನ್ನೆಲ್ಲ ಇಂದೇ ಮಾಡಿಬಿಡು. ಏಕೆಂದರೆ ತೋಳವು ಕುರಿ ಮರಿಯನ್ನು ಮುರಿದು ಹಾಕುವಂತೆ, ಮೃತ್ಯುವು ನಿನ್ನನ್ನು ಎಂದು ಒಯ್ಯುವುದೆಂಬುದು ನಿನಗೆ ಗೊತ್ತಾಗಲಿಕ್ಕಿಲ್ಲ.

—ಮಹಾಭಾರತ

ಸಂಗ್ರಹ : ಬ. ಮ. ಜಂಗಳಿ

ಅತ್ತೆ ಮಾವರ ಪ್ರಕರಣದ ಬಗ್ಗೆ ವಾಸುವಿಗೆ ಏನನಿಸಿರಬಹುದು. ಆಪಾರ್ಥ ಏನಾದ್ರೂ ತಿಳಿದುಕೊಂಡಿರುವರೆ, ಇಷ್ಟು ಹೊತ್ತಿಗೆ ಬರಬೇಕಾಗಿತ್ತು. ಇನ್ನೂ ಏಕೆ ಬರಲಿಲ್ಲ ಎಂದು ಏನೇನೋ ಯೋಚಿಸುತ್ತ ಮುಖ ತೊಳೆದುಕೊಂಡು ತಲೆಯನ್ನು ಹಾಗೇ ಹಿಂದಕ್ಕೆ ಬಾಚಿಕೊಂಡು ರೂಮಿನಿಂದ ಹೊರಬಂದು ಕಾರಿಡಾರ್ ಬಳಿ ನಿಂತಳು.

ವಿಸಿಟರ್ಸ್‌ಗಳು ಬರುತ್ತಿದ್ದರು. ಆಗಲೇ ಸ್ಟ್ಯಾಂಡ್‌ನಲ್ಲಿ ಸ್ಕೂಟರ್ ನಿಲ್ಲಿಸಿ ಫ್ಲಾಸ್ಕ್, ಬ್ಯಾಗ್ ತೆಗೆದುಕೊಂಡು ವಾಸು ಬಂದನು.

"ಇಲ್ಯಾಕೆ ನಿಂತಿದ್ದಿ, ಬಾ ಒಳಕ್ಕೆ.'' ಹೇಳಿ ಮಾಲಿನಿಯನ್ನು ಒಳಕ್ಕೆ ಕರ್ಕೊಂಡು ಹೋದನು ವಾಸು.

ವಾಸು ಈಗ ಇನ್ಸ್‌ಪೆಕ್ಟಿಂಗ್ ಆಫೀಸರ್. ಆ ತಾಲ್ಲೂಕಿನಲ್ಲಿ ಅವನ ಕೈ ಕೆಳಗೆ ಸುಮಾರು ಐವತ್ತು ಆಫೀಸುಗಳಿದ್ದವು. ಅವನು ಚೆಂಕಿಂಗ್ ಹೋಗುತ್ತಿದ್ದನು. ಅವೆಲ್ಲ ಆದಾಯ ಇಲಾಖೆಗಳಾಗಿದ್ದರಿಂದ ಪಬ್ಲಿಕ್ ಸಹ ಹೆಚ್ಚಾಗಿ ಕೆಲ್ಸ ಮಾಡಿಸಿಕೊಳ್ಳಲು ಬರುತ್ತಿದ್ದರು.

ವಾಸು ಸ್ಟ್ರಿಕ್ಟ್ ಆಫೀಸರ್ ಆಗಿದ್ದನು. ಆದರೂ ಅವನೇನು ಮೂರ್ಖನಾಗಿರಲಿಲ್ಲ. ಅವನ ಬದುಕು ಒಂದು ತಿರುವು ಪಡೆಯಿತು. ತನ್ನ ಸ್ಥಿತಿ ಹೇಗೆ ಇತ್ತು, ಹೇಗ ಈಗ ಇದೆ ಎಂದು ತುಲನೆ ಮಾಡುತ್ತಿದ್ದನು. ಒಂದು ಕಾಲದಲ್ಲಿ ಹತ್ತು ಪೈಸೆಗೂ ಬಾಯಿ ಬಿಡುತ್ತಿದ್ದೆ. ಈಗ ನೂರರ ನೋಟುಗಳು ಜೇಬಿನಲ್ಲಿ ಯಾವಾಗಲೂ ಇರುತ್ತಿದ್ದವು. ಕೊಟ್ಟಗೆಯಲ್ಲಿ ಮಲಗುತ್ತಿದ್ದ ದಿನಗಳನ್ನೂ ಮರೆತಿರಲಿಲ್ಲ. ಈಗ ಅವನದೇ ಆದ ಒಂದು ಮನೆ ಇತ್ತು. ಟೀಕ್‌ವುಡ್ ಕಾಟ್‌ಮೇಲೆ ಕುರ್ಲಾನ್ ಫೋಮ್ ಬೆಡ್. ಫ್ರಿಡ್ಜ್, ಟೀವಿ, ಫ್ಯಾನ್, ಫೋನ್, ಸೋಫಾ ಸೆಟ್, ಬ್ಯಾಂಕ್ ಬ್ಯಾಲೆನ್ಸ್ ಎಲ್ಲ ಇದ್ದವು.

ವಾಸು ಈಗ ಮನೆಯಲ್ಲಿರುತ್ತಿದ್ದದ್ದೇ ಅಪರೂಪ. ವಾರಕ್ಕೆ ನಾಲ್ಕುದಿನ ಟೂರ್‌ನಲ್ಲಿರುತ್ತಿದ್ದನು. ಊರಲ್ಲಿ ಇದ್ದಾಗಲೂ ವಿಸಿಟರ್ಸ್‌ಗಳು ತುಂಬ ಜನ ಬಂದು ಹೋಗುತ್ತಿದ್ದರು.

ಅರ್ಚನಳಿಗೆ ಎರಡು ವರ್ಷ. ಈ ಐದು ವರ್ಷದಲ್ಲಿ ಅನೇಕ ಬದಲಾವಣೆಗಳಾಗಿದ್ದವು.

ಮಾಲಿನಿ ಮೊದಮೊದಲು ಇವೆಲ್ಲವನ್ನು ಸಂಭ್ರಮದಿಂದ ಎದುರುಗೊಳ್ಳುತ್ತಿದ್ದಳು. ವಾಸು ಆಫೀಸರ್ ಆಗಿದ್ದು, ಜೀಪಿನಲ್ಲಿ ಬರುವುದು ಹೋಗುವುದು, ಮನೆ ಕಟ್ಟಿಸಿದ್ದು, ಮನೆಗೆ ಹುಡುಕಿಕೊಂಡು ಬರುವವರಿಗೆ ಕಾಫಿ ಮಾಡಿಕೊಡುವುದು, ಗತ್ತಿನಿಂದ ಮಾತನಾಡುವುದು, ಚೆನ್ನಾಗಿತ್ತು. ಆದರೆ ಕೇಲವೇ ದಿನ ಅಷ್ಟೇ ವಾಸು ಅವಳಿಂದ ದೂರವಾಗತೊಡಗಿದ. ಯಾವಾಗಲೂ ಟೂರು, ಆಫೀಸಿನ ಆದಾಯ, ವಿಸಿಟರ್ಸ್‌ಗಳಲ್ಲೇ ಮಗ್ನನಾದಾಗ ಮಾಲಿನಿಗೆ ಒಂಟಿತನದ ಅನುಭವ ಉಂಟಾಯಿತು.

ಮನೇಲಿ ಇದ್ದಾಗ ಮಾತು ಕಡಿಮೆ ಆಗುತ್ತಿತ್ತು. ಆ ದಿನ ವಾಸು ಮನೇಲೆ ಇದ್ದನು. ಆಯಾಸ ಆಗಿತ್ತು. ಒಂದು ಪೆಗ್ ವೈಟ್ ರಮ್ ಕುಡಿದಿದ್ದನು. ಅರ್ಚನ ಮಲಗಿದ್ದಳು. ಒಂದೆರಡು ಗಂಟೆ ನಿದ್ರೆ ಬಂದಿತು. ಅನಂತರ ಎಚ್ಚರವಾಗಿಬಿಟ್ಟಿತು. ಹಾಗೇ ಬೆಡ್‌ಲೈಟನ್ನ ದಿಟ್ಟಿಸುತ್ತ ಮಲಗಿದ್ದನು. ಮಾಲಿನಿ ಲೈಟ್ ಹಾಕಿದಳು. ವಾಸು ಕಣ್ಣು ಮುಚ್ಚಿದನು. ಬಾತ್‌ರೂಂಗೆ ಹೋಗಿ ಬಂದಳು. ಲೈಟ್ ಆರಿಸಿದಾಗ ಮತ್ತೆ ಕಣ್ಣು ಬಿಟ್ಟನು. ಮಾಲಿನಿಗೆ ಗೊತ್ತಾದರೆ ರಾತ್ರಿಯೆಲ್ಲ ಹತ್ತಾರು ಪ್ರಶ್ನೆಗಳನ್ನು ಕೇಳುತ್ತಾಳೆಂದು ವಾಸುವಿನ ಅಭಿಪ್ರಾಯ.

'ಏಕೆ ನಿದ್ರೆ ಬರಲಿಲ್ಲವೆ ಏನಾಗ್ತಿದೆ' ಎಂದು ಮಾಲಿನಿ ಕೇಳಿದಾಗ 'ಏನೂ ಇಲ್ಲ' ಎಂದು ಹಾರಿಕೆಯ ಉತ್ತರ ಕೊಡುತ್ತಿದ್ದನು. ಇನ್ನೂ ಒತ್ತಾಯಿಸಿದರೆ ವಾಸುವಿಗೆ ಸಿಟ್ಟು ಬಂದು ಗದರಿಸಿ ಬಿಡುತ್ತಿದ್ದನು.

ಮಾಲಿನಿಗೆ ಆಶ್ಚರ್ಯವಾಗುತ್ತಿತ್ತು. ವಾಸುವಿಗೆ ಸಿಟ್ಟು ಬರುತ್ತಿರಲಿಲ್ಲ, ಸಿಟ್ಟು ಬಂದರೂ ತನ್ನ ಮೇಲೆ ಮಾಡಿಕೊಳ್ಳದವನು ಇಂದು ತನ್ನ ಮೇಲೆ ಸಿಟ್ಟು ಮಾಡಿಕೊಳ್ಳುವುದು ಅವಳಿಗೆ ನುಂಗಲಾರದ ಬಿಸಿ ತುಪ್ಪವಾಗಿತ್ತು.

ಕೆಲವು ಸುಖವವನ್ನು ಬಯಸಿದರೆ ಕೆಲವು ಸುಖವನ್ನು ದೇವರು ಕಿತ್ತುಕೊಂಡು ಬಿಡುತ್ತಾನೆ.

ಮೊದಲು ಹಣ, ಮನೆ, ಸ್ಕೂಟರು ಇರಲಿಲ್ಲ. ಪ್ರೀತಿ, ವಿಶ್ವಾಸ, ಮಮತೆ, ಸಂತೋಷ ಇತ್ತು. ಈಗ ಮನೆ, ಹಣ, ಅಧಿಕಾರ ಎಲ್ಲ ಕೊಟ್ಟ ದೇವರು ಮೊದಲಿದ್ದುದನ್ನು ತೆಗೆದುಕೊಂಡಿದ್ದ.



"ಅಪ್ಪಾ, ನೀನು ತುಂಬ ಲಕ್ಕಿ!''
"ಅದು ಹೇಗೋ?''
"ನೀನು ಈ ವರ್ಷ ಹೊಸ ಪುಸ್ತಕಗಳನ್ನು ಕೊಂಡು ಕೊಡೋದು ತಪ್ಪಿತು. ನಾನು ಮತ್ತೆ ಅದೇ ಕ್ಲಾಸಲ್ಲಿ...''
— ಬುಜ್ಜಿಬಾಬು

ಮಾಲಿನಿ ಬೆಳಿಗ್ಗೆ ಬೇಗ ಎದ್ದಳು. ಆ ದಿನ ವಾಸು ಟೂರ್ ಹೋಗಬೇಕಾಗಿತ್ತು. ಚಿತ್ತೂರ್‌ಗೆ ಹೊರಟ್ಟಿದ್ದನು. ಕಾಫಿ ತಿಂಡಿ ರೆಡಿ ಮಾಡಿದಳು. ವಾಸು ರೆಡಿ ಆಗಿ, ಮಗಳನ್ನು ಎತ್ತಿ ಮುದ್ದಿಟ್ಟು ಐದು ನಿಮಿಷ ಆಟ ಆಡಿಸಿ, ಟಿಫಿನ್ ತಿಂದು ಕಾಫಿ ಕುಡಿದು,

"ಮಾಲಿನಿ ನನಗೆ ಎಂಟು ದಿನ ವಿಪರೀತ ಕೆಲ್ಸ ಇದೆ. ಮುಂದಿನ ಭಾನುವಾರ ಬೆಳಿಗ್ಗೆ ಹೊರಟು ಚಿತ್ತೂರಿಗೆ ಬಂದುಬಿಡು. ತಿರುಪತಿ ಹತ್ತಿರ ಇದೆ, ಹಾಗೇ ಹೋಗಿ ಎರಡು ದಿನ ಇದ್ದು ದೇವರ ದರ್ಶನ ಮಾಡಿಕೊಂಡು ಬರೋಣ'' ಎಂದು ವಾಸು ಹೇಳಿದನು.

ಮಾಲಿನಿಗೆ ಸಂತೋಷವಾಯಿತು. ನಾಗಮ್ಮನವರಿಗೆ ಹೇಳಿ ವಾಸು ಜೊತೆ ರೈಲ್ವೆ ಸ್ಟೇಶನ್‌ಗೆ ಜೀಪ್‌ನಲ್ಲಿ ಹೊರಟಳು. ಅಲ್ಲಿ ಅರ್ಧ ಗಂಟೆ ಇದ್ದು ವಾಸುವನ್ನು ಬೀಳ್ಕೊಟ್ಟು ಮನೆಗೆ ಬಂದಳು ಮಾಲಿನಿ. ಅರ್ಚನಳನ್ನು ಬಿಟ್ಟು ಹಾಗೇ ನೋಡಿದಳು ಸೋಫಾದಲ್ಲಿ ಮಾವ ಮಲಗಿದ್ದು ಅವಳಿಗೆ ಆಶ್ಚರ್ಯವಾಯಿತು. ಎಷ್ಟು ದಿನದನಂತರ ಮಾವ ಮನೆಗೆ ಬಂದಿದ್ದಾರೆ. ಸಣ್ಣಗಾಗಿ ಬಿಟ್ಟಿದ್ದಾರೆ ಎಂದೆನಿಸಿ ಅವರನು ನೋಡುತ್ತಿದ್ದಂತೆ ಅಯ್ಯೋ ಎನ್ನಿಸಿತು. ಹಾಗೆ ನೋಡುತ್ತ ನಿಂತಳು.

ಅರ್ಚನ ಕೇಕೆ ಹಾಕುತ್ತ, ನಗುತ್ತ ಗಲಾಟೆ ಮಾಡಿದಾಗ, ಅನಂತಯ್ಯನವರು ಎದ್ದು,

"ಓ ಮಾಲಿನಿ ಬಂದ್ಯಾ, ಬಿಸಿಲಿನಲ್ಲಿ ಬಂದೆ ನೋಡು ಹಾಗೇ ಮಲಗಿಬಿಟ್ಟೆ'' ಹೇಳುತ್ತ ಮಗುವನ್ನು ಎತ್ತಿ ಮುದ್ದಿಸಿ "ಎಲ್ಲ ನಿನ್ನ ತರಹನೇ ಇದ್ದಾಳೆ'' ಎಂದು ಬ್ಯಾಗ್‌ನಿಂದ ಸ್ವೀಟ್ ಬಾಕ್ಸ್, ಹೂ, ಹಣ್ಣು ಮೊದಲಾದವುಗಳನ್ನು ಕೊಟ್ಟರು.

"ತುಂಬ ಬಿಸಿಲು ಜ್ಯೂಸ್ ತರ್ತೇನೆ ತಾಳಿ.''

"ಬೇಡಮ್ಮ, ನಾಗಮ್ಮ ಮಾಡಿಕೊಟ್ಟರು.''

"ಹೌದಾ, ರೂಮಿನಲ್ಲಿ ಮಲಗಿ ರೆಸ್ಟ್ ತಗೊಳ್ಳಿ. ಅನಂತರ ಮಾತನಾಡೋಣ.''

"ಹಾಗೇನೂ ಇಲ್ಲ'' ಎಂದು ಹೇಳಿದರು ಅನಂತಯ್ಯ.

ಮಾಲಿನಿ ಹಣ್ಣು ಒಳಗೆ ತೆಗೆದು ಇಟ್ಟು, ಅಡುಗೆ ಮನೆಗೆ ಹೋದಳು. ಊಟ ಮಾಡಿದ ಮೇಲೆ ಅನಂತಯ್ಯನವರು ಮಲಗಿ ಬಿಟ್ಟರು.

ಸಾಯಂಕಾಲ ಮಾಲಿನಿ ಕೋಡುಬಳೆ ಕಾಫಿ ತಂದು ಕೊಟ್ಟಳು.

"ಏಕೆ ಮಾವ, ನೀನು ಒಂದು ವರ್ಷದಿಂದ ಈ ಕಡೆ ಬರಲೇ ಇಲ್ಲ. ನಮ್ಮ ಮೇಲೆ ಕೋಪಾನಾ, ಇಲ್ಲ ಮೈ ಹುಶಾರಿರಲಿಲ್ಲವಾ?'' ಕೇಳಿದಳು ಮಾಲಿನಿ.

ಅನಂತಯ್ಯನವರ ಹೃದಯ ಹಿಂಡಿತು. ಅವರಿಗರಿವಿಲ್ಲದಂತೆ ಕಣ್ಣಂಚಿನಲ್ಲಿ ನೀರು ತುಳುಕಿತು. ಟವಲ್‌ನಿಂದ ಕಣ್ಣೊರಿಸಿಕೊಂಡು,

"ಮಾಲಿನಿ ನಾನು ನಿನ್ನ ದೃಷ್ಟಿಯಲ್ಲಿ ಕೆಟ್ಟವನಾ'' ಎಂದು ಕೇಳಿದಾಗ ಮಾಲಿನಿಗೆ ಆಶ್ಚರ್ಯವಾಯಿತು.

"ಇದೇನು ಮಾತೂಂತ ಹೇಳ್ತಿರಾ ಮಾವ!'' ಕೇಳಿದಳು.

"ಇನ್ನೇನಮ್ಮ ದುಷ್ಟರನ್ನು ಕಂಡರೆ ದೂರ ಇರಬೇಕು ಎಂದು ನಾನು ನಿನಗೆ ಚಿಕ್ಕ ವಯಸ್ಸಿನಲ್ಲಿ ಹೇಳಿದ್ದೆ ಅಲ್ವಾ. ನನ್ನಂತವರನ್ನ ಮನೆಗೆ ಸೇರಿಸುವುದೇ ನಿನ್ನ ದೊಡ್ಡ ಗುಣ.''

"ಮಾವ ಏನು ಮಾತನಾಡ್ತಿದ್ದೀರಿ. ನಾನು ನಿಮ್ಮ ಮಾಲಿನಿನೇ ನಿಮ್ಮ ಕೈಯಲ್ಲಿ ಬೆಳೆದ ನಿಮ್ಮ ಮಗಳೇ ನಾನು. ಮಗಳ ಜೊತೆ ಮಾತನಾಡುವ ಮಾತೇ ಇದು.''

"ನಿಜ ಅಷ್ಟು ಅಭಿಮಾನ ಇನ್ನೂ ಇದೆಯ ಮಗಳೇ, ಹಾಗಾದ್ರೆ ಈ ಮಾವ ಇಷ್ಟು ದಿನ ಏನಾದ, ಇದ್ದಾನೋ, ಸತ್ತನೋ ಎಂದು ನೋಡಲಿಕ್ಕೆ ಬರದೇ ಇದ್ದರೂ ಒಂದು ಕಾರ್ಡ್‌ನ್ನಾದರೂ ಬರೆದೆಯಾ?''

ಮಾಲಿನಿ ಮೌನಳಾದಳು.

"ಬರಬಾರದೂಂತ ಇಷ್ಟು ದಿನ ಕಲ್ಲು ಮನಸ್ಸು ಮಾಡಿದೆ. ಆದರೆ ಒಂದೊಂದು ದಿನ ಕಳೆಯುತ್ತಿದಂತೆ ನನ್ನ ಕಲ್ಲು ಕುಸಿಯತೊಡಗಿತು. ನಿನ್ನ ನೋಡದೇ ಇರಕ್ಕಾಗಲಿಲ್ಲ ಬಂದು ಬಿಟ್ಟೆ ನಾನು ಏನು ಮಾಡಿದ್ದರೂ ನನ್ನ ಮಗಳು ಒಳ್ಳೆಯದಾಗಲಿ, ಅವಳು ಚೆನ್ನಾಗಿರಲಿ ಎಂದೇ ನನ್ನ ಅಭಿಪ್ರಾಯ. ತಪ್ಪಾಗಿದ್ದರೆ ಕ್ಷಮಿಸಮ್ಮ.''

"ಮಾವಯ್ಯ, ಇಂತಹ ಮಾತನಾಡಿ ನನ್ನ ಕೊಲ್ಲಬೇಡಿ. ನಾನು ಕೇಳಲಾರೆ, ಬೇಕಾದರೆ ಹೊಡೆದುಬಿಡಿ, ನನ್ನದೇನೂ ತಪ್ಪಿಲ್ಲ. ಆದಿನದ ಘಟನೆ ನೋಡಿ ಭಯ ಬಂದು ಪ್ರಜ್ಞೆ ತಪ್ಪಿದೆ. ಅನಂತರ ಇವರು ಸಹ ಸಮಾಧಾನ ಮಾಡಿ ಮರೆತುಬಿಡು. ಕಾಗದ ಸಹ ಬರೆಯಬೇಡ ಎಂದು ಹೇಳಿದನಂತರ ನಾನು ಸುಮ್ಮನಾಗಬೇಕಾಯಿತು'' ಎಂದು ಅನಂತಯ್ಯನವರ ಕೈ ಹಿಡಿದು ಮುಖಮುಚ್ಚಿ ಅತ್ತಳು ಮಾಲಿನಿ.

"ಸುಮ್ಮನಿರಮ್ಮ ಮಾಲಿನಿ, ಆದದ್ದು ಆಗಿ ಹೋಯಿತು.''

"ಅಮ್ಮ ಹೇಗಿದ್ದಾಳೆ, ಅತ್ತೆ ಹೇಗಿದ್ದಾರೆ?''

"ನಿಮ್ಮಮ್ಮ ಹಾಗೇ ಇದ್ದಾಳೆ. ಆಗಾಗ್ಗೆ ಹೋಗಿ ಬರ್ತೀನೆ. ನಿಮ್ಮತ್ತೆ ಈಗ ಕಾಯಿಲೆ ಬಿದ್ದಿದ್ದಾಳೆ. ಅವಳಿಗೆ ಡಯಾಬಿಟಿಸ್, ಬಿ. ಪಿ. ಇದೆ. ಲೈಟಾಗಿ ಪೆರಾಲಿಸೀಸ್ ಹೊಡೆದಿದೆ. ಅವಳ ಪಾಪ ಅವಳನ್ನು ಮುತ್ತಿದೆ. ನನಗೆ ತಲೆ ಚಿಟ್ಟು ಹಿಡಿದು ಹೋಗಿದೆ. ಆದರೆ ಬಂದದ್ದು ಅನುಭವಿಸಲೇಬೇಕಲ್ಲ'' ಎಂದು ಹೇಳಿದರು ಅನಂತಯ್ಯ.

ಮಾತನಾಡ್ತಾ ಇದ್ದಂತೆ ಟೈಂ ಪಾಸಾಗಿದ್ದು ತಿಳಿಯಲಿಲ್ಲ. ರಾತ್ರಿ ಊಟ ಆಯಿತು. ರೂಮಿನಲ್ಲಿ ಹಾಸಿಗೆ ಹಾಸಿಕೊಟ್ಟಳು ಮಾಲಿನಿ.

ಮಾವ ಏಕೆ ಬಂದಿರಬೇಕು, ಇಷ್ಟು ದಿನ ಇಲ್ಲದೇ ಇರುವುದು ಈಗ ಬಂದಿರುವುದು ಅದೂ ವಾಸು ಇಲ್ಲದಿರುವಾಗ. ಛೇ ಪಾಪ ಮಾವ ಎಷ್ಟು ಒಳ್ಳೆಯವರು. ಅವರಿಗೆ ಈ ತರಹ ಕಷ್ಟ ಬರಬಾರದಾಗಿತ್ತು. ನಮ್ಮ ಕೈಯಲ್ಲೇನಿದೆ, ಅತ್ತೆ ಮಂಚ ಹತ್ತಿ ಬಿಟ್ಟಿದ್ದಾರೆ. ಯಾರೂ ಎಷ್ಟೇ ಕೆಟ್ಟವರಾದರೂ ಇಂತಹ ಪರಿಸ್ಥಿತಿಯಲ್ಲಿ ಹೋಗಿ ನೋಡುವುದು ಕರ್ತವ್ಯ. ಅತ್ತೆಯನ್ನು ನೋಡಿ ಮಾತ ನಾಡಿಸಿಕೊಂಡು ಬರಬೇಕೆಂದುಕೊಂಡಳು ಮಾಲಿನಿ.



ಕಲಿಕೆ

ಪಾಠ ಕಲಿಯಲು ಹೊರಟ
ಕಾಲೇಜ್ ಹುಡುಗಿ
ಕೊಟ್ಟಿದ್ದಳು ಮೊದಲ ಪ್ರಾಶಸ್ತ್ಯ
ಫ್ಯಾಷನ್ ಪಾಠಕ್ಕೆ.

— ದೊಡ್ಡರಂಗೇಗೌಡ

ಸ್ನಾನ, ಕಾಫಿ ತಿಂಡಿ ಆದ ಮೇಲೆ ಅನಂತಯ್ಯನವರು "ಮಾಲಿನಿ ಇನ್ನು ಮಧ್ಯಾಹ್ನ ನಾನು ಹೊರಟು ಬಿಡ್ತೀನಿ. ಬರಬಾರದೂಂತ ಇದ್ದೆ, ಬಂದುಬಿಟ್ಟೆ ನೀನು ಸಂತೋಷ ವಾಗಿರುವುದು ನೋಡಿ ನನ್ನ ಮನಸ್ಸಿಗೆ ಸಮಾಧಾನವಾಯಿತು. ಇನ್ನು ಅವಳು. ದಿನ ಎದುರು ನೋಡ್ತಾ ಇದ್ದಾಳೆ. ಗಂಡನಾಗಿ ನನ್ನ ಕರ್ತವ್ಯ ಮಾಡಲೇಬೇಕಲ್ಲ.''

"ಮಾವಯ್ಯ ಅತ್ತೆಯನ್ನು ನೋಡಲು ನಾನು ಬರ್ತೇನೆ.''

"ಬೇಡ ಮಾಲಿನಿ, ಕಾಗದವೇ ಬರೆಯಬೇಡ ಎಂದು ಹೇಳಿದ ವಾಸು. ಈಗ ನೀನು ಊರಿಗೆ ಬಂದರೆ ಸುಮ್ಮನಿರುತ್ತಾನಾ. ಅಲ್ಲದೆ ನಿನ್ನ ಅತ್ತೆಯನ್ನು ನೋಡಿದರೆ ನೀನು ಹೆದರಿಕೊಂಡು ಬಿಡ್ತೀಯಾ. ಮೊದಲಿನ ತರಹ ಇಲ್ಲ, ವಿಕಾರವಾಗಿಬಿಟ್ಟಿದ್ದಾಳೆ. ಅಲ್ಲದೆ ನಿನ್ನ ನೋಡಿದ್ರೆ ಅವಳ ಮನದಲ್ಲಿ ಇನ್ನೇನೋ ಯೋಚನೆ ಹುಟ್ಟಬಹುದು. ಇಲ್ಲದ ರಗಳೆ ಏಕೆ? ಅಲ್ಲದೆ ನನಗ್ಯಾನೆ ಯಾರಿದ್ದಾರೆ. ಅವಳು ಹೊರಟುಹೋದ ಮೇಲೆ ಇರೋ ಆಸ್ತೀನ ಮಾರಿ ನಿನ್ನಲ್ಲಿಗೆ ಬಂದು ಅರ್ಚನಳನ್ನು ಆಟ ಆಡಿಸಿಕೊಂಡು ಇರ್ತೇನೆ. ಅಲ್ಲದೆ ತಿರುಪತಿಗೆ ಹೋಗಬೇಕೂಂತ ಹೇಳಿದೆ ಹೋಗಿ ಬಾಮ್ಮ. ಆ ತಿರುಪತಿ ತಿಮ್ಮಪ್ಪನ ದರುಶನ, ಆತನ ಸೇವೆ ಮಾಡಿಕೊಂಡು ಬಾ. ನಿನಗೆ ಒಳ್ಳೆದಾಗುತ್ತೆ'' ಎಂದು ಅನಂತಯ್ಯ ಹೇಳಿದರು.

"ಸರಿ ಮಾವ, ನೀನು ಹೇಳಿದಂತೆ ಆಗಲಿ. ಹೊರಡುವ ಹೊತ್ತಿಗೆ ಅಡುಗೆ ನಾನೇ ಮಾಡ್ತೀನಿ. ನಿನಗಿಷ್ಟವಾದ ಮೇಲೋಗರು, ಮಜ್ಜಿಗೆ ಹುಳಿ ಮಾಡ್ತೀನಿ'' ಎಂದು ಹೇಳಿ ಮಾಲಿನಿ ಅಡುಗೆ ಮನೆ ಕಡೆ ಹೊರಟಳು.

ಅನಂತಯ್ಯನವರು ಅರ್ಚನಾಳನ್ನು ಎತ್ತಿಕೊಂಡರು.

ಏಳು

ಆನೆ ಮೂಸಿ ನೋಡಿ ಕೊಲ್ಲುತ್ತೆ. ಹಾವು ಮೂಸುತ್ತಲೇ ಕೊಲ್ಲುತ್ತೆ, ರಾಜ ಪೋಷಿಸುತ್ತ ಕೊಲ್ಲುತ್ತಾನೆ. ವಂಚಕ ಮಾತ್ರ ನಗುನಗುತ್ತ ಕೊಲ್ಲುತ್ತಾನೆ.

"ಪೋಸ್ಟ್'' ಎಂಬ ಸದ್ದು ಕೇಳಿ ಮಾಲಿನಿ ಹೊರಬಂದು ಲೆಟರ್ ತೆಗೆದುಕೊಂಡಳು.

"ಸಾರಿ ಡಾರ್ಲಿಂಗ್, ನಾನು ಅರ್ಜೆಂಟ್ ಮೀಟಿಂಗ್ ಇದೆಯಂತೆ. ಈದಿನ ಹೊರಡುತ್ತಿದ್ದೇನೆ. ಎಷ್ಟು ದಿನ ಆಗುತ್ತೊ ಗೊತ್ತಿಲ್ಲ. ಆದ್ದರಿಂದ ನೀನು ಚಿತ್ತೂರಿಗೆ ಬರಬೇಡ. ನಾನು ಊರಿಗೆ ಬಂದ ಮೇಲೆ ಒಟ್ಟಿಗೆ ತಿರುಪತಿಗೆ ಹೋಗೋಣ. ಪಾಪು ಹೇಗಿದ್ದಾಳೆ, ಅವಳಿಗೆ ನನ್ನ ಸಿಹಿ ಮುತ್ತುಗಳು.'' ವಾಸು.

ಆಕಾಶದಲ್ಲಿ ಹಾರಾಡುತ್ತಿದ್ದವಳಿಗೆ ಒಮ್ಮೇಲೇ ಎತ್ತಿ ಬಿಸಾಕಿದಂತೆ ಆಯಿತು ಮಾಲಿನಿಗೆ. ನಾಗಮ್ಮ ಸಹ ಇರಲಿಲ್ಲ, ಆಕೆಯನ್ನು ತಾಯಿಯನ್ನು ನೋಡಿಕೊಳ್ಳಲು ಕಳುಹಿಸಿದ್ದಳು ಮಾಲಿನಿ. ಮನೆ ಕೆಲಸಕ್ಕೆ ಒಂದು ಹುಡುಗಿಯನ್ನು ನೇಮಿಸಿಕೊಂಡಿದ್ದಳು.

ಒಂಟಿ ಆದಂತೆ ಅನ್ನಿಸಿತು. ವಾಸು ಈಗ ವರ್ಕ್‌ವರ್ಕ್ ಆಗಿದ್ದನು. ಹಣ ಅಧಿಕಾರ ಸಂಪಾದನೆಯೇ ಅವನ ಗುರಿ ಆಗಿತ್ತು. ಅವನ ಅದೃಷ್ಟವೂ ಹಾಗೆ ಇತ್ತು. ವಾಸು ಟೂರ್‌ನಲ್ಲಿದ್ದರೆ ಮಾಲಿನಿ, ಅರ್ಚನಳನ್ನು ಆಟ ಆಡಿಸುವುದರಲ್ಲೇ ಆನಂದ ಪಡತೊಡಗಿದಳು. ತಾಯಿ ದೂರ ಇದ್ದಳು. ಇನ್ನು ಮಾವ ಮಾತ್ರ ಮೊದಲಿನಿಂದಲೂ ತನ್ನನ್ನು ಕಂಡರೆ ಅಕ್ಕರೆ, ಅನುರಾಗ. ಆದರೆ ವಿಷ ಗಳಿಗೆ ಕೆಲಕಾಲ ದೂರವಾಗಿದ್ದರು. ಇದ್ದಕ್ಕಿದಂತೆ ಪ್ರತ್ಯಕ್ಷವಾಗಿ ಮರಳುಗಾಡಿನಲ್ಲಿ ನೆಂದ ಮರಳಿನಿಂದ ಹೇಗೆ ಪಸೆ ಆರುವುದಿಲ್ಲವೋ ಹಾಗೆ ಕಂಡು ಮತ್ತೆ ಕಾಣೆಯಾಗಿಬಿಟ್ಟಿದ್ದರು. ಊರಿಗೆ ಹೋದ ಮಾವ ಮತ್ತೆ ಇಷ್ಟು ದಿನವಾದರೂ ಬರಲಿಲ್ಲ. ಕಾಗದ ಸಹ ಬರೆಯದೆ ಇರಲಿಕ್ಕೆ ಕಾರಣ ಹುಡುಕತೊಡಗಿದಳು ಮಾಲಿನಿ. ಆದರೆ ಮಾರನೆ ದಿನವೇ ಅನಿರೀಕ್ಷಿತ ತಿರುವು ಪಡೆಯಿತು.

ಮಾಲಿನಿ ಅಡುಗೆ ಮಾಡಿದಳು. ಅರ್ಚನ ಊಟ ಮಾಡಿ ಮಲಗಿದ್ದಳು. ಕೆಲ್ಸದ ಹುಡುಗಿ ಕೆಲ್ಸ ಮಾಡಿ ಹೋಗಿದ್ದಳು. ಕಾದಂಬರಿ ಹಿಡಿದು ಓದಲು ಕುಳಿತ ಮಾಲಿನಿಗೆ 'ಪೋಸ್ಟ್' ಸದ್ದು ಕೇಳಿ ಹೊರಬಂದಳು. ಪೋಸ್ಟ್ ಯಾರಿರದಿರಬಹುದು, ಯೋಚಿಸಿ ಓಪನ್ ಮಾಡಿದಳು. ಪರಿಚಯವಿಲ್ಲದ ಅಕ್ಷರ, ಆತುರದಿಂದ ಓದಿದಳು. ಅವಳಿಗೆ ಅಯೋಮಯವಾಯಿತು, ಅರ್ಥವಾಗಲಿಲ್ಲ. ಅನಂತರ ನೀರು ಕುಡಿದು ನಿಧಾನವಾಗಿ ಓದತೊಡಗಿದಳು.

'ಶ್ರೀಮತಿ ಮಾಲಿನಿ ಅವರಿಗೆ ನನ್ನ ಆಶೀರ್ವಾದಗಳು. ನಾನು ನಾಗಪ್ಪ ಎಂದು. ನಿಮಗೆ ಗೊತ್ತಿಲ್ಲ. ಆದರೆ ನೀನು, ನಿಮ್ಮ ಮಾವ ಅನಂತಯ್ಯ ನನಗೆ ಗೊತ್ತು. ನಿಮ್ಮ ಮಾವ ನನ್ನ ಸ್ನೇಹಿತ. ಆದರೆ ಈಚೆನ ದಿನಗಳಲ್ಲಿ ಅವನ ಆಟವೇ ವಿಚಿತ್ರವಾಗಿದೆ. ನಿಮ್ಮ ಅತ್ತೆಯನ್ನು ಸರಿಯಾಗಿ ನೋಡಿಕೊಳ್ಳುತ್ತಿಲ್ಲ. ಆಕೆಗೆ ಅನೇಕ ಕಾಯಿಲೆ, ಆದರೆ ಟ್ರೀಟ್‌ಮೆಂಟ್ ಕೊಡಿಸುತ್ತಿರಲಿಲ್ಲ. ಆಕೆಯನ್ನು ಹಿಂಸಿಸುತ್ತಿದ್ದನಂತೆ. ಕೊನೆಗೆ ಊಟ ಕೊಡುತ್ತಿರಲಿಲ್ಲ. ಹಾಗೂ ಯಾರನ್ನೂ ಮನೆ

ಒಳಗೆ ಸೇರಿಸುತ್ತಿರಲಿಲ್ಲ. ಕೊನೆಗೆ ನಿಮ್ಮ ಅತ್ತೆ ತೀರಿಕೊಂಡಳು. ಅವರ ಅಪರಕರ್ಮ ಮಾಡಿ ಮುಗಿಸಿದ ನಿಮ್ಮ ಮಾವ. ಈಚೆಗೆ ಅವನ ನಡತೆಯೇ ಸರಿ ಇಲ್ಲ. ಬೆಳ್ಳಗಿರುವುದೆಲ್ಲ ಹಾಲು ಎಂದು ನಂಬುವ ನಿನ್ನ ಮುಗ್ಧತೆಗೆ ಮಸಿಯಾಗುವ ಮುನ್ನ ಎಚ್ಚರಿಸಿದ್ದೇನೆ. ಹುಶಾರಾಗಿರಿ ನಾಗಪ್ಪ.'

ಮಾಲಿನಿ ಯೋಚಿಸಿದಳು ಯಾರು ಈ ನಾಗಪ್ಪ? ಈತ ಅಸಲು ನಾಮಧಾರಿಯಲ್ಲ. ಮಾವನ ಬಗ್ಗೆ ತಿಳಿದುಕೊಂಡಿರುವ ವ್ಯಕ್ತಿ. ಈ ಕಾಗದ ನನಗೆ ಮಾತ್ರ ಬರೆದಿರುವನೋ, ಇಲ್ಲ ವಾಸುವಿಗೆ ಬರೆದಿರಬಹುದಾ? ಏನೇನು ಬರೆದಿರಬಹುದು. ಇಂತಹ ಕಾಗದ ವಾಸುವಿಗೆ ಸಿಕ್ಕಿದರೆ ಆತನ ಪ್ರತಿಕ್ರಿಯೆ ಹೇಗಿರಬಹುದು ಎಂದು ನೆನೆದು ಭಯಗೊಂಡಳು. ಕಾಗದವನ್ನು ಹರಿದು ಹಾಕಿದಳು. ಅಲ್ಪ ಸ್ವಲ್ಪ ಇದ್ದ ಶಾಂತಿ ಸಹ ಹೊರಟುಹೋಯಿತು. ತಿಳಿಯಾದ ಕೊಳಕ್ಕೆ ಕಲ್ಲು ಬಿದ್ದು ಅದು ರಾಡಿಯಾಗತೊಡಗಿತು.

*   *

*   *   *

ಆರು ವರ್ಷ ಆಡುತ್ತ ಆಗಿ ಹೋಯಿತು. ಆ ಅವಧಿಯಲ್ಲಿ ಅನೇಕ ಬದಲಾವಣೆ ಆಗಿ ಹೋಯಿತು. ವಾಸುವಿಗೆ ಮಂಗಳೂರಿಗೆ ವರ್ಗವಾಗಿತ್ತು. ಅಲ್ಲಿಯ ಬ್ರಾಂಚ್‌ಗೆ ಅವನಿಗೆ ಆಫೀಸರ್ ಇನ್‌ಚಾರ್ಜ್ ಆಗಿ ಪ್ರಮೋಶನ್ ಕೊಟ್ಟಿದ್ದರು. ಮಾಲಿನಿಯಲ್ಲಿ ಒಂದು ಹಿರಿಯತನ ಆವರಿಸಿತ್ತು. ಅವಳಿಗೆ ಈ ಅವಧಿಯಲ್ಲಿ ಎರಡು ಸಲ ಅಬಾರ್ಶನ್ ಆಗಿತ್ತು. ವ್ಯಕ್ತಿ ಸ್ವಲ್ಪ ಇಳಿದು ಹೋಗಿದ್ದಳು. ಆಗಾಗ್ಗೆ ಮೈ ಹುಶಾರಿರುತ್ತಿರಲಿಲ್ಲ. ಅರ್ಚನ ಈಗ ಫಸ್ಟ್ ಸ್ಟಾಂಡರ್ಡ್‌ಗೆ ಸೇರಿದ್ದಳು. ಅನಂತಯ್ಯನವರು ತಮ್ಮ ಆಸ್ತಿಯನ್ನು ಮಾರಿ ಮಾಲಿನಿಯ ಮನೆಯಲ್ಲಿ ಇದ್ದರು. ಮಾಲಿನಿ ತಾಯಿ ದೈವಾಧೀನರಾಗಿದ್ದರು.



ಕಾನೂನು ಈ ಜಗತ್ತಿನ ಎಲ್ಲ ಸಂತೋಷಗಳ ಮೂಲ.

— ಡಾ. ಬಿ. ಆರ್. ಅಂಬೇಡ್ಕರ್

ಅಗಲಿಕೆಯ ಪ್ರತಿಯೊಂದು ವಿಧದಲ್ಲೂ ಮೃತ್ಯುವಿನ ಒಂದೇ ಒಂದು ಮುಖ ದರ್ಶನವಾಗುತ್ತದೆ.

— ಜಾರ್ಜ್ ಎಲಿಯಟ್

ಅಳತೆ ಮೀರಿದ ಸಂಪತ್ತು ತಲೆನೋವಿಗೆ ಮೂಲ.

— ಪಿಲಿಪ್ಸ್ ಷೈಲಿ

ಮಾನವ ವಿಜ್ಞಾನ ಒಂದು ಅನಿಶ್ಚಿತ ಊಹೆ.

— ಮ್ಯಾಥ್ಯೂ ಪ್ರೇಯರ್

ಸಂಗ್ರಹ : ಕೆ. ಶೋಭಾ

ಮಾವನ ಬಗ್ಗೆ ಅನಾಮಧೇಯ ಪತ್ರ ಬಂದದ್ದು ಮಾಲಿನಿ ಯಾರಿಗೂ ಹೇಳಲಿಲ್ಲ. ಅಲ್ಲದೆ ಮಾವನನ್ನು ನೋಡುತ್ತಿದ್ದರೆ ಪತ್ರದಲ್ಲಿ ಬರೆದಿರುವುದೆಲ್ಲ ಸುಳ್ಳು ಎಂದು ಅವಳ ಮನಸ್ಸಿಗೆ ಅನ್ನಿಸುತ್ತಿತ್ತು. ಅಲ್ಲದೆ ವಾಸು ಸಹ ಟೂರ್‌ನಲ್ಲಿರುತ್ತಿದ್ದ. ಅವನು ಸಹ

ಅನಂತಯ್ಯನವರನ್ನು ಅಭಿಮಾನದಿಂದ ನೋಡುತ್ತಿದ್ದನು.

"ಸರಿಯಾದ ಟೈಂಗೆ ನಿಮ್ಮ ಮಾವ ಬಂದು ನಮಗೆ ಉಪಕಾರ ಆಯಿತು. ನಾನು ಇಲ್ಲ, ಅವರೂ ಇಲ್ಲದಿದ್ದರೆ ನಿನಗೆ ತುಂಬ ಕಷ್ಟವಾಗುತ್ತಿತ್ತು. ಅವರು ಇರುವುದರಿಂದ ಹಿರಿಯರೊಬ್ಬರು ಮನೆಯಲ್ಲಿದ್ದಾರೆ ಎಂಬ ನೆಮ್ಮದಿ ಇರುತ್ತೆ. ಅಲ್ಲದೆ ನಿನ್ನ ಹಾಸ್ಪಿಟಲ್‌ಗೆ ಕರ್ಕೊಂಡು ಹೋಗ್ತಾರೆ, ಮಾರ್ಕೆಟಿಂಗ್ ಮಾಡ್ತಾರೆ. ಅಲ್ಲದೆ ಅರ್ಚನ ಅಜ್ಜ ಅಜ್ಜ ಎಂದು ಎಷ್ಟೊಂದು ಅಂಟಿಕೊಂಡು ಬಿಟ್ಟಿದ್ದಾಳೆ'' ಎಂದು ಹೇಳಿದನು ವಾಸು.

"ಹೌದೂಂದ್ರೆ ಮಾವ ಇಲ್ಲದಿದ್ದರೆ ನನಗೆ ತುಂಬ ಕಷ್ಟ ಆಗುತ್ತಿತ್ತು. ಅರ್ಚನಳಿಗೆ ಸ್ನಾನ ಮಾಡಿಸಿ, ಕಾನ್ವೆಂಟ್ ಡ್ರೆಸ್ ಹಾಕಿ, ಶೂ ಹಾಕಿ, ತಿಂಡಿ ತಿನ್ನಿಸಿ ತಾವೇ ಸ್ಕೂಲಿಗೆ ಕರ್ಕೊಂಡು ಹೋಗಿ ಬಿಟ್ಟು ಬರ್ತಾರೆ. ಸಾಯಂಕಾಲ ವಾಕಿಂಗ್‌ಗೆ ಕರ್ಕೊಂಡು ಹೋಗ್ತಾರೆ.'' ಮಾಲಿನಿ ಹೇಳುತ್ತಿದ್ದಳು.

"ನಾನು ಟೂರ್ ಹೋಗಬೇಕು ನಾಳೆ.''

"ವಯಸ್ಸಾಗ್ತಾ ಬಂತು, ಇನ್ನೂ ಎಷ್ಟು ದಿನ ಹೀಗೇ ಸುತ್ತುತ್ತೀರಾ?''

"ಏನ್ಮಾಡೋದು, ನನ್ನ ಕೆಲ್ಸ ಅದೇ ತಾನೆ. ಒಂದು ಕಾಲದಲ್ಲಿ ನೀನೇ ಹೇಳಿದ್ದೆ. ನಾವು ಜೀವನದಲ್ಲಿ ಮುಂದುವರೆಯಬೇಕು, ಕೆಲ್ಸದಲ್ಲಿ ಮೇಲೇರಬೇಕು, ಆಫೀಸರ್ ಆಗಬೇಕೆಂದು. ಆಸೆಗೆ ತಕ್ಕ ಹಾಗೆ ನಾನು ಆಫೀಸರ್ ಆಗಿದ್ದೇನೆ. ಈಗ ಜವಾಬ್ದಾರಿ ಸಹ ಹೆಚ್ಚಿದೆ.''

"ಹೌದು ಹೀಗೆ ಆಗೂತ್ತೆಂದು ತಿಳಿದಿದ್ದರೆ ಆಫೀಸರ್‌ಗಿರಿ ಬೇಡಾಂತ ಹೇಳುತ್ತಿದ್ದೆ.''

"ಈಗ ಏನಾಗಿದೆ ಮಾಲಿ?''

"ಏನೂ ಆಗಿಲ್ಲ. ಎಲ್ಲ ಸೌಕರ್ಯ ಸಿಕ್ಕಿದೆ. ಆದರೆ ಹೆಂಡ್ತಿಗೆ ಬೇಕಾದ ಮುಖ್ಯವಾದ ಗಂಡನ ಸನಿಹ ಮಾತ್ರ ದೂರವಾಗಿದೆ. ಮನೇಲಿ ಇರೋದೆ ತಿಂಗಳಲ್ಲಿ ಮೂರ್‍ನಾಲ್ಕು ದಿನ ಅಷ್ಟೇ. ಹೋಟೆಲೂಟ, ಎಲ್ಲ ಕಡೆಯ ನೀರು, ನಿಮ್ಮ ಮೈ ಆರೋಗ್ಯ ಹೇಗಾಗಬೇಡ.''

"ಕೊರಗಬೇಡ ಚಿನ್ನ, ಕೆಲವು ಸೌಕರ್ಯಬೇಕಾದ್ರೆ ಕೆಲವನ್ನು ಬಿಡಬೇಕಾಗುತ್ತೆ. ಇನ್ನೇನು ಮೂರ್‍ನಾಲ್ಕು ವರ್ಷ. ಅನಂತರ ಆಫೀಸಿಗೆ ಹಾಕಿಸಿಕೊಂಡು ನಿನ್ನ ಹತ್ತಿರವೇ ಇರುತ್ತೇನೆ.'' ಎನ್ನುತಿದ್ದ ವಾಸು.

ಮಾಲಿನಿ ಒಂಟಿಯಾಗಿರುತ್ತಿದ್ದಳು. ಅನಂತಯ್ಯನವರು ಮೊದಲಿನಂತೆ ಹೆಚ್ಚು ಮಾತನಾಡದ ಮೌನಿಗಳಾಗಿರುತ್ತಿದ್ದರು. ಅವರ ಬಳಿ ಮಾಲಿನಿ ಮನ ಬಿಚ್ಚಿ ಮಾತನಾಡುತ್ತಿದ್ದಳು. ಅವರ ಸೇವೆ ಕಂಡು ಮೂಕಳಾಗಿ ಬಿಡುತ್ತಿದ್ದಳು. ಇಂತಹ ಟೈಂನಲ್ಲಿ ಮಾವ ಇರದಿದ್ದರೆ ತಾನು ಹುಚ್ಚಿಯಾಗಿಬಿಡುತ್ತಿದ್ದೆ ಎಂದುಕೊಳ್ಳುತ್ತಿದ್ದಳು. ಆದರೆ ಅವಳಿಗೆ ಅನಾಮಧೇಯ ಪತ್ರದ ವಿಷಯಗಳೇ ವಿಷವಾಗಿ ಕೊಲ್ಲುತ್ತಿತ್ತು. ಅದನ್ನು ಹೇಗೆ ಮಾವನಲ್ಲಿ ಪ್ರಸ್ತಾಪಿಸುವುದು ಎಂದು ಮನದಲ್ಲಿ ಹೊಯ್ದಾಟ ನಡೆಸುತ್ತಿದ್ದಳು. ಎರಡು ಮೂರು ಬಾರಿ ಅದರ ವಿಷ್ಯ ಪ್ರಸ್ತಾಪಿಸಲು ಪ್ರಯತ್ನಿಸಿ ಮಾವನ ಬಳಿ ಬಂದಾಗ, ಅವರ ಸ್ಥಿತಪ್ರಜ್ಞತೆಯ ಮುಖ ನೋಡಿ, ಕೇಳಲು ಬಾಯಿ ಬಾರದೆ ಹೊರಟು ಹೋಗುತ್ತಿದ್ದಳು.

ಆ ದಿನ ಊಟ ಮಾಡಿ ಅನಂತಯ್ಯನವರು ಬೆಡ್ ಮೇಲೆ ಪುಸ್ತಕವೊಂದನ್ನು ಓದುತ್ತ ಇದ್ದರು. ಅರ್ಚನ ಸ್ಕೂಲಿಗೆ ಹೋಗಿದ್ದಳು. ದಿನಕಳೆದಂತೆ ಮಾಲಿನಿ ಅನುಮಾನವನ್ನು ಅದುಮಿಟ್ಟುಕೊಳ್ಳಲು ಅಸಮರ್ಥಳಾದಳು.

"ನಿದ್ರೆ ಬರಲಿಲ್ಲವಾ ಮಾವ, ನೀರು ಬೇಕಾ ಮಾವ'' ಎಂದೆಲ್ಲ ಕೇಳುತ್ತಿದ್ದಳು.

"ಏನೂ ಬೇಡಮ್ಮ ಕಾದಂಬರಿ ಚೆನ್ನಾಗಿತ್ತು. ಓದಿ ಮುಗಿಸಿಬಿಟ್ಟು ಮಲಗ್ತೇನೆ.'' ಅನಂತಯ್ಯ ಹೇಳಿದರು.

"ಯಾವ ಕಾದಂಬರಿ ಮಾವ?''

"ತ್ರಿವೇಣಿ ಬರೆದಿರುವುದು ಶರಪಂಜರ ಕಣಮ್ಮ.''

"ನಾನು ಓದಿದ್ದೇನೆ. ಕಾವೇರಿ ಪಾತ್ರ ತುಂಬ ಚೆನ್ನಾಗಿದೆ. ಆದರೆ ಆಕೆಗೆ ಹಾಗಾಗಬಾರದಾಗಿತ್ತು.''

"ಹೌದಮ್ಮ ಆಕೇನ ಯಾರೂ ಅರ್ಥ ಮಾಡಿಕೊಳ್ಳಲೇ ಇಲ್ಲ. ಪ್ರೀತಿಯಿಂದ ವಂಚನೆ ಆದರೆ ಹಾಗೇ ಆಗೋದು. ಮನಸ್ಸು ಅನ್ನೋದು ಬಹು ಸೂಕ್ಷ್ಮ. ಅಂದ ಹಾಗೆ ನಿನ್ನ ಮನಸ್ಸಿನಲ್ಲಿ ಏನೋ ಇದೆ. ನಿನ್ನ ನೋಡ್ತಾ ಇದ್ದಾಗಲೆಲ್ಲ ನೀನು ಯಾಕೋ ಕೊರಗ್ತಾ ಇದ್ದೀಯಾಂತ ಅನ್ನಿಸ್ತಿದೆ. ನನ್ನಲ್ಲೂ ನಿನಗೆ ನಾಚಿಕೆಯೋ, ಇಲ್ಲ ಹೇಳಿಕೊಳ್ಳಬಾರದೂಂತ ಇದೆಯಾ, ಅದೇನು ಹೇಳಮ್ಮ. ನನ್ನ ಕೈಲಾದ್ದು ಮಾಡ್ತೇನೆ.''

ಮಾಲಿನಿಗೆ ಸ್ವಲ್ಪ ಧೈರ್ಯ ಬಂತು.

"ಬಹಳ ದಿನಗಳಿಂದ ಒಂದು ಅನುಮಾನ. ನಿಮ್ಮಲ್ಲಿ ಕೇಳಬೇಕೂಂತ ಇದ್ದೆ ಆದರೆ ಕೇಳಲಿಲ್ಲ. ನಿಮಗೆ ಬೇಜಾರಾಗುತ್ತೇನೋ ಅಂತ.''

"ಅಂದರೆ ವಿಷ್ಯ ನನಗೆ ಸಂಬಂಧ ಪಟ್ಟಿದ್ದೂಂತ ಕಾಣ್ಸತ್ತೆ. ಹುಚ್ಚಿ, ಈ ಮಾವನಲ್ಲಿ ಕೇಳಕ್ಕೆ ಮೀನ ಮೇಸ ಎಣಿಸಬೇಕೆ. ಅದೇನು ಕೇಳು, ನನಗೇನೂ ಬೇಸರವಿಲ್ಲ.''

"ಏನಿಲ್ಲ ಮಾವ, ಹಿಂದೆ ನನಗೊಂದು ಲೆಟರ್ ಬಂದಿತ್ತು.''

"ಲೆಟರ್ ಯಾವಾಗ, ಯಾರು ಬರೆದದ್ದು?''

"ಅದೇ ಮಾವ ಅತ್ತೆ ನಿಧಾನರಾದಾಗ ಯಾರೋ ನಾಗಪ್ಪ ಅಂತೆ.''

"ನಾಗಪ್ಪ! ಓ ಅವನ, ಏನು ಬರೆದಿದ್ದ?''

ಹೇಗೆ ಹೇಳಬೇಕೆಂದು ಮಾಲಿನಿಗೆ ತೋಚಲಿಲ್ಲ.

"ಹೇಳು ಮಾಲಿನಿ, ನನ್ನ ಬಗ್ಗೆ ಬರೆದಿದ್ದನಾ?''

"ಹೌದು ಮಾವ, ಏನೇನೋ ಕೆಟ್ಟದಾಗಿ ಬರೆದಿದ್ದ.''

ಅನಂತಯ್ಯ ಮಾತನಾಡಲಿಲ್ಲ. ಒಂದು ಕ್ಷಣ ಮೌನವಾಗಿ ಕುಳಿತರು. ಅವರ ಕಣ್ಣುಗಳಲ್ಲಿ ನೀರು ಹರಿಯಿತು. ಅದನ್ನು ನೋಡಿದ ಮಾಲಿನಿಗೆ ತಾನು ಏಕಾದ್ರೂ ಹಳೆಯದನ್ನು ಕೇಳಿದನೋ ಎನ್ನಿಸಿತು.

"ಹೋಗಲಿ ಬಿಡು ಮಾವ, ಯಾರೋ ಏನೋ ಬರೆದದ್ದಕ್ಕೆ ನಾನು ತಲೆ ಕೆಡಿಸಿಕೊಂಡಿದ್ದೇ ತಪ್ಪು ಆಯಿತು.'' ಹೇಳಿದಳು.

"ಮಾಲಿನಿ, ನಾನು ನಿನ್ನ ತುಂಬ ಪ್ರೀತಿಸ್ತೇನೆ. ಪ್ರಿಯಕರ ಎಂದು ತಪ್ಪು ತಿಳಿಯಬೇಡ, ಮಗಳನ್ನು ಪ್ರೀತಿಸುವ ಹಾಗೆ ಪ್ರೀತಿಸುತ್ತೇನೆ. ಚಿಕ್ಕಂದಿನಿಂದ ನೀನು ನನ್ನ ನೆರಳಲ್ಲಿ ಬೆಳೆದವಳು. ಮಕ್ಕಳಿಲ್ಲದ ಕೊರತೆ ನೀಗಿಸಿದೆ. ಆದರೆ ನೋಡುವ ಕಣ್ಣು ಅರಿಯದ ಮನಸ್ಸು, ನನಗೆ ಅನ್ಯಾಯ ಮಾಡಿತು. ಆದರೆ ಯಾರು ಏನೇ ಹೇಳಿದರೂ ನನ್ನ ಪ್ರೀತಿ ಇನ್ನೂ ಹೆಚ್ಚಾಗುತ್ತಿತ್ತೆ ವಿನಾ ಕಡಿಮೆ ಆಗುತ್ತಿರಲಿಲ್ಲ. ಐದು ವರ್ಷದ ಹಿಂದಿನ ಮಾತು. ಆರಿ ತಂಗಳಾಗಿ ಮಣ್ಣಲ್ಲಿ ಮಣ್ಣಾದ ಮಾತನ್ನು ಈಗ ನೀನು ಕೇಳುತ್ತಿದ್ದೀಯಾ. ಹೌದು ದಿಟ ಎಂದರೆ ನೀನು ನನ್ನ ಅಸಹ್ಯಿಸಿಕೊಳ್ತಿಯಾ.

ಇಲ್ಲ, ಅದೆಲ್ಲ ಸುಳ್ಳು ನಾನು ಹಾಗೆ ಮಾಡ್ತೀನಾ ಎಂದು ಕೇಳಿದರೆ, ನೀನು ಇಲ್ಲ ಎನ್ನುತ್ತಿ. ಇಲ್ಲಿ ನಿಜವೂ ಸುಳ್ಳಾಗುತ್ತೆ, ಸುಳ್ಳು ಸತ್ಯವಾಗುತ್ತೆ. ಆದ್ದರಿಂದ ಈ ಸತ್ತುಹೋದ ಮಾತನ್ನು ಮತ್ತೆ ಆಡಬೇಡ. ಒಂದು ವೇಳೆ ನಿನಗೆ ನನ್ನ ಕಂಡರೆ ಅಸಹ್ಯ, ಆಗಲ್ಲ ಎಂದು ಹೇಳು, ಇಂದೇ ನಾನು ನಿನ್ನ ಕಣ್ಣಿಗೆ ಬೀಳದಂತೆ ದೂರ ಬಹುದೂರ ಹೊರಟು ಹೋಗ್ತೇನೆ ಅಷ್ಟೇ'' ಎಂದು ಹೇಳುತ್ತ ಅಳತೊಡಗಿದರು.

ಮಾವನ ಅಳು ಕಂಡು ಮಾಲಿನಿ ಮೇಣದ ಬೊಂಬೆಯಂತಾದಳು.

"ಸಮಾಧಾನ ತಂದ್ಕೊ ಮಾವ, ಇನ್ನೆಂದೂ ನಿನ್ನ ಮನಸ್ಸಿಗೆ ತೊಂದರೆ ಕೊಡಲ್ಲ. ಮನೆಗೆ ಹಿರಿಯರು ಎಂದು ನೀನು ಬಿಟ್ಟರೆ ನನಗ್ಯಾರಿದ್ದಾರೆ. ನೀನು ಎಲ್ಲೂ ಹೋಗಕೂಡದು ಇಲ್ಲೇ ಇರಬೇಕು'' ಎಂದು ಹೇಳಿ ಒಳಗೆ ಹೊರಟಳು ಮಾಲಿನಿ.

ಮಾಲಿನಿಗೆ ರಾತ್ರಿ ನಿದ್ರೆ ಬರಲಿಲ್ಲ. ಏನೇನೋ ಕನಸು ಬೆಚ್ಚಿ ಬೀಳುತ್ತಿದ್ದಳು, ಬೆವರಿದಳು. ಬೆಳಗಿನ ಹೊತ್ತಿಗೆ ಎದೆಯಲ್ಲಿ ಒಂದು ಕಡೆ ನೋವು ಕಾಣಿಸಿಕೊಂಡದ್ದು ಹೊತ್ತಾದಂತೆಲ್ಲ ಹೆಚ್ಚಾಯಿತು. "ಎದೆನೋವು'' ಎಂದು ಚೀರಿದಳು.

ಅನಂತಯ್ಯ ದಡಬಡಿಸಿ ಎದ್ದರು. ಆಟೋ ತಂದರು. ಮಾಲಿನಿಯನ್ನು ಮೆಲ್ಲಗೆ ನಡಿಸಿಕೊಂಡು ಬಂದು ಆಟೋದಲ್ಲಿ ಕುಳ್ಳಿರಿಸಿದರು. ಅಳುತ್ತಿದ್ದ ಅರ್ಚನಳಿಗೆ ಸಮಾಧಾನ ಪಡಿಸಿ, ಮನೆಗೆ ಬೀಗ ಹಾಕಿಕೊಂಡು ಅವಳನ್ನೂ ಕರ್ಕೊಂಡು ನರ್ಸಿಂಗ್ ಹೋಂಗೆ ತೋರಿಸಿದರು. ಎಲ್ಲ ಟೆಸ್ಟ್ ನೋಡಿ ಪೆಯಿನ್ ಕಿಲ್ಲಿಂಗ್ ಟ್ಯಾಬ್ಲೆಟ್ ಕೊಟ್ಟು "ಒಮ್ಮೆ ರೆಡಿಯಲಾಜಿಕಲ್ ಇನ್‌ಸ್ಟಿಟ್ಯೂಟಗೆ ಹೋಗಿ ಬನ್ನಿ.'' ಹೇಳಿದರು.

ಅನಂತಯ್ಯ ಅಂಗೈಯಲ್ಲಿ ಜೀವ ಹಿಡಿದು ಮಾಲಿನಿಯನ್ನು ರೆಡಿಯಲಾಜಿಕಲ್ ಇನ್‌ಸ್ಟಿಟ್ಯೂಟಗೆ ಕರ್ಕೊಂಡು ಹೋದರು. ಅಲ್ಲಿ ಸ್ಪೆಶಲಿಸ್ಟ್‌ಗಳು ಮಾಲಿನಿಯನ್ನು ಪರೀಕ್ಷಿಸಿ ಅಡ್ಮಿಟ್ ಮಾಡಿಕೊಂಡು "ಡೋಂಟ್ ವರಿ, ಎಲ್ಲ ವಾಸಿ ಆಗುತ್ತೆ ಹೆದರಬೇಕಾಗಿಲ್ಲ'' ಎಂದರು.

"ಆದ್ಸರಿ, ಮಾಲಿನಿಗೆ ಬಂದಿರುವ ಕಾಯಿಲೆ ಆದರೂ ಏನು?'' ಅನಂತಯ್ಯನವರು ಗಾಬರಿಯಿಂದ ಕೇಳಿದರು.

"ಗಾಬರಿ ಏನಿಲ್ಲ, ಇನ್ನು ಇದೀಗ ಪ್ರಾರಂಭ. ಆಪರೇಶನ್‌ನಿಂದ ಆಗಿ ಹೋಗುತ್ತೆ. ಇಲ್ಲಾಂದ್ರೆ ರೇಡಿಯೋ ತೆರಪೀಲೆ ಹೊರಟುಹೋಗುತ್ತೆ'' ಎಂದು ಡಾಕ್ಟರ್ ಹೇಳಿದರು.

ಅನಂತಯ್ಯ ಕೂಡಲೇ ವಾಸುವಿಗೆ ಫೋನ್ ಮಾಡಿ ವಿಷ್ಯ ತಿಳಿಸಿದರು.

"ನನ್ನಿಂದ ನಿಮಗೆಲ್ಲ ಎಷ್ಟು ತೊಂದರೆ.'' ಊಟ ತಂದುಕೊಟ್ಟಾಗ ಮಾಲಿನಿ ಹೇಳಿದಳು.


"ಛೇ ಎಂತಹ ಮಾತು ಬಿಡು. ಕಷ್ಟ ಸುಖ ಮನುಷ್ಯರಿಗಲ್ಲದೆ ಮರಕ್ಕೆ ಬರುತ್ತೇನು. ವಾಸುವಿಗೆ ಫೋನ್ ಮಾಡಿದ್ದೇನೆ ತನ್ನ ಕೆಲಸವನ್ನು ಬೇರೆಯವರಿಗೆ ಒಪ್ಪಿಸಿ ಬೇಗ ಬರುತ್ತೇನೆಂದು ಹೇಳಿದ್ದಾನೆ'' ಎಂದರು ಅನಂತಯ್ಯ.

"ಅರ್ಚನ ಎಲ್ಲಿ?''

"ಅವಳು ಕಾನ್ವೆಂಟಿಗೆ ಹೋಗಿದ್ದಾಳೆ. ಕೆಲಸದವಳ ಕೈಯಲ್ಲಿ ಕ್ಯಾರಿಯರ್ ಕೊಟ್ಟು ಕಳುಹಿಸಿದ್ದೇನೆ.''

ವಾಸು ಬಂದವನು ಡಾಕ್ಟರನ್ನು ಕಂಡನು.

"ಹೆದರಬೇಡ ಮಾಲಿನಿ, ಏನೂ ಆಗಿಲ್ಲ. ಅನುಮಾನ ಅಷ್ಟೇ. ಪ್ರಿಕಾಷನ್‌ಗೆ ಟ್ರೀಟ್‌ಮೆಂಟ್



ಕಳುಹಿಸುತ್ತಾರೆ.''

ಮಾಲಿನಿ ನಂಬಲಿಲ್ಲ. ಅವಳಿಗೆ ತಿಳಿದಿತ್ತು, ತನಗೆ ಕ್ಯಾನ್ಸರ್ ಎಂದು.

* * * * *

ನರ್ಸಿಂಗ್ ಹೋಂನಲ್ಲಿ ಸ್ಪೆಶೆಲ್ ರೂಂನಲ್ಲಿ ಕಾಟ್ ಮೇಲೆ ಕುಳಿತು ಮಾಲಿನಿ ಯೋಚಿಸುತ್ತಿದ್ದಳು. ಯುಗಾದಿ ಯಾವತ್ತು, ದೀಪಾವಳಿ ಯಾವಾಗ ಬರುತ್ತೆ. ದಸರಕ್ಕೆ ನಾನು ಇರುತ್ತೇನೋ ಇಲ್ಲವೊ. ನಾನು ಏನಾದ್ರೂ ಹೋದರೆ ಅರ್ಚನಳ ಗತಿ ಏನು? ವಾಸು ಏನಾದ್ರೂ ಇನ್ನೊಂದು ಮದುವೆ ಮಾಡಿಕೊಳ್ತಾನಾ? ಏನೇನೋ ಯೋಚನೆ ಅವಳ ಆರೋಗ್ಯವನ್ನು ಮತ್ತಷ್ಟು ಹದಗೆಡಿಸುತ್ತಿತ್ತು. ಕ್ಯಾನ್ಸರ್ ಎಂದು ತಿಳಿದು ಬಂದಾಗಿನಿಂದ ಅರ್ಚನಳನ್ನು ಅವಳು ಎತ್ತಿಕೊಳ್ಳುತ್ತಿರಲಿಲ್ಲ, ಹತ್ತಿರವೂ ಸೇರಿಸುತ್ತಿರಲಿಲ್ಲ.

"ಏನು ಮಾತನಾಡ್ತಿಯಾ ಮಾಲಿನಿ, ಇದೇನು ಅಂಟುರೋಗ ಅಲ್ಲ, ನಿನ್ನ ಬಳಿ ಕುಳಿತುಕೊಂಡ ಕ್ಷಣ ನನಗೇನೂ ರೋಗ ಬರಲ್ಲ'' ಎಂದು ಹೇಳಿ ಬಾಯಿ ಮುಚ್ಚಿಸುತ್ತಿದ್ದನು

ಮೊದಲ ಬಿಲ್ಲನ್ನು ನರ್ಸಿಂಗ್ ಹೋಂನವರು ಕೊಟ್ಟಾಗ ವಾಸು ಪೇ ಮಾಡಿದನು. ಆದರೆ ಅವನಿಗೆ ಒಂದು ಸಾವಿರದ ಇನ್ನೂರು ರೂಪಾಯಿ ಅನ್ಯಾಯವಾಯಿತಲ್ಲ ಎನ್ನಿಸಿತು. ಅಷ್ಟು ಹಣ ಕೊಟ್ಟರೂ ಮುಂಚೆ ಹೇಗೆ ಇದ್ದಳೋ ಈಗಲೂ ಹಾಗೇ ಇದ್ದಾಳೆ. ಅಬ್ಬಬ್ಬ ಎಂದರೆ ಸರಿಯಾಗಿ ಆಹಾರ ತಿಂದರೂ ಯೋಚನೆಯಿಂದ ಸಣ್ಣಗಾಗಿದ್ದಾಳೆ ಅಷ್ಟೆ. ಡಾಕ್ಟರನ್ನ ಕೇಳಿದರೆ ಇನ್ನು ಎರಡು ಮೂರು ತಿಂಗಳು ಇರಬೇಕು ಎಂದು ಹೇಳಿದ್ದಾರೆ. ಇನ್ನು ಎಷ್ಟಾಗುತ್ತೋ ಎಂದುಕೊಂಡು ಆಫೀಸಿಗೆ ಬಂದನು ವಿಚಾರಿಸಿದನು.

"ಸರ್ ಗವರ್ನ್‌ಮೆಂಟ್ ಹಾಸ್ಪಿಟಲ್‌ನಲ್ಲಿ ಟ್ರೀಟ್‌ಮೆಂಟ್ ತಗೊಂಡರೆ ಖರ್ಚು ಮಾಡಿದ್ದು ರಿಎಮ್ಬರ್ಸ್‌ಮೆಂಟ್ ಇದೆ. ಗವರ್‌ಮೆಂಟ್ ಹಾಸ್ಪಿಟಲ್‌ನಲ್ಲಿ ಆಗಲ್ಲ ಎಂದು ಸರ್ಜನ್ ಬರೆದುಕೊಟ್ಟರೆ ಪ್ರೈವೆಟ್‌ನಲ್ಲಿ ತಗೊಂಡಾಗ ಆಗ ಅದಕ್ಕೆ ರೀಎಮ್ಬರ್ಸ್‌ಮೆಂಟ್ ಇದೆ'' ಎಂದು ಆಫೀಸ್ ಅಸಿಸ್ಟೆಂಟ್ ಹೇಳಿದನು.

ವಾಸು ಯೋಚಿಸಿದನು, ಅವನಿಗೂ ಅದು ಸರಿ ಎನ್ನಿಸಿತು.

"ಮಾಲಿನಿಯನ್ನು ಗವರ್ನ್‌ಮೆಂಟ್ ಹಾಸ್ಪಿಟಲ್‌ಗೆ ಸೇರಿಸಿದರೆ ಹೇಗೆ?''

"ಯಾಕೆ ವಾಸು, ಇಲ್ಲಿ ಚೆನ್ನಾಗಿದೆಯಲ್ಲ.'' ಅನಂತಯ್ಯ ಹೇಳಿದರು

"ಹೇಗಿದ್ದಾಳೋ ಹಾಗೇ ಇದ್ದಾಳೆ ಅಷ್ಟೆ ಬಿಲ್ ಮಾತ್ರ ದೊಡ್ಡದಾಗಿ ಕೊಡ್ತಾರೆ.''

"ಬಿಲ್ ಹೆಚ್ಚಾಯಿತು ಎಂದು ಹೇಳ್ತಿದ್ದೀರಾ?''

"ಖರ್ಚು ಮಾಡಿದ್ದಕ್ಕೂ ಉಪಯೋಗ ಇರಬೇಕಲ್ಲ. ಅಲ್ಲದೆ ಸರ್ಕಾರಿ ಹಾಸ್ಪಿಟಲ್‌ನಲ್ಲಿ ಬೇಕಾದಷ್ಟು ಎಕ್ವ್ಯುಪ್‌ಮೆಂಟ್ಸ್ ಇರುತ್ತೆ. ಡಾಕ್ಟರ್‌ಗಳು ಇರುತ್ತಾರೆ. ಅಲ್ಲದೆ ಖರ್ಚು ಮಾಡಿದ ಹಣವೂ ವಾಪಾಸು ಬರುತ್ತೆ.''

ಈ ಮನುಷ್ಯ ಹಣದ ಪಿಶಾಚಿ ಎನ್ನಿಸಿತು ಅನಂತಯ್ಯನವರಿಗೆ. ಹೆಂಡತಿ ಆರೋಗ್ಯ ಕಿಂತ ಹಣಕ್ಕೆ ಪ್ರಾಮುಖ್ಯತೆ ಕೊಡ್ತಾನಲ್ಲ ಎಂದು ತಿಳಿದು ಅವರಿಗೆ ದುಃಖವಾಯಿತು.

"ಅಳಿಯಂದಿರೆ, ಮಾಲಿನಿ ಆರೋಗ್ಯ ಮುಖ್ಯ. ಸರ್ಕಾರಿ ಆಸ್ಪತ್ರೆಯಲ್ಲಿ ಎಂತಹ ಟ್ರೀಟ್‌ಮೆಂಟ್ ಕೊಡ್ತಾರೆಂದು ನನಗೆ ಗೊತ್ತು. ಇಲ್ಲಿ ಅರ್ಧ, ಅಲ್ಲಿ ಅರ್ಧ ಎಂದರೆ ಅವಳಿಗೆ ತೊಂದರೆ, ಡಾಕ್ಟರ್‌ಗೂ ಅಯೋಮಯ ಆಗುತ್ತೆ. ಅಲ್ಲದೆ ನಿಮಗೆ ಆರ್ಥಿಕ ಮುಗ್ಗಟ್ಟು ಇದ್ದ

ನನ್ನ ಹತ್ತಿರ ಹಣ ಇದೆ, ನಾನು ಕೊಡ್ತೇನೆ.''

ವಾಸುವಿಗೆ ಕೋಪ ಬಂತು.

"ನನ್ನ ಹೆಂಡ್ತಿಗೆ ಖರ್ಚು ಮಾಡಲು ನೀವು ಯಾರು?''

"ಕ್ಷಮಿಸಿ ಅಳಿಯಂದಿರೆ, ನಿಮಗೆ ಮಾಲಿನಿ ಹೆಂಡ್ತಿ ಆಗುವ ಮೊದಲು ಅವಳು ನನ್ನ ಅಕ್ಕನ ಮಗಳು. ನನಗೆ ಮಕ್ಕಳು ಇಲ್ಲ ಇರೋ ಹೆಂಡ್ತೀನೂ ಕಳೆದುಕೊಂಡು ಈಗ ಇರೋ ಆಸರೆ ಎಂದರೆ ನನ್ನ ಮಗಳು ಒಬ್ಬಳು. ಒಬ್ಬ ತಂದೆ ಸಮಾನ ಇರುವ ವ್ಯಕ್ತಿ ತನ್ನ ಹಣವನ್ನು ಮಗಳಿಗೆ ಖರ್ಚು ಮಾಡಿದರೆ ಏನು ತಪ್ಪು?''

ವಾಸುವಿಗೆ ಕೋಪ ಬಂತು. ಅವನು ಹೊರಟುಹೋದನು. ಆಫೀಸಿಗೆ ರಜ ಹಾಕಿ ಮಾಲಿನಿ ಪಕ್ಕದಲ್ಲೇ ಇದ್ದನು. ಅವನೇ ಅವಳಿಗೆ ಊಟ ತಂದು ಕೊಡುವುದು, ಹಾಲು, ಮೊಟ್ಟೆ ಔಷಧಿ ಕುಡಿಸುವುದು, ಹಣ್ಣು ತಿನ್ನಿಸುವುದು ಮಾಡುತ್ತಿದ್ದನು. ಅರ್ಚನಳನ್ನು ಸ್ಕೂಲಿಗೆ ಕಳುಹಿಸುವುದು, ಸಾಯಂಕಾಲ ಕರ್ಕೊಂಡು ಬರುವುದು, ಪಾಠ ಹೇಳಿಕೊಡುವುದು ಮಾಡುತ್ತಿದ್ದನು. ಮಾಲಿನಿಗೆ ಎಷ್ಟೋ ರೀಲೀಫ್ ಆದಂತೆ ಆಯಿತು. ಆದರೆ ಅನಂತಯ್ಯನವರಿಗೆ ಕೆಲಸವೇ ಇರುತ್ತಿರಲಿಲ್ಲ.

"ಸುಮ್ಮನೆ ರಜ ಏಕೆ ವೇಸ್ಟ್ ಮಾಡಿಕೊಳ್ತೀರಾ, ಆಫೀಸಿಗೆ ಹೋಗಿ ಬನ್ನಿ.'' ಮಾಲಿನಿ ಹೇಳಿದಳು.

"ಏಕೆ ನಾನಿದ್ದರೆ ನಿಮ್ಮ ಮಾವನ ಕೈಯಲ್ಲಿ ಹರಟೆ ಹೊಡೆಯಲು ಆಗಲ್ಲಾಂತಾನಾ?''

"ಛೇ ಎಂತಹ ಮಾತು ಆಡ್ತೀರಾ. ನಮ್ಮ ಮಾವನ ಕೈಯಲ್ಲಿ ಮಾತನಾಡುವುದು ತಪ್ಪೇ.''

"ಹೌದು ಮಾಲಿನಿ, ನೀನು ನನ್ನ ಹೆಂಡ್ತಿ ಆದರೆ ಆವನಿಗೆ ನೀನು ಎಂದರೆ ಪ್ರಾಣ.''

"ನಮಗೆ ಎಷ್ಟೋಂದು ಸಹಾಯ ಮಾಡ್ತಾ ಇದ್ದಾರೆ.''

"ನಮಗೆ ಅಲ್ಲ, ಸೂಕ್ಷ್ಮವಾಗಿ ಹೇಳಬೇಕೆಂದರೆ ನಿನಗೆ.''

"ಇದೇನಿದು ನಿಮ್ಮ ಕೊಂಕು ಮಾತು.''

"ಕೊಟ್ಟ ಹೆಣ್ಣು ಕುಲಕ್ಕೆ ಹೊರಗು, ಗಂಡನಿಗಿಂತ ಮಾವನೇ ನಿನಗೆ ಹೆಚ್ಚು ಅಂತ ಅನ್ನಿಸಿದರೆ ನಾನೇನೂ ಹೇಳಲ್ಲ. ನನಗಿಂತ ಅವರಿಗೆ ನಿನ್ನ ಮೇಲೆ ಅಧಿಕಾರ ಇದ್ದಂತೆ ಕಾಣುತ್ತೆ. ನೋಡು ಮಾಲಿನಿ ಇದು ನನಗೆ ಇಷ್ಟವಿಲ್ಲ. ಅವರನ್ನು ಹೊರಟು ಹೋಗು ಎಂದು ಹೇಳು.''

ಗಂಡನ ನಿಷ್ಟುರವಾದ ವಾದವನ್ನು ಕೇಳಿ ಮಾಲಿನಿಗೆ ತುಂಬ ದುಃಖವಾಯಿತು. ನಿರ್ಲಿಪ್ತ ಭಾವನೆ ಅವಳಲ್ಲಿ ಅಂಕುರವಾಯಿತು.

"ಹೋಗಲಿ ಬಿಡಿ, ನನ್ನಿಂದ ಯಾರು ಯಾಕೆ ಜಗಳವಾಡಬೇಕು. ನಾನು ಇಲ್ಲಿರುವುದು ಬೇಡ. ನನಗೆ ಟ್ರೀಟ್‌ಮೆಂಟ್ ಸಹ ಬೇಡ. ಇರುವಷ್ಟು ದಿನ ನಿಮ್ಮ ಸೇವೆ ಮಾಡಿ ನಾನೇ ಕಣ್ಮುಚ್ಚುತ್ತೇನೆ.'' ಮಾಲಿನಿ ಮಾತು ಕೇಳಿ ವಾಸುವು ನಿರುತ್ತರನಾದ, ಬೆರಗಾದ. ಅವ್ಯಕ್ತವಾದ ಅನುಮಾನದ ಮುಳ್ಳು ಅವನನ್ನು ಚುಚ್ಚಿದಂತಾಯಿತು.

* * * * *

ವಾಸು ರಜ ಕ್ಯಾನ್ಸಲ್ ಮಾಡಿ ಡ್ಯೂಟಿಗೆ ಹಾಜರಾದನು. ಆಫೀಸಿನಲ್ಲಿ ಅವನು ಮೊದಲಿನ ಹಾಗೆ ಕೆಲ್ಸ ಮಾಡಲು ಆಗುತ್ತಿರಲಿಲ್ಲ. ಅವನಿಗೆ ಮಾಲಿನಿ, ಅರ್ಚನ, ಅನಂತಯ್ಯ

ಅವರುಗಳೇ ತಲೆಯಲ್ಲಿ ತುಂಬಿದ್ದರು.

ಅನಂತಯ್ಯನವರ ಪ್ರೇಮ ಮಾಲಿನಿಯ ಮೇಲೆ ಇರುವುದು ಅವನಿಗೆ ಅಸೂಯೆ ತಂದಿತ್ತು. ಒಂದೊಂದು ಬಾರಿ ಅವರು ಹೇಳುವುದು ಸರಿ, ಅವರಿಗೆ ತಾನೇ ಯಾರಿದ್ದಾರೆ ಮಗಳ ಮೇಲೆ ತಂದೆಗೆ ಪ್ರೀತಿ ಇರಬಾರದೇ?

ನೋ ತಂದೆಯಂತೆ ತಂದೆ. ಎಲ್ಲ ಕಪಟ. ಏನೋ ಮನದಲ್ಲಿ ತುಂಬಿಕೊಂಡು ಮನೆಯಲ್ಲಿ ಠಿಕಾಣಿ ಹೂಡಿದ್ದಾನೆ. ಅವನು ಹಾಗೆ ಆಡಿದರೆ ಇವಳಿಗಾದರೂ ಬುದ್ಧಿ ಬೇಡವೇ? ಅವನಾಡುವ ಹಾಡಿಗೆ ತಕ್ಕಂತೆ ಕುಣಿಯುತ್ತಾಳಲ್ಲ. ಛೇ ಏನಾಗಿ ಹೋಯಿತು, ಇದಕ್ಕೆ ಏನಾದ್ರೂ ಮಾಡಬೇಕು. ಎಂದುಕೊಂಡನು.

ಟೆಲಿಫೋನ್ ರಿಂಗ್ ಆಯಿತು. ವಾಸು ಫೋನ್ ತೆಗೆದುಕೊಂಡನು. "ಹಲೋ ವಾಸು ಹಿಯರ್" ಎಂದನು.

"ಬುದ್ಧಿ ನಾನು ನಿಂಗಮ್ಮ ಸ್ಕೂಲ್‌ತಾವ ಹೋಗಿದ್ದೆ, ಅರ್ಚನ ಇಲ್ಲ. ಮನೆಗೂ ಬಂದಿಲ್ಲ. ಪಕ್ಕದ ಮನೆಯಿಂದ ಫೋನ್ ಮಾಡ್ತಿದ್ದೀನಿ." ಒಟ್ಟಿಗೆ ಹೇಳಿದಳು.

"ಅನಂತಯ್ಯ ಮನೇಲಿ ಇಲ್ಲವೆ?"

"ಇಲ್ಲ ಬುದ್ದಿ, ಬೆಳಗ್ಗೇನೇ ಹೋದವರು ಇನ್ನೂ ಬಂದಿಲ್ಲ."

"ಸರಿ, ನಾನು ಬರ್‍ತೀನಿ ತಾಳು" ಎಂದು ಹೇಳಿ ಫೋನನ್ನಿಟ್ಟು ಆಫೀಸ್ ಮ್ಯಾನೇಜರ್‌ಗೆ ಹೇಳಿ ವಾಸು ಸ್ಕೂಟರ್ ತಗೊಂಡು ಹೊರಟನು.

ಕಾನ್ವೆಂಟ್ ಬಳಿ ಬಂದನು. ಅಲ್ಲಿ ಹುಡುಗರ್‍ಯಾರೂ ಇರಲಿಲ್ಲ.

"ಪರೀಕ್ಷೆ ಅಲ್ವ ಸರ್, ಬೇಗ ಆಗೋಗುತ್ತೆ ಟೈಂ ಆಯಿತು. ಹೊರಟು ಹೋಗಿದ್ದಾರೆ" ಎಂದು ವಾಚ್‌ಮನ್ ಹೇಳಿದನು.

ವಾಸು ಮನೆಗೆ ಬಂದನು. ನಿಂಗಮ್ಮ ಇನ್ನೂ ಗಾಬರಿಯಿಂದ ಅಲ್ಲೆ ನಿಂತಿದ್ದಳು ವಾಸುವನ್ನು ನೋಡಿ, "ಇನ್ನೂ ಬಂದಿಲ್ಲ ಬುದ್ದಿ" ಎಂದು ಹೇಳಿದಳು. ವಾಸು ಹಾಸ್ಪಿಟಲ್ ಕಡೆ ಹೊರಟನು.

ಸೆಕೆಂಡ್ ಫ್ಲೋರ್‌ನಲ್ಲಿದ್ದ ಎರಡನೆ ರೂಮಿಗೆ ಬಂದ ವಾಸು, ಬಾಗಿಲು ಹಾಕಿತ್ತು ತಳ್ಳಬೇಕೆಂದು ಕೈ ಇಟ್ಟನು. ಅಷ್ಟರಲ್ಲಿ ಒಳಗಿನಿಂದ ಮಾತು ಕೇಳಿಸಿತು. ಹಾಗೇ ನಿಂತನು.

"ಮಮ್ಮಿ, ಇವತ್ತು ನಮಗೆ ಪರೀಕ್ಷೆ ಇತ್ತು."

"ಹೌದಾ ಬೇಬಿ, ಏನು ಕೇಳಿದರು?"

"ಎ. ಬಿ. ಸಿ. ಡಿ., ಟೂ ಒನ್ ಜಡ್, ಮಗ್ಗಿ, ಕನ್ನಡ ಅ ಆ ಇ ಈ."

"ಎಲ್ಲ ಹೇಳಿ, ಬರೆದೆ ತಾನೆ."

"ಓ ಎಲ್ಲ."

"ಪಾಪು, ನಡಿ ಹೋಗೋಣ ಇನ್ನು ಮಮ್ಮಿಗೆ ಆಯಾಸ ಆಗುತ್ತೆ. ರೆಸ್ಟ್ ತಗೊಳ್ಳಲಿ" ಎಂದು ಅನಂತಯ್ಯ ಹೇಳಿದರು.

"ಕುತ್ಕೊ ಮಾವ, ನನಗೂ ಒಂಟಿಯಾಗಿರಬೇಕೆಂದರೆ ಬೇಜಾರು ಆಗುತ್ತೆ."

"ವಾಸು ಬರೋ ಹೊತ್ತಾಯಿತು."

"ಬಂದರೂ ಅವರದು ಒಂದೇ ರಾಗ, ಒಂದೇ ಹಾಡು."

"ಮಮ್ಮಿ, ಅಜ್ಜಯ್ಯ ನಮ್ಮ ಮನೇಲೇನೆ ಇರ್‍ತಾರಾ ಯಾವಾಗಲೂ."

"ಏಕಮ್ಮ, ಇಲ್ಲೇ ಇರ್‍ತಾರೆ."

"ಇಲ್ಲ, ಡ್ಯಾಡಿ ಹೇಳ್ತಾ ಇದ್ದರು. ಊರಿಗೆ ಹೊರಟು ಹೋಗ್ತಾರೆ ಎಂದು ಅದಕ್ಕೆ."

ಮಾಲಿನಿ ಮುಖ ಕಿವುಚಿತು, ಅನಂತಯ್ಯ ಸುಮ್ಮನೆ ಇದ್ದರು.

"ಮಮ್ಮಿ ಡ್ಯಾಡಿ ಟೂರ್ ಹೋಗಲ್ವಾ?"

"ಗೊತ್ತಿಲ್ಲ, ಡ್ಯಾಡೀನೆ ಕೇಳು."

"ಮಮ್ಮಿ ನೀನು ಇನ್ನೂ ಎಷ್ಟು ದಿನಾಂತ ಇಲ್ಲೇ ಇರ್‍ತೀಯಾ ಬೇಗ ಮನೆಗೆ ಬಾ."

"ಮಮ್ಮಿ ಬರೋ ವಾರ ಮನೆಗೆ ಬರ್‍ತಾಳೆ ಪಾಪು. ಮಾಲಿನಿ ನಿನಗೆ ಇಷ್ಟವಾದ ಬ್ಲೂ ಕಲರ್‌ನ ಮೈಸೂರ್ ಸಿಲ್ಕ್ ಸೀರೆ ತಂದಿದ್ದೇನೆ."

ವಾಸು ಬಾಗಿಲು ತಳ್ಳಿದ, ತೆರೆದುಕೊಂಡಿತು. ಮಾಲಿನಿ ಅಕ್ಕಪಕ್ಕದಲ್ಲಿ ಅರ್ಚನ, ಅನಂತಯ್ಯ ಕುಳಿತಿದ್ದರು.

"ಡ್ಯಾಡಿ ಬಂತು." ಅರ್ಚನ ಇಳಿದಳು. ವಾಸುವನ್ನು ನೋಡಿ ಇಬ್ಬರೂ ಬೆರಗಾದರು.

"ಪಾಪು, ನೀನು ಯಾವಾಗ ಇಲ್ಲಿಗೆ ಬಂದೆ."

"ನಾನು ಕಾನ್ವೆಂಟಿಗೆ ಹೋಗಿದ್ದೆ. ಅರ್ಚನಳ ಎಗ್ಸಾಮ್ ಆಗಿತ್ತು. ಮಮ್ಮಿನ ನೋಡಬೇಕೆಂದಳು, ಕರ್‍ಕೊಂಡು ಬಂದೆ."

"ಮನೇಲಿ ಹೇಳಲಿಲ್ಲ, ನಿಂಗಮ್ಮ ಫೋನ್ ಮಾಡಿದಳು. ನನಗೆ ಗಾಬರಿ ಆಗಿ ಬಂದೆ."

"ಆಫೀಸಿನಿಂದ ಹೀಗೇ ಬಂದಿರಾ?"

"ಹೌದು."

"ಬನ್ನಿ ಒಳಕ್ಕೆ, ಅಲ್ಲೇ ಏಕೆ ನಿಂತಿದ್ದೀರಾ?"

"ಬಾ ಅರ್ಚನ ನಾವು ಹೋಗೋಣ." ಅನಂತಯ್ಯ ಮಗುವನ್ನು ಎತ್ತಿಕೊಂಡು ಹೊರಟರು.

"ನಾನೂ ಹೋಗುತ್ತೇನೆ ಮಾಲಿ."

"ಬನ್ನಿ ನಿಮಗೊಂದು ವಿಷ್ಯ ಹೇಳಬೇಕು."

"ಏನದು ಬೇಗ ಹೇಳು ನನಗೆ ಕೆಲ್ಸ ಇದೆ."

"ಬರೋ ವಾರ ನನ್ನ ಡಿಸ್ಚಾರ್ಜ್ ಮಾಡ್ತಾರಂತೆ."

"ಹೌದಾ, ಸಂತೋಷ."

"ಏಕೆ ಹಾಗೆ ಮುಖ ಊದಿಸಿಕೊಂಡಿದ್ದೀರಾ, ನನ್ನ ಮೇಲೆ ಕೋಪಾನ?"

"ನಿನ್ನ ಮೇಲೆ ನಾನ್ಯಾಕೆ ಕೋಪ ಮಾಡಿಕೊಳ್ಳಲಿ ಮಾಡಿಕೊಂಡರೂ ಕೇಳಬೇಕಲ್ಲ." ಕೊಂಕು ಮಾತಿಗೆ ಮಾಲಿನಿಗೆ ಅಳು ಬಂದಿತು.

"ಏಕೆ ಹೀಗೆಲ್ಲ ಮಾತನಾಡ್ತೀರಾ, ಇಷ್ಟೆಲ್ಲ ಖರ್ಚು ಮಾಡಿ ಏಕೆ ನನ್ನ ಕಾಯಿಲೆ ಗುಣ ಪಡಿಸ್ತಿದ್ದೀರಾ. ಇಷ್ಟ ಇಲ್ಲದಿದ್ದರೆ ಸ್ವಲ್ಪ ವಿಷ ಕೊಡಿ ಸತ್ತು ಹೋಗ್ತೇನಿ." ಅಳತೊಡಗಿದಳು ಮಾಲಿನಿ.

"ಮಾಲಿನಿ ಸಾಕು ಈ ನಾಟಕ ಎಲ್ಲ ನನ್ನ ಹತ್ತಿರ ಬೇಡ. ನಿಮ್ಮ ಮಾವನ ಹತ್ತಿರ ಇಟ್ಕೊ."

ಮಾಲಿನಿಯ ಅಳು ಕೇಳಿ ಬಾಗಿಲ ಬಳಿ ಇದ್ದ ಅನಂತಯ್ಯ, ಅರ್ಚನಳನ್ನು ಎತ್ತಿಕೊಂಡು ಗಾಬರಿಯಿಂದ ಒಳಗೆ ಬಂದು,

"ಏನಾಯಿತು ಏಕೆ ಅಳ್ತಿದ್ದೀಯಾ?'' ಎಂದು ಕೇಳಿದರು.

ವಾಸುವಿಗೆ ಕೋಪ ಬಂದು ಹೊರಗೆ ಹೊರಟುಹೋದನು.

ಅನಂತಯ್ಯ, ಮಾಲಿನಿಯನ್ನು ಸಮಾಧಾನ ಪಡಿಸಿ ಮಗುವಿನೊಡನೆ ಮನೆಗೆ ಬಂದರು.

ವಾಸುವಿಗೆ ಅನುಮಾನದ ಕೀಟ. ಅವಮಾನದ ಹೊರೆ ಮುತ್ತಿತು. ಅವನು ಹುಚ್ಚನಂತಾಗಿ ಬಾರ್‌ಗೆ ಹೋದನು. ಹೈ ವಾಟ್ ವಿಸ್ಕಿಗೆ ಆರ್ಡರ್ ಮಾಡಿದನು. ವಿಸ್ಕಿ ಕುಡಿಯುತ್ತ ಸಿಗರೆಟ್ ಸೇದುತ್ತ ಟೈಂ ಪಾಸ್ ಮಾಡಿದನು. ಅನಂತರ ರಾತ್ರಿ ಹೊತ್ತಾಗಿ ಮನೆಗೆ ಬಂದನು. ಅರ್ಚನ ಮಲಗಿದ್ದಳು. ಅನಂತಯ್ಯ ಪುಸ್ತಕ ಓದುತ್ತ ಕುಳಿತ್ತಿದ್ದರು. ವಾಸು ಊಟ ಮಾಡದೆ ರೂಮಿಗೆ ಹೋಗಿ ಬಟ್ಟೆ ಬಿಚ್ಚಿ ನೈಟ್ ಡ್ರೆಸ್ ಹಾಕಿಕೊಂಡು ಫ್ಯಾನ್ ಹಾಕಿ ಸಿಗರೆಟ್ ಹಚ್ಚಿಕೊಂಡು ಕುಳಿತ. ತಲೆಯಲ್ಲಿ ಅನುಮಾನದ ಶಂಕೆ ಹೊಕ್ಕಿದ್ದರಿಂದ ಅವನಿಗೆ ನಿದ್ರೆ ಬರಲಿಲ್ಲ. ಈಗ ವಿಸ್ಕಿ ಬೇರೆ ಹೊಟ್ಟೆಗೆ ಸೇರಿದ್ದರಿಂದ ಕೋತಿಗೆ ಹೆಂಡ ಕುಡಿಸಿದ ಹಾಗೆ ಆಗಿತು

'ಮಾಲಿನಿ ನನಗೆ ಮೋಸ ಮಾಡ್ತಾ ಇದ್ದಾಳೆ. ಈ ಅನಂತಯ್ಯನ ಜೊತೆ ಯಾವ ಸಂಬಂಧ ಇದೆಯೋ ಯಾರಿಗೆ ಗೊತ್ತು. ಅಸಲು ಅವಳಿಗೆ ಕ್ಯಾನ್ಸರ್ ಬರುವ ಆಗತ್ಯ ಆದರೂ ಏನಿತ್ತು. ಈ ಅನಂತಯ್ಯನಿಂದ ಏಕೆ ಬಂದಿರಬಾರದು? ನಮ್ಮ ಮನೆಗೆ ಶಾಪವಾಗಿ ಬಂದ ರಾಕ್ಷಸನಂತೆ ನಮ್ಮ ಸುಖ ಹಾಳು ಮಾಡಿದ. ಅವನನ್ನು ಓಡಿಸಬೇಕು. ಪಿಶಾಚಿ ಅವನು ಮತ್ತೆ ಗವಾಕ್ಷಿಯಿಂದ ಬರುತ್ತಾನೆ. ಅವನನ್ನು ಸಾಯಿಸಿಬಿಟ್ಟರೆ, ಕೊಲೆಗಾರನಾಗಲೇ? ಇಲ್ಲ ಎಲ್ಲಾದ್ರೂ ಎಲ್ಲರೂ ಹಾಳಾಗಿ ಹೋಗಲಿ. ನಾನೇ ಸೂಸೈಡ್ ಮಾಡಿಕೊಂಡರೆ? ಛೇ ಹೇಡಿ ಆಗಲೇ' ಸಮಸ್ಯೆಗೆ ಯಾವ ಉತ್ತರವೂ ಸಿಗದೆ ಹಾಗೇ ನಿದ್ರೆಗೆ ಶುರುವಾದನು ವಾಸು.

"ವಾಸು, ವಾಸು.'' ಜೋರಾಗಿ ಬಾಗಿಲು ಬಡಿತದ ಸದ್ದಿಗೆ ಎಚ್ಚೆತ್ತ.'ಯಾರು' ಎನ್ನುತ್ತ ಟೈಂ ನೋಡಿದ. ಬೆಳಗಿನ ಜಾವ ನಾಲ್ಕು ಗಂಟೆ ಆಗಿತ್ತು. ಬಾಗಿಲು ತೆಗೆದನು.

"ನಾನು ಅನಂತಯ್ಯ, ನರ್ಸಿಂಗ್ ಹೋಂನಿಂದ ಫೋನ್ ಬಂದಿತ್ತು. ಮಾಲಿನಿ ಅಳುತ್ತಿದ್ದಾಳಂತೆ. ಹೇಗೇಗೋ ಆಡ್ತಿದ್ದಾಳಂತೆ. ನಿಮ್ಮನ್ನು ಕೇಳ್ತಾ ಇದ್ದಾಳಂತೆ.'' ಹೇಳಿದರು.

ವಾಸುಗೆ ನಿದ್ರೆ ಮಂಪರು ಹೋಯಿತು. ಬಟ್ಟೆ ಬದಲಾಯಿಸಿ ಸ್ಕೂಟರ್ ತೆಗೆದು ಹೊರಟಾಗ, ಅನಂತಯ್ಯ ಬರುತ್ತಿರುವುದನ್ನು ನೋಡಿ,

"ನೀವು ಏತಕ್ಕೆ, ಮಾಲಿನಿ ಕೂಗ್ತಾ ಇರೋದು ನಿಮ್ಮನ್ನಲ್ಲ, ಗಂಡನನ್ನ.'' ಹೊಡೆದ ಹಾಗೆ ಹೇಳಿ ಹೊರಟುಹೋದನು. ಅನಂತಯ್ಯ ಅವಾಕ್ಕಾಗಿ ಹಾಗೇ ನಿಂತರು. ಅವರಿಗರಿವಿಲ್ಲದಂತೆ ಅವರ ಕಣ್ಣಿನಿಂದ ಹನಿ ಉದುರಿತು.

* * * * *

ಮಾಲಿನಿ ಮನೆಗೆ ಬಂದು ಎರಡು ದಿನಗಳಾಗಿದ್ದವು. ಅವಳು ಮೊದಲಿನಂತೆ ಲವಲವಿಕೆಯಿಂದ ಇರಲಿಲ್ಲ. ಚಿಂತೆಯಿಂದ ಅವಳ ವಯಸ್ಸು ಕುಗ್ಗಿದಂತೆ. ಅಂದ ಅಳಿಸಿದಂತೆ ಕಾಣುತ್ತಿತ್ತು. ಮಾವ ಹೊರಟು ಹೋಗಿದ್ದು ಅವಳಿಗೆ ನೋವು ತಂದಿತು

ಆಫೀಸಿನ ಯೂನಿಯನ್‌ಗೆ ಒಂದು ಕಾಲದಲ್ಲಿ ಲೀಡರ್ ಆಗಿದ್ದ ವಾಸು ಈಗ ಆಫೀಸರ್ ಆಗಿದ್ದರಿಂದ ಅವನು ಮ್ಯಾನೇಜ್‌ಮೆಂಟ್ ಕಡೆಯವನಾಗಿದ್ದನು. ಆಗಾಗ್ಗೆ ಯೂನಿಯನ್

ಜೊತೆ ಮಾತು ಆಗಿ ನಿಷ್ಠುರವಾಗುತ್ತಿತ್ತು. ವಾಸು ಅಸಹಾಯಕನಾಗುತ್ತಿದ್ದನು. ಬೇಸರವಾಗಿ ರಜೆ ಹಾಕಿ ಬಂದು ಬಿಡುತ್ತಿದ್ದನು. ಅಂದು ಸಹ ರಜೆ ಹಾಕಿ ಬಂದಿದ್ದನು.

ಮಾಲಿನಿ ಮೇಲೆ ಅವನಿಗೆ ಮಮತೆ ಉಂಟಾಯಿತು. ಎಷ್ಟೇ ಆದರೂ ಅವಳು ಅವನ ಹೆಂಡತಿ. ಅವಳ ಜೊತೆ ಕಳೆದ ಸುಖದ ಕ್ಷಣಗಳು ಅವನು ಮರೆಯಲಾರದೆ ಹೋಗಿದ್ದನು.

"ಮಾಲಿನಿ ನಾನು ನಿನ್ನ ಜೊತೆ ಇವತ್ತು ಅಡುಗೆ ಮನೆಯಲ್ಲಿದ್ದು ಅಡುಗೆ ಮಾಡಲು ಸಹಾಯ ಮಾಡ್ತೇನೆ.''

"ಏನಿವತ್ತು ದಿಢೀರನೆ, ರಾಜಾ ಸಾಹೇಬರ ಬದಲಾದ ನೀತಿ.''

"ನನ್ನದು ಯಾವಾಗಲೂ ಒಂದೇ ನೀತಿ ಮಾಲಿನಿ, ಏನೋ ಆಫೀಸಿನಲ್ಲಿ ಬೇಸರ. ಅದಕ್ಕೆ ರಜೆ ಹಾಕಿ ನಿನಗೆ ಸಹಾಯ ಮಾಡಲು ಬಂದೆ.''

"ಎಂದರೆ ನನ್ನ ಪುಣ್ಯ, ಅದೃಷ್ಟ ಎಷ್ಟು ಎಂದು ನೋಡಿ. ನನಗೆ ಸಹಾಯ ಮಾಡಬೇಕಾದರೆ ಆಫೀಸಿನಲ್ಲಿ ನಿಮಗೆ ಬೇಸರ ಆಗಬೇಕು, ರಜ ಹಾಕಬೇಕು. ನಿಮ್ಮ ಬೇಸರ ಹೋಗಲಾಡಿಸಲು ಹೆಂಡ್ತಿಯ ನೆನಪು. ಎಷ್ಟು ಸ್ವಾರ್ಥಿ.''

"ಎಲ್ಲದರಲ್ಲೂ ಕೊಂಕು ಮಾತು ಏಕೆ ಮಾಲಿನಿ. ನಾನೇನೂ ಬದಲಾಗಿಲ್ಲ, ನಿನ್ನ ಮೇಲೆ ಪ್ರೀತಿ ಎಷ್ಟಿದೆ ಗೊತ್ತಾ ನಿನಗೆ. ಇರಲಿ, ಔಷಧಿ ತಗೊಳ್ಳೋ ಹೊತ್ತಾಯಿತು ತಗೊ'' ಎಂದು ಹೇಳಿ ಔಷಧಿ ತಂದು ಕೊಟ್ಟನು.

"ಇನ್ನೂ ಎಷ್ಟೂಂತ ಈ ಔಷ್ಧಿ ಕುಡಿಯೋದು. ಸುಮ್ಮನೆ ದುಡ್ಡು ದಂಡ, ಬಾಯಿಗೆ ಕಹಿ, ಜೇಬಿಗೆ ಕತ್ತರಿ.''

ವಾಸುವಿಗೆ ಚುಚ್ಚಿದಂತೆ ಆಯಿತು.

"ಹಾಗನ್ನಬೇಡ ಮಾಲಿನಿ, ನಿನಗಿಂತ ನನಗೆ ಹಣ ಮುಖ್ಯ ಅಲ್ಲ. ನನಗೆ ನೀನು ಬೇಕು. ನೀನು ಚೆನ್ನಾಗಿ ಆಗಬೇಕು'' ಎಂದು ಆಕೆಯನ್ನು ಅಪ್ಪಿಕೊಂಡು ಶಿರವನ್ನು ನೇವರಿಸುತ್ತ ಹೇಳಿದ ವಾಸು.

ಮಾಲಿನಿ ಬಿಸಿಲಿಗಿಟ್ಟ ಮಂಜಿನಂತೆ ಕರಗಿದಳು.

"ನನ್ನ ಕ್ಷಮಿಸಿ, ಇಷ್ಟು ತೃಪ್ತಿ ಸಾಕು ನನಗೆ. ಇರುವಷ್ಟು ದಿನ ಹೀಗೆ ಇದ್ದು ನಿಮ್ಮ ವಕ್ಷಸ್ಥಳದ ಮೇಲೆ ತಲೆ ಇಟ್ಟು ಕಣ್ಮುಚ್ಚುತ್ತೇನೆ. ನನ್ನಿಂದ ನಿಮಗೆ ಸುಖ ಸಿಗಲಿಲ್ಲ. ನಾನು ಹೋದ ಮೇಲೆ ನೀವು ಇನ್ನೊಂದು ಮದುವೆ...'' ಏನೋ ಹೇಳತೊಡಗಿದಳು ಮಾಲಿನಿ.

"ಎಂತಾ ಮಾತನಾಡ್ತೀಯಾ ಮಾಲಿನಿ! ನೀನೇ ನನ್ನ ಸರ್ವಸ್ವ. ನಿನ್ನ ನಾನು ಅಷ್ಟು ಸುಲಭದಲ್ಲಿ ಬಿಡಲ್ಲ. ನನಗೆ ನೀನು ಬೇಕು, ನನ್ನ ಜೀವನಕ್ಕೆ ಪ್ರೀತಿಯನ್ನು ತುಂಬಿದವಳು ನೀನು. ನನ್ನ ಮನುಷ್ಯನನ್ನಾಗಿ ತಿದ್ದಿ ಇಂತಹ ಸ್ಟೇಜಿಗೆ ಬರಲು ತಿರುವು ಕೊಟ್ಟವಳು ನೀನು. ನಿನ್ನ ಪ್ರೀತಿ ಪ್ರೇಮ ಎಲ್ಲ ನನಗೇ ಇರಬೇಕೆನ್ನುವುದು ನನ್ನ ಆಸೆ. ಅದನ್ನು ನೀನು ಸ್ವಾರ್ಥ ಎಂದರೂ ನನ್ನ ಆಕ್ಷೇಪಣೆ ಇಲ್ಲ.'' ಅಪ್ಪುಗೆಯನ್ನು ಬಿಗಿಗೊಳಿಸಿ ಆವೇಶದಿಂದ ಹೇಳಿದ ವಾಸು.

ಮಾಲಿನಿ ಮೂಕಳಾದಳು. ತನ್ನ ಸಂಸಾರ ಸುಖವಾಗಿರಬೇಕೆಂದುಕೊಂಡಳು. 'ನೀವು ಚೆನ್ನಾಗಿರಿ, ಈ ಕಡೆ ಬರಬೇಡಿ. ಎಲ್ಲೇ ಇದ್ದರೂ ನಿಮ್ಮ ಕ್ಷೇಮ ಕೋರುವ ನಿಮ್ಮ ಮಾಲಿನಿ' ಎಂದು ಮಾವನಿಗೆ ಕಾಗದ ಬರೆಯಬೇಕೆಂದುಕೊಂಡಳು.

ಅಡುಗೆಯಲ್ಲಿ ಪಾಲ್ಗೊಂಡು ಒಟ್ಟಿಗೆ ಊಟ ಮಾಡಿ ಮಲಗಿ, ಸಾಯಂಕಾಲ ಅರ್ಚನಳೊಂದಿಗೆ ಪಾರ್ಕ್‌ಗೆ ಹೋಗಿ ಬಂದರು. ಎಲ್ಲರ ಮನ ಉಲ್ಲಾಸವಾಗಿತ್ತು. ಆ ಉಲ್ಲಾಸವನ್ನು ಪಡೆಯಲು ವಾಸು ಮಾರನೆದಿನವೂ ಆಫೀಸ್‌ಗೆ ರಜೆ ಹಾಕಿದ್ದನು.

ಮಾಲಿನಿ, ಅರ್ಚನಳ ಜೊತೆ ಆಟ ಆಡಿದನು. ಕ್ಯಾರಂ, ಚೆಸ್, ಹಾವು ಏಣಿಯಾಟ, ರಮ್ಮಿ ಆಟ ಆಡಿದರು. ಮಾಲಿನಿ ಆಯಾಸಗೊಂಡಾಗ "ನೀನು ರೆಸ್ಟ್ ತಗೊ ಮಾಲಿನಿ, ಆಯಾಸ ಪಡಬೇಡ. ಬೇಬಿ ಈ ಕಡೆ ಬಾ, ಮಮ್ಮಿಗೆ ಆಯಾಸ ಆದರೆ ಆಮೇಲೆ ನಮಗೆ ಕಷ್ಟ''

"ಸರಿ ಡ್ಯಾಡಿ, ಇಲ್ಲಾಂದ್ರೆ ಮಮ್ಮಿ ಮತ್ತೆ ಆಸ್ಪತ್ರೆಗೆ ಹೊರಟು ಹೋಗ್ತಾಳೆ. ಆಮೇಲೆ ನಾನು ನಿಂಗಮ್ಮನ ಜೊತೆ ಆಟ ಆಡಬೇಕಾಗುತ್ತದೆ. ಮಮ್ಮಿ ನೀನು ಮಲಕ್ಕೊ. ನಾನು ಅಡುಗೆ ಮಾಡ್ತೀನಿ.''

"ಅಯ್ಯ ನನ್ನ ಪುಟ್ಟ ಕಂದ, ನನಗೇನೂ ಆಗಿಲ್ಲ ಮರಿ''ಎಂದು ತಬ್ಬಿಕೊಂಡು ಹೇಳಿದಳು ಮಾಲಿನಿ.

ಬದುಕು ಇರುವಾಗ ಸಾಯಬೇಕೆನ್ನಿಸುತ್ತ ಕೆಲವರಿಗೆ. ಅದೇ ಸಾವು ಹತ್ತಿರ ಬಂದಾಗ ಅನುರಾಗ ಹೆಚ್ಚಿ ಬದುಕಬೇಕೆಂಬ ಆಸೆ ಹುಟ್ಟುತ್ತೆ ಮನುಷ್ಯರಲ್ಲಿ. ಇದೊಂದು ವಿಚಿತ್ರ ಪ್ರಪಂಚ.

ಅರ್ಚನಳ ಬರ್ತ್‌ಡೇ ಪಾರ್ಟಿ ಬಂತು.

'ಬಹುಶಾ ನಾನು ನೋಡುವ ಕೊನೆಯ ಬರ್ತ್‌ಡೇ ಇದೇ ಆಗಬಹುದೇನೋ' ಎಂದುಕೊಂಡಳು ಮಾಲಿನಿ. ಗಂಡನಿಗೆ ಹೇಳಿ ಮಗಳ ಬರ್ತ್‌ಡೇಯನ್ನು ಚೆನ್ನಾಗಿ ಮಾಡಿದಳು. ಅರ್ಚನಳ ಫ್ರೆಂಡ್ಸ್, ಕೆಲವು ಗೆಸ್ಟ್‌ಗಳನ್ನು ಇನ್‌ವೈಟ್ ಮಾಡಿ ಬರ್ತ್‌ಡೇಯನ್ನು ಚೆನ್ನಾಗಿ ಮಾಡಿದ್ದರು. ವಾಸು, ಮಾಲಿನಿ ಊಟಕ್ಕೆ ಕುಳಿತರು. ಮಾಲಿನಿಗೆ ಮೈ ಭಾರ ಆಯಿತು. ನಾಲಿಗೆ ರುಚಿ ಹಿಡಿಯಲಿಲ್ಲ, ವಾಸು ನೋಡಿದ ಹೇಗೋ ಊಟ ಮುಗಿಸಿ,

"ಮಾಲಿನಿ ಜ್ವರ ಬಂದಿರುವ ಹಾಗೆ ಇದೆ ನಡಿ ಡಾಕ್ಟರ ಹತ್ತಿರ.'' ಗಾಬರಿಯಿಂದ ಹೇಳಿದನು.

"ಸ್ವಲ್ಪ ಆಯಾಸ ಅಷ್ಟೇ ನಾಳೆ ನೋಡೋಣ'' ಎಂದು ಹೇಳಿ ಮಲಗಿದಳು ಮಾಲಿನಿ. ವಾಸು ನಿದ್ರೆ ಇಲ್ಲದೆ ಹೊರಳಾಡಿದ. ಮಾಲಿನಿ ಕನವರಿಸತೊಡಗಿದ್ದು ಕಂಡು ವಾಸು ದಿಗ್ಗನೆ ಎದ್ದನು.

'ನನಗೆ ಕ್ಯಾನ್ಸರ್, ನಾನು ಬದುಕಲ್ಲ. ನಾನು ಇಲ್ಲಿರಬಾರದು, ವಾಸುಗೇನಾದರೂ ಆದರೆ, ಎಳೆ ಮಗು ಅರ್ಚನಳಿಗೆ ಬಂದರೆ, ನೋ ನಾನು ದೂರ ಬಲು ದೂರ ಹೊರಟು ಹೋಗಬೇಕು. ನನ್ನ ಆಸೆಗಳು ಅಲೆಗಳ ಹಾಗೆ ತೀರಕ್ಕೆ ಬಂದು ಬಡಿದವೇ ವಿನಾ ತೀರದಲ್ಲಿ ನಿಲ್ಲಲೇ ಇಲ್ಲ. ಹಿಂದಕ್ಕೆ ಹೊರಟು ಹೋಯಿತು.

'ಅರ್ಚನ ಮುದ್ದಾದ ಮಗು ಅದನ್ನೆತ್ತಿ ಅಪ್ಪಿ ಆನಂದದಿಂದ ಒಂದು ಮುತ್ತು ಕೊಡುವಂತಿಲ್ಲ, ಅನ್ನ ಕಲಸಿ ತುತ್ತು ತಿನ್ನಿಸುವಂತಿಲ್ಲ. ನನ್ನಿಂದ ವಾಸುವಿಗೆ ಯಾವ ಸುಖವಿಲ್ಲ. ನಾನ್ಯಾಕೆ ಇರಬೇಕು. ಅದೇ ಅಲ್ಲಿ ಬಂದ ಆಬ್ಬ ಎಂತಾ ವ್ಯಕ್ತಿ ಕಿರೀಟ, ದಪ್ಪ ಮೀಸೆ...' ಮಾಲಿನಿ ಏನೇನೋ ಬಡಬಡಿಸತೊಡಗಿದಳು.

ವಾಸು ದಿಗ್ಗನೆ ವಾಸ್ತವಕ್ಕೆ ಬಂದನು. ಮಾಲಿನಿಯ ಕನವರಿಕೆ ಕೇಳಿ ಬೆವರಿದನು, ಮಾಲಿನಿಯನ್ನು ಎಬ್ಬಿಸಿದನು.

"ಏನ್ರಿ ಏಕೆ ಎಬ್ಬಿಸಿದಿರಿ, ನಿದ್ರೆ ಬರಲಿಲ್ಲವಾ?" ಮಾಲಿನಿ ಕೇಳಿದಳು.

"ನಿನಗೆ ಜ್ವರ ಹೆಚ್ಚಿದೆ. ಏನೇನೋ ಮಾತನಾಡ್ತಿದ್ದೀಯಾ. ರಾತ್ರೀನೇ ಡಾಕ್ಟರ್‌ಗೆ ತೋರಿಸೋಣಾಂದ್ರೆ ಬೇಡ ಎಂದೆ, ಏನಾಗ್ತಿದೆ ಮಾಲಿನಿ ನಿನಗೆ?"

"ಏನೂ ಆಗಿಲ್ಲ ನನಗೆ. ನೀವು ಗಾಬರಿ ಆಗ್ತಿದ್ದೀರಾ ಅಷ್ಟೇ. ನನ್ನಿಂದ ನಿಮಗೆ ನಿದ್ರೇನೂ ಇಲ್ಲ, ನಾನು ಪಾಪಿ. ನಿಮಗೆಲ್ಲ ಎಷ್ಟು ಕಷ್ಟ ಕೊಡ್ತಿದ್ದೇನೆ ನಾನು ಹೊರಟು ಹೋಗಿ..."

"ಮಾಲಿನಿ ಎಂತಹ ಮಾತನಾಡ್ತಿದ್ದೀಯಾ, ನಮ್ಮನ್ನು ಬಿಟ್ಟು ಹೋಗಕ್ಕೆ ನಿನಗೆ ಮನಸ್ಸು ಹೇಗಾದ್ರೂ ಬರುತ್ತೆ, ನೀನು ಹಾಗೆ ಹೊರಟು ಹೋದ್ರೆ ನಾನು ಹೀಗೆ ಇರುತ್ತೇನೆಂದು ತಿಳಿದಿರುವೆಯಾ."

"ಸುಮ್ಮನಿರಿ ಹಾಗೆ ಮಾತನಾಡಬೇಡಿ. ಆಮೇಲೆ ಅರ್ಚನಳ ಗತಿ ಏನು?"

"ಅದಕ್ಕೇ ಹೇಳೋದು ಮಗೂಗೆ ಮಮ್ಮಿನೂ ಬೇಕು, ಡ್ಯಾಡಿ ಸಹ ಬೇಕು."

"ನಿಜ ನಿಮ್ಮ ಮಾತು. ಆದರೆ ನಾನು ಕಾಯಿಲೆಯವಳು. ಕ್ಯಾನ್ಸರ್ ಹೆಚ್ಚುತ್ತಾ ಹೋಗ್ತಿದೆ. ಆಯುಸ್ಸು, ಆರೋಗ್ಯ ಕ್ಷೀಣಿಸುತ್ತ ಬರುತ್ತಿದೆ. ನನ್ನ ಮೇಲೆ ಪ್ರೀತಿ ಇದೆ ತಾನೆ."

"ಏನು ಮಾತೂಂತ ಕೇಳ್ತಿಯಾ ಮಾಲಿನಿ, ನನ್ನ ಮೇಲೆ ನಿನಗೆ ಅನುಮಾನ."

"ಇಲ್ಲಾಂದ್ರೆ ಆದರೂ ಒಂದು ಸಲ ಕೇಳಿದೆ, ನನ್ನ ಆಸೆ ಎಲ್ಲ ನೆರವೇರಿಸಿದಿರಿ, ಇನ್ನೊಂದು ಆಸೆ ನೆರವೇರಿಸ್ತೀರಾ?"

"ಏನು ಆಸೆ ನಿನ್ನದು ಹೇಳು ಮಾಲಿನಿ, ಖಂಡಿತ ನಡೆಸಿಕೊಡ್ತೇನಿ."

"ಪ್ರಾಮೀಸ್ ತಾನೆ."

"ಮಾಲಿನಿ ನನ್ನ ಮೇಲೆ ನಂಬಿಕೆ ಇಲ್ಲವೇ."

"ನಂಬಿಕೆ ಇರೋದಿಂದ್ರಲೇ ನಾನು ಹೀಗೆ ಕೇಳ್ತಾ ಇರೋದು."

"ಆಯಿತು ಮಾಲಿನಿ."

"ನಾ ನಾನು ಹೊರಟು ಹೋದ ಮೇಲೆ ಅರ್ಚನಳಿಗೆ ಮಮ್ಮಿ ಇಲ್ಲದ ಹಾಗೆ ಮಾಡಬೇಡಿ. ಅವಳಿಗೆ ತಾಯಿ ಪ್ರೀತಿ ಕೊಡುವಂತಹ ತಾಯಿಯನ್ನು ಕರ್‍ಕೊಂಡು ಬನ್ನಿ. ನೀವು ಮತ್ತೆ ಮದುವೆ...."

"ಮಾಲಿನಿ ಇದೆಲ್ಲ ಹೇಳುವಂತಹ ಹೊತ್ತೇ ಇದು. ಸಾಕು ನೀನು ಈಗ ಸುಮ್ಮನೆ ಮಲಗು" ಎಂದು ಗದರಿಸಿ ಮಲಗಿಸಿದ ವಾಸು.

ಮಾಲಿನಿಗೆ ತನ್ನಲ್ಲಿದ್ದ ಮಾತನ್ನು ಹೊರಗೆ ಹಾಕಿದ್ದರಿಂದ ಮನಸ್ಸಿಗೆ ನೆಮ್ಮದಿ ಉಂಟಾಗಿತ್ತು. ಆಯಾಸವೂ ಆಗಿದ್ದರಿಂದ ಮಲಗಿದಳು.

ನಿದ್ರೆಗೆಟ್ಟವನೆಂದರೆ ವಾಸು.

ಮಾರನೆ ದಿನ ಡಾಕ್ಟರನ್ನು ಕರೆಸಿದ ವಾಸು.

ಡಾಕ್ಟರ್ ಬಂದು ನೋಡಿ ಜ್ವರಕ್ಕೆ ಇಂಜೆಕ್ಷನ್, ಟ್ಯಾಬ್ಲೆಟ್ ಕೊಟ್ಟು ಹೊರಗೆ ಬಂದರು.

"ಸರ್ ಈಗೇನೂ ಭಯ ಇಲ್ಲ ತಾನೆ?" ಕೇಳಿದ ವಾಸು.

"ಭಯ ಇಲ್ಲ, ಆದರೂ ಒಂದೆರಡು ದಿನ ನೋಡಿ ಹಾಸ್ಪಿಟಲ್‌ಗೆ ಸೇರಿಸಿ'' ಎಂದು ಫೀಸ್ ತೆಗೆದುಕೊಂಡು ಹೋದರು.

ವಾಸುಗೆ ಭಯವಾಯಿತು. ಅವನು ಧೈರ್ಯ ತೆಗೆದುಕೊಂಡನು. ರಜವನ್ನು ಎಕ್ಸ್‌ಟೆಂಡ್ ಮಾಡಿದನು. ಮಾಲಿನಿ ಬಳಿಯೇ ಕುಳಿತು ಅವಳಿಗೆ ಬೇಸರವಾಗದಂತೆ ನೋಡಿಕೊಂಡನು. ಅಡುಗೆ ಮಾಡಿ ಅರ್ಚನಳಿಗೆ ಸ್ಕೂಲಿಗೆ ಹೋಗಲು ರೆಡಿ ಮಾಡಿ ತಾನೇ ಹೆಚ್ಚು ಅವಳ ಜೊತೆಯಲ್ಲಿದ್ದು ಸ್ಕೂಲಿಗೆ ಕಳುಹಿಸುತ್ತಿದ್ದನು. 'ಮಮ್ಮಿಗೆ ಸುಸ್ತು' ಎಂದಷ್ಟೇ ಹೇಳಿದ್ದನು.

ಆ ದಿನ ಸಾಯಂಕಾಲ ನಿಂಗಮ್ಮ ಬಂದಾಗ ಅವಳನ್ನು ಮಾಲಿನಿ ಹತ್ತಿರ ಇರಲು ಹೇಳಿ ಫ್ರೂಟ್ಸ್, ವೆಜಿಟೆಬಲ್ಸ್ ತರಲು ಅರ್ಚನಳೊಂದಿಗೆ ಬಜಾರ್‌ಗೆ ಹೋದನು ವಾಸು.

ಒಂದು ಗಂಟೆಯ ಅನಂತರ ಬಿಟ್ಟು ಬಂದಾಗ ಮನೆಯಲ್ಲಿ ಪಕ್ಕದ ಮನೆ ಹೆಂಗಸರು ಇರುವುದು, ನಿಂಗಮ್ಮ ಗಾಬರಿಯಾಗಿರುವುದು ಕಂಡು.

"ಏನಾಯಿತು ನಿಂಗಮ್ಮ?'' ಕಾತುರದಿಂದ ಕೇಳಿದನು.

"ಬುದ್ದಿ ಅಮ್ಮಾವರಿಗೆ ವಿಪರೀತ ಕೆಮ್ಮು ಬಂತು. ಕೆಮ್ಮಿನೊಂದಿಗೆ ರಕ್ತವನ್ನು ಕಾರಿಕೊಂಡಿದ್ದಾರೆ. ಕ್ಲೀನ್ ಮಾಡಿದ್ದೇನೆ ಗಾಬರಿಯಾಗಿ ಪದ್ಮಮ್ಮ ಕಮಲಮ್ಮನವರನ್ನು ಕರೆದೆ. ಅವರು ಬಂದು ಅಮ್ಮಾವರನ್ನು ಸಮಾಧಾನ ಮಾಡ್ತಾ ಅವರೆ.''

ನಿಂಗಮ್ಮ ಹೇಳಿದಾಗ ವಾಸುವಿಗೆ ಕೈ ಕಾಲೇ ಆಡಲಿಲ್ಲ.

"ಮಾಲಿ ಮಾಲಿನಿ, ಈಗ...'' ಎಂದು ಕೇಳುತ್ತ ರೂಮಿಗೆ ಬರುವಷ್ಟರಲ್ಲಿ ಒಳಗಿನಿಂದ ಪದ್ಮಮ್ಮ, ಕಮಲಮ್ಮ ಹೊರಗೆ ಬಂದು.

"ಹುಶ್ ಈಗ ತಾನೆ ಆಯಾಸದಿಂದ ಮಲಗಿದ್ದಾರೆ. ಹಾಸ್ಪಿಟಲ್‌ಗೆ ಸೇರಿಸಿ ಬಿಡಿ. ಒಳ್ಳೆ ಡಾಕ್ಟರ್ ಹತ್ತಿರ ಟ್ರೀಟ್ ಮಾಡಿಸಿ'' ಎಂದು ಪದ್ಮಮ್ಮ ಹೇಳಿದರು.

"ಆಯಿತು ಟ್ಯಾಕ್ಸಿ ತರುತ್ತೇನೆ. ಇವತ್ತೆ ಹಾಸ್ಪಿಟಲ್‌ಗೆ ಸೇರಿಸುತ್ತೇನೆ. ನೀವು ಏನೂ ತಿಳಿದುಕೊಳ್ಳದಿದ್ದರೆ ಒಂದು ಮಾತು.''

"ಏನು ಹೇಳಿ?''

"ಅರ್ಚನಳನ್ನು ನಿಮ್ಮ ಮನೆಯಲ್ಲಿ...''

"ಅದನ್ನು ನೀವು ಹೇಳಬೇಕೆ, ನಮ್ಮ ಹುಡುಗರ ಜೊತೆ ಇರ್ತಾಳೆ. ಮಾಲಿನಿ ವಿಷ್ಯ ನೋಡಿ.'' ಹೇಳಿದರು.

ವಾಸು ಟ್ಯಾಕ್ಸಿ ತರಲು ಹೊರಟನು.

ಎಂಟು

ನಾನು ಬದುಕಲ್ಲ ಸತ್ತು ಹೋಗುತ್ತೇನೆ. ನನ್ನ ಜೀವನ ಇಷ್ಟೇ ಎಂದು ಮಾಲಿನಿ ತೀವ್ರವಾಗಿ ಮನಸ್ಸಿಗೆ ಹಚ್ಚಿಕೊಂಡು ಬಿಟ್ಟಾಗ ಯಾವ ಔಷಧಿ ಸಹ ತನ್ನ ಪ್ರಭಾವ ಬೀರಲಿಲ್ಲ.

"ನನ್ನಿಂದ ನಿಮಗೆ ಎಷ್ಟು ತೊಂದರೆ. ನನಗಾಗಿ ನೀವು ಎಷ್ಟು ತೊಂದರೆ ತಗೊಳ್ತಿದ್ದೀರಾ''

ಎಂದು ಮಾಲಿನಿ ಹೇಳಿದಳು.

"ಎಂತಹ ಮಾತು ಆಡ್ತಿಯಾ ಮಾಲಿನಿ, ಇದರಲ್ಲಿ ತೊಂದರೆಯೂ ಇಲ್ಲ, ಶ್ರಮವೂ ಇಲ್ಲ. ಇದು ನನ್ನ ಕರ್ತವ್ಯ. ಸಂತೋಷಕ್ಕೆ, ಸುಖಕ್ಕೆ ಮಾತ್ರ ಹೆಂಡತಿ, ಕಷ್ಟಕ್ಕೆ ಹಿಂಡುತೀ ಎಂದು ತಿಳಿದವನು ನಾನಲ್ಲ." ವಾಸು ಹೇಳಿದನು.

"ನಿಮ್ಮಂತಹ ಪತಿ ಸಿಕ್ಕಿದ್ದು ನನ್ನ ಪುಣ್ಯ."

"ನನಗೆ ನೀನೂ ಅಷ್ಟೇ, ನಿನ್ನಂತಹ ಹೆಂಡತಿ ಸಿಕ್ಕಿಲ್ಲದಿದ್ದರೆ ನಾನು ಇಂದು ಇಷ್ಟರ ಮಟ್ಟಿಗೆ ಬರುತ್ತಿರಲಿಲ್ಲ."

"ನನದೊಂದು ಆಸೆ, ನೆರವೇರಿಸಿಕೊಡ್ತೀರಾ?"

"ಯಾವುದನ್ನು ಇಲ್ಲಾಂತ ಹೇಳಿದ್ದೇನೆ, ಅದೇನು ಕೇಳು ಮಾಲಿನಿ."

"ಅರ್ಚನಳನ್ನು ಚೆನ್ನಾಗಿ ನೋಡಿಕೊಳ್ಳಿ, ಯಾವುದಕ್ಕೂ ಕೊರತೆ ಮಾಡಬೇಡಿ."

"ಇದನ್ನು ನೀನು ನನಗೆ ಹೇಳಬೇಕಾ, ಅಲ್ಲದೆ ನೀನೇ ಇನ್ನೊಂದು ತಿಂಗಳಿಗೆ ಮನೆಗೆ ಬರ್ತಿಯಾ."

"ನಾನು ಮನೆಗೆ ಬರ್ತೀನಾ."

"ಖಂಡಿತನಾಗಿಯೂ ಚಿಕ್ಕ ಆಪರೇಶನ್ ಮಾಡಿ ಹದಿನೈದು ದಿನ ರೆಸ್ಟ್ ತಗೊಂಡು ಬಿಟ್ಟರೆ ನಿನ್ನ ಕಾಯಿಲೆ ವಾಸಿ ಆಗುತ್ತೆ. ಮನೆಗೆ ಕರ್ರೊಂಡು ಹೋಗಬಹುದು ಎಂದು ಡಾಕ್ಟರ್ ಹೇಳಿದರು."

ಮಾಲಿನಿ ಶುಷ್ಕ ನಗೆ ನಕ್ಕಳು.

"ಮಾಲಿನಿ ನಾನು ಎರಡು ದಿನದ ಮಟ್ಟಿಗೆ ಬೆಂಗಳೂರಿಗೆ ಹೋಗಿ ಬರಬೇಕಂತೆ. ಎಂ. ಡಿ. ಯವರು ಕರೆದಿದ್ದಾರೆ. ಡಾಕ್ಟರ್‌ಗೆ, ನರ್ಸ್‌ಗೆ ಹೇಳಿದ್ದೇನೆ. ಪದ್ಮಮ್ಮ, ಕಮಲಮ್ಮ ಸಹ ಬರ್ತಾರಂತೆ."

"ಹೋಗಿ ಬನ್ನಿ, ಮತ್ತೆ ಒಂದು ಮಾತು."

"ಹೇಳು ಮಾಲಿನಿ."

"ಅವತ್ತು ಮಾವ ಊರಿಗೆ ಹೊರಟು ಹೋದರು. ಚಿಕ್ಕ ವಯಸ್ಸಿನಿಂದ ನನ್ನ ಸಾಕಿ ಬೆಳೆಸಿ ಪಾಠ ಹೇಳಿಕೊಟ್ಟವರು. ಒಂದು ಸಲ ಅವರನ್ನ ನೋಡಬೇಕೂಂತ ಅನ್ನಿಸುತ್ತೆ, ನಿಮಗೆ ಬೇಸರವಾದರೆ ಬೇಡ."

"ಇಲ್ಲ ಮಾಲಿನಿ ನನಗೆ ಬೇಸರ ಇಲ್ಲ. ನನಗೆ ಏನಾಗಿತ್ತೋ ಏನೋ, ಪಾಪ ಅವರ ಮೇಲೆ ಅಂದು ಕೋಪ ಮಾಡಿಕೊಂಡೆ. ಇಂದೇ ಅವರಿಗೆ ಕಾಗದ ಬರೆಯುತ್ತೇನೆ. ಅವರು ಇಲ್ಲೇ ಇರಲಿ ಅವರಿದ್ದರೆ ನಮಗೂ ಒಳ್ಳೆದಾಗುತ್ತೆ."

"ಎಷ್ಟು ಒಳ್ಳೆಯವರು ನೀವು."

"ನನ್ನ ಒಳ್ಳೆತನ ಇವತ್ತು ಗೊತ್ತಾಯಿತಾ ಹೋಗಲಿ ಬಿಡು. ರೆಸ್ಟ್ ತಗೋ, ನಾನು ಹೋಗಿ ಬರ್ತೇನೆ."

"ಹೋಗ್ಬನ್ನಿ" ಮಾಲಿನಿ ಹೇಳಿದಳು.

ವಾಸು ಹೊರಟನು. ಅವನು ಹೋಗುವುದನ್ನು ನೋಡ್ತಾ ಕುಳಿತಳು. ಅವಳ ಕಣ್ಣುಗಳಲ್ಲಿ ಅವಳಿಗರಿವಿಲ್ಲದಂತೆ ನೀರು ತುಂಬಿತು.

."ಯು ಆರ್ ವೆರಿ ಲಕ್ಕಿ ಪರ್ಸನ್, ಮಂಗಳೂರು ಆಫೀಸಿಗೆ ನೀನು ಜನರಲ್ ಮ್ಯಾನೇಜರ್. ಇನ್ನು ಮೇಲೆ ಅದರ ಸಂಪೂರ್ಣ ಜವಾಬ್ದಾರಿ ನಿನ್ನದೆ. ನಿನಗೆ ಕಾರು ಫೋನ್, ಕ್ವಾರ್ಟರ್ಸ್ ಫ್ಯಾನ್ ಎಲ್ಲ ಸೌಲಭ್ಯ ಇದೆ. ಇಷ್ಟು ಯಂಗ್‌ನಲ್ಲಿ ಈ ಜವಾಬ್ದಾರಿ ಪೋಸ್ಟು ಸಿಕ್ಕಿರುವುದು ನಿನ್ನ ಅದೃಷ್ಟ'' ಎಂ. ಡಿ. ಅಭಿನಂದಿಸಿ ಹೇಳಿದರು.

"ಥ್ಯಾಂಕ್ಸ್, ಥ್ಯಾಂಕ್ಯೂ ವೆರಿ ಮಚ್ ಸರ್'' ಎಂದು ವಾಸು ಹೇಳಿದನು.

ಅನಂತರ ಅವರ ಜೊತೆ ಕೆಲವು ಆಫೀಸಿನ ವಿಷ್ಯ ಮಾತನಾಡತೊಡಗಿದನು ವಾಸು.

ಎಂ. ಡಿ. ಯವರ ಆದೇಶದ ಮೇರೆಗೆ ವಾಸು ಇನ್ನೂ ಎರಡು ದಿನ ಬೆಂಗಳೂರಿನಲ್ಲಿ ಇರಬೇಕಾಗಿ ಬಂದಿತು. ಕೆಲ್ಸ ಮುಗಿಸಿಕೊಂಡು ಪ್ರಮೋಶನ್ ಆದ ವಿಷ್ಯವನ್ನು ಮಾಲಿನಿಗೆ ತಿಳಿಸಲು ಕಾತುರದಿಂದ ಮಂಗಳೂರು ಕಡೆ ಕಾರಿನಲ್ಲಿ ಹೊರಟನು ವಾಸು.

ಆಸೆಯೇ ಒಂದಾದರೆ ಆಗೋದೇ ಮತ್ತೊಂದು.

ವಾಸುವಿಗೆ ದೇವರು ಒಂದು ಕುರ್ಚಿಯಿಂದ ಇನ್ನೊಂದು ಕುರ್ಚಿಗೆ ಪ್ರಮೋಶನ್ ಕೊಟ್ಟನು. ಆದರೆ ಡಾಕ್ಟರ್ ಮಾಡಿದ ಆಪರೇಶನ್ ಅಂದೇ ಫೆಲ್ಯೂರ್ ಆಗಿ ಮಾಲಿನಿಯ ಪ್ರಾಣ ಕೆಳಗಿನಿಂದ ಮೇಲಕ್ಕೆ ಪ್ರಮೋಟ್ ಆಯಿತು.

"ಮಾಲಿನಿ ಮಾಲಿನಿ, ಮಾತನಾಡು ಮಾಲಿನಿ ಮಲಗಿದ್ದೀಯಾ, ಕಣ್ಣು ಬಿಡು ಮಾಲಿನಿ ನಾನು ವಾಸು ಬಂದಿದ್ದೇನೆ. ನಿನಗೆ ಗೊತ್ತಾ ನನಗೆ ಪ್ರಮೋಶನ್ ಸಿಕ್ಕಿದೆ. ಕಾರು ಕೊಡ್ತಾರೆ, ಕ್ವಾರ್ಟರ್ಸ್ ಕೊಡ್ತಾರೆ, ಫ್ಯಾನ್, ಫೋನ್ ಇರುತ್ತೆ ಇದೆಲ್ಲ ನಿನಗೆ ಹೇಳಲು ಬಂದರೆ ನೀನು ಹೀಗೆ ಮಲಗಬಹುದೆ ಏಳು, ಏಳು ಮಾಲಿನಿ'' ಎಂದು ವಾಸು ಹುಚ್ಚನಂತೆ ಅಳುತ್ತಿದ್ದನು. ಅಕ್ಕ ಪಕ್ಕದವರು ನೆರೆದಿದ್ದರು. ಅನಂತಯ್ಯನವರು ಸಹ ಬಂದಿದ್ದರು, ಅರ್ಚನ ಮಂಕಾಗಿದ್ದಳು.

"ಆದದ್ದು ಆಗಿ ಹೋಯಿತು,ನಮ್ಮ ಕೈಯಲ್ಲಿ ಏನಿಲ್ಲ. ಎಲ್ಲವೂ ದೇವರಿಚ್ಛೆ, ಮುಂದಿನ ಕೆಲ್ಸ ನೋಡಿ'' ಎಂದು ಹಿರಿಯರು ಸಮಾಧಾನ ಮಾಡಿದರು.

"ಕೊನೆತನಕ ನಿನ್ನೇ ಕೇಳ್ತಾ ಇದ್ದಳು ವಾಸು, ಆದರೆ ಆಪರೇಶನ್ ಥಿಯೇಟರ್‌ಗೆ ಹೋದ ಮಾಲಿನಿ ಹೊರಗೆ ಬಂದದ್ದು ಕಣ್ಮುಚ್ಚಿಕೊಂಡು.'' ಅನಂತಯ್ಯ ಹೇಳಿದರು.

"ನಿನಗೆ ನಿನ್ನ ಸಾವಿನ ವಿಷ್ಯ ತಿಳಿದು ಬಿಟ್ಟಿತ್ತು ಮಾಲಿನಿ ಅದಕ್ಕೆ ನಾನು ಅಂದು ಬೆಂಗಳೂರಿಗೆ ಹೊರಡುವ ಮುಂಚೆ ಅಷ್ಟೊಂದು ಮಾತನಾಡಿದೆಯಾ, ನಾನು ಪಾಪಿ, ಕೇವಲ ನನ್ನ ಆಸೆ ಈಡೇರಿಸಿಕೊಳ್ಳಲು ನಿನ್ನ ಬಿಟ್ಟು ಹೊರಟೆ. ನಾನು ಹೋಗಬಾರದಾಗಿತ್ತು. ನಾನು ಆ ಕಡೆ ಹೋದೆ, ಆದರೆ ನೀನು ನನ್ನ ಬಿಟ್ಟು ದೂರ ಹೊರಟು ಹೋದೆ'' ಎಂದು ವಾಸು ಅಳತೊಡಗಿದ.

"ಏಳಿ, ನಿಮ್ಮ ದುಃಖ ನಮಗೆ ಗೊತ್ತು. ಆದರೆ ನೀವೇ ಹೀಗೆ ಅತ್ತರೆ ಮೊದಲೇ ಹೆದರಿರುವ ಅರ್ಚನ ಇನ್ನೂ ಅಧೀರಳಾಗುತ್ತಾಳೆ. ಆಮೇಲೆ ನೀವು ಇನ್ನೂ ಪಶ್ಚಾತ್ತಾಪ ಪಡಬೇಕಾಗುತ್ತೆ'' ಎಂದು ಹೇಳಿದರು ಹಿರಿಯರು.

ವಾಸು ದುಃಖ ನುಂಗಿಕೊಂಡನು. ಅರ್ಚನಳನ್ನು ಅಪ್ಪಿಕೊಂಡನು.

"ಆಸೆಗಳು ಸಮುದ್ರದ ಅಲೆಗಳು ತೀರಕ್ಕೆ ಹೊಡೆದು ಹೋಗುತ್ತವೆಯೇ ಹೊರತು ಶಾಶ್ವತವಾಗಿ ಅವು ಅಲ್ಲೇ ಇರಲ್ಲ'' ಎಂದು ಮಾಲಿನಿ ಹೇಳುತ್ತಿದ್ದ ಮಾತು ವಾಸುವಿಗೆ ನೆನಪು ಬರುತ್ತಲೇ ಇತ್ತು.

ಮ್ಯಾಗಜಿನ್

ವಿಭಾಗ

ಸಣ್ಣ ಕಥೆ

ಪಿಂಕ್ ಪರ್ಸ್

ಟಿ. ಎಸ್. ಶ್ರೀನಿವಾಸ ಪ್ರಸನ್ನ

ಗಣೇಶರಾಯರು ಅಂದು ತೀರಾ ಚಿಂತಾ ಮಗ್ನರಾಗಿದ್ದರು. ಹಾಸಿಗೆ ಬಿಟ್ಟೇಳುವುದಕ್ಕೆ ಮನಸ್ಸಾಗದಿದ್ದರೂ ಏಳುವುದು ಅನಿವಾರ್ಯ ವಾಗಿತ್ತು. ಅಳಿಯ ದೀಪಾವಳಿಗೆಂದು ಮೊದಲ ಬಾರಿಗೆ ಹಳ್ಳಿಗೆ ಬರುತ್ತಿರುವುದರಿಂದ ಕಾವೇರಮ್ಮ ಖುಶಿಯಾಗಿದ್ದರು. ಗಣೇಶರಾಯರು ಮುಜುಗರ ಗೊಂಡಿದ್ದರು. ಸಾಲಸೋಲಮಾಡಿ ಹೇಗೋ ತಮ್ಮ ಮಗಳ ಮದುವೆಯನ್ನು ಮುಗಿಸಿದ್ದ ರಾಯರಿಗೆ ಹಣದ ಬರ ಇತ್ತೀಚೆಗಂತೂ ಹೆಚ್ಚಾದದ್ದೇ ಅವರ ಚಿಂತೆಗೆ ಕಾರಣ ವಾಗಿತ್ತು.

'ಹಬ್ಬಕ್ಕೆ ಬರುವೆ' ಎಂದು ತಾನಾಗಿಯೇ ಬರೆದಿದ್ದ ಅಳಿಯನಿಗೆ 'ಬರಬೇಡ' ಎಂದು ಹೇಳಲು ಮನಸ್ಸಾಗದೆ, ಇತ್ತ ಹಬ್ಬಕ್ಕಾಗಿ ಸಾಲಮಾಡಿ ಹಣವನ್ನು ಹೊಂದಿಸಲಾಗದೆ ತೊಳಲಾಡಹತ್ತಿದ ರಾಯರಿಗೆ "ರೈಲು ಬರೋ ಹೊತ್ತಾಯ್ತು, ಹೋಗಿ ಅಳಿಯನನ್ನು ಕರ್‍ಕೊಂಡು ಬರಬಾರ್ದೇ'' ಎಂದು ತುಸು ಏರಿದ ಧ್ವನಿಯಲ್ಲಿ ಕಾವೇರಮ್ಮ ಹೇಳಿದಾಗ, ಹಾಸಿಗೆ ಬಿಟ್ಟೆದ್ದ ರಾಯರು ಮುಖ ತೊಳೆದು ಚಪ್ಪಲಿ ಮೆಟ್ಟಿ ಬೀದಿಗಿಳಿದರು.

ಮುಂಜಾನೆ 6ಕ್ಕೆಲ್ಲ ರಾಮಣ್ಣನ ಮನೆಯ ಬಾಗಿಲಿಗೆ ಸಾಲ ಕೇಳಲು ಹೋಗಿ ನಿಲ್ಲುವುದು ಸರಿಯಲ್ಲವೆಂದು ತಿಳಿದಿದ್ದರೂ ಅವರ ಮನೆಯ ದಾರಿ ತುಳಿಯುವುದು ಅನಿವಾರ್ಯವಾಗಿತ್ತು. ನೂರು ರೂ. ಸಾಲ ಸಿಕ್ಕರೆ ಏನೆಲ್ಲ ವಸ್ತುಗಳನ್ನು ಮನೆಗೆ ತೆಗೆದುಕೊಂಡು ಹೋಗಬಹುದೆಂದು ಯೋಚಿಸುತ್ತ ರಾಮಣ್ಣನ ಮನೆಯ ಮುಂದೆ ಬಂದಾಗ ಭಾರೀ ನಿರಾಸೆ ಕಾದಿತ್ತು. ಮನೆಯ ಬೀಗ ಅವರ ಯೋಜನೆಗಳನ್ನೆಲ್ಲ ಒಮ್ಮೆಲೇ ಗಾಳಿಯಲ್ಲಿ ತೂರಿಹೋಗುವಂತೆ ಮಾಡಲು, ಪಕ್ಕದ ಮನೆಯ ಮಾದನನ್ನು ರಾಮಣ್ಣನ ಬಗ್ಗೆ ವಿಚಾರಿಸಿದಾಗ ರಾಮಣ್ಣ ಹಿಂದಿನ ಸಂಜೆಯೆ ದೀಪಾವಳಿಗೆಂದು ತನ್ನ ಮಗಳ ಮನೆಗೆ ಪಟ್ಟಣಕ್ಕೆ ಹೋಗಿರುವ ವಿಷಯ ತಿಳಿಯಲು ರಾಯರ ಆಸೆಯೆಂಬ ಪಟಾಕಿ ಟುಸ್ ಎಂದಿತು.


ಭಾರವಾದ ಹೆಜ್ಜೆಯನ್ನು ಹೊತ್ತು ರೈಲು ನಿಲ್ದಾಣವನ್ನು ತಲುಪಿದಾಗ ರೈಲು ಬೆಂಗಳೂರಿನಿಂದ ಅರ್ಧ ಗಂಟೆ ಮುಂಚೆಯೆ ಬಂದು ಅಲ್ಲಿನ ನಿಲ್ದಾಣ ಬಿಟ್ಟುಹೋಯಿತೆಂದು ಟಿ. ಸಿ. ಹೇಳಿದಾಗ ಗಣೇಶರಾಯರ ತಲೆ ಗಿರ್‍ರೆಂದಿತು.

ಅಳಿಯ ಬಂದನೋ, ಇಲ್ಲವೋ ಎಂದು ಒಮ್ಮೆ ಯೊಚಿಸಿದರೆ ಬಂದಿರದಿದ್ದರೆ ಪರ್ವಾಗಿಲ್ಲ ಎಂದು ಮತ್ತೊಂದು ರೀತಿಯಲ್ಲಿ ಮನ ಯೋಚಿಸಿತು. ರಾಯರ ಮನಸ್ಸು ದ್ವಂದ್ವದ ನಡುವೆ ವಾಸ್ತವಕ್ಕೆ ಬಂತು. "ಅಳಿಯ ಹಳ್ಳಿಗೆ ಬಂದು ಮನೆದಾರಿ ಹಿಡಿದು ಮನೆ ತಲುಪಿದ್ದರೆ ಕಾವೇರಿಯ ಕೈಯಲ್ಲಿ ಬೈಸಿಕೊಳ್ಳುವುದು ಖಂಡಿತ'' ಎಂದು ಜೋರಾಗಿ ಹೇಳಿಕೊಂಡು ರಾಯರು ಮನೆಯುತ್ತ ದಾಪುಗಾಲು ಹಾಕಿದರು.

ನಿರ್ಜನವಾಗಿದ್ದ ಬೀದಿಯಲ್ಲಿ ನಡೆಯುತ್ತ ಹಣದ ಬಗ್ಗೆಯೇ ಯೋಚಿಸುತ್ತ ಸಾಗಿದ್ದ ರಾಯರಿಗೆ ರಸ್ತೆಯ ಮೇಲೆ ಪಿಂಕ್ ಪರ್ಸ್ ಒಂದು ಬಿದ್ದಿರುವುದು ಕಂಡು ಬಂದಿತು. ಅತ್ತ ಇತ್ತ

ಹಬ್ಬಕ್ಕೆ ಅಳಿಯ ಬರುವುದು ರಾಯರಿಗೆ ನುಂಗಲಾರದ ಬಿಸಿ ತುಪ್ಪ. ಆದರೆ ಒಂದು ಪವಾಡವೇ ಆಯಿತಲ್ಲ?

ತಮ್ಮ ದೃಷ್ಟಿಯನ್ನೊಮ್ಮೆ ಹರಿಸಿದ ರಾಯರು ಯಾರೂ ತಮ್ಮತ್ತ ನೋಡುತ್ತಿಲ್ಲವೆಂಬುದನ್ನು ಖಚಿತಪಡಿಸಿಕೊಂಡು ಬಗ್ಗಿ ಪರ್ಸನ್ನು ಕೈಗೆ ತೆಗೆದುಕೊಂಡು ನೋಡಿದಾಗ ಮುಖ ನೂರು ಕ್ಯಾಂಡಲ್ ಬಲ್ಬ್‌ನಂತೆ ಹೊಳೆಯತೊಡಗಿತು. ಪರ್ಸ್‌ನಲ್ಲಿ ಬೆಚ್ಚನೆಯಾಗಿ ಕುಳಿತಿದ್ದ ನೂರರ ನೋಟುಗಳು ರಾಯರಿಗೆ ಹೊಸ ಹುರುಪನ್ನು ತುಂಬಿತು. ಪರ್ಸನ್ನು ಭದ್ರವಾಗಿ ಜೇಬಿಗಿಳಿಸಿದ ರಾಯರು ಮನೆಯನ್ನು ತಲುಪುವಷ್ಟರಲ್ಲಿ ಅಳಿಯ



ಆನಂದ ಮನೆ ತಲುಪಿ ಆಗಲೇ ಅರ್ಧ ಗಂಟೆಯಾಗಿತ್ತು. ತಮ್ಮ ಮೇಲೆ ಹರಿಹಾಯುವ ಮುನ್ನವೆ ಕಾವೇರಮ್ಮ ದೊಡ್ಡ ಪಟ್ಟಿಯನ್ನು ಕೊಟ್ಟಿದ್ದೆ, ಅಲ್ಲದೆ ಅಳಿಯನಿಗೇ ಮಗಳಿಗೆ ಬಟ್ಟೆಯನ್ನು ತರಬೇಕು ಎಂದು ತಾಕಿತು ಮಾಡಿದರು.

ಹೊಸ ಬಟ್ಟೆ ಪಟಾಕಿ, ಸಿಹಿತಿಂಡಿಗಳನ್ನು ತಂದು ಭಾರಿ ಜೋರಾಗಿ ಹಬ್ಬವನ್ನು ಮಾಡಿ ಮುಗಿಸಿದ ರಾಯರು ಜಗಲಿಯ ಮೇಲೆ ಕುಳಿತು ಪರ್ಸನ್ನೆ ನೆನಯುತ್ತಿರುವಷ್ಟರಲ್ಲೇ ಅಲ್ಲಿಗೆ ಬಂದ ಆನಂದ್ "ಇಲ್ಲಿಗೆ ಹೊರಟು ಬರೋ ಆತುರದಲ್ಲಿ ನಾನು ನಿಮಗೇನೂ ತಗ್ಲಿಕೆ ಆಗಲಿಲ್ಲ. ಇಲ್ಲಿಗೆ ಬಂದು ಬಟ್ಟೆ ಕೊಡಿಸೋಣಾಂತ ತಿಂಗಳ ಸಂಬಳವೆಲ್ಲ ತಗೊಂಡು ಪರ್ಸ್‌ನಲ್ಲಿಟ್ಟುಕೊಂಡು ಹೊರಟು ಬಂದೆ. ಆದ್ರೆ, ನಿನ್ನೆ ಇಲ್ಲಿಗೆ ಬರುವಾಗ ಪರ್ಸ್ ಎಲ್ಲೋ ಬಿದ್ಹೋಗಿರೋದು ಗೊತ್ತಾಯ್ತು ಮಾವ'' ಎಂದು ಬಹಳ ಬೇಸರಿಸಿಕೊಂಡು ಹೇಳಿದ.

ಅದಕ್ಕೆ ರಾಯರು "ಹೋಗ್ಲಿ ಬಿಡಪ್ಪಾ, ಅಂದ ಹಾಗೆ ಪರ್ಸ್ ಹೇಗಿತ್ತು?'' ಎಂದು ವಿಚಾರಿಸಿದರು.

"ಎರಡು ಸಾವಿರ ರೂಪಾಯಿ ಇಟ್ಟಿದ್ದೆ ಮಾವ, ಹಸಿರು ಬಾರ್ಡರ್ ಇದ್ದ ಪಿಂಕ್ ಕಲರ್ ಪರ್ಸ್.'' ಎಂದಾಗ ನೂರಾರು ಪಟಾಕಿಗಳು ಒಮ್ಮೆಲೆ ಸಿಡಿದಂತಹ ಅನುಭವ ರಾಯರಿಗೆ.

ತನ್ನ ಅಳಿಯನ ಪರ್ಸ್ ತನ್ನ ಕೈಗೆ ಸಿಕ್ಕಿ ಅವನ ಹಣದಿಂದಲೆ ಹಬ್ಬ ಮಾಡಿದ್ದು ರಾಯರ ಅರಿವಿಗೆ ಬಂದರೂ, ಅದನ್ನು ಹೇಳಿಕೊಳ್ಳಲಾಗದ ಪರಿಸ್ಥಿತಿ ರಾಯರಿಗೆ.

ಅಳಿಯ ಮಗಳು ಹಳ್ಳಿ ಬಿಟ್ಟು ಹೋದ ಬಳಿಕ ಕಾವೇರಮ್ಮನಿಗೆ ನಡೆದುದೆಲ್ಲವನ್ನೂ ವಿವರವಾಗಿ ಹೇಳಿದ್ದೆ ಅಲ್ಲದೆ ತಾನು ಆದಷ್ಟು ಬೇಗನೆ ಹಣ ಸಂಪಾದಿಸಿ ಅವರ ಹಣವನ್ನು ತಿರುಗಿಸುವುದಾಗಿ ನುಡಿದಾಗ ಅವರ ಮನಸ್ಸಿನ ದುಗುಡ ಅರ್ಧ ಕಡಿಮೆಯಾಗಿತ್ತು. ●

ಹೊಸ ಧಾರಾವಾಹಿ



ಚೈತ್ರ ಚಂದನ

ಯು. ವಿ. ತಾರಿಣಿ ರಾವ್

ಅವಳು ಪೂಜೆಗಾಗಿ ತೋಟವನ್ನೆಲ್ಲ ಸುತ್ತಿ ಮಲ್ಲಿಗೆ, ದವನ, ಗುಲಾಬಿ ಹೂಗಳನ್ನು ಆರಿಸಿ ಬುಟ್ಟಿಯಲ್ಲಿ ತುಂಬಿಟ್ಟಳು. ಸುತ್ತಲೂ ಮಲ್ಲಿಗೆಯ ಕಂಪು ತುಂಬಿತ್ತು. ಅವಳ ಹೃದಯದಲ್ಲಿ ಅನಿರ್ವಚನೀಯ ಆನಂದ. ತೃಪ್ತಿಯಿಂದ ಅವಳ ಕಾಲ್ಗಳು ನವಿಲಂತೆ ಸೊಬಗಿನಿಂದ ಓಡಾಡುತ್ತಿದ್ದವು. ದೂರದಲ್ಲಿನ ಆಲಯದಿಂದ ಗಂಟಾನಾದ ಕೇಳಿಸಿತು. ಹೊತ್ತು ಮೀರಬಹುದೆಂಬ ಗಾಬರಿಯಿಂದ ಹೂ ಬುಟ್ಟಿ ಹಿಡಿದು ದೇವಾಲಯಕ್ಕೆ ಲಗುಬಗೆಯಿಂದ ಧಾವಿಸುತ್ತಿದಂತೆ ಅಕರಾಳ ರಾಕ್ಷಸನೊಬ್ಬ ಒಮ್ಮೆಲೇ ಅಡ್ಡವಾದ. ಪಕ್ಕನೆ ಅವಳ ಕೈಯನ್ನು ಜೋರಾಗಿ ಹಿಡಿದು ಹಿಂದಕ್ಕೆಳೆಯತೊಡಗಿದ.

"ಅಮ್ಮಾ ಅಮ್ಮಾ." ಅವಳ ಬಾಯಿಂದ ಸ್ವರ ಹೊರಡದಷ್ಟು ಗಾಬರಿಯಾಗಿದ್ದಳು. ಎಲ್ಲಿಂದಲೋ ಅಮ್ಮ ಬಂದು ಬಿಟ್ಟರು. ಕರಾಳರೂಪಿಯ ಕೆನ್ನೆಗೊಂದು ಜೋರಾಗಿ ಬಾರಿಸಿ, "ನೀ ಹೋಗು ಮಗು ಇಲ್ಲಿಂದ" ಎಂದವು ಅವಳ ಕಣ್ಗಳು. ಕೆಳಗೆ ಜಾರಿದ್ದ ಹೂ ಬುಟ್ಟಿ ಎತ್ತಿಕೊಂಡು ಹಿಂದಕ್ಕೆ ತಿರುಗಿ ನೋಡದೆ ಅವಳು ಜೋರಾಗಿ ಎದುರು ಕಾಣುತ್ತಿದ್ದ ದೇವಸ್ಥಾನಕ್ಕೆ ಓಡಿದಳು. ಮೆಟ್ಟಿಲು ಹತ್ತಿದನಂತರ ಹಿಂದೆ ನೋಡಿದಾಗ ತಾಯಿ ನಿಂತಿದ್ದ ಸ್ಥಳದಲ್ಲಿ ಅಮ್ಮನಾಗಲೀ, ಆ ರಾಕ್ಷಸನಾಗಲಿ ಕಾಣಲಿಲ್ಲ. ಖಂಡಿತ ಆ ರಾಕ್ಷಸ ಅಮ್ಮನನ್ನು ಮುಗಿಸಿ ಬಿಟ್ಟಿರಬೇಕೆಂದು ಹೆದರಿಕೆಯಿಂದ ಬೊಬ್ಬಿಟ್ಟಳು.

"ಚೈತ್ರ, ಚೈತ್ರ ಎಚ್ಚರ ಮಾಡ್ಕೋ." ಶ್ರೇಯಸ್ ಮೃದುವಾಗಿ ಅವಳನ್ನು ಕೂಗಿದ. ಅವಳು ಎಚ್ಚರವಾಗಿದ್ದರೂ ಅವಳ ಕಣ್ಣುಗಳಲ್ಲಿ ಭೀತಿ ಇನ್ನೂ ಇತ್ತು. ಪುಟ್ಟ ಕೆಂದುಟಿಗಳು ಇನ್ನೂ ನಡುಗುತ್ತಿದ್ದವು. ಮುಖದಲ್ಲಿ ಬೆವರು ಹನಿಗಳು ತುಂಬಿದ್ದವು.

"ಚೈತ್ರ ಹೆದರ್ಕೊಂಡುಬಿಟ್ಯಾ"

ಅವಳು ಮೃದುವಾಗಿ ಅವನನ್ನೊತ್ತಿಕೊಂಡಳು. ಬಲಗೈ ಡ್ರೈವಿಂಗ್ ವ್ಹೀಲ್ ಹಿಡಿದಂತೆ ಅವನು ಎಡಗೈಯಿಂದ ಅವಳನ್ನು ಬಳಸಿದ. "ಕನಸು ಬಿತ್ತು ಶ್ರೀ."

ಶ್ರೇಯಸ್‌ನ ತುಟಿಗಳಲ್ಲಿ ನಗು ಅರಳಿತು. "ನಂಗೊತ್ತು ಮರಿ ಕನಸು ಬಿದ್ದಿತ್ತು ಅಂತ. ಹುಚ್ಚು ಹುಡುಗಿ ಯಾಕೆ ಹೆದರಿಕೆ ನನ್ನಂಥ ಗಂಡ ಜೊತೆಯಲ್ಲಿರುವಾಗ."

ಚೈತ್ರಳಿಗೂ ನಗು ಬಂತು. ಅದು ನಿಜವೇ, ಶ್ರೇಯಸ್‌ನಂಥ ಗಂಡ ಸಿಕ್ಕಿರುವಾಗ ನನಗಾದರೂ ಹೆದರಿಕೆ ಯಾಕಿರಬೇಕು. ಆದರೂ ಕನಸಿನಲ್ಲಿ ಬಂದ ಅಕರಾಳ ವ್ಯಕ್ತಿಯ ನೆನಪಾಗಿ ಅವಳ ಮೈ ಅದುರಿತು. ದೊಡ್ಡ ದೊಡ್ಡ ಮರಗಳ ಬುಡಗಳು ಕಪ್ಪಗೆ ಅವಳೆದುರು ಹಾದು ಹೋಗತೊಡಗಿದವು. "ಶ್ರೀ ಹುಶಾರಾಗಿ ಡ್ರೈವ್ ಮಾಡಿ." ಅವಳು ಬಲವಂತದಿಂದ ಅವನ ಎಡಗೈಯನ್ನು ಸರಿಸಿದಳು. ಹೌದು, ರಸ್ತೆ ಅಂಕುಡೊಂಕಾಗಿ ಸುತ್ತಿಕೊಂಡು ಮೇಲೇರುತ್ತಿತ್ತು. ಹೊರಗೂ ಮೌನ ಒಳಗೂ ಮೌನ. ದಿನಕರ ಅಲ್ಲಲ್ಲಿ ಕಾಣುತ್ತಿದ್ದಂತೆ ಮುಳುಗಲಾರಂಭಿಸಿದ. ಹಗಲೆಲ್ಲ ದಣಿದು ಬಸವಳಿದ

ಅವನಿಗೆ ತನ್ನ ಗೂಡು ಸೇರುವ ತವಕ ಉತ್ಕಟವಾಗಿತ್ತು.

ಸ್ವಲ್ಪ ಮರೆಯಾದ ಕೂಡಲೇ ನಿಶಾದೇವಿ ಅಟ್ಟಹಾಸದಿಂದ ಜಗತ್ತನ್ನೇ ತನ್ನ ಆಳ್ವಿಕೆಗೆ ತೆಗೆದುಕೊಳ್ಳಲು ಆತುರದಿಂದ ತನ್ನ ಕಪ್ಪು ಹಚ್ಚಡ ಹೊದ್ದಿಸತೊಡಗುತ್ತಿದಂತೆ ಸುತ್ತಲೂ ಕತ್ತಲು ಆವರಿಸಿತು.

ಕತ್ತಲಲ್ಲಿ ಘಾಟ್ಟ ಹತ್ತಿ ಬಂದ ಕಾರು ಆಯಾಸದಿಂದ ಜೋಗದ ಮಾರ್ಗದಲ್ಲಿ ನಿಂತಿತು. ಇನ್ನೂ ನಲವತ್ತು ಮೈಲಿ ಕ್ರಮಿಸಿದರೆ ಶಿವಮೊಗ್ಗ ಸಿಗುತ್ತದೆ. ಮಧ್ಯಾಹ್ನ ಕುಮುಟದ ಹೋಟೆಲಲ್ಲಿ ಊಟ ಮಾಡಿದ್ದು ಈಗ ಪೂರ್ತಿ ಜೀರ್ಣವಾಗಿತ್ತು. ಚಳಿ ಗಾಳಿ ಮುಖಕ್ಕೆ ಅಪ್ಪಳಿಸಿತ್ತು. ಒಂದೆರಡು ವಾಹನಗಳು ಇವರನ್ನು ಹಾದುಹೋದವು.

ಹತ್ತಿರದ ಟೀ ಸ್ಟಾಲ್‌ನಲ್ಲಿ ಕಾಫಿ ಕುಡಿದು ಬುಟ್ಟಿಯಲ್ಲಿದ್ದ ಬಿಸ್ಕತ್ತು ತಿಂದಾಗ ಇಬ್ಬರಿಗೂ ಎಷ್ಟೋ ಸಮಾಧಾನವಾಯಿತು.

"ಚೈತ್ರ ಚಳಿ ಇದೆ, ಸ್ವೆಟರ್ ಹಾಕ್ಕೊಂಡು ಬಿಡು.'' ಕಾರಿನ ಗ್ಲಾಸ್ ಏರಿಸಿ ಡ್ರೈವಿಂಗ್ ಸೀಟ್‌ನಲ್ಲಿ ಆಸೀನನಾದ. "ಚಳಿ ಇಲ್ಲ.'' ಅವಳು ಅವನತ್ತ ಮೃದುವಾಗಿ ಪಿಸು ನುಡಿದಳು.

"ನಿಜವೇ ನಾನು ನೀನು ಜೊತೆಯಲ್ಲಿದ್ದರೆ ಚಳಿ ಎಲ್ಲಿಯದು.'' ಅವಳ ನೀಳ ಮೂಗು ಎಳೆದು ಕೆನ್ನೆಗೊತ್ತಿಕೊಂಡ. ಎದುರಿನಿಂದ ಹಾದ ಟ್ರಕ್ಕಿನ ಹೆಡ್ ಲೈಟ್‌ಗಳು ಇಬ್ಬರನ್ನು ಸೋಂಕಿದಾಗ ಬೆಚ್ಚಿ ಕೆಂಪಾಗಿ ಹಿಂದೆ ಸರಿದಳು.

"ಪ್ಲೀಸ್ ಕಾರ್ ಸ್ಟಾರ್ಟ್ ಮಾಡೀಪ. ನಮ್ಮಿಬ್ರನ್ನು ಅವರು ನೋಡಿಬಿಟ್ರಲ್ಲ.''

"ನೋಡಿದ್ರೇನಂತೆ. ನನ್ನ ಹೆಂಡ್ತಿ ಜೊತೆಗೆ ತಾನೇ ನಾನಿರೋದು, ನಿನ್ನ ಮೆಚ್ಚಿ ತಾಳಿ ಕಟ್ಟಿದ ಗಂಡನಲ್ಲವೆ.'' ಅವನು ನಗುತ್ತ ಕಾರು ಸ್ಟಾರ್ಟ್ ಮಾಡಿದ.

ಹೆದ್ದಾರಿಯಾದ್ದರಿಂದ ದಾರಿಯುದ್ದಕ್ಕೂ ಅನೇಕ ವಾಹನಗಳು ಹಾದು ಹೋಗುತ್ತಿದ್ದವು. ಎದುರಿಂದ ಬರುತ್ತಿದ್ದವು. ರಸ್ತೆಯಂತೂ ಕತ್ತರಿ ಪಿನ್ನುಗಳೇ. ಮೈ ತುಂಬ ಎಚ್ಚರವಾಗಿರಬೇಕು.

"ನೀ ನನ್ನ ನೋಡ್ತಿರಬೇಡ. ನಂಗೊಂತರಾ ಆಗುತ್ತೆ.'' ಅವನು ತುಂಬು ನಗೆ ನಕ್ಕ. ಅದೂ ಸರಿ ಎನ್ನಿಸಿತು ಅವಳಿಗೆ. ಅವಳ ತುಟಿಗಳ ತುಂಬ ನಗು ಮೆತ್ತಿಕೊಂಡಿತು.

ಅವಳು ನಿದ್ದೆಯ ನಟನೆಗೆ ತೊಡಗಿದಳು. ಆದರೆ ಕಂಡಿತ ಅವಳಿಗೆ ನಿದ್ರೆ ಹತ್ತಿಬಿಟ್ಟಿತು.

"ಚೈತ್ರ, ಚೈತ್ರೂ.''

ಉಹ್ಹುಂ, ಮುಗ್ಧತೆ ಸೂಸುವ ಬಟ್ಟಲು ಕಣ್ಣುಗಳು ಬಿರಿಯಲಿಲ್ಲ. ಬದಲು ಆ ತುಟಿಗಳಲ್ಲಿ ಸುಂದರವಾದ ನಗು ಕಂಡೂ ಕಾಣದಂತೆ ಗೋಚರಿಸಿತು.

ಮೈಸೂರು, ಬೆಂಗಳೂರು, ಊಟಿ, ಗೋವೆಯಲ್ಲಿ ಅವರ ಹನಿಮೂನು ಮುಗಿದು ಕಾರವಾರದ ಮಾರ್ಗ ಹೊರಟಿದ್ದು ದೀರ್ಘ ಪ್ರಯಾಣದಲ್ಲಿ ಅವಳ ಮುಖ ಬಾಡಿತ್ತು. ಕೇದಗೆ ಬಣ್ಣದ ದುಂಡು ಮುಖ ಕಂದಿತ್ತು. ನವ ವಧು ಆಕೆ ನಾಚಿಕೆಯ ಮುದ್ದೆಯಂತಿದ್ದಳು. ಈ ಇಪ್ಪತ್ತು ದಿನಗಳಲ್ಲಿ ಅವಳಲ್ಲಿನ ನಾಚಿಕೆ ಒಂದಿಷ್ಟೂ ಕುಗ್ಗಿರಲಿಲ್ಲ. ಅವನ ಮಾತೆಂದರೆ ಅವಳಿಗೆ ವೇದವಾಕ್ಯವಾಗಿತ್ತು. ತನ್ನ ಜೀವನ ಸಂಗಾತಿಯ ಬಗ್ಗೆ ಅವನು ಹೆಮ್ಮೆ ಪಟ್ಟುಕೊಂಡ. ಬದುಕು ಅವನಲ್ಲಿ ಆಸಕ್ತಿ ತುಂಬಿಸಿತ್ತು. ಚೈತ್ರ ಮೊದಲ ನೋಟಕ್ಕೆ ಅವನನ್ನು ಸೆರೆ ಹಿಡಿದಿದ್ದಳು. ಚೈತ್ರಳ ಹೆಸರು ಅವನ ಪಾಲಿಗೆ ಸ್ಫೂರ್ತಿ ಉತ್ಸಾಹ ತುಂಬಿಸಿತ್ತು.

ಕಾರು ಮಲೆನಾಡಿನ ಕಾಡಿನ ಏರುಪೇರುಗಳನ್ನು ನಿಧಾನಕ್ಕೆ ಸುತ್ತಿಳಿದು ನಿರಾಂತಕವಾಗಿ ಒಂದೇ ಸಮನೆ ಸಾಗುತ್ತಿತ್ತು.

ಕೋಲಾರದಲ್ಲಿ ಆಪ್ತ ಗೆಳೆಯ ಪ್ರೇಮನಾಥನ ಮದುವೆಗೆ ಗೆಳೆಯರ ಕೂಟ ಸೇರಿಕೊಂಡಿತು. ಮದುವೆ ವೈಭವದಿಂದ ನಡೆಯಿತು. ಮದುವೆಯೂಟ ಮಾಡಿ ಗೆಳೆಯರ ಹಿಂಡು ಕೋಣೆಗೆ ಸೇರಿತ್ತು.

ಪರಸ್ಪರ ಮಾತುಗಳಲ್ಲಿ ನಾಳಿನ ಭವಿಷ್ಯದ ಚಿಂತೆ, ಪರಸ್ಪರ ಭಾವಿ ಬದುಕಿನ ಕಲ್ಪನೆಗಳು ಸಂಗಾತಿಗಳ ಆಯ್ಕೆಗಳ ಬಗ್ಗೆ ಮಾತುಗಳು ಮಾಮೂಲಿಯಾಗಿ ಹೊರಳಿದವು.

"ಸದ್ಯಕ್ಕೆ ಪ್ರೇಮ್ ಇಲ್ಲಿ ಪಟಾಂಗ ಹೊಡಿತಾ ಕೂತಿದ್ದಾನೆ. ಯಾವಾಗ ಅಮ್ಮನವರ ಕಡೆಯಿಂದ ಬುಲಾವ್ ಬರುತ್ತೊ."

"ಪ್ರೇಮ್‌ಗೆ ಸ್ವಾತಂತ್ರ್ಯ ಇನ್ನು ಮೇಲೆ ಕನಸು."

"ಹೌದೌದು, ಕಾಫಿ ತಿಂಡಿಗೆ ಕರೆಯುವವರು ಇಲ್ಲವೇ ಇಲ್ಲ."

"ಯಾರಾದ್ರು ಹುಡುಗಿಯರ ಕಡೆ ನೋಡಿದ್ರೋ ಅತ್ತಿಗೆಯತ್ರ ಕಂಪ್ಲೈಂಟ್ ಕೊಡ್ಬಿಡ್ತೀವಿ."

"ಸ್ವೀಟ್, ಮದ್ವೆ ಸ್ವೀಟ್ ಅಂತ ತಿಂದಾಯ್ತು. ನಿಮ್ಮ ಮದುವೆ ಸ್ವೀಟ್ ಯಾವಾಗ?" ಪ್ರೇಮ್ ಕೇಳಿದ.

"ನೋಡಪ್ಪ ನನ್ನ ಮದುವೆ ಸ್ವೀಟ್ ತಿಂದಾಯ್ತು. ನಾನೀಗ ತಿಂಗಳ ಮಗುವಿನ ತಂದೆ ಮರೀಬೇಡ." ರಘುನಾಥ ಹೇಳಿದ.

"ಸದ್ಯಕ್ಕೆ ನಿರಂಜನ, ಶ್ರೇಯಸ್ ಇದ್ದಾರೆ. ಶ್ರೇಯಸ್‌ನ ಲೈನ್ ಕ್ಲಿಯರ್ ಆಗಿದೆ."

"ಅವನಿಗೇನ್ರೋ ನಾನು ನೀನು ಅಂತ ಕನ್ಯಾಪಿತೃಗಳ ಸಾಲು ಹತ್ತಿರುತ್ತೆ, ಸಾಕಷ್ಟು ವರದಕ್ಷಿಣೆ ಗಿಟ್ಟಿಸಬಹುದು."

ಕಾಲೇಜಿನ ದಿನಗಳಲ್ಲಿ ಶ್ರೇಯಸ್‌ನಿಂದ ಬಹಳ ಉಪಕೃತನಾಗಿದ್ದ ವಾಸುದೇವ ಹೇಳಿದ.

"ಓಹೋ ಒಬ್ಬನೇ ಮಗ. ಸಾಕಷ್ಟು ದೊಡ್ಡ ಕುಳದ ತಂದೆ ಜೋಡಿದಾರರು. ಅವ್ನಿಗೇನು ದುಡಿದು ತಿನ್ನೋ ಕಷ್ಟ ಇಲ್ಲಪ್ಪ." ನಿರಂಜನ ಸ್ವರಗೂಡಿಸಿದ.

"ಜಮೀನ್ದಾರಿ, ಜೋಡಿದಾರಿ ಪದ್ಧತಿ ಹೊರಟ್ಹೋಗಿ ಜಮಾನ ಆಗೋಯ್ತಲ್ಲ. ಅಂದಿನ ದೌಲತ್ತು ಈಗಿಲ್ಲಪ್ಪ. ನಾನೂ ಈಗ ನಿಮ್ಮ ಹಾಗೇ ಶ್ರೀಸಾಮಾನ್ಯ ಅಷ್ಟೇ."

"ಏ ಸಾಕು ಬಿಡು ಮರಿ, ನಿನ್ನ ನೂರಾರು ಎಕರೆಗಳ ಜಮೀನ್ದಾರಿ ಹೋದ್ರೇನಾಯ್ತು ಇರೋವಷ್ಟೇ ಸಾಕು. ಎಸ್ಟೇಟು, ಗದ್ದೆ, ತೋಟ, ಮನೆ."

"ಡಿಕ್ಲರೇಶನ್ ಬಂದ್ಮೇಲೆ ಉಳುವವನೆ ಭೂಮಿಗೊಡೆಯನಾದ. ಏನೋ ಅಷ್ಟಿಷ್ಟು ಇದೆ. ಮೈಸೂರು ಮಹಾರಾಜರೇ ನಮ್ಮ ಹಾಗೆ ಸಾಮಾನ್ಯರಾಗಿಲ್ಲವೆ. ಅದೆಲ್ಲ ಬಿಟ್ಟುಬಿಡ್ರಪ್ಪ. ನಾನು ಮದುವೆಯಾಗೋದು ಹುಡುಗೀನ್ನ ಹೊರತು ವರದಕ್ಷಿಣೆ ಎಂಬುದಲ್ಲವಲ್ಲ."

"ಎಲ್ಲರೂ ಹಾಗೇ ಹೇಳ್ತಾರೆ. ಆಮೇಲೆ ವರೋಪಚಾರ ಅಂತ ಮಾವ ಕೊಟ್ಟಿದ್ದ ಕಾರೋ, ಇಲ್ಲ ಸ್ಕೂಟರ್ರೊ, ಕ್ಯಾಷೋ ಇಸ್ಕೋತ್ತಾರೆ ಅಲ್ವೇನ್ರೊ." ಪ್ರೇಮ್ ನುಡಿದ. ವರೋಪಚಾರದ ಹೆಸರಲ್ಲಿ ಸಾಕಷ್ಟು ಚಿನ್ನ ಬೆಳ್ಳಿ, ಕೈನಟಿಕ್ ಹೋಂಡಾ ಸಿಕ್ಕಿತ್ತು ಅವನಿಗೆ.

"ಶ್ರೀ ನಿಂಗೆಂಥ ಹುಡುಗಿ ಬೇಕು?"

"ನಾನೂ ಹಾಗೇ ಅಂತಿದ್ದೆ, ಮನೆ ಪರಿಸ್ಥಿತಿಗಾಗಿ ಇಪ್ಪತ್ತೈದು ಸಾವಿರ ಮದುವೆ ಖರ್ಚು ತಗೋಬೇಕಾಯ್ತು." ವಾಸು ಹೇಳಿದ.

"ನಿರಂಜನ ನಿನ್ನಾಸೆ ಏನೋ?"

"ನಾನಂತೂ ಪುರೋಹಿತ ವಂಶಸ್ಥ. ಅಪ್ಪ ಹೇಳಿದ್ದು ಲಕ್ಷ್ಮಣರೇಖೆ, ಅದನ್ನ ದಾಟೋ ಹಾಗಿಲ್ಲ."

"ಹೌದು ಬಿಡೋ."

"ಏನಪ್ಪ ಆದರ್ಶವಾದಿ ವರದಕ್ಷಿಣೆ ಬೇಡ, ಹುಡುಗಿ ಹೇಗಿರಬೇಕು. ನಿಂಗೇನೂ ಸರಕಾರಿ ಚಾಕರಿ ಬೇಡ. ಸಿಂಧಿ ಹಸುಗಳ ಫಾರಂ ಮಾಡ್ಕೊಂಡಿದ್ದೀಯಂತೆ. ಹಾಲಿನ ಡೈರಿ ಜೋರಾಗಿದೆ ಅಂತ ಸುದ್ದಿ. ಸಾಕಷ್ಟು ತೋಟ ತುಡಿಕೆ ಇದೆ. ಯಾರಾದ್ರೂ ಅಪ್ಸರೇನ ಲವ್ ಮಾಡಿದ್ದಿ ಏನೂ?"

"ಹಾಗೇನಾದ್ರೂ ಲವ್ ಮಾಡಿದ್ರೆ ಮದುವೆ ಯಾಗಲಿಕ್ಕೆ ನಂಗ್ಯಾವ ಅಡ್ಡಿ ಇಲ್ಲ. ನನ್ನ ಮನಸ್ಸಿಗೆ ಹಿಡಿಸುವ ಹುಡುಗಿ ಸಿಕ್ರೆ ಮದುವೆಯಾಗಲಿಕ್ಕೆ



ಸಿದ್ದ. ಎಲ್ಲಿ ನೋಡಿದರೂ ಆರ್ಟಿಫಿಶಿಯಲ್ ಆಗಿ ಮಾತುಕತೆ, ವೇಶಭೂಷಣದ ಜನರೇ ಸಿಗ್ತಾರೆ.'' ಒಂತರಾ ಭಾವುಕತೆ ಇತ್ತು ಅವನ ಮಾತುಗಳಲ್ಲಿ.

"ಅಂದ್ರೆ ಹುಡುಗಿ ಹೇಗಿರಬೇಕು, ಓದಿರಬಾರದೇನೂ?''

"ಇಲ್ಲ ಅನ್ನಲಿಲ್ಲ. ಸಾಕಷ್ಟು ವಿದ್ಯೆ, ನೋಡಲು ಲಕ್ಷಣವಾಗಿದ್ರೆ ಸಾಕು.''

"ಜಾತಿ ಮತ ನೋಡಲ್ವೇನು?''

"ಅದಂತಾ ದೊಡ್ಡ ವಿಷಯುವಲ್ಲ.''

"ಒಂದು ವೇಳೆ ಅನಾಥ ಹುಡುಗಿ ಸಿಕ್ಕರೆ ಮದುವೆಯಾಗ್ತಿಯೇನು?''

"ತಪ್ಪೇನಿದೆ, ಹೆಣ್ಣೊಬ್ಬಳಿಗೆ ಬದುಕು ಕೊಟ್ಟ ತೃಪ್ತಿ ದೊರಕುವುದಿಲ್ಲವೆ.''

"ಒಂದು ವೇಳೆ ಅಂತಾ ಹುಡುಗಿಯನ್ನ ನೀ ಮದುವೆಯಾದೆ,ಅಂತಿಟ್ಕೊ, ಸಮಾಜ, ನಿನ್ನ ಬಂಧುಗಳು ಏನೂ ಅನ್ನಲ್ಲವೆ. ಕ್ಷಣಿಕ ಆವೇಶದ ಮಾತುಗಳಿಗೆ ಅರ್ಥವಿಲ್ಲ.''

"ನೋಡು ವಾಸು, ಲಕ್ಷ್ಮಿ ಕೃಪೆ ಇದ್ದವರಿಗೆ ಯಾರೂ ಏನೂ ಅನ್ನಲ್ಲ, ನಂಗಂತೂ ಜಾತಿ ಮತದಲ್ಲಿ ನಂಬಿಕೆ ಇಲ್ಲ. ನನ್ನ ಹಣ ಆಸ್ತಿ ನುಂಗೋದಕ್ಕೆ ಹಣಹದ್ದುಗಳು ಕಾಯ್ತಿವೆ. ನಾನೊಂದು ಬೆಲ್ಲದಚ್ಚು ಇದ್ದಂತೆ. ನೊಣ, ಇರುವೆಗಳು ಇವರೇ ನನ್ನ ಸಂಬಂಧಿಗಳು, ನಾನೇನು ಮಾಡಿದರೂ ಯಾರೂ ಕೇಳಲ್ಲ.''

"ಶ್ರೇಯಸ್ ಈ ಎರಡು ವರ್ಷದಲ್ಲಿ ನೀ ತುಂಬಾ ಬದಲಾಗಿ ಬಿಟ್ಟಿದ್ದಿ. ಬಹುಶಾ ಬೋರ್ಡಿಂಗ್‌ನ ಕಟ್ಟುನಿಟ್ಟಿನ ಜೀವನ ಇರಬೇಕು.'' ನಿರಂಜನ ಮೆಚ್ಚುಗೆಯಿಂದ ಹೇಳಿದ.

''ಯಾರಾದ್ರೂ ವಿಧವೆಯನ್ನು ಮದುವೆಯಾಗಿಬಿಡು.''

"ಉಹ್ಞೂಂ ನಂಗಿಷ್ಟವಿಲ್ಲ. ಅದೇನೊ, ಎಷ್ಟೋ ಹುಡುಗಿಯರನ್ನು ನೋಡಿದ್ದೇನೆ.ಯಾರೂ ನನ್ನ ಮನಸ್ಸಿಗೆ ಒಪ್ಪುತ್ತಿಲ್ಲ.''

"ಸರಿ, ನಿನ್ನದು ವಿಚಿತ್ರ ಹಂಬಲ. ಮನೆಯಲ್ಲಿ ಹಿರಿಯರು ಇದ್ದಿದ್ದರೆ ನೀನ್ಯಾಕೆ ಹೀ ಮಾತಾಡುತ್ತಿದ್ದೆ. ಅಂಥ ಅನಾಥ ಕನ್ಯೆ ಹುಡುಕುತ್ತಲೇ ಈಗಾಗ್ಲೆ ಮೂವತ್ತರ ಮೇಲೆ ಮೂವತ್ತಾ ಕಳೆದುಹೋಗುತ್ತೆ.''

ಸ್ನೇಹಿತರು ತಮಾಶೆ ಮಾಡಿದರು. ನಿರಂಜ ಗಂಭೀರವಾಗಿದ್ದ ಶ್ರೇಯಸ್‌ನನ್ನು ನೋಡುತ್ತ ಏನೋ ಚಿಂತಿಸುತ್ತಿದ್ದ.

"ಕಾಫಿ ಟಿಫನಿಗೆ ಬರಬೇಕಂತೆ.'' ಹೆಣ್ಣಿ ಕಡೆಯವರು ಕರೆದಾಗ ಎಚ್ಚರವಾಯಿತು.

ಊರಿಗೆ ಹೊರಡುವ ಮುನ್ನ ನಿರಂಜ ಹೇಳಿದ. "ಶ್ರೀ ನಿಂಗೊಂದು ವಿಷಯ ಹೇಳ್ತೀನಿ.

"ಆಗ ನೀ ಮಾತಾಡಿದೆಯಲ್ಲ ಖಂಡಿ ಅಂಥ ಹುಡುಗಿ ಸಿಕ್ಕರೆ ಮದುವೆಯಾಗ್ತಿಯಾ?

"ನಿಂಗ್ಯಾಕೆ ಅನುಮಾನ, ನಿರಂಜ ಖಂಡಿತವಾಗ್ಲೂ ನನ್ನ ಮನಸ್ಸಿಗೆ ಹುಡುಗಿ ಒಪ್ಪಿದ ಮದುವೆಯಾಗ್ತೀನಿ.''


"ನಮ್ಮ ಮನೆಯಲ್ಲಿ ಅಂಬುಜಮ್ಮ ಅಂ ಇದ್ದಾರೆ. ಆಕೆ ತನ್ನ ಪ್ರಾಯದಲ್ಲಿ ಚೆನ್ನಾಗೇ ಇದ್ದರ ಅನ್ನಿಸುತ್ತೆ. ಅವರಿಗೊಬ್ಬ ಮಗಳಿದ್ದಾಳೆ, ಬರೀ ಪಿ ಯು. ಆಗಿದೆ. ಹುಡುಗಿ ಚೆನ್ನಾಗಿದ್ದಾಳೆ. ಒಳ್ಳೆಯ ಸ್ವಭಾವ. ನಿಂಗಿಷ್ಟವಾದರೆ ಆ ಹುಡುಗಿಯನ ಯಾಕೆ ಮದುವೆಯಾಗಬಾರದು. ತಾಯಿ, ಮಗಳ ಅನಾಥರು. ಯಾರೂ ಇಲ್ಲವಂತೆ. ಆಕೆಯ ನಡ ಉತ್ತಮವಾಗಿದೆ.''

"ನಿರಂಜನ ನಾನೊಮ್ಮೆ ಮೈಸೂರಿಗೆ ಬರ್ತೀನಿ.''

"ಯೋಚಿಸು ಶ್ರೀ, ನಿನ್ನ ನಿರ್ಧಾ ದೃಢವಾಗಿದ್ದರೆ ಆ ಹುಡುಗಿಗೊಂದು ಬದುಕ ಕೊಟ್ಟ ಹಾಗೆ ಆಗುತ್ತೆ.'' ನಿರಂಜನ ಊರಿಗ ಹೊರಟು ಹೋಗಿದ್ದ. ಮೈಸೂರಿನಲ್ಲಿ ಅವನಿ ಲೆಕ್ಚರರಾಗಿ ಕೆಲಸ ಸಿಕ್ಕದ್ದುದನ್ನು ತಿಳಿಸಿದ್ದ. ಆದ ಶ್ರೇಯಸ್‌ಗೆ ಅಲ್ಲಿಗೆ ಹೋಗಲು ಕೈ ತುಂಬ ಕೆಲಸವಿದ್ದುದರಿಂದ ಹೋಗಲು ಆಗಲಿಲ್ಲ. ಹಾಲಿ ಡೈರಿ, ಕೋಳಿ ಫಾರಂಗಳ ಗಡಿಬಿಡಿಯಲ್ಲಿ ಒಂದಿಷ್ಟು ಪುರುಸೊತ್ತು ಸಿಕ್ಕಿರಲಿಲ್ಲ.

(ಸಶೇಷ

ಚುಕ್ಕೆ 15ರಿಂದ 3ರವರೆಗೆ






ಎಂ. ಎನ್. ಚೇತನ
ಕೊಪ್ಪ

ಸೂಚನೆ

ರಂಗೋಲಿ ಚಿತ್ರಗಳನ್ನು [illegible] ಅಥವಾ [illegible] ಮಾತ್ರ ಬರೆಯಿರಿ. ನೀಲಿ ಶಾಯಿಯಲ್ಲಿ [illegible]

ರಂಗೋಲಿ

ಪ್ರತಿಯೊಂದೂ ಹತ್ತು ರೂಪಾಯಿ ಬಹುಮಾನ ಪಡೆದಿದೆ






ಆರ್. ಜಯಲಕ್ಷ್ಮಿ
ಬೆಂಗಳೂರು

ಚುಕ್ಕೆ 21ರಿಂದ 5ರವರೆಗೆ

ಚಿನ್ನದ ಪುತ್ಥಳಿ

ಧಾರಾವಾಹಿ—೮



ಎಚ್. ಕೆ. ಅನಸೂಯ ಸಂಪತ್

ಅವಳ ಹಿಂಭಾಗವನ್ನೇ ಕ್ಷಣ ಕಾಲ ದಿಟ್ಟಿಸಿದ ವರುಣ್ ಮನಸ್ಸಿನಲ್ಲಿಯೇ ನಕ್ಕು ಕಾರನ್ನು ಹೊರಡಿಸಿದ.

ವರ್ಷ ಮನಸ್ಸಿನಲ್ಲಿಯೇ ಯೋಚಿಸಿದಳು. ತನ್ನನ್ನು ಮೈ ಡಿಯರ್ ಎಂದು ಸಂಬೋಧಿಸ ಬೇಕಾದರೆ ಅವರ ಮನಸ್ಸಿನಲ್ಲಿ ಯಾವ ಭಾವನೆಯಿರಬಹುದು? ಬಹುಶಃ ತನ್ನ ಮೇಲೆ ಆಸಕ್ತಿಯಿದೆಯೇ ಅಥವಾ ಬಡ ಹುಡುಗಿ ಸಿಕ್ಕಿದ್ದಾಳೆಂದು ಆಟವಾಡುವ ಆಸೆಯೇ? ಯಾರಿಗೆ ಗೊತ್ತು ಶ್ರೀಮಂತರ ರೀತಿ ನೀತಿಗಳು. ಯಾವ ಕ್ಷಣಕ್ಕೆ ಹೇಗೆ ಬೇಕಾದರೂ ಬದಲಾಗಬಹುದು. ಅನಂತರ ಅದರ ಫಲಿತಾಂಶ ಎದುರಿಸಬೇಕಾದವಳು ತಾನೇ, ಆದ್ದರಿಂದ ತನ್ನೆಚ್ಚರಿಕೆಯಲ್ಲಿ ತಾನಿರಬೇಕು ಎಂದುಕೊಂಡಳು.

ಯಥಾಪ್ರಕಾರ ಮರುದಿನ ಅವಳು ಪಾಠ ಮುಗಿಸಿಕೊಂಡು ಹೊರಟಾಗಲೂ ರಸ್ತೆಯ ಬದಿಯಲ್ಲಿ ಕಾರನ್ನು ತಂದು ನಿಲ್ಲಿಸಿದ.

"ಬನ್ನಿ ವರ್ಷ"

"ಸಾರಿ ಸಾರ್, ಇವತ್ತು ನಾನೆಲ್ಲಿಗೋ ಹೋಗಬೇಕು?"

"ಎಲ್ಲಿಗೆ ಹೋಗಬೇಕು?"

ಅವನ ಪ್ರಶ್ನೆಯಿಂದ ಅವಳಿಗೆ ರೇಗಿತು. ಇವನಿಗೇಕೆ ಬೇಕು ಅದೆಲ್ಲ ಅಧಿಕಪ್ರಸಂಗಿತನ?

"ನಿಮ್ಮನ್ನೇ ಕೇಳಿದ್ದು ಎಲ್ಲಿಗೆ ಹೋಗಬೇಕು?" ರೇಗಿದ

"ಜಯನಗರಕ್ಕೆ." ತಾನೂ ಸಿಡುಕಿದಳು.

"ಬನ್ನಿ ಅಲ್ಲಿಗೇ ಬಿಡುತ್ತೀನಿ, ನಾನು ಆ ಕಡೆಯೇ ಹೋಗುತ್ತಿರುವುದು. ನನಗೂ ಅಲ್ಲಿ ಕೆಲಸವಿದೆ."

"ನಾನು ಹೋಗುವ ಸ್ಥಳದಲ್ಲಿಯೇ ಪ್ರತಿದಿನ ನಿಮಗೂ ಕೆಲಸವಿರುತ್ತಾ?"

"ನಾನು ಹೋಗುವ ಸ್ಥಳವೂ ಅದೇ. ಆದರೆ ಹಾಗೆ ಹೇಳುತ್ತೇನೆ, ಇಲ್ಲದಿದ್ದರೆ ನಿಮ್ಮನ್ನಷ್ಟೇ ಡ್ರಾಪ್ ಮಾಡ್ತೀನಿ ನನಗೇನೂ ಕೆಲಸವಿಲ್ಲ ಅನ್ನುತ್ತೀನಿ. ಸುಳ್ಳು ಹೇಳಿ ಸಾಧಿಸ ಬೇಕಾಗಿರುವು ದೇನು. ನಾನು ನೇರವಾದಿ."

ಅವನ ನೇರ ಉತ್ತರದಿಂದ ಅವಳಿಗೆ ಮುಖ ಭಂಗವಾಯಿತು. ಹಾಗಾದರೆ ತಾನೇ ಏನೇನೋ ಕಲ್ಪಿಸಿ ಅವನನ್ನು ಶಂಕಿಸುತ್ತಿರುವೆನೇ ಎಂದು ಯೋಚಿಸಿದಳು.

"ಕಮ್ ಆನ್ ವರ್ಷ." ಧ್ವನಿಯಲ್ಲಿ ಗಾಂಭೀರ್ಯವಿತ್ತು.

"ಬೇಡ ಸಾರ್, ನಾನು ಬಸ್ಸಿನಲ್ಲಿ ಹೋಗುತ್ತೀನಿ."

"ಏಕೆ, ಕಾರಿನಲ್ಲಿ ಬಂದರೆ ತೊಂದರೆ ಯೇನು?"

"ತೊಂದರೆಯೇನಿಲ್ಲ ಆದರೂ..."

"ಏನಿಲ್ಲ ಬನ್ನಿ."

ಅವಳು ಮತ್ತೇನೂ ಹೇಳದಾದಳು; ಕಾರಿನಲ್ಲಿ ಕುಳಿತಳು.

"ಜಯನಗರದಲ್ಲಿ ಎಲ್ಲಿ ಹೋಗಬೇಕು?"

"ಕಾಂಪ್ಲೆಕ್ಸ್ ಹತ್ತಿರ ಇಳಿದು ಬಿಡುತ್ತೀನಿ. ನನ್ನ ಫ್ರೆಂಡ್ ಮನೆಗೆ ಹೋಗಬೇಕು."

"ಏಕೆ?"

"ಏಕೆ ಅಂದರೆ, ನಮ್ಮ ರಿಸಲ್ಟ್ ನಾಳೆ ನಾಡಿದ್ದರಲ್ಲಿ ಬರಬಹುದು. ಮುಂದೆ ಏನು

ಮಾಡುವುದು ಅಂತ ಆಲೋಚಿಸಬೇಕಲ್ಲ.''

"ಮುಂದಕ್ಕೆ ಓದುವುದು ಇಲ್ಲವೇ ಮದುವೆ ಮಾಡಿಕೊಂಡು ಗಂಡನ ಜೊತೆ ಹಾಯಾಗಿ ಇರುವುದು. ಅಷ್ಟೇ ತಾನೇ ಇರುವ ದಾರಿ ಹುಡುಗಿಯರಿಗೆ.''

"ಹೌದು.'' ಅವಳು ಒಪ್ಪಿದಳು.

"ನಿಮ್ಮ ಫ್ರೆಂಡ್ ಏನು ಮಾಡುತ್ತಾರೆ.''

"ಎರಡನೆಯದು''

"ಅಂದರೆ ಈಗಾಗಲೇ ಎರಡನೆಯದು ಫಿಕ್ಸ್ ಆಗಿದೆಯಾ?''

"ಹ್ಞುಂ.''

"ನೀವು ಏಕೆ ಎರಡನೆಯದನ್ನು ಆರಿಸಿಕೊಳ್ಳಲಿಲ್ಲ.''

"ನನಗೆ ನಮ್ಮ ಮನೆಯ ಪರಿಸ್ಥಿತಿಯಲ್ಲಿ ಅದನ್ನು ಯೋಚಿಸುವುದಕ್ಕೂ ಸಾಧ್ಯವಿಲ್ಲ.''

"ಅಕಸ್ಮಾತ್ ಅಂತಹ ಪರಿಸ್ಥಿತಿ ಬಂತು ಅನ್ನಿ. ಯಾರಾದರೂ ಕೈ ಹಿಡಿಯಲು ಮುಂದೆ ಬಂದರೆ ನೀವು ಸಿದ್ಧರಿದ್ದೀರಾ?''

"ಸಾರ್ ಅಂತಹವರು ಯಾರೂ ಇಲ್ಲ.'' ವಸಂತ್ ಇದ್ದಾನೆಂದು ಮನಸ್ಸು ಕೂಗುತ್ತಿದ್ದರೂ ಇಲ್ಲವೆಂದಳು ನಿರಾಳವಾಗಿ.

"ನಿಮ್ಮದು ಯಾವಾಗಲೂ ನೆಗೆಟಿವ್ ಥಿಂಕಿಂಗ್.''

"ಸಾರ್ ಸದ್ಯಕ್ಕೆ ಮದುವೆ ಯೋಚನೆಯಿಲ್ಲ, ಕೆಲಸ ಕೊಡಿಸಿ.''

"ಆಗಲಿ. ಅಂದಹಾಗೆ ನಮ್ಮ ಫ್ಯಾಕ್ಟರಿ ಯಲ್ಲಿಯೇ ನೀವು ಏಕೆ ಕೆಲಸ ಮಾಡ ಬಾರದು?''

"ಸಾರ್.''

"ಏಕೆ ಇಷ್ಟವಿಲ್ಲವಾ?''

"ಹಾಗಲ್ಲ ಸಾರ್, ನಿಮ್ಮ ತಂದೆಯವರು ಏನನ್ನುತ್ತಾರೋ.''

"ನಾಳೆ ಹೇಳ್ತೀನಿ. ಆದರೆ ನೀವು ಹೇಗೆ ಕೆಲಸ ಮಾಡುತ್ತೀರಿ ಅಂತ ನಾನು ನೋಡಬೇಕು, ನಿಮಗೆ ಒಂದು ಸಣ್ಣ ಇಂಟರ್‌ವ್ಯೂ ಮಾಡ್ತೀನಿ, ಅದರಲ್ಲಿ ನೀವು ಪಾಸಾದರೆ...''

"ಯಾವತ್ತು?''

"ಆತುರ ಏಕೆ, ನಿಧಾನವಾಗಿ ಮಾಡೋಣ.''

"ರಿಸಲ್ಟ್ ಬಂದ ಮೇಲಾ?''

"ಓಕೆ ಹಾಗೇ ಆಗಲಿ.''

"ಸಾರ್ ನಾನು ಏನೇನು ಸ್ಟಡಿ ಮಾಡಬೇಕು ಈಗಲೇ ಹೇಳಿಬಿಡಿ, ನಾನು ಕಂಡಿತಾ ಅದರಲ್ಲಿ ಪಾಸಾಗಲೇಬೇಕು.''

"ಏನೂ ಓದಬೇಡಿ, ಅದರ ಯೋಚನೆ ಬಿಟ್ಟು ಶರತ್‌ಗೆ ಚೆನ್ನಾಗಿ ಕಲಿಸಿ.''

ಅವನ ಮಾತು ಅವಳಿಗೆ ಒಗಟನಂತಾಯಿತು.

"ಈಗ ನನಗೆ ಲೇಟಾಯಿತು.''

"ನಾನು ಇಲ್ಲೇ ಇಳೀತಿನಿ'' ಎಂದು ಇಳಿದಳು.

"ಇಫ್ ಯು ಡೋಂಟ್ ಮೈಂಡ್ ನಾನೊಂದು ಮಾತು ಹೇಳಲಾ?''

"ಹೇಳಿ.''

"ನಮ್ಮ ಫ್ಯಾಕ್ಟರಿಯಲ್ಲಿ ಕೆಲಸಕ್ಕೆ ಬರುವ ಹೆಣ್ಣು ಮಕ್ಕಳು ನೀಟಾಗಿ ಡ್ರೆಸ್ ಮಾಡಿಕೊಂಡು ಬರುತ್ತಾರೆ ನೀವು?''

"ಆಗಲಿ ಸಾರ್.''

"ಈ ಹಣ ನಿಮ್ಮ ಹತ್ತಿರ ಇಟ್ಟುಕೊಳ್ಳಿ, ಎರಡು ಒಳ್ಳೆಯ ಸೀರೆ ತೆಗೆದುಕೊಳ್ಳಿ. ಇಂಟರ್‌ವ್ಯೂ

ಕಳೆದ ಸಂಚಿಕೆಯಲ್ಲಿ....

ಸುಂದರವಾದ ಮೈಕಟ್ಟಿನ ಚಲುವ ವರ್ಷ. ಆಕೆಗ ಅನೇಕ ಕನಸುಗಳು. ಆದರೆ ಮನೆಯಲ್ಲಿನ ಬಡತನದಿಂದಾಗಿ ಅದಕ್ಕೆ ಕಡಿವಾಣ. ವಸಂತ್‌ನ ಜೊತೆ ಆಕೆಗ ಮದುವೆ ಮಾಡಲು ಮನೆಯಲ್ಲಿ ಮಾತು ನಡೆಯುತ್ತಿದೆ. ವರ್ಷ, ನಿರಾಕರಿಸುತ್ತಾಳೆ.

....ಮುಂದೆ ಓದಿ

ದಿನ ಉಟ್ಟುಕೊಂಡು ಬನ್ನಿ.''

"ಸಾರ್ ಬೇಡ, ನಾನೇ ಕೊಂಡುಕೊಳ್ತೀನಿ.''

"ನಿಮ್ಮ ಸ್ಥಿತಿ ನನಗೆ ಗೊತ್ತು. ಪ್ಲೀಸ್ ಟೇಕ್ ಇಟ್'' ಎಂದು ಅವಳ ಬಲಗೈ ಹಿಡಿದೆಳೆದು ನೂರರ ಹತ್ತು ನೋಟನ್ನು ಅವಳ ಕೈಗೆ ತುರುಕಿದ.

ಅವನ ಬಲಿಷ್ಠವಾದ ಕೈಯಲ್ಲಿ ಅವಳ ಕೋಮಲ ಕರ ಕಂಪಿಸಿತು.

"ಸಾರ್ ಇಷ್ಟೊಂದು!''

"ಎಷ್ಟಿದೆ ಮಹಾ'' ಎಂದುಬಿಟ್ಟ.

ಅವನು ಹೊರಟು ಹೋದರೂ ಅವಳು ಹಾಗೆಯೇ ನಿಂತಿದ್ದಳು. ವಿದ್ಯಾವಂತ ಶ್ರೀಮಂತ ತರುಣನೊಬ್ಬ ಸಾವಿರ ರೂ. ಕೊಡುವುದೆಂದರೆ ಏನರ್ಥ? ನಯವಾಗಿ ತನ್ನನ್ನು ಒಲಿಸಿಕೊಂಡು ಬಲೆ ಬೀಸಿ ಹಿಡಿಯುವ ಆಸೆಯೇ ಅಥವಾ ನಿಜವಾಗಲೂ ತಾನು ಇಂಟರ್‌ವ್ಯೂಗೆ ಸರಿಯಾಗಿ ಬರಲಿ ಎಂಬ ಬಯಕೆಯೋ. ಏನೇ ಆಗಲಿ, ತಾನು ಹಣವನ್ನು ತೆಗೆದುಕೊಳ್ಳುವುದು ಸರಿಯೇ? ಬೇಡ. ನಾಳೆ ಹೇಗಾದರೂ ಸಮಯ ಕಾದು ಹಿಂತಿರುಗಿಸಿಬಿಡುವುದೇ ಲೇಸು. ತಾನು ಬಡವಳಿರಬಹುದು, ಆದರೆ ತನಗೆ ಸ್ವಾಭಿಮಾನ ವಿಲ್ಲವೇ, ಅವರ ಹಂಗು ತನಗೇಕೆ?

ಫ್ಯಾಕ್ಟರಿಯಲ್ಲಿ ಕೆಲಸ ಮಾಡಿದ ಮೇಲೆ ಎಲ್ಲರಿಗೂ ಕೊಡುವಂತೆ ತನಗೂ ಕೊಟ್ಟಿದರೆ ಸ್ವೀಕರಿಸಬಹುದಿತ್ತು. ಆದರೆ ಇದು ತನಗೊಬ್ಬಳಿಗೇ ಕೊಟ್ಟಿರುವ ಹಣ. ತಾನು ಸ್ವೀಕರಿಸದಿರುವುದೇ ಒಳಿತು ಎಂದು ಯೋಚಿಸಿದಳು.

ಮುಂದೆ ಒಂದು ವಾರ ಅವನು ಅವಳ ಕೈಗೆ ಸಿಗಲಿಲ್ಲ. ಕೊನೆಗೊಮ್ಮೆ ಅವಳು ಪಾಠಕ್ಕೆ ಬಂದಾಗ ಅವನು ಪೇಪರ್ ಓದುತ್ತಿದ್ದ.

ಕೂಡಲೇ ಹಣ ತೆಗೆದು ಅವನ ತೊಡೆಯ ಮೇಲಿಟ್ಟು ತನ್ನ ಜಾಗಕ್ಕೆ ಬಂದು ಕುಳಿತಳು.

ಅವನಿಗೆ ತಲೆಬುಡ ಅರ್ಥವಾಗಲಿಲ್ಲ, ಇವಳೇಕೆ ಹಣ ಹಿಂತಿರುಗಿಸಿದ್ದಾಳೆ ಎಂದು ಅವನಿಗೆ ಅಚ್ಚರಿಯಾಯಿತು.

ಅವಳ ಹತ್ತಿರ ಬಂದವನೇ.

"ಏನಿದು ಹುಚ್ಚಾಟ, ಎಲ್ಲದಕ್ಕೂ ಒಂ[...] ಮಿತಿಯಿದೆ.'' ರೇಗಿದ.

"ನನಗೆ ಬೇಡ ಅಂತ ಹೇಳಿದೆನಲ್ಲ.''

"ಬೇಡ ತಾನೇ?''

"ಬೇಡ.'' ತಲೆಯಾಡಿಸಿದಳು.

ಆ ಹೊತ್ತಿಗೆ ಶರತ್ ಬಂದದ್ದರಿಂದ "ಆಮೇ[...] ಮಾತನಾಡೋಣ'' ಎಂದು ಹೊರಟು ಹೋ[...]

ಅವಳಿಗೆ ಗಾಬರಿಯೇ ಆಯಿತು. ಇದ[...] ಪರಿಣಾಮ ಹೇಗೋ ಏನೋ, ಮೊದಲೇ ವರು[...] ಮುಂಗೋಪಿ. ಅವನ ಮುಂಗೋಪದ ಫ[...] ಏನೋ? ಹೇಗಪ್ಪ ಅವನನ್ನು ಎದುರಿಸುವು[...] ಎಂದು ಯೋಚಿಸಿದಳು. ಶರತ್‌ಗೆ ಮನಃಪೂರ್ವಕವಾ[...] ಪಾಠ ಹೇಳಿಕೊಡಲು ಸಾಧ್ಯವಾಗಲಿಲ್ಲ.

ಹೇಗಾದರೂ ಮಾಡಿ ಅವನಿಂ[...] ತಪ್ಪಿಸಿಕೊಳ್ಳಬೇಕೆದು ಎಣಿಕೆ ಹಾಕಿದರು[...] ಫಲಕಾರಿಯಾಗಲಿಲ್ಲ. ಅವನು ಅವಳ[...] ಹೊರಡುತ್ತಲೇ,

'ಬನ್ನಿ' ಎಂದು ಕಣ್ಣು ಸಂಜ್ಞೆಮಾಡಿದ.

ಅವಳು ತಲೆ ತಗ್ಗಿಸಿ ಹೊರ ನಡೆದಳ[...] ಅವನು ಕಾರಿನ ಸ್ವಿಚ್ ಕೀ ಹಿಡಿದು ಹೊರ ಬಂದ[...]

"ವರ್ಷ.''

"ಏನು?''

"ಏನಿದು ಹಣ ತಗೊಂಡು ವಾಪಾಸ[...] ಕೊಡುವುದು. ನಿಮ್ಮಿಂದ ಇಂತಹ ವರ್ತನೆಯನ[...] ನಾನು ನಿರೀಕ್ಷಿಸಿರಲಿಲ್ಲ.'' ರೇಗಿದ

"ಸಾರ್ ಅಷ್ಟೆಲ್ಲ ಹಣ ನಿಮ್ಮಿಂ[...] ತೆಗೆದುಕೊಳ್ಳುವುದು ನನಗೆ ಸರಿ ಕಾಣಲಿಲ್ಲ[...] ಅದಕ್ಕೆ ವಾಪಾಸು ಕೊಟ್ಟೆ.''

"ಸರಿ ಈಗ ತಗೊಳ್ಳಿ.''

"ಬೇಡ ಸಾರ್, ನನ್ನ ಮನಸು ಒಪ್ಪುವುದಿಲ್ಲ.''

"ಸರಿ ಬಿಡಿ. ಆದರ ಪರಿಣಾಮ ಏನು ಅಂ[...] ಎದುರಿಸುವುದಕ್ಕೆ ಸಿದ್ಧರಾಗಿರಿ.''



"ಸಾರ್?"

"ಐ ಡೋಂಟ್ ವಾಂಟ್ ಎನಿ ಎಕ್ಸ್‌ಪ್ಲನೇಶನ್" ಎಂದುಬಿಟ್ಟ.

ವರ್ಷಳಿಗೆ ಪುನಾ ಅವನನ್ನು ಮಾತನಾಡಿಸಲು ಹೆದರಿಕೆಯಾಯಿತು.

"ನಾನಿಲ್ಲೇ ಇಳಿದುಬಿಡ್ತೀನಿ."

ಅವನು ಕಾರು ನಿಲ್ಲಿಸಲಿಲ್ಲ.

"ಸಾರ್ ಇಲ್ಲೇ ನಿಲ್ಲಿಸಿ."

"ನಾನೇನು ನಿಮ್ಮನ್ನು ತಿಂದು ಬಿಡುವುದಿಲ್ಲ ಸುಮ್ಮನಿರ್ರಿ." ರೇಗಿದ.

ಅವಳು ಮುದುರಿದ ಹಕ್ಕಿಯಾದಳು. ಎದೆ ನಡುಗಿತು. ಯಾಕಪ್ಪ ಇವನ ಸಂಗಡ ಬಂದೆ ಎಂದು ಹಲುಬಿದಳು. ಅವಳ ಕಂಗಳಲ್ಲಿ ಕಂಬನಿ ತುಳುಕಿದವು.

ಅವನು ಅವಳ ಚಲನವಲನಗಳನ್ನು ಓರೆಗಣ್ಣಿನಿಂದ ದಿಟ್ಟಿಸುತ್ತಿದ್ದ, ಅವಳ ಚಡಪಡಿಕೆ ಅವನಿಗೆ ತಮಾಷೆಯಾಗಿತ್ತು.

"ಸಾರ್ ಕಾರು ನಿಲ್ಲಿಸಿ, ನನ್ನನ್ನು ಏಕೆ ಹೀಗೆ ಸತಾಯಿಸುತ್ತೀರಾ?"

ಅವನು ಒಂದು ಪಕ್ಕಕ್ಕೆ ಕಾರನ್ನು ನಿಲ್ಲಿಸಿದ. ಅವನು ನಿಲ್ಲಿಸಿದ ಕೂಡಲೇ ಅವಳು ಇಳಿಯಲು ಹವಣಿಸಿದಳು.

"ವರ್ಷ ಖಂಡಿತ ನನ್ನಿಂದ ನಿಮಗೆ ಯಾವ ತೊಂದರೆಯೂ ಆಗುವುದಿಲ್ಲ."

ಅವನನ್ನೇ ಆಶ್ಚರ್ಯದಿಂದ ನೋಡಿದಳು ವರ್ಷ.

"ಹೌದು ವರ್ಷ, ನಾನು ಹೆಣ್ಣನ್ನು ಗೌರವಿಸುತ್ತೇನೆ. ಅವಳ ಹೆಣ್ತನಕ್ಕೆ ಬೆಲೆ ಕೊಡುತ್ತೇನೆ. ಸ್ವಭಾವ ಮುಂಗೋಪವಿರಬಹುದು, ಆದರೆ ಆ ಕೋಪ ನಿಮ್ಮತನವನ್ನು ಎಂದೂ ಹಾಳು ಮಾಡುವುದಿಲ್ಲ. ನನ್ನನ್ನು ನಂಬಿ ಬಂದ ನಿಮಗೆ ನಾನು ಯಾವ ದ್ರೋಹವನ್ನೂ ಮಾಡುತ್ತಿರಲಿಲ್ಲ. ನೀವಿನ್ನು ಧಾರಾಳವಾಗಿ ಹೋಗಬಹುದು" ಎಂದ ತುಂಬು ಗಾಂಭೀರ್ಯದಿಂದ.

ವರ್ಷ ಅವನ ಮಾತನ್ನು ಕೇಳಿ ಬಿಕ್ಕಿದಳು.

"ವರ್ಷ ಏನಾಯಿತು?"

"ಏನಿಲ್ಲ."

"ಅಳೋದೇಕೆ, ನಾನು ಈಗ ಏನಂದೆ? ನನ್ನಿಂದ ತೊಂದರೆಯಾಗುವುದಿಲ್ಲ ಅಂದೆನಲ್ಲ."

ಅವಳು ಜೋರಾಗಿ ಬಿಕ್ಕಳಿಸಿದಳು. ಅವಳ ಕಂಬನಿಗೆ ಅವನು ಕರಗಿದ.

"ಮೈ ಡಿಯರ್ ವರ್ಷ ಛೇ ಅಳುವುದು ಹೇಡಿಗಳ ಲಕ್ಷಣ. ಏನೇ ಬಂದರೂ ಧೈರ್ಯವಾಗಿ ಎದುರಿಸಬೇಕು" ಎಂದು ಅವಳನ್ನು ಹತ್ತಿರಕ್ಕೆಳೆದು ಕೊಂಡು ತಲೆ ಸವರಿದ.

ಅವಳು ಅವನೆದೆಗೆ ತನ್ನ ಮುಖವನ್ನು ಉಜ್ಜಿದಳು. ಆ ಕ್ಷಣ ಅವಳೂ ತನ್ನನ್ನು ಮರೆತಳು. ಅವನ ಸಾಮಿಪ್ಯ ಅವಳಿಗೆ ಹಿತವಾಗಿತ್ತು. ಅವನ ಬಿಸಿಯುಸಿರು ಅವಳ ಕೆನ್ನೆಯನ್ನು ರಂಗೇರಿಸಿತ್ತು.

"ವರ್ಷ ಹೋಗೋಣವಾ?"

"ಹ್ಞುಂ."

"ನನ್ನ ಜೊತೆ ಬರುವುದಕ್ಕೆ ನಿನಗೆ ಧೈರ್ಯವಿದೆಯಾ?" ಸಲಿಗೆಯಿಂದ ಕೇಳಿದ.

"ಹ್ಞುಂ" ಕಣ್ಣು ಮುಚ್ಚಿಕೊಂಡೇ ನುಡಿದಳು.

"ಏಕೆ ಹುಶಾರಿಲ್ಲವಾ?"

"ಸರಿಯಾಗಿದ್ದೀನಲ್ಲ." ಆಗ ಅವಳು ಎಚ್ಚೆತ್ತು ಅವನಿಂದ ದೂರ ಸರಿದಳು.

ಅವನು ಕಾರನ್ನು ಹೊರಡಿಸಿದ. ಅವಳಿಗೆ ತುಂಬ ನಾಚಿಕೆಯಾಗಿತ್ತು. ತಾನು ಎಷ್ಟೊಂದು ದುಡುಕಿಬಿಟ್ಟೆ. ಏನು ಮಾಡುತ್ತಿದ್ದೇನೆಂಬ ಅರಿವಿಲ್ಲದೆ ಅವರ ಸನಿಹ ಸರಿದು ಮೈ ಮರೆತಿದ್ದೆನಲ್ಲ ಎಂದು ಪಶ್ಚಾತ್ತಾಪವಾಯಿತು.

ಆದರೆ ಅವನು ಮಾತ್ರ ಏನೂ ನಡೆದೇ ಇಲ್ಲವೆಂಬಂತೆ ಹಾಯಾಗಿ ಡ್ರೈವ್ ಮಾಡುತ್ತಿದ್ದ. ಅವಳಿಗೆ ಮಾತು ಬೇಡವಾಗಿತ್ತು. ಅವನು ಕಾರು ನಿಲ್ಲಿಸಿದ ಕೂಡಲೇ ಇಳಿದಳು.

"ನಾನು ಬರ್ತೀನಿ ಸಾರ್."

(ಸಶೇಷ)

ರಾಗಸಂಗಮ

ಲಾಟರಿ

ಬಹುಮಾನ ರೂ. 200

* ಓದುಗರಿಗಾಗಿ 'ರಾಗಸಂಗಮ' ನಡೆಸುವ ಒಂದು ನೂತನ 'ಲಾಟರಿ ಡ್ರಾ' ಇದು.
* ಈ ಲಾಟರಿಗಾಗಿ ನೀವು ಒಂದು ಪೈಸೆ ಕೂಡ ಹಣ ಕೊಡುವ ಅಗತ್ಯವಿಲ್ಲ.
* 'ರಾಗಸಂಗಮ' ಪತ್ರಿಕೆಯನ್ನು ಕೊಂಡು ಓದುವ ಪ್ರತಿಯೊಬ್ಬರೂ ಈ 'ಲಾಟರಿ ಡ್ರಾ' ನಲ್ಲಿ ಭಾಗವಹಿಸಬಹುದು.
* 'ಪದರಂಗ' 'ಚಾಣ್ಯ ಸ್ಪರ್ಧೆ' ಮುಂತಾದ್ದುವುಗಳನ್ನು ನಡೆಸಿದರೆ ಒಂದು ವರ್ಗದ ಓದುಗರು ಮಾತ್ರ ಅದರಲ್ಲಿ ಭಾಗವಹಿಸಲು ಸಾಧ್ಯವಾಗುತ್ತದೆ.
* ಆದರೆ 'ರಾಗಸಂಗಮ' ಓದುಗರೆಲ್ಲರೂ ಆಸಕ್ತಿಯಿಂದ ಭಾಗವಹಿಸಬೇಕೆಂಬ ಉದ್ದೇಶದಿಂದ, ಅವರ ವಯಸ್ಸು, ವಿದ್ಯಾಭ್ಯಾಸ, ಬುದ್ಧಿವಂತಿಕೆ, ಇವುಗಳನ್ನು ಆಧಾರವಾಗಿಟ್ಟು ಸ್ಪರ್ಧೆಯನ್ನು ನಡೆಸದೆ ಬಹಳ ಸುಲಭವಾದ ಈ 'ಲಾಟರಿ ಡ್ರಾ'ವನ್ನು ನಡೆಸುತ್ತೇವೆ.
* ನೀವು ಮಾಡಬೇಕಾದ್ದು ಬಹಳ ಸುಲಭವಾದದ್ದು ಹಾಗೂ ಶ್ರಮವಿಲ್ಲದ್ದು.
* ನಿಮಗಾಗಿ ಈ ಪುಟದಲ್ಲಿ 'ಲಾಟರಿ ಡ್ರಾ ಸಂಖ್ಯೆ'ಯೊಂದಿಗೆ ಕೂಡಿದ ನಮ್ಮ ವಿಳಾಸವನ್ನು ಮುದ್ರಿಸಿದ್ದೇವೆ. ಇದನ್ನು ಕತ್ತರಿಸಿ ತೆಗೆದು ಅಂಚೆ ಕಾರ್ಡಿನ ವಿಳಾಸಕ್ಕಾಗಿ ಮೀಸಲಾದ ಸ್ಥಳದಲ್ಲಿ ಅಂಟಿಸಿ, ಹಾಗೂ ಅದೇ ಮಗ್ಗುಲಿನ, ಬರಹಕ್ಕೆ ಮೀಸಲಾಗಿರುವ ಖಾಲಿ ಜಾಗದಲ್ಲಿ ಇದೇ ಪುಟದಲ್ಲಿ ಸೂಚಿಸಿರುವ ವಿವರಗಳನ್ನು ಬರೆದು ಕೊನೆಯ ತಾರೀಖು ಮತ್ತು ಸಮಯದೊಳಗೆ ನಮ್ಮ ಕೈ ಸೇರುವಂತೆ ಕಳುಹಿಸಿ.

ನೆನಪಿಡಿ : ನಮ್ಮ ವಿಳಾಸವನ್ನು ಮಾತ್ರ ವಿಳಾಸಕ್ಕಾಗಿ ಮೀಸಲಾದ ಸ್ಥಳದಲ್ಲಿ ಅಂಟಿಸಬಹುದೇ ವಿನಾ ಬೇರೆ ಏನನ್ನೂ ಅಂಟಿಸಬಾರದು. ಇತರ ವಿವರಗಳನ್ನೆಲ್ಲಾ ಕೈಯಲ್ಲೇ ಬರೆದು ಕಳುಹಿಸಬೇಕು.

* ಪ್ರತಿ ವಾರವೂ ಲಾಟರಿ ಟಿಕೆಟ್ಟುಗಳನ್ನು 'ಡ್ರಾ' ಪದ್ಧತಿಯಲ್ಲಿ ಆಯ್ಕೆ ಮಾಡಿ, ನಾಲ್ವರು ಅದೃಷ್ಟಶಾಲಿ ಓದುಗರಿಗೆ ತಲಾ ರೂ. 50 ರಂತೆ ರೂ. 200 ಬಹುಮಾನ ನೀಡಲಾಗುವುದು.
* 'ಡ್ರಾ'ನಲ್ಲಿ ಯಶಸ್ವಿಯಾದವರ ಹೆಸರು ಮತ್ತು ವಿಳಾಸ ಪ್ರಕಟವಾಗುವ 'ರಾಗಸಂಗಮ'ದ ಸಂಚಿಕೆ : 31–5–92.
* ನಿಮ್ಮ 'ಲಾಟರಿ ಟಿಕೇಟ್' ಅಂಚೆ ಕಾರ್ಡುಗಳು ನಮ್ಮ ಕಚೇರಿಗೆ ಬಂದು ಸೇರಬೇಕಾದ ಕೊನೆಯ ತಾರೀಖು ಮತ್ತು ಸಮಯ : ಶುಕ್ರವಾರ 8–5–91 ಸಂಜೆ 5 ಗಂಟೆ.

ಅಂಚೆ ಕಾರ್ಡಿನ ವಿಳಾಸದ ಸ್ಥಳದಲ್ಲಿ ಇದನ್ನು ಕತ್ತರಿಸಿ ಅಂಟಿಸಿ.

ರಾಗಸಂಗಮ ಲಾಟರಿ ಡ್ರಾ – ೧೩೪

ಸಂಗಮ ಪ್ರಕಾಶನ
ಅಂಚೆ ಪೆಟ್ಟಿಗೆ 6646
41, ಕೋಟೆ 'ಬಿ' ಬೀದಿ
ಬೆಂಗಳೂರು – 560 002
BANGALORE - 560 002

ಅಂಚೆ ಕಾರ್ಡಿನ ವಿಳಾಸದ ಮಗ್ಗುಲಲ್ಲಿರುವ ಖಾಲಿ ಸ್ಥಳದಲ್ಲಿ ಈ ಕೆಳಕಂಡಂತೆ ಬರೆದು ಅದರ ಕೆಳಗೆ ತಾರೀಕಿನೊಂದಿಗೆ ಕೂಡಿದ ನಿಮ್ಮ ಸಹಿಯನ್ನು ಮಾಡಬೇಕಾದದ್ದು ಅವಶ್ಯ.

ಶುಲ್ಕವೇ ಇಲ್ಲದ ಈ 'ರಾಗಸಂಗಮ ಲಾಟರಿ ಡ್ರಾ' ನಲ್ಲಿ ನಾನು ಭಾಗವಹಿಸಲು ಇಚ್ಛಿಸುತ್ತೇನೆ. ಇದರಲ್ಲಿ ಸಂಪಾದಕರ ತೀರ್ಪೇ ಅಂತಿಮ ಹಾಗೂ ಕಾನೂನುಬದ್ಧವಾದದ್ದು ಎಂದು ಅರಿತಿದ್ದೇನೆ.

ಅಂಚೆ ಕಾರ್ಡಿನ ಪೂರ್ಣ ಖಾಲಿ ಇರುವ ಮುಂಬದಿಯಲ್ಲಿ ಈ ಕೆಳಗೆ ಕೇಳಿರುವ ವಿವರಗಳನ್ನು ಓದಲು ಸಾಧ್ಯವಾಗುವಂತೆ ಸ್ಪಷ್ಟವಾಗಿ ಬರೆಯಿರಿ.

ನಿಮ್ಮ ಹೆಸರು ; ಸಂಪೂರ್ಣ ವಿಳಾಸ ; ಅಂಚೆ ; ಪಿನ್‌ಕೋಡ್ ; ಹೋಬಳಿ ; ತಾಲ್ಲೂಕ್ ; ಜಿಲ್ಲೆ ; ರಾಜ್ಯ.


ಒಂದು ಪುಟದ ಮಿನಿ ಕಥೆ

ಕೊಲೆ?

ಶ್ರೀಮೂರ್ತಿ ಸಾಗರ

ಶ್ರೀ ಟಾಕಿಸಿನ ಹತ್ರ ಕೊಲೆ ಆಗಿದ್ಯಂತೆ. ರಕ್ತ ಗೋಡೆಗೆಲ್ಲ ಸಿಡ್ಡಿದೆಯಂತೆ. ಜನ ತಮ್ಮತಮ್ಮಲ್ಲೆ ಮಾತನಾಡುತ್ತ ಟಾಕೀಸಿನ ಬಳಿ ಓಡುತ್ತಿದ್ದರು. ಪೇಟೆಯಿಂದ ಬರುತ್ತಿದ್ದ ನನಗೆ ಈ ವಿಷಯ ತಿಳಿದು ಮೈ ಜುಂ ಎಂದಿತು. ಜನರೆಲ್ಲರೂ ಹೆಣ ನೋಡಲು ಅತ್ತಲೇ ಹೋಗುತ್ತಿದ್ದರು. ನಾನು ಸರಿಯಾಗಿ ತಿಳಿಯಲು ಹೋಗುತ್ತಿದ್ದ ಜನರನ್ನು ತಡೆದು ಕೇಳಿದರೆ "ಆಯ್ ಕೊಲೆ ಆಗಿದ್ಯಂತೆ" ಎಂದು ಹೇಳಿ ಓಡುತ್ತಿದ್ದರು. ಒಬ್ಬನನ್ನು ಬಲವಂತವಾಗಿ ತಡೆದು ಕೇಳಿದೆ. ಆತ "ಸೋಮಿ ಅವ್ನ ಬಾರಿ ಹೆಂಡ ಕುಡ್ಕ, ಹೆಂಡ್ತಿ ತಾಳಿ ಮಾರಿ ಕುಡ್ಕಂಡು ಬಂದಿದ್ದಕೆ ಹೆಂಡ್ತಿ ಅವ್ನಿಗೆ ಚಾಕು ಹಾಕಿದ್ಲಂತೆ." ಅಲ್ಲಿಯೇ ಬರುತ್ತಿದ್ದ ಇನ್ನೊಬ್ಬ "ಅಲ್ಲ ಕಣಯ್ಯಾ ಅವ್ನ ಬಾರಿ ಸಾಲ ಮಾಡಿದ್ನಂತೆ ಸಾಲ ಕೊಟ್ಟೋನು ಸಾಲ ಕೇಳಿದ್ರೆ ಒಂದೆರಟ್ಮಾತಂದ್ನಂತೆ. ಆತ ಕೋಪದಿಂದ ಚಾಕ ಹಾಕಿದ್ನಂತೆ." ಹೀಗೆ ಸತ್ಯನೋ, ಸುಳ್ಳೊ ಎನ್ನುವ ಹಾಗೆ ಉಪ್ಪು ಕಾರ ಹಾಕಿ ಇನ್ನೂ ಸವರಿ ಹೇಳ್ತಿದ್ರು. ಪೋಲಿಸರಿಗೆ ವಿಷ್ಯ ತಿಳ್ದಿತ್ತೋ ಏನೋ? ನಡೆದ ಸ್ಥಳಕ್ಕೆ ಧಾವಿಸಿತು ಒಂದು ಜೀಪ್ ಸುಂಯ್ಯ್ ಎಂದು ಶಬ್ದ ಮಾಡುತ್ತ, ಕೊಲೆ ನಡೆದ ಸ್ಥಳಕ್ಕೆ ಧಾವಿಸಿತು. ನಾನೂ ನೋಡಿಕೊಂಡು ಬರೋಣ ಸುಳ್ಳೋ, ಸತ್ಯನೋ ಎಂದು ಕೊಲೆಯ ಭಯನಕ ದೃಶ್ಯವನ್ನು ಊಹಿಸುತ್ತ ನಡೆದೆ.


ಸಾಕಷ್ಟು ಜನ ಚದುರಿ ಹೋಗಿದ್ದರು. ಟಾಕೀಸಿನ ಬಳಿ ನಿಂತು ನೋಡಿದೆ. ಹೆಣವಿರಲಿ ಕೊಲೆಯಾದ ಗುರುತೂ ಸಹ ಇರಲಿಲ್ಲ. ಅರೆರೆ ಇವ್ರೆಲ್ಲ ಇಷ್ಟೊತ್ ತನ್ಕ ಮಾತಾಡಿದ್ದು ನೋಡಿದ್ರೆ ಭಾರೀ ಕೊಲೆ ನಡೆದಿದೆ ಎನ್ನುವ ಹಾಗಿತ್ತು. ಆದರೆ ಇಲ್ಲಿ ನೋಡಿದರೆ ಏನೂ ಇಲ್ಲ ಎಂದುಕೊಂಡು ಥಿಯೇಟರಿನ ಗೋಡೆಯನ್ನು ದಿಟ್ಟಿಸಿದೆ. 'ಕೊಲೆ' ಎ ಗ್ರೇಡ್



ವಯಸ್ಕರಿಗೆ ಮಾತ್ರ ಎಂಬ ವಾಲ್‌ಪೋಸ್ಟರ್ ಕಾಣಿಸಿತು. ರೌಡಿ ಇನ್ನೊಬ್ಬನಿಗೆ ಚಾಕುವಿನಿಂದ ತಿವಿದ, ರಕ್ತ ಧಾರಾಕಾರವಾಗಿ ಸುರಿಯುತ್ತಿದ್ದ ಚಿತ್ರವನ್ನು ಅಂಟಿಸಿದ್ದರು. ಈ ವಾಲ್‌ಪೋಸ್ಟರ್ ಜನರನ್ನು ಮರಳು ಮಾಡಿತ್ತು. ಜನರು ಮರುಳಾಗಿದ್ದರು.

ಜನ ಮರುಳೋ, ಜಾತ್ರೆ ಮರುಳೋ ಅನ್ನುವ ಹಾಗೆ ನನ್ನ ಮೂರ್ಖತನಕ್ಕೆ ನಾನೇ ನಗುತ್ತ ಮನೆಯ ಕಡೆ ಧಾವಿಸಿದೆ. ಜೀಪು ರೋಂಯ್ ಎಂದು ದೂಳೆಬ್ಬಿಸುತ್ತ ನನ್ನನ್ನು ದಾಟಿ ಮುಂದೆ ಹೋಗಿತ್ತು.

ನಾಗರಹೊಳೆಯ ಹಾಡು



ಯಾರೂ ಕ್ಷಮಿಸರು ನನ್ನೊಡಲಿಗೆ
ಕಿಚ್ಚು ಹಚ್ಚಿದ ನಿಮ್ಮನ್ನ.
ಅದೆಷ್ಟು ಜೀವರಾಶಿಗಳನ್ನ ನನ್ನ
ಮಡಿಲಲ್ಲಿ ಲಾಲಿಸಿ ಮುದ್ದಿಸಿ ಬೆಳೆಸಿದ್ದೆ.
ಅದೆಷ್ಟು ಹಕ್ಕಿ ಪಕ್ಷಿ ಪ್ರಾಣಿಗಳು ನನ್ನಂಗಾಂ
ಗಗಳ ಮೇಲೆ ನಲಿದು ಉಲಿದು ಹಾಡುತ್ತಿದ್ದವು.
ಅವುಗಳ ಸೊಲ್ಲಡಗಿಸಿದ ನೀವು ಕ್ರೂರಿಗಳು.
ಬರುವ ವಸಂತದಲ್ಲಿ ಶೃಂಗರಿಸಿಕೊಂಡು
ಮದುವಣಗಿತ್ತಿಯಾಗಿ ಮೆರೆಯಬೇಕೆಂದಿದ್ದೆ.
ಮುಂಗಾರಿನ ವರುಣನ ಪ್ರಣಯ ಕೇಳಿಯನ್ನು
ಮೈಮರೆಸಿ ಧರೆಯಲ್ಲಿಯೇ ಬಂಧಿಸಬೇಕೆಂದಿದ್ದೆ.
ನಮ್ಮವರೇ ಆದ, ಅಗ್ನಿ, ವಾಯುವನ್ನ
ನನ್ನ ಮೇಲೆ ಛೂ ಬಿಟ್ಟೆ. ನೀನು ತಂತ್ರ
ಗಾರನಿರಬಹುದು ಆದರೆ ಕುತಂತ್ರಿ
ನನ್ನ ಸೌಂದರ್ಯ, ಸೌಭಾಗ್ಯ ಸುಟ್ಟೆ
ನನ್ನ ದಹನವಾದ ಜೀವಂತ ಶವವಾಗಿಸಿಬಿಟ್ಟೆ
ನಿನಗದೆಷ್ಟು ಉಪಕಾರವಿಟ್ಟರೂ
ನೀನು ಕೃತಘ್ನನಾಗಿಬಿಟ್ಟೆ
ಇನ್ನೆಲ್ಲಿಯ ಕ್ಷಮೆ, ನೋಡು ಮುಂಬರುವ
ಬರಗಾಲದ ಬರುವಿಕೆಯ ಕರಾಳ ದಿನಗಳನ್ನ
ಎಣಿಸು ಆಗ... ಆಗ ನಿನ್ನೊಡಲಿಗೂ
ತಾಗಬಹುದು ನೀಹಚ್ಚಿದ ಇದೇ ಕಿಚ್ಚು.

ಕ. ಶಿ. ರಮೇಶ್, ಕದಬಹಳ್ಳಿ

ಸ್ವಚ್ಛಂದ ಸ್ವಪ್ನಗಳು

ಧಾರಾವಾಹಿ—೧೫

ತಮಿಳು ಮೂಲ :
ಪಿ. ಕೆ. ಪ್ರಭಾಕರ್

ಕನ್ನಡಕ್ಕೆ :
ಕಲ್ಯಾಣಿ ಮೂರ್ತಿ
ರಾಮನಾಥಪುರ

"ಪರವಾಗಿಲ್ಲವೆ; ಹೆಂಗಸರ ಸಮಸ್ಯೆ, ತೊಂದರೆಗಳ ಬಗ್ಗೆಯೂ ಆಳವಾಗಿ ಚಿಂತಿಸಿದ್ದೀರಲ್ಲ."

"ಸದ್ಯ ನನ್ನೊಡನೆ ಮಾತನಾಡಲೆಂದು ತಯಾರಿಸಿಕೊಂಡು ಬಂದಿದ್ದೀರಾಂತ ಕೇಳದೆ ಬಿಟ್ಟಿರುವಿರಲ್ಲ."

ಪದ್ಮಿನಿ ನಲಿಯುತ್ತ ನಕ್ಕಳು. ಮೌನವಾಗಿ ಊಟ ಮುಗಿಸಿ, ಕೈ ತೊಳೆದು ಹಣ ಕೊಡಲು ಮುಂದೆ ಬಂದ ಅವಳನ್ನು ತಡೆದು ವಿಜಯಕುಮಾರೇ ಕೊಟ್ಟ.

ಇಬ್ಬರೂ ಕಾರಲ್ಲಿ ಕುಳಿತರು.

"ನಿಮ್ಮನ್ನು ನಿಮ್ಮ ಆಫೀಸ್ ಹತ್ತಿರ ಬಿಟ್ಟು ನಾನು ಹೋಗುತ್ತೇನೆ. ಬೀಡಾ ತಿನ್ನುವಿರಾ, ಅಭ್ಯಾಸವಿದೆಯಾ?"

"ಇದೆ. ಆದರೆ ಈಗ ಬೇಡ."

"ಯಾಕೆ, ತರ್ತೀನಿ ಇರಿ."

ಮತ್ತೆ ಇಳಿದು ಹೋಟೆಲ್ ಮುಂದೆ ಕುಳಿತವನ ಬಳಿ ಸ್ವೀಟ್ ಬೀಡಾ ಎರಡು ತೆಗೆದುಕೊಂಡು ಬಂದು ಕಾರ್ ಸ್ಟಾರ್ಟ್ ಮಾಡಿದ.

"ಮಧ್ಯಸ್ಥರ ಹತ್ತಿರ ನಿಮ್ಮ ತಂದೆ ಏನು ಹೇಳಿದ್ದಾರೆ?" ಎಂದಳು ಹೊರಗೆ ನೋಡುತ್ತ.

"ನಾಲ್ಕು ದಿನ ಬಿಟ್ಟು ಬನ್ನಿ, ಯೋಚಿಸಿ ಹೇಳುತ್ತೇನೆ ಎಂದಿದ್ದಾರೆ. ಎರಡು ಮನೆಯವರ ಸಂಧಿಸಿ ಮಾತನಾಡುವುದು ಮುಖ್ಯವಲ್ಲವ ಮನೆಯಲ್ಲೇ ಸಂಧಿಸಿದರೂ ಸರಿ, ಹೊರ ಸಂಧಿಸಿದರೂ ಸರಿ. ಅದನ್ನು ಆಮೇ ನಿರ್ಧರಿಸೋಣ."

"ನನಗೆ ಮದುವೆಯ ಬಗ್ಗೆಯಾಗಲಿ ಭಾವೀ ಪತ್ನಿಯ ಬಗ್ಗೆಯಾಗಲೀ ಪ್ರಾರಂಭದಿಂದ ಯಾವುದೇ ಕನಸಿನ ಕೋಟೆ ಇಲ್ಲ. ಬಹ ಸಿಂಪಲ್ಲಾದ ನಿರೀಕ್ಷಣೆ. ನನ್ನ ಪತ್ನಿ ಸುಂದರಿಯ ಬುದ್ಧಿವಂತೆಯೇ, ವಿಶಾಲವಾದ ಮನಸ್ಸುಳ್ಳವ ಪ್ರೀತಿ ಪಾತ್ರಳೇ ನನ್ನನ್ನು ಪೂರ್ಣ ಅರ್ಥ ಮಾಡಿಕೊಳ್ಳುವವಳೇ, ಇದಲ್ಲ, ತುಂಬ ಗುಣವುಳ್ಳವಳಾಗಿದ್ದರೆ ಸಾಕು. ಇವೆಲ್ಲ ನಿಮ್ಮ ಇದ್ದೇ ಇದೆ ಎಂಬ ಪೂರ್ಣ ನಂಬಿಕೆ ಇದೆ. ನೀವ ನನ್ನ ಪತ್ನಿಯಾದರೆ ನನ್ನ ಬಾಳು ಸಂತೋ ವಾಗಿರುವುದು. ಇದರಲ್ಲಿ ನನ್ನ ಆಸೆ ಮಾತ್ರವಲ್ಲ ನಿಮ್ಮ ಮನಸ್ಸಿನ ಅಭಿಪ್ರಾಯವೂ ಮುಖ ನಿಮ್ಮ ಜೀವನ, ನಿಮ್ಮ ಭಾವೀ ಪತಿ, ನೀವ ಎಷ್ಟೋ ಆಸೆಗಳನ್ನು ಇಟ್ಟುಕೊಂಡಿರುವಿರಿ. ನಿಮ ಅನಿಸಿಕೆಗಳಂತೆ ನಾನು ಇರುವೆನೋ ಇಲ್ಲವೋ ಒಂದು ಗಂಟೆಯಲ್ಲಿ ಪೂರ್ಣ ಅರ್ಥವಾಗಲ ಸಾಧ್ಯವಿಲ್ಲ. ಟೇಕ್ ಯುವರ್ ಓನ್ ಟೈಂ

ಎಂದು ಪದ್ಮಿನಿಯ ಆಫೀಸಿನ ಮುಂದೆ ಕಾರನ್ನು ನಿಲ್ಲಿಸಿದ.

ಪದ್ಮಿನಿ ಮೌನವಾಗಿ ಇಳಿದುಕೊಳ್ಳಲು ಒಂದು ವಿಸಿಟಿಂಗ್ ಕಾರ್ಡನ್ನು ಅವಳ ಎದುರು ಹಿಡಿದ. "ಇದು ನನ್ನ ಆಫೀಸಿನ ಅಡ್ರೆಸ್. ಫೋನ್ ನಂಬರೂ ಇದೆ. ನೀವು ಒಂದು ತೀರ್ಮಾನಕ್ಕೆ ಬಂದು ಅನಂತರ ನನಗೆ ತಿಳಿಸಿದರೆ ಸಾಕು. ಬರ್‍ತೀನಿ" ಎಂದು ಕೈ ಮುಗಿದು ಹೊರಟ. ವಿಜಯಕುಮಾರ್‌ನ ಕಾರು ಕಣ್ಮರೆಯಾಗುವವರೆಗೂ ನೋಡುತ್ತಾ ನಿಂತು ಅನಂತರ ಆಫೀಸಿನೊಳಕ್ಕೆ ಹೋದಳು.

ಪದ್ಮಿನಿ ತನ್ನ ರೂಮಿಗೆ ಹಿಂದಿರುಗಿದಳು. ಅವಳು ಇಲ್ಲದಿದ್ದಾಗ ಬಂದ ಮೂರು ಫೋನ್‌ಗಳನ್ನು ಗುರುತು ಮಾಡಿ ಆಕೆಯ ಟೇಬಲಿನ ಮೇಲೆ ಇಡಲಾಗಿತ್ತು.

ಮೊದಲೆರಡು ಆಫಿಷಿಯಲ್ಲು, ಮೂರನೆಯದು ಜಯಚಂದ್ರನ್ ಎಂದು ಬರೆದಿತ್ತು. ಪಕ್ಕದಲ್ಲಿ ಫೋನ್ ನಂಬರೊಂದನ್ನು ಬರೆಯಲ್ಪಟ್ಟು ಸಂಜೆ 5 ಗಂಟೆಯವರೆಗೆ ಈ ನಂಬರಿನಲ್ಲಿ ಕಾಂಟಾಕ್ಟ್ ಮಾಡುವುದು ಎಂದು ಇತ್ತು. ಇವನ್ನೆಲ್ಲ ಗುರುತು ಮಾಡಿಕೊಂಡಿದ್ದಾಕೆ ರಿಸೆಪ್‌ಶನಿಸ್ಟ್.

ಪದ್ಮಿನಿ ತಕ್ಷಣ ಆ ನಂಬರಿಗೆ ಡಯಲ್ ಮಾಡಲು ಮುಂದಾದಳು.

"ಮಿ. ಜಯಚಂದ್ರನ್ ಪ್ಲೀಸ್."

"ಸ್ಪೀಕಿಂಗ್."

"ಸಾರ್ ನಾನು ಪದ್ಮಿನಿ ಮಾತನಾಡುತ್ತಿರುವುದು. ನಾನು ಫೋನ್ ಮಾಡಿದ್ದಾಗ ನಿಮ್ಮ ಪತ್ನಿಯ ಜೊತೆ ಹೊರಗೆ ಹೋಗಿರುವುದಾಗಿ ಹೇಳಿದರು. ನೀವು ಕಳುಹಿಸಿದ ಕಲೆಕ್ಷನ್ ಓದಿದೆ. ಬಹಳ ಆಳವಾದ ಚಿಂತನೆಗಳು ಸಾರ್. ಒಂದು ವಿಮರ್ಶೆಯನ್ನು ಬರೆದು ಕಳುಹಿಸುತ್ತೇನೆ. ಕೆಲವೆಡೆ ನಿಮ್ಮ ಅಭಿಪ್ರಾಯದ ಬಗ್ಗೆ ವಾದ ಮಾಡುವಂತೆಯೂ ಇದೆ."

"ವೆಲ್‌ಕಮ್. ನನಗೆ ಯಾವಾಗಲೂ ಹೊಗಳಿಕೆಗಿಂತ ವಿಮರ್ಶೆ. ಬಹಳ ಇಷ್ಟ. ಅದು ನನ್ನ ತಪ್ಪನ್ನು, ಅಭಿಪ್ರಾಯವನ್ನು ತಿದ್ದಲು ಬಹಳ ಸಹಕರಿಸುವುದು. ನೀವು ನಮ್ಮ ಮನೆಗೆ ಬರಬೇಕಲ್ಲ."

"ಅದಕ್ಕೇನು ಬಂದರಾಯ್ತು."

"ಯಾವಾಗ ಬರುತ್ತೀರ, ನಿಮ್ಮ ತಾಯಿಯನ್ನೂ ಕರೆದು ತನ್ನಿ."

"ಕಂಡಿತ ಕರೆತರ್‍ತೇನೆ. ಮೊದಲೇ ನಿಮಗೆ ನಮ್ಮ ಬರುವಿಕೆಯ ಬಗ್ಗೆ ಫೋನ್ ಮಾಡಿ ಬರುತ್ತೇವೆ."

"ನಾಳೆ ಸಂಜೆ ವಳ್ಳುವರ್ ಕೋಟ್ಟಂಗೆ ಬರ್‍ತೀರಾ?"

"ಅಲ್ಲೇನು?"

"ಒಂದು ಕವಿಗೋಷ್ಠಿ ಇದೆಯಲ್ಲ. ಪೋಸ್ಟರ್ ನೋಡಲಿಲ್ಲವೇನು, ಸುಮಾರು ಮಂದಿ ಕವಿಗಳು ಬರ್‍ತಾ ಇದ್ದಾರೆ."

"ಎಲ್ಲೋ ಗಮನಿಸಲೇ ಇಲ್ಲ. ಖಂಡಿತ ಬರ್‍ತೀನಿಂತ ಹೇಳಲಾರೆ. ಆದರೆ ಬರುತ್ತೇನೆ. ಬಂದರೆ ನಿಮ್ಮ ಪುಸ್ತಕದ ವಿಮರ್ಶೆಯನ್ನು ನೇರವಾಗಿ ನಿಮ್ಮ ಕೈಗೆ ಕೊಡುತ್ತೇನೆ. ಕೆಲವು ಕಡೆ ಸ್ವಲ್ಪ ಸ್ಟ್ರಾಂಗಾಗೇ ಹೇಳ್ತೇನೆ. ಸ್ಪೋರ್ಟೀವಾಗಿ ತೆಗೆದುಕೊಳ್ಳಬೇಕು."

"ಕಂಡಿತವಾಗ಼್ಲೂ, ನನಗೆ ಸಿಹಿಗಿಂತ ಕಾರವೇ

ಕಳೆದ ಸಂಚಿಕೆಯಲ್ಲಿ...

ವೃದೀಶ್ವರರದು ಅಚ್ಚುಕಟ್ಟಾದ ಸಂಸಾರ. ಹಿರಿಯ ಮಗಳು ಪದ್ಮಿನಿ ಹೊರಗೆ ದುಡಿಯುವವಳು. ಮತ್ತಿಬ್ಬರು ಓದುತ್ತಿರುವ ಹರೆಯದ, ಚೂಟಿಯಾದ ಮಕ್ಕಳು. ಪದ್ಮಿನಿಗೆ ಉದಾರ ಮನೋಭಾವದ ವಿಜಯಕುಮಾರ್‌ನ ಪರಿಚಯ ವಾಗುತ್ತದೆ. ...ಮುಂದೆ ಓದಿ

ಇಷ್ಟ. ಮತ್ತೇನು ಸಮಾಚಾರ?''

"ಏನೂ ಇಲ್ಲ. ಅನಂತರ ನೋಡೋಣ.''

ಪದ್ಮಿನಿ ಫೋನನ್ನು ಕೆಳಗಿಟ್ಟು ಆಫೀಸ್ ಕೆಲಸಗಳಲ್ಲಿ ಮುಳುಗಿದಳು. ಸಂಜೆ ಬೀಚ್ ಸ್ಟೇಶನ್‌ನ ಎಲೆಕ್ಟ್ರಿಕ್ ಕೋಚನ್ನು ಹತ್ತಿ ಕುಳಿತು, ವಿಜಯಕುಮಾರ್‌ನ ಭೇಟಿಯ ಬಗ್ಗೆ ಯೋಚಿಸಲಾರಂಭಿಸಿದಳು.

ಫಸ್ಟ್ ಇಂಪ್ರೆಶನ್ ಅಂತಾರಲ್ಲ ಅದು ಸ್ವಲ್ಪ ಜಾಸ್ತಿಯೇ ಇತ್ತು ಮನಸ್ಸಿನಲ್ಲಿ. ಶಾಂತವಾದ ಮುಖ, ಆಡಂಬರವಿಲ್ಲದ ಉಡುಪು, ನಾಗರಿಕವಾದ ಮೂವ್‌ಮೆಂಟ್ಸು, ನಿಧಾನವಾದ ಆದರೂ ಕ್ಲಿಯರ್‍ರಾದ ಮಾತು ಗೌರವ ಸಹಿತವಾದದ್ದು. ಎದುರಿನಲ್ಲಿರುವರಿಗೆ ತನ್ನ ಅನಿಸಿಕೆಗಳನ್ನು ಹೇರದೆ ಒಪ್ಪಲು ಯೋಗ್ಯವಾದಂತಹ ಮಾತುಗಳು, ಸೀಮಿತವಾದದ್ದು, ಪೊಳ್ಳುಪೊಳ್ಳಾದ ಮಾತೇ ಇಲ್ಲ.

ಯಾವ ಘಟ್ಟದಲ್ಲಿಯೂ ಸಹನೆ ಮೀರಲಿಲ್ಲ. ಅಹಂಕಾರದ ಧೋರಣೆಯ ಮಾತುಗಳೇ ಇಲ್ಲ. ಕೋಪವೆಂಬುದು ಬರುವುದೇ ಇಲ್ಲ.

ನನಗೆ ವ್ಯತ್ಯಾಸವಾದ ಹೆಣ್ಣುಗಳು ಮೆಚ್ಚುಗೆಯಾದವರು ಎಂದು ಅವರ ಮಾತುಗಳು ನನ್ನ ಚಿಂತನನೆಯೊಂದಿಗೆ ಹೆಣೆದುಕೊಳ್ಳುವ ಮಾತುಗಳು.

ಇಳಂಗೋ 'ಸ್ವಲ್ಪ ಸಮಯ ಭೇಟಿಯಾಗಿ ಪೂರ್ತಿ ಗುಣಮಟ್ಟದ ಅರಿವಾಗದಿದ್ದರೂ ಒಂದು ಐಡಿಯಾ ಸಿಗಬಹುದು' ಎಂದಿದ್ದರಲ್ಲ.

ವಿಜಯಕುಮಾರ್ ಬಗ್ಗೆ ಒಂದು ಐಡಿಯಾ ಸಿಕ್ಕದೆ. ಮನಸ್ಸು ತುಂಬಿದಂತಾಗಿ ಉಲ್ಲಾಸವಾಗಿದೆ. ವಿಜಯಕುಮಾರ್‌ನೊಂದಿಗೆ ಮಾತನಾಡುತ್ತಿದ್ದಾಗ ಇದ್ದಕ್ಕಿದಂತೆ ಸಂಕೋಚದ ಅನುಭವವೂ ಉಂಟಾಯಿತು.

ಇದರ ಬಗ್ಗೆ ಇಳಂಗೋಗೆ ವಿವರವಾಗಿ ಹೇಳಬೇಕು. ಮನೆಯಲ್ಲಿ ಅಪ್ಪಾ ಹತ್ತಿರ ಹೇಳಬೇಕ? ಹೇಳೋಣ. ಹೇಳಿದರೆ ತಪ್ಪೇನಿದೆ, ಮರೆಮಾಚುವು ದಕ್ಕೆ ಏನಿದೆ?

ಪದ್ಮಿನಿ ಮನೆಗೆ ಬಂದಾಗ ಅಪ್ಪಾ ಇನ್ನೂ ಬಂದಿರಲಿಲ್ಲ. ಭವಾನಿ ಬಂದು ಡ್ರೆಸ್ ಚೇಂಜ್ ಮಾಡಿ ಮುಖ ತೊಳೆದು ನೀಟಾಗಿ ಡ್ರೆಸ್ ಮಾಡಿಕೊಂಡು ಮತ್ತೆ ಎಲ್ಲಿಗೋ ಹೊರಟ ವಳಂತೆ ಕಂಡಳು. ಬೆರಳಿಗೆ ನೈಲ್ ಪಾಲಿಷ್ ಹಾಕಿದ್ದಳು.

ಪದ್ಮಿನಿ ತನ್ನ ರೂಮಿನಲ್ಲಿ ಹ್ಯಾಂಡ್ ಬ್ಯಾಗನ್ನು ತೂಗು ಹಾಕಿ, ತುರುಬು ಬಿಚ್ಚಿ ಮುಖ ತೊಳೆದು, ಲೂಸಾಗಿ ಜಡೆ ಹೆಣೆದುಕೊಂಡು ಸೀರೆ ಬದಲಿಸಿ ಹಾಲ್‌ಗೆ ಬಂದಳು. ಆಗ ಹೊರಗಿ ವರಾಂಡಾದಲ್ಲಿ ತಂದೆಯ ಧ್ವನಿ ಕೇಳಿ ಬಂತು. ಅಮ್ಮ ಸ್ನಾನ ಮಾಡಿ ತಲೆ ಬಾಚಿಕೊಂಡು ಅಡುಗೆ ಮನೆಗೆ ಹೋದಳು.

"ಚಂದ್ರು ಜೋಪಾನ, ನೋಡಿಕೊಂಡು ನಿಧಾನವಾಗಿ ಹೋಗು, ಯಾವ ವೆಹಿಕಲ್ಲಿಗೂ ಓವರ್‌ಟೇಕ್ ಮಾಡಬೇಡ. ಟೈಟಾಗಿ ಬ್ರೇಕ್ ಹಿಡಿ, ಬೇಗನೆ ಹಿಂದಿರುಗು.''

'ಸರಿಯಪ್ಪಾ' ಎಂದು ಹೆಲ್ಮೆಟ್, ಸ್ಕೂಟರ್ ಕೀ ತೆಗೆದುಕೊಂಡು ಭವಾನಿಯನ್ನೂ ಕರೆದುಕೊಂಡು ಹೊರಡುತ್ತಿದ್ದ ಚಂದ್ರು.

ಅವನು ಹೊರಟ್ಟಿದ್ದನ್ನು ಕಿಟಕಿಯ ಬಳಿ ನಿಂತು ನೋಡಿ, ಜುಬ್ಬಾ ಕಳಚುತ್ತಲೇ ಒಳಗೆ ಬಂದರು ವೈದೀಶ್ವರನ್.

"ಬಂದ್ಯಾಮ್ಮ ಪದ್ಮಿನಿ, ಫ್ಯಾನ್ ಆನ್ ಮಾಡು. ತಗೋ ಈ ಜುಬ್ಬಾನ, ಹಾಗೇ ನನ್ನ ರೂಮಿನಲ್ಲಿ ಹ್ಯಾಂಗರ್‌ಗೆ ಹಾಕು. ಕಾಫಿ ತರಲು ಹೇಳು.''

ಹೇಳಿದ್ದನ್ನೆಲ್ಲ ಮಾಡಿ ಅಡುಗೆ ಮನೆಗೆ ಬಂದಳು ಪದ್ಮಿನಿ.

"ಎಲ್ಲಮ್ಮಾ ನಾನೇ ಕಾಫಿ ಮಾಡ್ತೇನೆ ಸ್ವಲ್ಪ ಸರಿ.''

"ಪರವಾಗಿಲ್ಲ ನಾನೇ ಹಾಕ್ತೇನೆ. ನೀನು ಹೋಗಿ ಹಾಲ್‌ನಲ್ಲಿ ಕುಳಿತುಕೊ. ನಿಮ್ಮಿಬ್ಬರಿಗೂ



ಅಲ್ಲಿಗೇ ಕಾಫಿ ತಂದು ಕೊಡ್ತೇನೆ. ಮೇಲೆ ಡಬ್ಬಿಯಲ್ಲಿ ಚಕ್ಕುಲಿ ಇದೆ, ಬೇಕಾದ್ರೆ ತಗೋ.''

ಪದ್ಮಿನಿ ಡಬ್ಬಿಯಿಂದ ಚಕ್ಕುಲಿ ತೆಗೆದುಕೊಳ್ಳುತ್ತಲೇ ''ನನಗೆ ಲೆಟರ್ ಏನಾದರೂ ಬಂತೆ?''

''ಏನೂ ಇಲ್ಲ. ಕೆಳಗಡೆ ಮನೆಯ ಇಳಂಗೋ ಈಗ ಅರ್ಧ ಗಂಟೆಗೆ ಮುಂಚೆ ಬಂದಿದ್ದ. ನಿನ್ನೊಡನೆ ಏನೋ ಮಾತನಾಡಬೇಕಿತ್ತಂತೆ. ನೀನು ಬಂದನಂತರ ಮತ್ತೆ ಬರುತ್ತೇನೆಂದು ಹೇಳಿ ಹೋದ.''

ಹಾಲಿನ ಸೋಫಾದಲ್ಲಿ ಕುಳಿತಿದ್ದ ವೈದೀಶ್ವರನ್ ಪಂಚೆ ಸುತ್ತಿದ್ದು ಮೇಲು ಹೊದಿಕೆ ಇಲ್ಲದೆ ಆರಾಮವಾಗಿ ಕುಳಿತು ಟೈಪ್ ಮಾಡಿದ್ದ ಪೇಪರ್ ಒಂದನ್ನು ನೋಡುತ್ತ ಕುಳಿತಿದ್ದರು. ಕಸ್ತೂರಿ ಕಾಫಿಯನ್ನು ಆರಿಸಿ ಅವರಿಗೆ ಕೊಟ್ಟಳು.

ತನ್ನ ಕಾಫಿಯನ್ನು ಹಿಡಿದು ಎದುರಿನಲ್ಲಿ ಕುಳಿತ ಪದ್ಮಿನಿ ''ನೀವು ಹೇಳಿದ್ದಿರಲ್ಲ ವಿಜಯಕುಮಾರ್ ಅಂತ ಒಂದು ವರ...'' ಎಂದು ಪ್ರಾರಂಭಿಸಿದಳು.

''ಹೌದು, ನೀನು ಹೇಳಿದ್ದನ್ನು ಮಧ್ಯಸ್ಥಿಕೆ ವಹಿಸಿದವರ ಮೂಲಕ ಅವರ ಮನೆಗೆ ಹೇಳಿ ಕಳುಹಿಸಿದ್ದೇನೆ. ನಾಲ್ಕು ದಿನಗಳಲ್ಲಿ ಹೇಳುತ್ತೇನೆಂದರಂತೆ. ಸ್ವಲ್ಪ ಹಿಂದಿನ ಕಾಲದ ಕುಟುಂಬ, ಯೋಚಿಸಿ ಹೇಳುತ್ತಾರಂತೆ.''

''ಅದಲ್ಲಾಪ್ಪ ಆ ವಿಜಯಕುಮಾರ್ ಇಂದು ನನ್ನ ಆಫೀಸಿಗೆ ಬಂದಿದ್ದರು'' ಎಂದು ನಿಧಾನವಾಗಿ ಇಳಂಗೋ ಹೇಳಿದ್ದ ವಿಷಯದಿಂದ ಪ್ರಾರಂಭಿಸಿ ಎಲ್ಲವನ್ನೂ ವಿವರಿಸಿದಳು.

ವೈದೀಶ್ವರನ್ ಉತ್ಸಾಹದಿಂದ ''ಪರವಾಗಿಲ್ವೆ, ಹುಡುಗ ಒಂದು ಹೆಜ್ಜೆ ಮುಂದೆ ಇದ್ದಾನಲ್ಲ. ನಿಜವೇ ಜಾತಕ ಹೊಂದಾಣಿಕೆ, ಅದೂ ಇದೂಂತ ಸಾವಿರಾರು ಹೊಂದಾಣಿಕೆ ನೋಡಿದರೂ ಮನಸ್ಸಿನ ಹೊಂದಾಣಿಕೆ ಮುಖ್ಯ. ಹೀಗೆ ಭೇಟಿಯಾಗಿ, ಮಾತನಾಡಿಸಿ, ಒಬ್ಬರನ್ನೊಬ್ಬರು ಸ್ಥೂಲವಾಗಿ ಅರಿಯುವ ಈ ಸಂದರ್ಭ ಎಷ್ಟು ಮಂದಿಗೆ ಸಾಧ್ಯ? ಆ ಹುಡುಗನ ಬಗ್ಗೆ ಹೇಳುವುದಾದ[...] ಆತ ನಿನ್ನನ್ನು ಒಪ್ಪಿದ್ದಾನಂತೆ. ಹಾಗೇ ತಾನ[...] ವಿಷಯ'' ಎಂದರು.

ಹೌದೆಂದು ತಲೆಯಾಡಿಸಿದಳು ಪದ್ಮಿನಿ[...]

''ಜಾತಕದ ಹೊಂದಾಣಿಕೆ ಬಹಳ ಚೆನ್ನಾಗಿದ[...] ಬೇರೆ ಯಾವುದೇ ಲೌಕಿಕ ಪ್ರಶ್ನೆ ಇದರಲ್ಲಿ ಇಲ್ಲ[...] ಒಳ್ಳೇ ಜಾಗ, ನಮ್ಮಿಂದ ಏನನ್ನೂ ಎದುರ[...] ನೋಡುತ್ತಿಲ್ಲ. ಸುಂದರವಾದ, ಗಾಂಭೀರ್ಯದಿಂ[...] ಕೂಡಿದ ಹೆಣ್ಣು ಬೇಕು ಅಷ್ಟೆ. ಮದುವೆಯನಂತರವ[...] ಹುಡುಗಿ ಕೆಲಸಕ್ಕೆ ಹೋಗಲು ಇಷ್ಟಪಡುತ್ತಾ[...] ಎಂಬ ವಿಷಯವನ್ನು ತಿಳಿಸಿ ಪರ್ಮಿಶನ್ ಪಡೆದಾಯ್ತು[...] ಹೆಣ್ಣು ನೋಡಲು ಬರುವುದು ನಮ್ಮ ಮನೆಗೋ[...] ಅಥವಾ ಬೇರೆಯ ಸ್ಥಳವೋ ಅದು ಮಾತ್ರ[...] ನಿರ್ಧಾರವಾಗಿಲ್ಲ. ಅದಕ್ಕೆ ಮುಂಚೆ ನಿನ್ನ ವಿಷಯ[...] ಹೇಳು. ಹುಡುಗ ನಿನಗೆ ಒಪ್ಪಿಗೇನಾ?''

''ಮಾತುಕತೆಯಲ್ಲಿ ಒಳ್ಳೇ ಗುಣವುಳ್ಳವನ[...] ಎಂದೆನಿಸಿತು. ಇದಕ್ಕಿಂತ ಹೆಚ್ಚಾಗಿ ಅವರ[...] ನನ್ನನ್ನು ಪೂರ್ಣ ಅರ್ಥ ಮಾಡಿಕೊಂಡಿರುವಂತ[...] ತೋರಿತು.''

''ಧೈರ್ಯವಾಗಿ ಹೇಳು, ಈ ವರನನ್ನು[...] ನಿಶ್ಚಯಿಸೋಣವೆ?''

ಅಮ್ಮಾ ಮಧ್ಯೆ ತಲೆಹಾಕಿ ''ನೀವು[...] ಹೇಳೋದು ಚೆನ್ನಾಗಿದೇಂದ್ರೆ, ಒಳ್ಳೇಗುಣ, ಗಂಭೀರ[...] ವಾಗಿದ್ದಾರೆ ನನ್ನನ್ನು ಅರ್ಥ ಮಾಡಿಕೊಂಡಿರುವಂತ[...] ತೋರಿತು ಎಂದೆಲ್ಲ ಹೇಳ್ತಾ ಇದ್ದಾಳಲ್ಲ. ಇನ್ನೇನು[...] ಹೇಳಬೇಕು.''

ಅಷ್ಟರಲ್ಲಿ ಕಾಲಿಂಗ್ ಬೆಲ್ ಶಬ್ದವಾಯಿತು[...] ಅಮ್ಮಾ ಹೋಗಿ ಬಾಗಿಲು ತೆರೆದು ''ಬನ್ನಿ''[...] ಎಂದಳು.

ಇಳಂಗೋ ಒಳಗೆ ಬಂದು ''ನಿಮ್ಮ ಮಗಳು[...] ಬಂದಾಯ್ತೆ?''

''ಬಂದಾಯ್ತು, ಬನ್ನಿ ಸಾರ್'' ಎಂದರು[...] ವೈದೀಶ್ವರನ್. ''ಕುಳಿತುಕೊಳ್ಳಿ. ಪದ್ಮಿನಿ ಈಗತಾನ[...] ಎಲ್ಲ ಹೇಳಿದಳು.''

(ಸಶೇಷ)

'ರಾಗಸಂಗಮ' ಲಾಟರಿ ಡ್ರಾ–೧೨೧

ಬಹುಮಾನ ರೂ. 200 ಇದ್ದ ಈ ಲಾಟರಿ ಡ್ರಾನಲ್ಲಿ ಒಟ್ಟು 1319 ಜನ ಭಾಗವಹಿಸಿದ್ದು ಈ ಕೆಳಕಂಡ ನಾಲ್ಕು ಜನ ಡ್ರಾನಲ್ಲಿ ವಿಜೇತರಾಗಿದ್ದಾರೆ. ವಿಜೇತರುಗಳಿಗೆ ಬಹುಮಾನದ ಹಣ ತಲಾ ರೂ. 50ರಂತೆ 3 ದಿನಗಳೊಳಗಾಗಿ ಕಳುಹಿಸಿ ಕೊಡಲಾಗುವುದು. ವಿಜೇತರಿಗೆ ಶುಭಾಶಯಗಳು.

ವಿಜೇತರ ಹೆಸರು ಮತ್ತು ವಿಳಾಸ :

1. **ಡಿ. ಎಸ್. ಭಾನುರೇಖ ಭಟ್** , D/o ಡಿ. ವಿ. ಎಸ್. ಭಟ್, ಶ್ರೀ ಮರುಗನ್ ದೇವಸ್ಥಾನ, ಕಾಡಮನೆ ಎಸ್ಟೇಟ್, **ಕಾಡಮನೆ – 573 123,** ಸಕಲೇಶಪುರ ತಾಲ್ಲೂಕು, ಹಾಸನ ಜಿಲ್ಲೆ.
2. **ಬಿ. ಮಂಜುಳ,** ರೂಂ. ಸಂಖ್ಯೆ 119, ರತ್ನಮ್ಮ ಮಹಿಳೆಯರ ವಸತಿಗೃಹ, ಪಿ. ಜೆ. ಬಡಾವಣೆ, **ದಾವಣಗೆರೆ – 577 002,** ಚಿತ್ರದುರ್ಗ ಜಿಲ್ಲೆ.
3. **ಓ. ಪಿ. ಸುಮ,** ಔಸನ ಗ್ರಾಮ, **ಚಟ್ಟಿಗೆರೆ – 577 113,** ಮೂಡಿಗೆರೆ ತಾಲ್ಲೂಕು, ಚಿಕ್ಕಮಗಳೂರು ಜಿಲ್ಲೆ.
4. **ಕಮಲಮ್ಮ,** 27, 18ನೇ ಅಡ್ಡರಸ್ತೆ, ಕೆ. ಹೆಚ್. ಬಿ. ವಸತಿಗೃಹ, ಎಂ. ಸಿ. ರಸ್ತೆ, ವಿಜಯನಗರ, **ಬೆಂಗಳೂರು – 560 040.**

ವಿ.ಸೂ. : **'ರಾಗಸಂಗಮ'**ದ ಮುಂಬರುವ ಸಂಚಿಕೆಯಲ್ಲಿ ವಿಜೇತರುಗಳ ಭಾವಚಿತ್ರವನ್ನು ಪ್ರಕಟಿಸಲಿರುವುದರಿಂದ ವಿಜೇತರುಗಳು ತಮ್ಮ ಕಪ್ಪುಬಿಳುಪು ಪಾಸ್‌ಪೋರ್ಟ್ ಆಕಾರದ ಭಾವಚಿತ್ರವನ್ನು ಈ ಕೂಡಲೇ (ಎಂದರೆ ಒಂದು ವಾರದೊಳಗಾಗಿ) ನಮ್ಮ ಕೈ ಸೇರುವಂತೆ ಕಳುಹಿಸಿ ಕೊಡಬೇಕಾಗಿ ಕೋರುತ್ತೇವೆ.

ಮುಂದಿನ ಸಂಚಿಕೆ

ಶುಕ್ರವಾರ 8–5–92ರಂದು ಎಲ್ಲೆಡೆ ಲಭ್ಯ

ಈ ಸಂಚಿಕೆಯಲ್ಲಿ

ಅನಸೂಯ ರಾವ್ ಅವರ

ಹೊಸ ಹಗಲು

ಸಂಪೂರ್ಣ ಕಾದಂಬರಿ ಪ್ರಕಟವಾಗುತ್ತದೆ

'ಕೆಎಸ್ಸಾರ್'ರವರಿಂದ ಉತ್ತರಕ್ಕೆ ಅರ್ಹವೆನಿಸಿಕೊಂಡ ಈ ಕೆಳಗಿನ ಎ

ಪ್ರಶ್ನೋತ್ತರ

'ಕೆಎಸ್ಸಾರ್'

* ಸುಧಾಕರ,
ಕೊಡವೂರು
ಕೈ ಹಿಡಿದ ಪತ್ನಿ ಗರ್ಭಿಣಿಯಾದಾಗ ಸಂತೋಷಪಡುವ ಗಂಡಸರು ಪ್ರೇಯಸಿ ಗರ್ಭಿಣಿಯಾದಾಗ ವ್ಯಥೆ ಪಡುತ್ತಾರಲ್ಲ ಏಕೆ?
— ಅಸಲಿಗೆ ಇರುವ ಗೌರವ ನಕಲಿಗೆ ಇರುವುದಿಲ್ಲವಾದ್ದರಿಂದ.

* ಎಂ. ಪರಶುರಾಮಪ್ರಿಯ,
ಗಂಗಾವತಿ
ವ್ಯಕ್ತಿ ದೊಡ್ಡವನೋ, ವ್ಯಕ್ತಿತ್ವ ದೊಡ್ಡದೋ?
—ವ್ಯಕ್ತಿತ್ವದ ಮುಂದೆ ವ್ಯಕ್ತಿ ಚಿಕ್ಕವನು.

* ಶ್ಯಾಂಭಟ್ಟ ಜೋಷಿ, **ದೋರನಹಳ್ಳಿ**
ಸತ್ತ ಮೇಲೆ ಸಿಗುವ ಮರ್ಯಾದೆ ಜೀವಂತ ಇದ್ದಾಗ ದೊರಕುತ್ತಿದ್ದರೆ ಪರಿಸ್ಥಿತಿ ಹೇಗಿರುತ್ತಿತ್ತು?
— ತಲೆ ನಿಲ್ಲದ ಅಲ್ಲಾಡುತ್ತಿತ್ತು.

* **ಅಜಂತಾ, ಬೆಂಗಳೂರು**
ಸಿಗರೆಟ್ ಸೇವನೆ ಆರೋಗ್ಯಕ್ಕೆ ಹಾನಿಕರ ಎಂದು ಸೂಚನೆ ಸೂಚಿಸಿದ್ದರೂ ಸಿಗರೆಟ್‌ನ ಉದ್ಯಮಕ್ಕೆ ಯಾವುದೇ ವಿಧವಾದ ಹಾನಿಯುಂಟಾಗಿಲ್ಲ ಏಕೆ?
— ಮನುಷ್ಯರ ದುರ್ಬಲತೆಯಿಂದ.

* ಸಿಮ್ಫಾ ಸಾಲಿಯಾನ್,
ಏಲ
ಈ ಜಗತ್ತಿನಲ್ಲಿ ಶಾಶ್ವತವೆಂಬು ಯಾವುದು ತಿಳಿಸುವಿರಾ ಕೆಎಸ್ಸಾರ್‌ರವರೇ?
— ಅರಿದ ಸುದ್ದಿಗಳು.

* ವಿಜಯಾ ಓದಿಸೋಮಠ,
ಗುತ್ತಲ
ಹೆಣ್ಣು ಬರು ಪಾತ್ರಧಾರಿ ಅಂತಾರ ಯಾಕೆ?
— ಅವರವರಿಗೆ ತಕ್ಕಂತೆ ತನ್ನ ಬದಲಾಯಿಸಿಕೊಳ್ಳುವ ಚಮತ್ಕಾರ ಹೆಣ್ಣಲ್ಲಿರುವ ಗಂಡಸರಲ್ಲಿಲ್ಲವಾದ್ದರಿಂದ.

* ಮಂಜುನಾಥ ಎಂ. **ಬಮ್ಮನಹಳ್ಳಿ, ಬೆಳ**
ಆಕಾಶದಲ್ಲಿಯೇ ದೇವರು, ದೇವತೆಯ ಇದ್ದಾರೆ ಎಂದು ಹೇಳುತ್ತಾರೆ. ನಿಜವೇ ಅಂಕಲ್?
— ದೇವರು ಎಲ್ಲೆಲ್ಲೂ ಇದ್ದಾನೆ ಎಂ ಹೇಳುತ್ತಾರೆ.

* **ಶಿವಾನಂದ ಸಿ. ಕಮಟೆ, ಅಂಬಲಗೇ**
ಈಗಿನ ಕಾಲದಲ್ಲಿ ಹೆಂಗಸರು ಹ ಕುಂಕುಮವನ್ನು ಏಕೆ ಹಚ್ಚುವುದಿಲ್ಲ?
— ಹಚ್ಚಿದ ಪ್ಲಾಸ್ಟಿಕ್ ಕುಂಕುಮ ಆ ಬಿದ್ದುಬಿಡುತ್ತದೆ.

* ಎಸ್. ಪ್ರತಿಮ, **ಸುಳ್ಯ**
ಅಂಕಲ್ ಈ ಜಾತ್ಯಾತೀತ ರಾಷ್ಟ್ರ ಹಿಂದು, ಮುಸ್ಲಿಂ ಗಲಾಟೆ ಯಾಕೆ?
— ಸರ್ಕಾರದ ಮೀಸಲಾತಿ ಇರುವುದರಿ ಇದು ಇದೆ.

ಪ್ರಶ್ನಿಕರಿಗೂ ತಲಾ ರೂ. 5ರಂತೆ ಬಹುಮಾನವನ್ನು ಈಗಾಗಲೇ ಕಳಿಸಲಾಗಿದೆ

* ಜಯಲಕ್ಷ್ಮಿ ಸುಂದರೇಶನ್,
ಮೈಸೂರು

ಭಾರತದಲ್ಲಿ ಎಷ್ಟೊಂದು ಪವಾಡ ಪುರುಷರಿದ್ದರೂ ಬಡತನವೇಕೆ ಇದ್ದಲ್ಲೇ ಇದೆ?

— ಅವರ ಬಳಿ ತುಂಬಿ ತುಳುಕುವುದರಿಂದ.

* ಬಿ. ವಿ. ನಟರಾಜ್, **ಬೆಳಕವಾಡಿ**

ನಮ್ಮ ಭಾರತದಲ್ಲಿ ಒಂದಕ್ಕಿಂತ ಹೆಚ್ಚು ಮಕ್ಕಳನ್ನು ಪಡೆದವರಿಗೆ ಶಿಕ್ಷೆ ವಿಧಿಸುವ ಕಾನೂನು ಬಂದರೆ?

— ಬಂದರೂ ಅದು ಹಿಂದೂಗಳಿಗೆ ಮಾತ್ರ ಅನ್ವಯಿಸುವಂತಾದ್ದಾಗಿರುತ್ತದೆ.


* ಹೆಚ್. ಶಿವನಾರಾಯಣ ಐತಾಳ, **ಕೋಟ**

ಕೆಲವು ದಿನಸಿ ಅಂಗಡಿಗಳಲ್ಲಿ ಶುದ್ಧವಾದ ತೆಂಗಿನೆಣ್ಣೆ ದೊರೆಯುತ್ತದೆ ಎಂದು ಬೋರ್ಡು ತಗಲಿಸಿರುತ್ತಾರಲ್ಲ, ಇದರ ಒಳಗುಟ್ಟೇನು?

— ಎಣ್ಣೆಯಲ್ಲಿ ಕಲಬೆರಕೆ ಮಾಡುತ್ತಿದ್ದೇವೆ ಎಂದು ಕೇಳದೆ ಹೇಳುತ್ತಿದ್ದಾರೆ.

* ಮಾಲತಿ ರಾಜು,
ಬೆಂಗಳೂರು

ಸರ್ಕಾರದ ವೇತನದಿಂದಲೇ ಸಂಸಾರ ನಡೆಸುವ ಸಚಿವರೂ ಇದ್ದಾರೆಯೇ?



— ಅದರ ಅಗತ್ಯವೂ ಇಲ್ಲದ ಸಚಿವರುಗಳಿದ್ದಾರೆ.

* ಎ. ಅಬುಬಕ್ಕರ್ ಅನಿಲಕಟ್ಟೆ
ವಿಟ್ಲ

ಕುಡುಕ ಇತರರಿಗೆ ಹೇಳುವ ಬುದ್ಧಿ ಮಾತು ಯಾವುದು ಸ್ವಾಮಿ?



— ಕುಡಿತ ಕೆಟ್ಟದ್ದು.

* ಲೀಲಾವತಿ,
ಗುಡ್ಡೆಅಂಗಡಿ

ಹೆಣ್ಣು ಮಕ್ಕಳು ಬೀದಿಗಿಳಿದರೆ ಹಾಳಾಗುತ್ತಾರೆಂದು ಬೀಗ ಹಾಕಿ ಇಡುವುದು ಸರಿಯಾ ಕೆಪಸ್ಸಾರ್?

— ತಪ್ಪು, ತನ್ನನ್ನು ಕಾಪಾಡಿಕೊಳ್ಳುವ ಧೈರ್ಯವನ್ನು ತುಂಬದಿದ್ದವರು ಮಾಡುವ ಕೆಲಸವಿದು.

* ಜೆ. ಅನಿತಾ ದೇವರಾಜು,
ತುಂಬಕೆರೆ

ನಮ್ಮ ದೇಶದ ರಾಜಕಾರಣಿಗಳು ಯಾವುದರಲ್ಲಿ ಮುಂದೆ ಇದ್ದಾರೆ?

— ಹಾರುವುದರಲ್ಲಿ.

* ಮಕ್ಕಳ ಕಥೆ *

ನೀರಿನ ಭೂತ

ಎಂ. ಶಿವಾಜಿರಾವ್

ಗ್ರಾಮದಲ್ಲಿ ಒಂದು ಪಾಳು ಮನೆಯಿತ್ತು. ಅದರ ಪಕ್ಕದಲ್ಲಿಯೇ ಒಂದು ಕೊಳವಿದ್ದು ಅದರಲ್ಲಿ ಒಂದು ಭೂತ ಸೇರಿಕೊಂಡಿತ್ತು. ಭೂತವು ರಾತ್ರಿ ಹೊತ್ತು ಆ ಪಾಳು ಮನೆಗೆ ಬರುವುದೆಂದು ತಿಳಿದಿದ್ದ ಜನ ಆ ಮನೆಯ ಕಡೆ ಬರುತ್ತಿರಲಿಲ್ಲ.

ಒಂದು ದಿನ ರಾತ್ರಿ ಒಂದು ಸರ್ಕಸ್ ಕಂಪನಿಯ ಮಾಲೀಕನು ಆ ಗ್ರಾಮಕ್ಕೆ ಬಂದನು. ಆ ರಾತ್ರಿ ತಂಗಲು ಅವನಿಗೆ ಮತ್ತು ಅವನ ಪ್ರಾಣಿಗಳಿಗೆ ಜಾಗವೇ ಇರಲಿಲ್ಲ. ಆದ್ದರಿಂದ ಆ ಪಾಳು ಮನೆಯಲ್ಲಿ ತಂಗಲು ನಿಶ್ಚಯಿಸಿದನು.

ಆ ರಾತ್ರಿ ತುಂಬ ಚಳಿ ಆಯಿತು. ಕೊಳವು ಪಕ್ಕದಲ್ಲಿಯೇ ಇದ್ದದರಿಂದ ಚಳಿಯ ಪ್ರಮಾಣ ಹೆಚ್ಚಾಗಿತ್ತು. ಆದ್ದರಿಂದ ಮಾಲೀಕನು ಬೆಂಕಿ ಹೊತ್ತಿಸಿ ಅದನ್ನು ಕಾಯಿಸುತ್ತ ಕುಳಿತನು. ಹೊತ್ತಾಗಿತ್ತು. ಮಾಲೀಕನು ನಿದ್ರಿಸಲು ಹೊದನು. ಕೋತಿಗಳು ಮತ್ತು ಒಂದು ಕರಡಿಯೂ ಬೆಂಕಿ ಕಾಯಿಸುತ್ತ ಕುಳಿತವು.

ಅರ್ಧರಾತ್ರಿ ತುಂಬ ಹೊತ್ತಿಗೆ ಭೂತವು ಬಂದಿತು. ಅದರ ಮುಖವು ಭಯಂಕರ ವಾಗಿತ್ತು. ಅದರ ತಲೆಗೂದಲು ಕಾಲಿನವರೆಗೆ ಹರಡಿತ್ತು. ಅದರ ಉಗುರುಗಳು ಉದ್ದುದ್ದ ಇದ್ದವು. ಭೂತವು ತನ್ನೊಂದಿಗೆ ಒಂದು ಬುಟ್ಟಿ ತುಂಬ ಮೀನುಗಳನ್ನು ತಂದಿತ್ತು.

ಭೂತವು ಬೆಂಕಿಯ ಬಳಿ ಕುಳಿತಿತ ತನ್ನ ಬುಟ್ಟಿಯಿಂದ ಒಂದು ಮೀನನ್ನು ತೆಗೆ ಒಂದು ಕೊಲಿಗೆ ಸಿಕ್ಕಿಸಿ ಬೆಂಕಿಯಲ್ಲಿ ಬೇಯಿ ಸಿತು. ಮೀನಿನ ವಾಸನೆಯಿಂದ ಆಕರ್ಷಿತವಾ ಕೋತಿಯೊಂದು ತನಗೂ ಮೀನನ್ನು ಕೊಡುವಂ ಕೈ ಚಾಚಿತು. ರೇಗಿದ ಭೂತವು ಚಾಚಿ ಕೈಯನ್ನು ಹಾಗೆಯೇ ತಿರುಚಿತು. ಕೋ ಕುಯ್ಯೊ, ಮರ್ರ್ರೋ ಎಂದು ಕೂಗುತ್ತ ಅಲ್ಲಿಂ ಓಡಿಹೋಯಿತು.

ಭೂತವು ಆ ಬೆಂದ ಮೀನನ್ನು ತಾನ ಮುಗಿಸಿ ಇನ್ನೊಂದು ಮೀನನ್ನು ಬೇಯಿ ಲಾರಂಭಿಸಿತು. ಮೀನಿನ ವಾಸನೆ ನೋ ಇನ್ನೊಂದು ಕೋತಿ ಕೈ ಚಾಚಿತು. ಇದನ ಕಂಡು ಭೂತಕ್ಕೆ ಕೋಪ ಬಂದಿತು ಹಿಂದಿನಂತೆಯೇ ಆದರ ಕೈಯನ್ನು ತಿರುಚಿತು ಆ ಕೋತಿ ಸಹ ಓಡಿಹೋಯಿತು.

ಭೂತವು ಒಂದೊಂದೇ ಮೀನನ ಬೇಯಿಸಿ, ಬೇಯಿಸಿ ತಿಂದು ಮುಗಿಸಿತು.

ಕೊನೆಯದಾಗಿ ದೊಡ್ಡ ಮೀನ ಉಳಿಯಿತು. ದೂರದಲ್ಲಿ ಕುಳಿತಿದ್ದ ಕರ ಹತ್ತಿರಕ್ಕೆ ಬಂದಿತು. ಮೀನಿನ ಬೇಯುವ ಪರಿಮಳ ಆಕರ್ಷಿಸಿತ್ತು. ಭೂತವು ಆ ದೊಡ್ಡ ಮೀನನ್ನು ಬೇಯಿಸಿತು. ಬೆಂದ ಮೀನನ ತಿನ್ನಲಾರಂಭಿಸಿತು. ಕರಡಿಗೆ ಹಸಿವನ ತಡೆಯಲಾಗಲಿಲ್ಲ. ತನಗೂ ಕೊಡು ಎಂಬಂ ತನ್ನ ಕೈ ಚಾಚಿತು. ವಿಪರೀತ ಕೋ ಗೊಂಡ ಭೂತವು ಕರಡಿಯ ಕೈಯನ ತಿರುಚಲಾರಂಭಿಸಿತು. ಸಾಕಷ್ಟು ಬಲವಾಗಿ ಕರಡಿಗೆ ಇದನ್ನು ಸಹಿಸಲಾಗಲಿಲ್ಲ. ಅಲ್ಲ ಹಸಿವು ಬೇರೆ ಅದನ್ನು ಕಾಡ ತೊಡಗಿತು ಅದು ರೋಷದಿಂದ ಮೇಲೆದ್ದು ಭೂತವನ ಹಿಡಿದುಕೊಂಡಿತು. ಭೂತಕ್ಕೆ ಇದ

ಅನಿರೀಕ್ಷಿತವಾಗಿತ್ತು. ಇದುವರೆವಿಗೆ ಅದನ್ನು ಯಾರೂ ಪ್ರತಿಭಟಿಸಿರಲಿಲ್ಲ. ಅದರ ಹೆಸರು ಕೇಳಿಯೇ ಓಡಿ ಹೋಗುತ್ತಿದ್ದರು. ಈಗ ಕರಡಿಯ ಪ್ರತಿಭಟನೆ ಅದಕ್ಕೆ ವಿಪರೀತವೆನಿಸಿತು. ಕಾದಾಡಲು ಭೂತ ಸಹ ಎದ್ದು ನಿಂತಿತು.

ನಿಮಿಷಕ್ಕೂ ಹೆಚ್ಚಾಗುತ್ತಿತ್ತು. ಕೊನೆಗೆ ಅದು ಭೂತವನ್ನು ಅಪ್ಪಿ ಹಿಡಿದು ಹಿಸುಕಲಾರಂಭಿಸಿತು. ಭೂತಕ್ಕೆ ಉಸಿರು ಕಟ್ಟಿತು. ಕರಡಿಯ ಪಂಜದಿಂದ ತಪ್ಪಿಸಿಕೊಳ್ಳುವುದು ಕಷ್ಟವಾಯಿತು. ಅದು ಕರಡಿಯ ಹಿಡಿತಕ್ಕೆ ಸಿಕ್ಕಿ ಪ್ರಾಣ ಕಳೆದುಕೊಂಡಿತು.

ಬೆಳಗಾಯಿತು. ಅತ್ತ ಓಡಾಡುತಿದ್ದ



ಕಾದಾಟವು ಪ್ರಾರಂಭವಾಯಿತು. ಕರಡಿಯು ತನ್ನ ಮುಂಭಾಗದ ಎರಡೂ ಕೈಗಳಿಂದ ಭೂತವನ್ನು ಹಿಡಿದು ಎಸೆಯಿತು. ಭೂತವೇನೂ ಸಾಮಾನ್ಯವಲ್ಲ. ಅದಕ್ಕೂ ಅಧಿಕ ಶಕ್ತಿಯಿತ್ತು. ಗೋಡೆಗೆ ಬಡಿದ ಕೂಡಲೇ ಅದು ಓಡಿ ಬಂದು ಕರಡಿಯ ಮೇಲೆ ಹಲ್ಲೆ ಮಾಡಿತು.

ಇಬ್ಬರೂ ಸಾಕಷ್ಟು ಹೋರಾಟ ನಡೆಸಿದವು. ಕರಡಿಯ ಕೋಪವು ನಿಮಿಷ,

ಜನ ಬಂದರು. ಸತ್ತು ಬಿದ್ದಿದ್ದ ನೀರಿನ ಭೂತವನ್ನು ನೋಡಿ ಬಹಳ ಸಂತೋಷಪಟ್ಟರು. ಕರಡಿಯ ಯಜಮಾನನಿಗೆ ಸತ್ಕಾರ ಮಾಡಿದರು. ಅವನ ಕಡೆಯ ಜನರಿಗೂ, ಪ್ರಾಣಿಗಳಿಗೂ ವಿಶೇಷ ಸತ್ಕಾರ ನೀಡಿದರು. ಅದೇ ದಿನ ಸರ್ಕಸಿನ ಮಾಲೀಕನು ಆ ಊರಿನಿಂದ ಮುಂದೆ ಪ್ರಯಾಣ ಮಾಡಿದನು.

ಅಂದಿನಿಂದ ಆ ಮನೆಗೆ ಭೂತದ ಮನೆ ಎಂಬ ಹೆಸರು ತಪ್ಪಿತು.

'ರಾಗಸಂಗಮ' ಚಿತ್ರ ವಿಮರ್ಶೆ

ಮಾಲಾಶ್ರೀ ಮಾಮಾಶ್ರೀ

ಲಾಂಛನ : ಡೈನಾಮಿಕ್ ಮೂವೀ ಮೇಕರ್ಸ್
ನಿರ್ಮಾಪಕರು :
ಹರಿಪ್ರಸಾದ್, ಎ. ಜೆ. ವಿ. ಪ್ರಸಾದ್
ನಿರ್ದೇಶನ : ಸಾಯಿಪ್ರಕಾಶ್
ಛಾಯಾಗ್ರಹಣ : ಜಾನಿಲಾಲ್
ಸಂಗೀತ : ರಾಜ್–ಕೋಟಿ
ತಾರಾಗಣ : ಮಾಲಾಶ್ರೀ, ಸುನೀಲ್, ತಾರಾ, ಬಾಲರಾಜ್, ಮುಖ್ಯಮಂತ್ರಿ ಚಂದ್ರು, ಶಿವರಾಂ, ಸಾಯಿಪ್ರಕಾಶ್, ಸುಧಾ ನರಸಿಂಹರಾಜು, ಕಾಮಿನಿಧರನ್, ಉಮಾಶ್ರೀ ಮತ್ತು ಇತರರು.

ಪ್ಲಸ್ ಅಂಶಗಳು :

1) ರಾಜ್–ಕೋಟಿ ಸಂಗೀತ.

2) ತಾರಾ, ಮಾಲಾಶ್ರೀ ಹಾಗೂ ಶಿವರಾಂ ಅವರ ಲೀಲಾಜಾಲ ಅಭಿನಯ.

ಮೈನಸ್ ಅಂಶಗಳು :

1) ಅನಗತ್ಯವಾಗಿ ಮಾಲಾಶ್ರೀಯನ್ನು 'ಸೂಪರ್ ನಾಯಕಿ'ಯನ್ನಾಗಿ ಮಾಡುವ ಪ್ರಯತ್ನ.

2) ಮುಖ್ಯಮಂತ್ರಿ ಚಂದ್ರುವಿನ ಓವರ್ ಆ್ಯಕ್ಟಿಂಗ್.

3) ಮಧ್ಯೆ ಮಧ್ಯೆ ಬರುವ ಅಶ್ಲೀಲ ಸಂಭಾಷಣೆ, ಅದರಲ್ಲೂ ಹೆಣ್ಣು ಪಾತ್ರಗಳಿಂದ ಆ ಸಂಭಾಷಣೆ ಆಡಿಸಿರುವುದು.

ವಿಮರ್ಶೆ :

'ಪೋಲೀಸನ ಹೆಂಡ್ತಿ' ನಿರ್ಮಾಪಕರಿಂದ ಮತ್ತೊಂದು ಅಮೋಘ ಕೊಡುಗೆ ಎನ್ನುವ ಹಣೆಪಟ್ಟಿ ಹೊತ್ತು ಬಿಡುಗಡೆಯಾಗಿರುವ **'ಮಾಲಾಶ್ರೀ ಮಾಮಾಶ್ರೀ'** ಹಾಸ್ಯಮಯ ನಿರೂಪಣೆಯಲ್ಲೇ ತಯಾರಾದ ಚಿತ್ರ. ಒಂದಷ್ಟು ಹಣ ಖರ್ಚು ಮಾಡಿದ್ದು ಹಾಡುಗಳನ್ನೆಲ್ಲ ಶ್ರೀಮಂತವಾಗಿ ಚಿತ್ರಿಸಿರುವುದರಿಂದ ಮಾಸ್ ಪ್ರೇಕ್ಷಕರನ್ನು ಈ ಚಿತ್ರ ರಂಜಿಸಬಹುದು. ಆದರೆ ಈ ಚಿತ್ರ ಉತ್ತಮ ಮಟ್ಟದ ಹಾಸ್ಯ ಚಿತ್ರವಾಗುವ ಅವಕಾಶ ಕಳೆದುಕೊಂಡಿರುವುದಕ್ಕೆ ಕಾರಣವೆಂದರೆ ನಾಯಕಿಯಾಗಿರುವ ಮಾಲಾಶ್ರೀ ಪಾತ್ರವನ್ನು ಅತಿರಂಜಿತವಾಗಿ, 'ಸೂಪರ್ ನಾಯಕಿ'ಯಾಗಿ ಚಿತ್ರಿಸಿರುವುದು. ಇದರಿಂದಾಗಿ ಚಿತ್ರದಲ್ಲಿ ತಾರಾ ಅವರ ಪಾತ್ರಗಳೆಲ್ಲ 'ಡಮ್ಮಿ'ಗಳಾಗಿ ಬಿಡುತ್ತವೆ. ಮಾಲಾಶ್ರೀ ಪಾತ್ರಕ್ಕೆ ಸಮಸಮವಾಗಿಯೇ ನಿಲ್ಲಬೇಕಾಗಿದ್ದ ಮುಖ್ಯಮಂತ್ರಿ ಚಂದ್ರು ಅವರ ಪಾತ್ರಕ್ಕೂ ಬೆಲೆ ಸಿಗದೆ ಚಿತ್ರ ಸೊರಗುತ್ತದೆ.

ತೆಲುಗಿನಲ್ಲಿ ತೆರೆಕಂಡ **'ಮಾಲಾಶ್ರೀ'** ಚಿತ್ರದ ರೀಮೇಕ್ ಆಗಿರುವ **'ಮಾಲಾಶ್ರೀ ಮಾಮಾಶ್ರೀ'** ಚಿತ್ರವನ್ನು ಮನರಂಜನೆಯ

ಚಿತ್ರವನ್ನಾಗಿ ಮಾಡಲು ನಿರ್ದೇಶಕ ಸಾಯಿಪ್ರಕಾಶ್ ಬಹಳಷ್ಟು ಪ್ರಯತ್ನಿಸಿದ್ದಾರೆ. ಜೊತೆಗೆ ಚಿತ್ರದ ಕಥೆಗೆ ತಕ್ಕಂತೆ ಅವರು ಇಬ್ಬರು ನಾಯಕಿಯರಿಗೂ ಸಮಾನ ಅವಕಾಶಗಳನ್ನೇ ಕೊಟ್ಟಿದ್ದಾರೆ. ತಾರಾ ಮತ್ತು ಮಾಲಾಶ್ರೀ ಇಬ್ಬರಿಗೂ ಒಳ್ಳೆಯ ಉಡುಪು ಆರಿಸಿ ಉತ್ತಮ ಕೇಶಾಲಂಕಾರ ಮಾಡಲಾಗಿದೆ. ಇದರಲ್ಲಿ ಅವರು ಪಕ್ಷಪಾತ ತೋರಿಲ್ಲ. ಆದರೆ ಸಾಹಸ ಪ್ರಧಾನ ದೃಶ್ಯಗಳಲ್ಲಿ ಹಾಗೂ ಸಂಭಾಷಣೆಗಳಲ್ಲಿ ಮಾಲಾಶ್ರೀ ಪಾತ್ರವನ್ನು ಅನಗತ್ಯವಾಗಿ ಅಟ್ಟಕೇರಿಸುವ ಆತುರವನ್ನು ತೋರಲಾಗಿದೆ. ಇದನ್ನು ಕಡಿಮೆ ಮಾಡಿದ್ದರೆ ಚೆನ್ನಾಗಿತ್ತು. ಚಿತ್ರದ ಪ್ರಮುಖ ದೋಷವೆಂದರೆ ನಾಯಕರಾದ ಸುನೀಲ್ ಹಾಗೂ ಬಾಲರಾಜ್ ಅವರನ್ನು ಡಮ್ಮಿಗಳನ್ನಾಗಿ ಮಾಡಿರುವುದು. ಮುಖ್ಯಮಂತ್ರಿ ಚಂದ್ರು ಓವರ್ ಆ್ಯಕ್ಟಿಂಗ್ ಮಾಡಿದ್ದಾರೆ. ಮಾಲಾಶ್ರೀ ಹಾಗೂ ತಾರಾ ಲೀಲಾಜಾಲವಾಗಿ ಅಭಿನಯಿಸಿದ್ದಾರೆ. ಶಿವರಾಂ ಹಾಗೂ ಉಮಾಶ್ರೀ ಪ್ರೇಕ್ಷಕರಿಂದ ಚಪ್ಪಾಳೆ ಗಿಟ್ಟಿಸಿಕೊಳ್ಳುವ ಅಭಿನಯ ನೀಡಿದ್ದಾರೆ.

ರಾಜ್–ಕೋಟಿಯವರ ಹಿನ್ನೆಲೆ ಸಂಗೀತ ಮುದ ನೀಡುತ್ತದೆ. ಎರಡು



ಹಾಡುಗಳ ಚಿತ್ರೀಕರಣ ಚೆನ್ನಾಗಿದೆ. ಆದರೆ ಛಾಯಾಗ್ರಹಣ ಸಾಧಾರಣ.

○ಆರ್. ಜಿ. ವಿಜಯಸಾರಥಿ


40/100

ಅತಿ ಸಾಧಾರಣ: 40ರ ಕೆಳಗೆ ಸಾಧಾರಣ: 41–50
ಉತ್ತಮ : 51–60 ಅತ್ಯುತ್ತಮ : 61ರ ಮೇಲೆ

ಸಿನಿ ಬಿಟ್ಸ್

ರಮೇಶ್ ಭಟ್ : ಚಿತ್ರರಂಗದ 'ಕ್ರೇಜಿ ಕರ್ನಲ್'

ದೂರದರ್ಶನದಲ್ಲಿ **'ಕ್ರೇಜಿ ಕರ್ನಲ್'** ಧಾರಾವಾಹಿ ಸರಣಿ ಮತ್ತೆ ಪ್ರಸಾರವಾಗುವುದರೊಂದಿಗೆ ರಮೇಶ್ ಭಟ್ ಜನಪ್ರಿಯತೆಯ ಮತ್ತೊಂದು ಮಜಲನ್ನು ತಲುಪಿದ್ದಾರೆ.



ಚಿತ್ರರಂಗದಲ್ಲೂ ಅವರಿಗೆ ಸಾಕಷ್ಟು ಒಳ್ಳೆಯ ಅವಕಾಶಗಳು ಸಿಗುತ್ತಿದ್ದು, ಈಚೆಗೆ ವಿ ಸೋಮಶೇಕರ್ ನಿರ್ದೇಶನದ **'ಚಿತ್ರಲೇಖ'** ಹಾಗೂ **'ಬೊಂಬಾಟ್ ಹುಡ್ಗಿ'** ಚಿತ್ರಗಳಲ್ಲಿ ರಮೇಶ್ ಭಟ್ ಅವರಿಗೆ ಒಳ್ಳೆಯ ಹೆಸರು ದೊರತಿದೆ. ಸದ್ಯಕ್ಕೆ ಅವರು ಭಾರಿ ಭರವಸೆ ಇಟ್ಟಿರುವ ಫಣಿ ರಾಮಚಂದ್ರ ನಿರ್ದೇಶನದ **'ಗಣೇಶ ಸುಬ್ರಹ್ಮಣ್ಯ'** ಬಿಡುಗಡೆಗೆ ಸಿದ್ಧವಾಗಿದೆ. ಇದರಲ್ಲಿ ರಮೇಶ್ ಭಟ್ ಅವರು ಅನಂತ್‌ನಾಗ್ ಅವರೊಂದಿಗೆ ನಾಯಕ ಪಾತ್ರದಲ್ಲಿ ಕಾಣಿಸಿಕೊಂಡು ಪೂರ್ಣ ಪ್ರಮಾಣದ ಹಾಸ್ಯ ಚಿತ್ರದಲ್ಲಿ ನಟಿಸಿದ್ದಾರೆ. ಇದಲ್ಲದೆ ಭಾರ್ಗವ ನಿರ್ದೇಶನದ **ಸಪ್ತಪದಿ, ಭಲೇ ಕೇಶವ** ಫಣಿ ರಾಮಚಂದ್ರ ನಿರ್ದೇಶನದ ಮತ್ತೊಂದು ಚಿತ್ರ **'ಒಂದು ಸಿನಿಮಾ ಕಥೆ'** ಚಿತ್ರದಲ್ಲೂ ರಮೇಶ್ ಭಟ್ ಮಿಂಚಿದ್ದಾರೆಂದು ಸುದ್ದಿ.

ದೂರದರ್ಶನ ಮಾಧ್ಯಮದಲ್ಲಿ **'ಕ್ರೇಜಿ ಕರ್ನಲ್'** ಧಾರಾವಾಹಿಯಿಂದ ಅಪಾರವಾಗಿ ಜನಪ್ರಿಯತೆ ಪಡೆದಿರುವ ರಮೇಶ್ ಭಟ್ ಅವರು ರಂಗಭೂಮಿಯಲ್ಲೂ ಸುಕೇತ್ ಸಂಸ್ಥೆಯ ಪರವಾಗಿ ಕೆಲಸ ಮಾಡುತ್ತ ಪ್ರತಿಭಾನ್ವಿತರೆನಿಸಿಕೊಂಡಿದ್ದರು. ಚಿತ್ರರಂಗದಲ್ಲಿ ಅವರ ಪ್ರತಿಭೆಗೆ ತಕ್ಕಂತಹ ಪಾತ್ರಗಳು ಸಿಗುತ್ತಿಲ್ಲ ಎಂದೂ ಹೇಳುವವರಿದ್ದಾರೆ. **'ಗಣೇಶ ಸುಬ್ರಹ್ಮಣ್ಯ'** ಚಿತ್ರದ ನಂತರ ಅವರ ಚಿತ್ರ ಜೀವನದಲ್ಲಿ ಏನಾದರೂ ಬದಲಾವಣೆ ಕಾಣಬಹುದೇ ಎನ್ನುವುದನ್ನು ಕಾದು ನೋಡಬೇಕು.

○ **ಸ್ವರ್ಣ**

ಕ್ರೀಡಾಂಗಣ

ಗೀತ್ ಸೇಥಿ : ಮತ್ತೆ ಬಿಲಿಯರ್ಡ್ಸ್ ಚಾಂಪಿಯನ್

ನವದೆಹಲಿಯಲ್ಲಿ ನಡೆದ ವಿಶ್ವ ಮಾಸ್ಟರ್ಸ್ ಬಿಲಿಯರ್ಡ್ಸ್ ಚಾಂಪಿಯನ್‌ಶಿಪ್‌ನಲ್ಲಿ ಗೆಲುವು ಪಡೆಯುವುದರ ಮೂಲಕ ಗೀತ್ ಸೇಥಿಯವರು ಮತ್ತೊಮ್ಮೆ ಬಿಲಿಯರ್ಡ್ಸ್‌ನಲ್ಲಿ ತಾವು ವಿಶ್ವ ಚಾಂಪಿಯನ್ ಎಂದು ತೋರಿಸಿಕೊಂಡಿದ್ದಾರೆ. ಭಾರತದ ಪರವಾಗಿ ಈ ಹಿಂದೆಯೇ ಅಮೆಚೂರ್ ಬಿಲಿಯರ್ಡ್ಸ್‌ನಲ್ಲಿ ಮೂರನೆಯ ವಿಶ್ವ ಚಾಂಪಿಯನ್ ಎನಿಸಿಕೊಂಡಿದ್ದ ಗೀತ್‌ಸೇಥಿ (ಉಳಿದ ಇಬ್ಬರು ವಿಲ್ಲನ್ ಜೋನ್ಸ್ ಹಾಗೂ ಮೈಕೆಲ್ ಫರೇರಾ) ತಮ್ಮ ಕಲಾಪೂರ್ಣ ಆಟದಿಂದಾಗಿ ಮತ್ತೆ ಗೆಲುವಿನ ಹಾದಿ ಹಿಡಿಯುತ್ತಿದ್ದಾರೆ. ಮಾಸ್ಟರ್ ಬಿಲಿಯರ್ಡ್ಸ್ ಚಾಂಪಿಯನ್‌ಶಿಪ್‌ನಲ್ಲಿ ಗೀತ್ ಸೇಥಿಯವರಿಗೆ ಪ್ರಬಲ ಪೈಪೋಟಿ ಇದ್ದರೂ ಅವರು ಆಸ್ಟ್ರೇಲಿಯಾದ ರಾಬ್ಸಿ ಫೋಲ್ತ್‌ವರಿಯವರನ್ನು ನಿರ್ಣಾಯಕದಲ್ಲಿ 8–5 ಅಂತರದ ಫ್ರೇಮ್‌ಗಳಿಂದ ಸೋಲಿಸಿದರು. ಈ ಗೆಲುವಿನೊಂದಿಗೆ ಗೀತ್ ಸೇಥಿಯವರು



ಅಂತರ್ರಾಷ್ಟ್ರೀಯ ಬಿಲಿಯರ್ಡ್ಸ್‌ನ ವೃತ್ತಿನಿರತ ಬಿಲಿಯರ್ಡ್ಸ್‌ನಲ್ಲಿ ನಂಬರ್ ಒನ್ ಆಗಿದ್ದ ಮೈಕ್ ರಸೆಲ್ ಅವರಿಗಿಂತ ಈಗ ಪಾಯಿಂಟ್‌ಗಳ ಆಧಾರದಲ್ಲಿ ಮುಂದಿದ್ದಾರೆ. ○ ಕ್ರೀಡಾಪ್ರಿಯ

ನಿಮ್ಮ ಭವಿಷ್ಯ

ಸ್ವಾಮಿ ನಿತ್ಯಾನಂದ

(ಭಾನುವಾರ 3–5–92ರಿಂದ
ಶನಿವಾರ 9–5–92ರವರೆಗೆ)

ರಾಶಿ	ಹೆಸರಿನ ಪ್ರಥಮ ಅಕ್ಷರ
ಮೇಷ	ಚು, ಚೆ, ಚೊ, ಲ, ಲಿ, ಲು, ಲೆ, ಲೊ, [illegible]
ವೃಷಭ	ಇ, ಉ, ಎ, ಒ, ವ, ವಿ, ವು, ವೆ, ವೊ
ಮಿಥುನ	ಕ, ಕಿ, ಕು, ಘ, ಙ, ಛ, ಕೆ, ಕೊ, ಹ
ಕಟಕ	ಹಿ, ಹು, ಹೆ, ಹೊ, ಡ, ಡಿ, ಡು, ಡೆ, ಡೊ
ಸಿಂಹ	ಮ, ಮಿ, ಮು, ಮೆ, ಮೊ, ಟ, ಟಿ, ಟು, ಟೆ
ಕನ್ಯಾ	ಟೊ, ಪ, ಪಿ, ಪು, ಷ, ಣ, ಠ, ಪೆ, ಪೊ
ತುಲಾ	ರ, ರಿ, ರು, ರೆ, ರೊ, ತ, ತಿ, ತು, ತೆ
ವೃಶ್ಚಿಕ	ತೊ, ನ, ನಿ, ನು, ನೆ, ನೊ, ಯ, ಯಿ, ಯು
ಧನುಸ್ಸು	ಯೆ, ಯೊ, ಬ, ಬಿ, ಬು, ಧಿ, ಭ, ಢ, ಬೆ
ಮಕರ	ಬೊ, ಜ, ಜಿ, ಶಿ, ಶು, ಶೆ, ಶೊ, ಗ, ಗಿ
ಕುಂಭ	ಗು, ಗೆ, ಗೊ, ಸ, ಸಿ, ಸು, ಸೆ, ಸೊ, ದ
ಮೀನ	ದಿ, ದು, ಖ, ಝು, ಧ, ದೆ, ದೊ, ಚ, ಚಿ

ಮೇಷ

ಉದ್ಯಮ ರಂಗದಲ್ಲಿ ಬೇರೆಯವರ ಸಹಾಯ ಪಡೆದು ಮುನ್ನಡೆಯಲು ಪ್ರಯತ್ನಿಸುವಿರಿ. ವ್ಯಾಪಾರ ರಂಗದಲ್ಲಿ ಹೊಸ ನಮೂನೆಯ ಬೆಳವಣಿಗೆ ಉಂಟಾಗುತ್ತದೆ. ಹೊರವ್ಯವಹಾರ ಜೋರು. ಹಣಕಾಸನ್ನು ನಾನಾ ಕಡೆಯಿಂದ ಬಿಟ್ಟು ಹಾಕಬೇಕಾಗುತ್ತದೆ. ಖರ್ಚುಗಳು ಮಿತಿ ಮೀರಿದರೂ ನಿಭಾಯಿಸಿ ನಿಮಿರಿ ನಿಲ್ಲುವಿರಿ. ಕುಟುಂಬ ಜೀವನದಲ್ಲಿ ಜವಾಬ್ದಾರಿ ಹೆಚ್ಚುತ್ತದೆ. ಹೆತ್ತವರ ಸಹಕಾರವಿದೆ.

ವೃಷಭ

ಉದ್ಯಮದಲ್ಲಿ ಅನುಕೂಲ ಸ್ಥಿತಿಯೇ ಕಂಡುಬಂದರೂ ನಡುನಡುವೆ ಕೆಲವು ತಡೆಗಳು ತೋರಿ, ನೀಗಿ ನಿರಾಳವಾಗುತ್ತದೆ. ಆರ್ಥಿಕ ಸ್ಥಿತಿ ತುಂಬ ತೃಪ್ತಿಕರವಾಗಿರುತ್ತದೆ. ಖರ್ಚುಗಳ ಬಗ್ಗೆ ನಿಗಾವಹಿಸಿ ಹದ್ದು ಬಸ್ತಿನಲ್ಲಿಡಬೇಕು. ದಾಂಪತ್ಯ ಜೀವನ ಸಂತಸಕರವಾಗಿರುತ್ತದೆ. ಕುಟುಂಬದಲ್ಲಿ ಸ್ವಲ್ಪ ಮಟ್ಟಿನ ವಾಗ್ವಾದಗಳು ತಲೆಯೆತ್ತುತ್ತವೆ. ನೆರೆ ಹೊರೆಯಲ್ಲ.

ಮಿಥುನ

ಉದ್ಯಮದಲ್ಲಿ ಸಾಕಷ್ಟು ಆದಾಯವೂ, ತೃಪ್ತಿಯೂ ಏರ್ಪಡುತ್ತದೆ. ಪಾಲ್ದಾರಿಕೆ, ಏಜೆನ್ಸಿ ವ್ಯವಹಾರದಲ್ಲಿ ನಿಮ್ಮ ಸಂಪೂರ್ಣ ತಾಕತ್ತನ್ನು ವಿನಿಯೋಗಿಸಬೇಕಾಗುತ್ತದೆ. ಮಾನಸಿಕ ತಕರಾರು ತೋರುತ್ತದೆ. ಕುಟುಂಬ ಜೀವನದಲ್ಲಿ ಅವಸ್ಥೆ ಪಡುವಂತಾದ್ದೇನೂ ಇಲ್ಲ. ಕುಟುಂಬದಲ್ಲಿ ತಕರಾರುಗಳು ನೀಗುತ್ತವೆ. ಕಲಾರಂಗದಲ್ಲಿ ಬೆಳಕು ಮೂಡುತ್ತದೆ.

ಕಟಕ

ಉದ್ಯಮದಲ್ಲಿರುವವರು ಅನುಕೂಲಕರ ಫಲಗಳನ್ನೇ ಕಾಣುತ್ತಾರೆ. ಬೇಸರಕ್ಕೂ, ಸೋಮಾರಿ ತನಕ್ಕೂ ಅವಕಾಶ ಕೊಡದೆ ಕಠಿಣವಾಗಿ ದುಡಿದು ಅವಕಾಶಗಳನ್ನು ಒಳ್ಳೆಯ ರೀತಿಯಲ್ಲಿ ಬಳಸಿಕೊಳ್ಳ ಬೇಕು. ಹಣಕಾಸಿನ ಗಂಟು ದೊಡ್ಡದಾಗದಿದ್ದರೂ ಸಣ್ಣದಾಗದು. ಸಾಲ ಕೊಡುವುದು, ಗೆಳೆಯರಿಗೆ ದುಂದು ವೆಚ್ಚ ಮಾಡುವುದು ನಿಲ್ಲಿಸಬೇಕು. ಮನೆಯಲ್ಲಿ ಮನಸ್ತಾಪ ತಪ್ಪಿಸಿದರೆ ಸುಖ.

ಸಿಂಹ

ಉದ್ಯಮ ರಂಗದಲ್ಲಿ ಅಲೆದಾಟಗಳೂ, ಶ್ರಮಗಳೂ ಹೆಚ್ಚುತ್ತವಾದರೂ ಅಂತಿಮವಾಗಿ ಎಲ್ಲವೂ ಒಳ್ಳೆಯದಾಗುತ್ತದೆ. ಧೈರ್ಯದಿಂದ ಎಲ್ಲವನ್ನೂ ನಿಭಾಯಿಸಲು ಯತ್ನಿಸಿ ಯಶಸ್ಸು

ಕಾಣುವಿರಿ. ಹೊರ ವ್ಯವಹಾರದಲ್ಲಿ ಚಂಚಲತೆಗವ ಕಾಶವುಂಟು. ಅನ್ಯರನ್ನು ನಂಬಿ ಮಾಡುವ ಕಾರ್ಯಗಳಲ್ಲಿ ಎಚ್ಚರಿಕೆ ಅತ್ಯಗತ್ಯ. ಮನೆಯಲ್ಲಿ ದೇಹ ಸಂಬಂಧದ ಬಾಧೆ ಇರುತ್ತದೆ.

ಕನ್ಯಾ

ವ್ಯಾಪಾರೋದ್ಯಮ ರಂಗದಲ್ಲಿ ಉತ್ಸಾಹ, ಚುರುಕುತನದಿಂದಾಗಿ ಮುನ್ನಡೆಯನ್ನು ಮುಟ್ಟುವಿರಿ. ಆದರೂ ವಾಗ್ವಾದ, ಕಲಹ, ಮನಸ್ತಾಪ, ಅಲೆದಾಟ, ಶ್ರಮಗಳು ಹೆಚ್ಚಾಗಿಯೇ ಇರುತ್ತದೆ. ಹಣಕಾಸಿನ ಸಂಗತಿ ಅನುಕೂಲಕರವಾಗಿರುತ್ತದೆ. ಬರಬೇಕಾದ ಹಣ ಬರಲು ಕೆಲವೊಮ್ಮೆ ತಡವಾಗಬಹುದು. ಕುಟುಂಬ ಜೀವನದಲ್ಲಿ ಎದುರು ನೋಡಿರದ ಅಭಿವೃದ್ಧಿ ಕಾಣುವಿರಿ.

ತುಲಾ

ಉದ್ಯಮವು ಸಾಕಷ್ಟು ಮಟ್ಟದಲ್ಲಿ ಅಭಿವೃದ್ಧಿಗೆ ಬರುತ್ತದೆ. ವ್ಯಾಪಾರದಲ್ಲಿ ತಡೆಗಳನ್ನು ಒಡೆದು ಮುನ್ನಡೆಯುವ ತಾಕತ್ತು ನಿಮಗಿದೆ. ಹಣ ಸಂಬಂಧದ ಸಂಗತಿಗಳಲ್ಲಿ ಜಾರುವಿಕೆಯನ್ನು ತಡೆಯಬೇಕು. ಕುಟುಂಬದವರೆಲ್ಲ ಸೇರಿ ಮುನ್ನಡೆಯ ಹಾದಿಗೆ ಅಡಿಪಾಯ ಹಾಕುವಿರಿ. ಕಲಾವಿದರು ಹೊಸ ಒಪ್ಪಂದ ಪಡೆಯುವರು.

ವೃಶ್ಚಿಕ

ಉದ್ಯದಲ್ಲಿ ಹಿಂದೆ ಇದ್ದ ಶ್ರಮಗಳೆಲ್ಲ ತೊಲಗಿ ನಿರಾಳವಾಗುತ್ತದೆ. ಪ್ರಯತ್ನಗಳು ತಡೆಯಲ್ಪಡುವುದರಿಂದಾಗಿ ಯಾವುದೇ ಕೆಲಸ ವಾದರೂ ತುಂಬ ನಿಧಾನವಾಗಿಯೇ ಆಗುತ್ತದೆ. ಹಣಕಾಸಿನ ಪರಿಸ್ಥಿತಿ ನಿಮಗನುಕೂಲವಾಗುವಂತೆ ಇದೆ. ಕುಟುಂಬದಲ್ಲಿ ಶುಭ ಕಾರ್ಯವೊಂದು ನಡೆಯುತ್ತದೆ. ಗಂಡ ಹೆಂಡಿರ ನಡುವೆ ಶಾಂತಿ, ಒಳ್ಳೆ ಸಂಬಂಧ ಇರುತ್ತದೆ.

ಧನುಸ್ಸು

ಉದ್ಯಮ ರಂಗದಲ್ಲಿ ಎದುರು ನೋಡಿರದ ಆದಾಯ ನಿಮ್ಮದಾಗುತ್ತದೆ. ಆದರೂ ನಿಮ್ಮ ಸ್ವಂತ ಪ್ರಯತ್ನವನ್ನು ನಂಬಿಯೇ ಮುನ್ನಡೆಯ ಬೇಕಾಗುತ್ತದೆ. ಸ್ವತ್ತು ಸಂಬಂಧವಾಗಿ ತಕರಾರು ಎದ್ದರೂ ಅಂತಿಮ ಜಯ ನಿಮ್ಮದಾಗುತ್ತದೆ. ಕುಟುಂಬ ಜೀವನ ಶಾಂತಿಯದಾಗಿರುತ್ತದೆ. ಗಂಡ ಹೆಂಡಿರ ಸಂಬಂಧ ಅತ್ಯಂತ ತಿಳುವಳಿಕೆಯದಾಗಿರು ತ್ತದೆ.

ಮಕರ

ಉದ್ಯಮ ರಂಗದಲ್ಲಿ ನಿಮಿರಿ ನಿಂತು ಮುನ್ನಡೆಯುವಿರಿ. ನಿಮ್ಮ ಘನತೆ ಕಳೆಕಟ್ಟಿಕೊಳ್ಳುತ್ತದೆ. ಸ್ನೇಹಿತರ, ಬಂಧುಗಳ ಸಹಾಯ, ಸಹಕಾರ ಸಿಗುತ್ತದೆ. ಹಣಕಾಸಿನ ವಿಷಯದಲ್ಲಿ ಹಲವು ತೊಂದರೆಗಳು ಕಂಡುಬಂದರೂ ಅಂತಿಮವಾಗಿ ಎದ್ದು ನಿಲ್ಲುವಿರಿ. ಗಂಡ ಹೆಂಡಿರ ಸುಗಮ ದಾಂಪತ್ಯಕ್ಕೆ ಕಲ್ಲು ಹೊಡೆಯುವವರನ್ನು ಕಾಣ ಬೇಕಾಗುತ್ತದೆ. ಹಿರಿಯರ ಸಹಾಯ ಸಿಗುತ್ತದೆ.

ಕುಂಭ

ವ್ಯಾಪಾರೋದ್ಯಮ ರಂಗದಲ್ಲಿ ಈಗ ಅತಿ ಅನುಕೂಲಕರವಾದ ಸ್ಥಿತಿ ನಿಮ್ಮದಾಗುತ್ತದೆ. ಹೊರವ್ಯವಹಾರದಲ್ಲಿ ಹೊಸ ಮುನ್ನಡೆ ಕಾಣುವಿರಿ. ಹಣಕಾಸಿನ ಪರಿಸ್ಥಿತಿ ಶಾಂತವಾಗಿರುತ್ತದೆ. ವೃಥಾ ಖರ್ಚುಗಳನ್ನು ತಪ್ಪಿಸಲಸಾಧ್ಯವಾದಲ್ಲಿ ಶೋಭಿಸುವಿರಿ. ಸ್ವಂತ ಯುಕ್ತಿಗಳಿಂದ ಹಲವು ತಡೆಗಳನ್ನು ಒಡೆಯುವುದರಲ್ಲಿ ನೀವು ಬಲ್ಲಿದರು.

ಮೀನ

ವ್ಯಾಪಾರೋದ್ಯಮ ರಂಗವು ಚುರುಕಾಗಿ ನಡೆಯುತ್ತದೆಂದು ಹೇಳಲಾಗದಿದ್ದರೂ ಸ್ವಲ್ಪ ಮಟ್ಟಿನ ಆದಾಯ ದೊರೆಯುತ್ತದೆ. ಹಣಕಾಸಿನ ಪರಿಸ್ಥಿತಿ ಭಾರೀ ಮುನ್ನ[illegible]ಉತ್ತದೆ. ಪೂರ್ವಿಕರ ಸ್ವತ್ತು ಸಿಗುತ್ತದೆ. ಈ ಬಗೆಗೆ ವಾಗ್ವಾದವನ್ನು ಬೆಳೆಯಗೊಡಬೇಡಿ. ಕುಟುಂಬ ಜೀವನ ಮಾಮೂಲು. ಗಂಡ ಹೆಂಡಿರ ಸಂಬಂಧ ಸೊಗಸು. ಉದ್ಯೋಗದಲ್ಲಿ ಅಭಿವೃದ್ಧಿ ಇದೆ.

ನಿಮ್ಮ ಪತ್ರಗಳು

ನವೀನ,
ಮಂಗಳೂರು

19–4–92ರ 'ರಾಗ ಸಂಗಮ' ಸಂಚಿಕೆಯ ಮುಖಪುಟ ಬಹಳ ಚೆನ್ನಾಗಿದೆ. ಚಕ್ಕಿಲಂ ವಿಜಯಲಕ್ಷ್ಮಿ / ಎಸ್. ಡಿ. ಕುಮಾರ್‌ರವರ 'ಶಾಂತಿ ತೀರ' ಸಂಪೂರ್ಣ ಕಾದಂಬರಿ ಚೆನ್ನಾಗಿ ಓದಿಸಿಕೊಂಡು ಹೋಯಿತು. ಇದೊಂದು ಉತ್ತಮ ಅನುವಾದಿತ ಕಾದಂಬರಿ.

ರಾಮಚಂದ್ರ,
ಉಡುಪಿ

ಈ ಬಾರಿಯ ಸಂಪೂರ್ಣ ಕಾದಂಬರಿ 'ಶಾಂತಿ ತೀರ' ಉತ್ತಮವಾಗಿತ್ತು. 'ಹಾಸ್ಯ ಸಂಗಮ' ಬಹಳ ರಂಜನೀಯವಾಗಿ ಇತ್ತು. ಕವನವೂ ಚೆನ್ನಾಗಿತ್ತು.

ಕವನ,
ಮಡಿಕೇರಿ

'ಶಾಂತಿ ತೀರ' ಬಹಳ ಹೃದಯಂಗಮವಾಗಿತ್ತು. ಸಣ್ಣ ಕಥೆ 'ವ್ಯಾಪಾರ' ಚೆನ್ನಾಗಿ ಮೂಡಿ ಬಂದಿದೆ. 'ಪ್ರಶ್ನೋತ್ತರ'ವೂ ಚೆನ್ನಾಗಿ, ಚುರುಕಾಗಿ ಮೂಡಿ ಬರುತ್ತಿದೆ.

ಶುಭ ಹೆಚ್. ಜಿ;
ಹಾರೋಹಿತ್ತಲು

ರೂಪಾಗಂಗೂಲಿಯವರ ಮುಖಪುಟ ಬಹಳ ಸುಂದರವಾಗಿ ಮೂಡಿ ಬಂದಿದೆ.

ಚಕ್ಕಿಲಂ ವಿಜಯಲಕ್ಷ್ಮಿಯವರ 'ಶಾಂತಿ ತೀರ' ಸಂಪೂರ್ಣ ಕಾದಂಬರಿ ಬಹಳ ಚೆನ್ನಾಗಿ ಮೂಡಿಬಂದಿದೆ. ಮಾಧವಿಯ ಪಾತ್ರವನ್ನು ಬಹಳ ಚೆನ್ನಾಗಿ ಚಿತ್ರಿಸಿದ್ದಾರೆ. ಸಣ್ಣ ಕಥೆ 'ವ್ಯಾಪಾರ' ತುಂಬ ಚೆನ್ನಾಗಿತ್ತು.

ರಾಮಲಿಂಗಯ್ಯ ಸಿದ್ದಯ್ಯಸ್ವಾಮಿ,
ಕುಕನೂರು

ಖ್ಯಾತ ರೂಪಾಗಂಗೂಲಿ ಮುಖಚಿತ್ರ ಹೊತ್ತು ಬಂದ 'ರಾಗಸಂಗಮ' ತುಂಬ ಚೆನ್ನಾಗಿತ್ತು. 'ಶಾಂತಿ ತೀರ' ಕಾದಂಬರಿ ಚೆನ್ನಾಗಿ ರಚಿತಗೊಂಡಿದ್ದು ಪ್ರೀತಿಯ ಗೆಳತಿಗಾಗಿ ತ್ಯಾಗ ಮಾಡಿದ ವಸಂತಳ ಪಾತ್ರ ಓದುಗರಿಗೆ ಮನ ಮುದಗೊಳಿಸಿದೆ. ಡಾ. ಶ್ರೀಧರನ ಪಾತ್ರ ಕಳೆಗಟ್ಟಿ ಕಥೆ ಯಶಸ್ವಿಯಾಗಿದೆ. ಅನಸೂಯ ಸಂಪತ್‌ರವರ 'ಚಿನ್ನದ ಪುತ್ಥಳಿ' ಧಾರಾವಾಹಿ ಕೂಡ ಚೆನ್ನಾಗಿ ಮೂಡಿ ಬರುತ್ತಿದೆ.

ಟಿ. ಕಾರಂದೂರು,
ಕೆ. ಸುರೇಶ್ ಪೂಜಾರಿ,
ನಾಸಿಕ್

ಎಸ್. ಡಿ. ಕುಮಾರ್ ಅವರ ಅನುವಾದಿತ ಸಂಪೂರ್ಣ ಕಾದಂಬರಿ 'ಶಾಂತಿ ತೀರ' ಅತ್ಯುತ್ತಮವಾಗಿ ಮೂಡಿ ಬಂದಿದೆ. 'ಕ್ರೀಡಾಂಗಣ'ದಲ್ಲಿ ಪಾಕಿಸ್ತಾನದ ಕ್ರಿಕೆಟ್ ಚಾಂಪಿಯನ್ ಇಮ್ರಾನ್ ಖಾನ್ ಬಗ್ಗೆ ಓದಿ ಸಂತೋಷವಾಯಿತು. ಮಕ್ಕಳ ಕಥೆ 'ಮನೆ ಕೆಲಸ' ತುಂಬ ಚೆನ್ನಾಗಿ ಮೂಡಿ ಬಂದಿದೆ. ಮೂರೂ ಧಾರಾವಾಹಿಗಳೂ ತುಂಬ ಅರ್ಥಪೂರ್ಣವಾಗಿ ಮೂಡಿಬರುತ್ತಿದೆ.

ಬಿ. ಎ. ಮೋಹನ್ ಮುಟ್ಲು,
ಅಬ್ಬೂರುಕಟ್ಟೆ

ಒಂದು ಪುಟದ ಮಿನಿಕಥೆ 'ಹುಡುಗಾಟ' ನೇರವಾಗಿ ಮನ ಮುಟ್ಟಿತು. 'ಪ್ರಶ್ನೋತ್ತರ' ವಿಭಾಗದಲ್ಲಿ ಕೆಎಸ್ಸಾರ್ ರವರು ಸಮಂಜಸವಾಗಿ ಅವರದೇ ಶೈಲಿಯಲ್ಲಿ ಉತ್ತರಿಸಿದ್ದಾರೆ.

ಸಂಪಾದಕಿ ಮತ್ತು ಪ್ರಕಾಶಕಿ : ಕಮಲಾ ಸುಂದರ್ ರಾಜನ್, ಸಂಗಮ ಪ್ರಕಾಶನ, ಅಂಚೆ ಪೆಟ್ಟಿಗೆ 6646, 41, ಕೋಟೆ 'ಬಿ' ಬೀದಿ, ಬೆಂಗಳೂರು–2; ದೂರವಾಣಿ : 625004; ಮುದ್ರಕರು : ವಿ. ರಾಮಯ್ಯ, ಶ್ರೀ ಸತ್ಯನಾರಾಯಣ ಪ್ರೆಸ್, 31, ಜೆ.ಬಿ.ಲೇನ್, ಕಾಟನ್‌ಪೇಟೆ, ಬೆಂಗಳೂರು–53

ಹಾಸ್ಯ ಸಂಗಮ

